
ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

ಮಾರ್ಚ್ 31, 2010 ರೂ. 12/-

**ಲಂಕೇಶ್-75**
**ದುಷ್ಕಾಲದಲ್ಲಿ ಲಂಕೇಶರನ್ನು ನೆನೆಯುತ್ತ...**
**-ವೈದೇಹಿ**



## ಚುನಾವಣೆ ಗೆಲ್ಲಲು
# ನರಬಲಿ



## ಬಿಜೆಪಿ ರೌಡಿ ಕದಿರೇಶನ ಕರಾಳ ಕೃತ್ಯ

## ಬಿಜೆಪಿಯಲ್ಲಿ ಒಕ್ಕಲಿಗರು ಮೂಲೆಗುಂಪು

**BMP ಚುನಾವಣೆ**

ುಡಿಯೂರು
**ರಮೇಶ್**
**ೆಟರ್**

ಹನುಮಂತನಗರ
**ಚಂದ್ರಶೇಖರ್ ಬೆಸ್ಟ್**

ಹೆಬ್ಬಾಳ
**ಮುನಿಕೃಷ್ಣ ಮುಂದೆ**

ರಾಜರಾಜೇಶ್ವರಿನಗರ
**ಭೂಗಳ್ಳನೇ ಬಿಜೆಪಿ ಅಭ್ಯರ್ಥಿ**

## ದೀಮ ಕಟ್ಟಾ ಜಗ್ಗ
# ಮೇಯರ್ ಆಗಬೇಕಂತೆ



## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ

# 'ಖಾಸಗಿ ವಿಶ್ವ'ದ ವಿದ್ಯಾಲಯಗಳು

ಬಿಜೆಪಿ ಸರ್ಕಾರ ಎಷ್ಟೇ ಮುಸ್ಲಿಂ ವಿರೋಧಿಯಾಗಿದ್ದರೂ ದೊಡ್ಡ ದೊಡ್ಡ ಮುಸ್ಲಿಂ ಉದ್ಯಮಿಗಳ ವಿರುದ್ಧವೇನಲ್ಲ ಎಂಬುದು ಈ ಅಧಿವೇಶನದಲ್ಲಿ ಸಾಬೀತಾಗಿದೆ. ಸಾಮಾನ್ಯ ಜನರ ಬದುಕಿಗೆ ಸಂಬಂಧಪಟ್ಟಂಥ ಹಲವಾರು ಕಾಯಿದೆಗಳು ಇನ್ನೂ ಸದನದಲ್ಲಿ ಪೆಂಡಿಂಗ್ ಇರುವಾಗಲೇ ದಿಢೀರನೇ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಸೂದೆಯನ್ನು ಬಿಜೆಪಿ ಸರ್ಕಾರ ಸದನದಲ್ಲಿ ಮಂಡಿಸಿದ್ದು ಮಾತ್ರವಲ್ಲದೆ ಹೆಚ್ಚಿನ ಚರ್ಚೆಯೂ ಇಲ್ಲದಂತೆ ಧ್ವನಿಮತದಲ್ಲಿ ಅನುಮೋದನೆ ಆಗುವಂತೆ ನೋಡಿಕೊಂಡಿದೆ! ಈ ಮಸೂದೆಯು ಜಾರಿಗೆಬಂದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಮಾತ್ರವಲ್ಲದೆ ಈ ದೇಶದ ಬಹುಸಂಖ್ಯಾತರ ವಿಶ್ವದೊಂದಿಗೆ ಸಂಬಂಧವೇ ಇಲ್ಲದ ಖಾಸಗಿ ವಿಶ್ವವೊಂದು ರೂಪುಗೊಳ್ಳುತ್ತದೆ. ಮತ್ತು ಅದೇ ಈ ದೇಶದ ಉಳಿದವರ ಹಣೆಬರಹವನ್ನೂ ನಿರ್ಧರಿಸಲಿದೆ.

ಈ ಮಸೂದೆಯಿಂದ ಜಾರಿಗೆ ಬರಲಿರುವ "ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ" ಮತ್ತು ಇದರೊಡನೆ ಸದ್ದಿಲ್ಲದೆ ಪಾಸಾದ "ಅಲಿಯನ್ಸ್ ವಿಶ್ವವಿದ್ಯಾಲಯ"ಗಳು ಸಂಪೂರ್ಣ ಖಾಸಗಿ ವಿಶ್ವವಿದ್ಯಾಲಯಗಳು. ಈ ಖಾಸಗಿ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣದಲ್ಲಿ ಕಳೆದೆರಡು ದಶಕಗಳಿಂದ ನಡೆಯುತ್ತಾ ಬಂದಿರುವ ವಾಣಿಜ್ಯೀಕರಣದ ಉತ್ತುಂಗ. ಇಲ್ಲಿ ಹಣಕ್ಕೇ ಮಣೆ. ದೀರ್ಘಕಾಲೀನ ಮತು ತತ್‌ಕ್ಷಣದ ಲಾಭದ್ದೇ ಪ್ರಧಾನ ಉದ್ದೇಶ. ಈ ವಿಶ್ವ ವಿದ್ಯಾಲಯದ "ವಿಶ್ವ"ದಲ್ಲಿ ಈ ದೇಶವಾಗಲೀ, ಇಲ್ಲಿನ ಸಾಮಾನ್ಯ ಜನರಾಗಲೀ ಇಲ್ಲ. ಈ "ವಿಶ್ವ"ದ ಪ್ರಜೆಗಳು ದುಬಾರಿ ಹಣ ತೆತ್ತು ವಿದ್ಯೆ ಕೊಳ್ಳಬಲ್ಲ ಈ ದೇಶದ ಮತ್ತು ವಿದೇಶದ ವಿದ್ಯಾರ್ಥಿಗಳು. ಇಲ್ಲಿ ವಿದ್ಯೆ ಎಂದರೆ ಈ ದೇಶದ ಮತ್ತು ಜನತೆಯ ಬದುಕಿನ ಎಲ್ಲಾ ಆಯಾಮಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅರ್ಥಪೂರ್ಣ ಮಾಡುವ ವಿದ್ಯೆಗಳಲ್ಲ. ಇಲ್ಲಿ ವಿದ್ಯೆ ಎಂದರೆ ಸಮಾಜದ ಪ್ರತಿಯೊಂದು ಆಯಾಮಗಳನ್ನು ಸರಕು ಮಾಡಿ ಲಾಭ ಮಾಡಿಕೊಳ್ಳುವ ವ್ಯೂಹಗಳನ್ನು ಹೊಸೆಯುವುದು ಮತ್ತು ಅದಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನು ರೂಢಿಸಿಕೊಳ್ಳುವುದೇ ಆಗಿರುತ್ತದೆ.






ಜಾಗತೀಕರಣ ನೀತಿಗಳು ಶಿಕ್ಷಣ ಕ್ಷೇತ್ರದ ಒಟ್ಟಾರೆ ಗಮ್ಯ ಮತ್ತು ಗಮನವನ್ನು ಬದಲಿ ಮಾಡುತ್ತಿವೆ. ಇದರಿಂದ ಇತರ ವಿಶ್ವವಿದ್ಯಾಲಯಗಳ ಉದ್ದೇಶಗಳು ನಿಧಾನವಾಗಿ ಸಮಾಜದಿಂದ ಮಾರುಕಟ್ಟೆಯ ಸೇವೆಯೆಡೆಗೆ ತಿರುಗುತ್ತಿರುವುದು ನಿಜವೇ ಆದರೂ ಖಾಸಗಿ ವಿಶ್ವವಿದ್ಯಾಲಯಗಳು ಈ ದೇಶದ ಪ್ರಜಾಸತ್ತೆಯನ್ನೇ ನೇರವಾಗಿ ಅಣಕ ಮಾಡುತ್ತವೆ. ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಸ್ವಾಯತ್ತತೆ (Autonomy) ಇದ್ದರೂ ಒಂದು ವಿಶಾಲ ಅರ್ಥದಲ್ಲಿ ಯುಜಿಸಿ ಇನ್ನಿತರ ಸಂಸ್ಥೆಗಳ ಮಾರ್ಗದರ್ಶನಕ್ಕೆ ಒಳಪಡುವ ಮೂಲಕ ಉತ್ತರದಾಯಿತ್ವವನ್ನೂ (Accounatability) ಹೊಂದಿರಬೇಕಾಗಿರುತ್ತಿತ್ತು. ಅದೇ ರೀತಿ ಒಂದು ವಿಶ್ವವಿದ್ಯಾಲಯದ ಆಂತರಿಕ ಆಡಳಿತ ಸ್ವಾಯತ್ತತೆ ಹೊಂದಿದ್ದರೂ ನಾಡಿನ ಜನತೆಗೆ ಪರೋಕ್ಷವಾಗಿ ಉತ್ತರದಾಯಿತ್ವ ಹೊಂದಿರುವಂತೆಯೇ ರಚಿಸಲಾಗಿದೆ. ಪ್ರತಿ ವಿಶ್ವವಿದ್ಯಾಲಯಗಳ ಆಡಳಿತದ ಉತ್ತರದಾಯಿತ್ವ ಹೆಚ್ಚಿಸಲು ರಚಿಸಲಾಗಿರುವ ಸೆನೆಟ್, ಸಿಂಡಿಕೇಟ್ ಇನ್ನಿತ್ಯಾದಿಗಳು ಇದರ ಭಾಗ. ಅಲ್ಲದೆ ಇಡೀ ವಿಶ್ವವಿದ್ಯಾಲಯ ರಾಜ್ಯಪಾಲರ ಅಂತಿಮ ಪರಮಾಧಿಕಾರಕ್ಕೆ ಒಳಪಡುವುದರ ಮೂಲಕ ಸ್ವಾಯತ್ತತೆಯಷ್ಟೇ ಉತ್ತರದಾಯಿತ್ವಕ್ಕೂ ಸಮಾನ ಮಹತ್ವ ನೀಡುವಂತಾಗಿತ್ತು. ಇದರರ್ಥ ಇವೆಲ್ಲವೂ ಅವುಗಳ ಮೂಲ ಉದ್ದೇಶದಂತೆ ನಡೆಯುತ್ತಿವೆ ಎಂದೇನಲ್ಲ. ಹಂಪಿ ವಿವಿಯ ಭೂಮಿ ಪರಭಾರೆ ಪ್ರಕರಣದಲ್ಲಿ ಸ್ಪಷ್ಟವಾಗಿ ಗೋಚರಿಸುವಂತೆ ಈ ಸಿಂಡಿಕೇಟ್‌ಗಳು ಆಳುವ ಸರ್ಕಾರಗಳ ಭಟ್ಟಂಗಿಗಳಿಂದಲೇ ತುಂಬಿವೆ ಮತ್ತು ಸರ್ಕಾರವೇ ಮಾರುಕಟ್ಟೆ ಶಕ್ತಿಗಳ ಪರವಾಗಿರುವಾಗ ಉತ್ತರದಾಯಿತ್ವದ ಹೆಸರಲ್ಲಿ ಸರ್ಕಾರಕ್ಕೆ ಅಂತಿಮ ಅಧಿಕಾರ ಇರುವಂಥ ರಚನೆಗಳು ತೋಳಗಳನ್ನೇ ಕುರಿಗಳ ಕಾವಲಿಗಿಟ್ಟಂತೆ ಆಗುತ್ತದೆ ಎಂಬುದೂ ಹಂಪಿ ವಿವಿ ಪ್ರಕರಣದಲ್ಲಿ ಸ್ಪಷ್ಟವಾಗಿದೆ. ಅದೇನೇ ಇದ್ದರೂ ಅದರಲ್ಲಿ ಪ್ರಜಾತಾಂತ್ರಿಕತೆಯ ತಾಂತ್ರಿಕ ಅಂಶವಾದರೂ ಇದ್ದದ್ದರಿಂದಲೇ ನಾಡಿನ ಅಭೂತಪೂರ್ವ ಹೋರಾಟಕ್ಕೆ ಮಣಿಯಲೇಬೇಕಾಯಿತು ಮತ್ತು ವಿಶ್ವವಿದ್ಯಾಲಯದ ಶೈಕ್ಷಣಿಕ ಉದ್ದೇಶಗಳ ಮತ್ತು ವಿವಿಯ ಆಸ್ತಿ ನಿರ್ವಹಣೆಗಳಲ್ಲಿ ಇರಬೇಕಾದ ಸ್ವಾಯತ್ತತೆಯನ್ನು ಮಾರುಕಟ್ಟೆ ಶಕ್ತಿಗಳು ನುಂಗುಹಾಕದಂತೆ ತಡೆಯಲು ಸಾಧ್ಯವಾಯಿತು.

ಆದರೆ "ಅಜೀಂ ಪ್ರೇಮ್‌ಜಿ ವಿಶವಿದ್ಯಾಲಯ"ದ ರೀತಿಯ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಈ ಬಗೆಯಲ್ಲಿ ಶೈಕ್ಷಣಿಕ ಬದ್ಧತೆಯನ್ನಾಗಲೀ, ಆಡಳಿತಾತ್ಮಕ ಪ್ರಜಾತಂತ್ರವನ್ನಾಗಲೀ, ಸಾಮಾನ್ಯ ವಿದ್ಯಾರ್ಥಿಗಳ ಹಿತಾಸಕ್ತಿಯನ್ನಾಗಲೀ ನಿರೀಕ್ಷಿಸಲೂ ಸಾಧ್ಯವಿಲ್ಲ. "ಅಜೀಂ ಪ್ರೇಮ್‌ಜಿ ವಿಶವಿದ್ಯಾಲಯ" ಮಸೂದೆಯಲ್ಲಿರುವ ಕೆಲವು ಅಂಶಗಳನ್ನು ಗಮನಿಸಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಇತರ ವಿಶ್ವವಿದ್ಯಾಲಯಗಳಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಪರಮೋಚ್ಚ ಅಧಿಕಾರಿ ಉಪಕುಲಪತಿಯೇ ಆಗಿರುತ್ತಾರೆ. ಆದರೆ ಆ ಉಪಕುಲಪತಿಯನ್ನು ನೇಮಕ ಮಾಡುವುದು ಸರ್ಕಾರದ ಶಿಫಾರಸ್ಸಿನ ಮೇಲೆ ರಾಜ್ಯಪಾಲರು. ಏಕೆಂದರೆ ರಾಜ್ಯಪಾಲರು ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು-ಚಾನ್ಸೆಲರ್. (ಇತ್ತೀಚಿನವರೆಗೆ ಕರ್ನಾಟಕದಲ್ಲಿ ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳು ಮಾತ್ರ ರಾಜ್ಯದ ಮುಖ್ಯಮಂತ್ರಿಗಳಾಗಿರುತ್ತಿದ್ದರು. ಆದರೆ ಯುಜಿಸಿ ಸಹಾಯ ಪಡೆಯುವ ಪ್ರಕ್ರಿಯೆಯಲ್ಲಿ ಹಂಪಿ ವಿವಿ ರಚನೆಯೂ ತಿದ್ದುಪಡಿಯಾಗಿ ಈಗ ರಾಜ್ಯಪಾಲರೇ ಅದರ ಕುಲಪತಿಗಳು.) ಹೀಗೆ ಪರೋಕ್ಷವಾಗಿಯಾದರೂ ಸಮಾಜಕ್ಕೆ ಉತ್ತರದಾಯಿತ್ವವಿರುವ ಒಂದಂಶ ಇದರಲ್ಲಿದೆ.

ಆದರೆ "ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ"ಕ್ಕೆ ಈ ರಾಜ್ಯಪಾಲರು ಕೇವಲ ವಿಸಿಟರ್ ಮಾತ್ರ. ಈ ಮಸೂದೆಯ ಸೆಕ್ಷನ್ 13 ರ ಪ್ರಕಾರ ವಿಸಿಟರ್ ರಾಜ್ಯಪಾಲರು ಈ ವಿಶ್ವವಿದ್ಯಾಲಯದ ಘಟಿಕೋತ್ಸವದ ಅಧ್ಯಕ್ಷತೆ ವಹಿಸಬಹುದು. ವಿವಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಪರಿಶೀಲಿಸಬಹುದು. ಒಂದು ವೇಳೆ ಈ ವಿವಿಯ ಕೆಲವು ನಿರ್ಣಯಗಳು ಈ ಮಸೂದೆಯಲ್ಲಿರುವಂತೆ ವಿವಿಯ ಹಿತಾಸಕ್ತಿಗೆ-ಗಮನಿಸಿ, ನಾಡಿನ ಜನತೆಯ ಹಿತಾಸಕ್ತಿಯಲ್ಲ-ವಿರುದ್ಧವಾಗಿದ್ದರೆ ಅದನ್ನು ಮರುಪರಿಶೀಲಿಸಲು ಹೇಳಬಹುದು. ಅಂದರೆ ಸಾರಾಂಶದಲ್ಲಿ ಇಲ್ಲಿ ರಾಜ್ಯಪಾಲರ ಪಾತ್ರ ಅಜೀಂ ಪ್ರೇಮ್‌ಜಿಯ ಹಿತೈಷಿಯದ್ದು ಮಾತ್ರ!!

ಇನ್ನು ಮಸೂದೆಯ ಸೆಕ್ಷನ್ 11 ಸ್ಪಷ್ಟ ಪಡಿಸುವಂತೆ ಈ ವಿಶ್ವವಿದ್ಯಾಲಯದ ಎಲ್ಲಾ ಪರಮಾಧಿಕಾರವೂ ಇರುವುದು ಈ ವಿಶ್ವವಿದ್ಯಾಲಯದ **sponsoring body** - ಪ್ರಾಯೋಜಕ ಸಂಸ್ಥೆಯಲ್ಲಿ ಅಂದರೆ "ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ"ದಲ್ಲಿ. ಅದರ ಅಧ್ಯಕ್ಷ ಅಜೀಂ ಪ್ರೇಮ್‌ಜಿಯಲ್ಲಿ. ಈ **sponsoring body** - ಪ್ರಾಯೋಜಕ ಸಂಸ್ಥೆಯೇ ವಿವಿಯ ಕುಲಪತಿ, ಉಪ-ಕುಲಪತಿ, ಆಡಳಿತ ಸಮಿತಿ, ಶೈಕ್ಷಣಿಕ ಸಮಿತಿ, ಹಣಕಾಸು ಸಮಿತಿ ಎಲ್ಲವನ್ನೂ ನೇಮಿಸುತ್ತದೆ. ಇತರ ವಿಶ್ವವಿದ್ಯಾಲಯಗಳಲ್ಲಿ ಇರುವಂತೆ ಆಯ್ಕೆಯಾದ ಜನಪ್ರತಿನಿಧಿಗಳನ್ನೊಳಗೊಂಡ ಸಿಂಡಿಕೇಟ್-ಪಿಂಡಿಕೇಟ್‌ಗಳ್ಯಾವುದೂ ಇಲ್ಲಿಲ್ಲ! ಎಲ್ಲಾ ಅಜೀಂ ಪ್ರೇಂಜಿಯ ಹುಕುಂನಂತೆ ನಡೆಯುತ್ತವೆ.

ಮಸೂದೆಯ ಸೆಕ್ಷನ್ 14ರ ಪ್ರಕಾರ ಈ ವಿವಿಯ ಪ್ರಥಮ ಕುಲಪತಿ ಪ್ರಾಯೋಜಿತ ಸಂಸ್ಥೆಯ ಅಧ್ಯಕ್ಷರು ಅಂದರೆ ಅಜಿಂ ಪ್ರೇಮ್‌ಜಿಯೇ ಆಗಿರುತ್ತಾರೆ. ಸೆಕ್ಷನ್ 14 (1)ರ ಪ್ರಕಾರ ಮೊದಲ ಕುಲಪತಿಯ ಅಧಿಕಾರವಧಿ ಅವರ ಜೀವಿತಾವಧಿಯವರೆಗೆ ಇರುತ್ತದೆ. ನಂತರದ ಕುಲಪತಿಗಳು ಅಜಿಂ ಪ್ರೇಮ್‌ಜಿ ಪ್ರತಿಷ್ಠಾನದ ನಂತರದ ಅಧ್ಯಕ್ಷರಾಗಿರುತ್ತಾರೆ. ಅಂದರೆ ಅಜಿಂ ಪ್ರೇಮ್‌ಜಿಯ ಮಕ್ಕಳು, ನೆಂಟರು ಮತ್ತು ಇಷ್ಟರೇ ಇದರ ಕುಲಪತಿಗಳಾಗಿ ಮುಂದುವರೆಯುತ್ತಾರೆ.


ಇದರ ಉಸ್ತುವಾರಿ ಮಂಡಳಿಯಾದ ಬೋರ್ಡ್ ಆಫ್ ಗವರ್ನರ್ಸ್‌ನಲ್ಲಿ 9 ಜನರಿದ್ದರೂ ಅದರಲ್ಲಿ ಐದು ಜನ ಅಜೀಂ ಪ್ರೇಮ್‌ಜಿ ನೇಮಿಸಿದವರೇ ಇರುತ್ತಾರೆ. ಇನ್ನು ಆಡಳಿತಾತ್ಮಕ ಮಂಡಳಿಯಾದ ಬೋರ್ಡ್ ಆಫ್ ಮೇನೇಜ್‌ಮೆಂಟ್ ಮತ್ತು ಅಕೆಡಿಮೆಕ್ ಕೌನ್ಸಿಲ್‌ಗಳಲ್ಲಂತೂ ಹೆಸರಿಗೂ ಹೊರಗಿನವರ್‍ಯಾರೂ ಇರುವುದಿಲ್ಲ. ಹೀಗೆ ಹೆಚ್ಚುಕಡಿಮೆ ವಿಶ್ವವಿದ್ಯಾಲಯದ ಹೆಸರಿನಲ್ಲಿ ಏಕಮಾಲೀಕತ್ವದ ಖಾಸಗಿ ಶೈಕ್ಷಣಿಕ ಕಂಪನಿಯೊಂದು ಅಸ್ತಿತ್ವಕ್ಕೆ ಬರುತ್ತಿದೆ.

ಇದೇ ವಾಸ್ತವ. ಇದು ಒಂದು ದೂರದೃಷ್ಟಿಯುಳ್ಳ ಲಾಭಕೋರ ಕಂಪನಿಯೆಂಬುದು ಈ ವಿವಿಯ ಉದ್ದೇಶಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಮಸೂದೆಯ ಸೆಕ್ಷನ್ 7ರಲ್ಲಿ ಸ್ಪಷ್ಟಪಡಿಸಿರುವಂತೆ ಇದು ಇತರ ವಿಶ್ವವಿದ್ಯಾಲಯಗಳಂತೆ ವಿವಿಧ ಶಿಸ್ತಿನ ವಿದ್ಯೆಯನ್ನು ಹೇಳಿಕೊಡುವ ವಿವಿಯಲ್ಲ. ಬದಲಿಗೆ ಎಲ್ಲಾ ಶಿಸ್ತಿನ ವಿದ್ಯೆಗಳನ್ನು ಬೋಧಿಸುವ ಬೋಧನಾ ತಂತ್ರಜ್ಞಾನವನ್ನು, ತರಬೇತಿಯನ್ನು, ನೀಡುವ ಶಿಕ್ಷಣ ಕ್ಷೇತ್ರದ ಆಡಳಿತ ನಿರ್ವಹಣೆ, ಹಣಕಾಸು ನಿರ್ವಹಣೆಯ ಪದ್ಧತಿಗಳನ್ನು ಕಲಿಸಿಕೊಡುವ, ಅದರ ಬಗ್ಗೆ ಸಂಶೋಧನೆ ಇತ್ಯಾದಿಗಳನ್ನು ನಡೆಸುವ ವಿಶ್ವವಿದ್ಯಾಲಯವಾಗಿದೆ. ಮೇಲ್ನೋಟಕ್ಕೆ ಇದು ಶೈಕ್ಷಣಿಕ ನಿರ್ವಹಣೆಯ ತಂತ್ರಜ್ಞಾನವನ್ನು ಸುಧಾರಿಸುವ ಉದ್ದೇಶವುಳ್ಳ ವಿವಿಯೆಂಬಂತೆ ಕಂಡುಬಂದರೂ ಬರಲಿರುವ ದಿನಗಳಲ್ಲಿ ಉನ್ನತ ಶಿಕ್ಷಣವೆಂಬುದು ಅತಿದೊಡ್ಡ ಮಾರುಕಟ್ಟೆಯಾಗುತ್ತಿರುವ ಸಂದರ್ಭದಲ್ಲಿ ಅದರ ನಿರ್ವಹಣಾ ತಂತ್ರಜ್ಞಾನವೆಂಬುದೂ ಒಂದು ದೊಡ್ಡ ಮಾರುಕಟ್ಟೆಯೇ ಆಗಲಿದೆ. ಹೀಗಾಗಿ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ಗಳಂತೆ ಬರಲಿರುವ ದಿನಗಳಲ್ಲಿ "ಅಜೀಂ ಪ್ರೇಂಜಿ ಯೂನಿವರ್ಸಿಟಿ" ಶಿಕ್ಷಣ ಮಾರುಕಟ್ಟೆಯ ನಿರ್ವಾಹಕರನ್ನು ಉತ್ಪಾದಿಸುವ ಏಕೈಕ ವಿವಿಯಾಗಲಿದೆ.

ಇದರಿಂದ ಎರಡು ರೀತಿಯ ಲಾಭವಿದೆ. ಮೊದಲನೆಯದಾಗಿ ಇದು ದೇಶದ ಮತ್ತು ವಿದೇಶದ ಕುಲೀನ ಮತ್ತು ಶ್ರೀಮಂತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುತ್ತದೆ. ಮಸೂದೆಯ ಸೆಕ್ಷನ್ 9 ಎಲ್ಲಾ ಜಾತಿ, ವರ್ಗ ಮತ್ತು ಲಿಂಗದವರಿಗೂ ಪ್ರವೇಶ ಮುಕ್ತವಾಗಿದೆಯೆಂದು ಹೇಳುತ್ತಲೇ ಶೇ.25ರಷ್ಟು ಸೀಟುಗಳನ್ನು ಕರ್ನಾಟಕದವರಿಗೆ ಮೀಸಲಾಗಿಡುವುದೆಂದು ಹೇಳಲಾಗಿದೆ. ಆದರೆ ಮರು ವಾಕ್ಯದಲ್ಲಿಯೇ ಆ ವಿದ್ಯಾರ್ಥಿಗಳು ಪ್ರವೇಶದ ಅರ್ಹತೆಗೆ ಬೇಕಿರುವ ಮಾನದಂಡಗಳನ್ನು ಹೊಂದಿರಬೇಕೆಂದೂ ಮತ್ತು ಒಂದು ವೇಳೆ ಅರ್ಹ ವಿದ್ಯಾರ್ಥಿಗಳು ದೊರೆಯದಿದ್ದರೆ ಪ್ರವೇಶವನ್ನು ಜನರಲ್ ಪೂಲ್‌ನಲ್ಲಿ ಭರ್ತಿ ಮಾಡಲಾಗುವುದೆಂದೂ ಹೇಳಲಾಗಿದೆ. ಅಲ್ಲದೆ ಇದು ಖಾಸಗಿ ವಿವಿಯಾಗಿರುವುದರಿಂದ ವಿದ್ಯಾರ್ಥಿ ಶುಲ್ಕವನ್ನು ತನಗಿಷ್ಟ ಬಂದಂತೆ ನಿಗದಿಪಡಿಸುವ ಅಧಿಕಾರವನ್ನು ಮಸೂದೆ ವಿವಿಗೆ ನೀಡುತ್ತದೆ.

ಎರಡನೆಯದಾಗಿ ಈ ವಿವಿ ಸರ್ಕಾರದಿಂದ ಯಾವುದೇ ಧನಸಹಾಯ ಕೇಳುವುದಿಲ್ಲವೆಂಬ ಅಂಶ ಮಸೂದೆಯಲ್ಲಿದ್ದರೂ ಸರ್ಕಾರ ರಾಜ್ಯದ ಶೈಕ್ಷಣಿಕ ಉದ್ದೇಶದಿಂದ ವಿವಿಯ ಯಾವುದೇ ಸಂಶೋಧನೆ, ತರಬೇತಿ ಅಥವಾ ನಿರ್ದಿಷ್ಟ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಸಹಾಯವನ್ನು ಮಾಡಬಹುದೆಂದು ಸೆಕ್ಷನ್ 5 ಹೇಳುತ್ತದೆ. ಈಗಾಗಲೇ ಸರ್ಕಾರದ ಬಹುಪಾಲು ಕಾರ್ಯಕ್ರಮಗಳು ಅದರಲ್ಲೂ ವಿಶೇಷವಾಗಿ ಸಂಶೋಧನೆ, ತರಬೇತಿ ಇನ್ನಿತ್ಯಾದಿಗಳನ್ನು ಸರ್ಕಾರೇತರ ಸಂಸ್ಥೆಗಳ ಮೂಲಕವೇ ನಡೆಸಲಾಗುತ್ತಿದೆ. ಹೀಗಾಗಿ

➤➤13



## ನೋ ಕಾಮೆಂಟ್ಸ್

"ಈ ಬಿಬಿಎಂಪಿ ಚುನಾವಣೆಯಲ್ಲಿ ಗೆಲ್ಲುವವರಿಗೆ ಟಿಕೆಟ್ ಕೊಡುತ್ತೇವೆ. ಶಿಸ್ತು ಬದ್ಧತೆ ಇರುವ ಕಾರ್ಯಕರ್ತರು ಅದನ್ನು ಒಪ್ಪಿಕೊಳ್ಳಬೇಕು. ಅಷ್ಟೆ."

*- ಈಶ್ವರಪ್ಪ*

"ಬೆಂಗಳೂರಿನಲ್ಲಿ ನಾಯಿಗಳ ಹಾವಳಿ ಹೆಚ್ಚಿದೆ, ಆದರೆ ಲೈಂಗಿಕ ಅಲ್ಪಸಂಖ್ಯಾತರನ್ನು ನಾಯಿಗಳಿಗಿಂತ ಕೀಳಾಗಿ ಕಾಣಲಾಗುತ್ತದೆ."

*-ವೀಣಾ, ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಲೈಂಗಿಕ ಕಾರ್ಯಕರ್ತೆ*

"ಉತ್ತರಪ್ರದೇಶದ ಆಶ್ರಮವೊಂದರಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಮೃತರಾದವರಿಗೆ ಪರಿಹಾರ ನೀಡಲು ಹಣವಿಲ್ಲವೆಂದ ಮಾಯಾವತಿ, ಅದೇ ಬಿಎಸ್‌ಪಿ ರ್‍ಯಾಲಿಗೆ 200 ಕೋಟಿಗೂ ಹೆಚ್ಚು ಹಣವನ್ನು ವ್ಯಯ ಮಾಡಿದ್ದಾರೆ."

*- ಪತ್ರಿಕಾ ವರದಿ*

"ಹೆಂಡತಿಯು ಪ್ರತಿನಿತ್ಯ ಮಾಡುವ ಮನೆಕೆಲಸ, ಮಕ್ಕಳ ಲಾಲನೆ-ಪಾಲನೆ, ವಯಸ್ಸಾದವರನ್ನು ನೋಡಿಕೊಳ್ಳುವ ಹಾಗೂ ಇನ್ನಿತ್ಯಾದಿ ಕೆಲಸಗಳಿಗೆ ಗಂಡ ಸಂಬಳ ಕೊಡುವಂತಾಗಬೇಕು."

*- ಚೀನಾ ಪೀಪಲ್ಸ್ ಕಾಂಗ್ರೆಸ್‌ನಲ್ಲಿ ಬಂದ ಪ್ರಮುಖ ಸಲಹೆ*

## ನಂಬಿದ್ರೆನಂಬಿ ಬಿಟ್ರೆಬಿಡಿ

"ನಮ್ಮಂಥ ಗುರುಗಳು ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ನಾನೇ ಇನ್ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದೇನೆ. ಹಲವು ದೇಶಗಳಲ್ಲಿ ನನಗೆ ಸಾವಿರಾರು ಭಕ್ತರಿದ್ದಾರೆ. ಆದ್ದರಿಂದ ಇಂಥಾ ಘಟನೆಗಳು ಸಂಭವಿಸಿದಾಗ ಸಮಾಜ ನಮ್ಮನ್ನು ಅನುಮಾನಿಸಬಾರದು."

*- ನಿತ್ಯಾನಂದ ಸ್ವಾಮಿ*

"1698ರ ನವಂಬರ್ 10ರಂದು ಚಾರ್ಲ್ಸ್ ಐರ್ ಎಂಬ ಬ್ರಿಟಿಷ್ ವ್ಯಾಪಾರಿ ಒಬ್ಬ ಬಂಗಾಳಿ ಭೂಮಾಲೀಕನಿಂದ ಸುತನೌತಿ, ಗೋವಿಂದಪುರ್ ಮತ್ತು ದಿಹಿ-ಕೊಲ್ಕತ್ತಾ ಎಂಬ ಮೂರು ಹಳ್ಳಿಗಳನ್ನು ಕೇವಲ 1300 ರೂ.ಗಳಿಗೆ ಕೊಂಡುಕೊಂಡು ಕೊಲ್ಕತ್ತಾ ಸ್ಥಾಪಿಸಿದ. ಇಂದು ಅದರಷ್ಟೇ ಬೆಲೆಗೆ ಇಡೀ ಭಾರತವನ್ನು ನಾವು ಹರಾಜು ಹಾಕುತ್ತಿದ್ದೇವೆ."

*-ಪುಷ್ಪ.ಎಂ.ಭಾರ್ಗವ, ಜ್ಞಾನ ಆಯೋಗದ ಸದಸ್ಯ*

"ಕೇರಳ ಸರ್ಕಾರ ರಚಿಸಿದ ಸಮಿತಿಯು ಪ್ಲಾಚಿಮಾಡಾದಲ್ಲಿ ಕೋಕೋಕೋಲಾ ಕಂಪನಿ ಮಾಡಿರುವ ಅನಾಹುತದ ಅಂದಾಜನ್ನು ಮಾಡಿ ಕಂಪನಿಯಿಂದ ಜನರಿಗೆ 200 ಕೋಟಿ ರೂ. ಪರಿಹಾರ ಕೊಡಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ."

*- ಪತ್ರಿಕಾ ವರದಿ*

### ಹಾಗಿದ್ದಲ್ಲಿ ರೆಡ್ಡಿಗಳಿಗೆ ಏಕೆ ಗೌರವ ಸಲ್ಲಿಸುತ್ತೀರಿ?

"ದುಡ್ಡಿದ್ದವರನ್ನು ಎಂದೂ ಗೌರವಿಸದ ನಾವು ಸಾತ್ವಿಕ ಮನೋಭಾವದವರನ್ನು ಸತ್ಕರಿಸುವ ಪರಂಪರೆ ಅನುಸರಿಸಿಕೊಂಡು ಬಂದಿದ್ದೇವೆ."

*- ವಿ.ಎಸ್. ಆಚಾರ್ಯ*

### ಇನ್ನು ಅಪವ್ಯಯ ಶುರು?

"ಕೇಂದ್ರ ಸರ್ಕಾರ ಕೈಗೊಂಡಿರುವ ಕಠಿಣ ಮಿತವ್ಯಯ ಕ್ರಮಗಳು ಮಾರ್ಚ್ 31ಕ್ಕೆ ಕೊನೆಗೊಳ್ಳುತ್ತದೆ."

*- ವರದಿ*

### ಜನತೆಯ ಹಿತಶತ್ರುಗಳೆಂದರೆ ಇವರೇ!

"ವಿರೋಧಪಕ್ಷಗಳು ತೈಲಬೆಲೆ ಇಳಿಸಲು ಹೋರಾಡಬಾರದು. ಏಕೆಂದರೆ ಅದರಿಂದ ಸರ್ಕಾರ ಕೊಡುವ ಸಬ್ಸಿಡಿ ಹೆಚ್ಚಾಗಿ ಪರೋಕ್ಷ ತೆರಿಗೆ ಹೆಚ್ಚುತ್ತದೆ. ಮೇಲಾಗಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದಿಂದ ಬಡವರಿಗೆ ಏನೂ ಹಾನಿಯಾಗುವುದಿಲ್ಲ. ಹೀಗಾಗಿ ಪೆಟ್ರೋಲ್ ಬೆಲೆ ಅದರ ಸಹಜ ದರವಾದ ಲೀಟರ್‌ಗೆ 100 ರೂ. ಆಗಿ ಡೀಸೆಲ್ ಬೆಲೆ 80 ರೂ. ಆಗಿಬಿಡುವುದು ಒಳ್ಳೆಯದೇ. ಏಕೆಂದರೆ ಆಗ ಜನ ಅಗ್ಗದ ಇತರ ಮೂಲಗಳನ್ನು ಬಳಸುತ್ತಾರೆ."

*-ಭರತ್ ಜುಂಜುನ್‌ವಾಲಾ, ಒಬ್ಬ 'ಅರ್ಥಶಾಸ್ತ್ರಜ್ಞ'*

### ಇದು ತಾಯ್ಗಂಡತನವಲ್ಲವೇ?

"ಭಾರತದ ಹತ್ತು ಪ್ರಮುಖ ಕೈಗಾರಿಕೋದ್ಯಮಿಗಳು ಅಮೆರಿಕದ ಉದ್ಯಮಿಗಳೊಂದಿಗೆ ವ್ಯೂಹಾತ್ಮಕ ಒಪ್ಪಂದ ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಭೋಪಾಲ್ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗದಂತೆ ತಡೆಯಲು ಇವರು ಸರ್ಕಾರದ ಮೇಲೆ ಒತ್ತಡ ತರುತ್ತಾರೆ. ಪೆಪ್ಸಿ ಮತ್ತು ಕೊಕೊಕೋಲಾ ಮಾರಾಟ ವಿಸ್ತರಣೆಗೆ ಅಡ್ಡಿಬರುವುದಿಲ್ಲ ಮತ್ತು ಚಿಲ್ಲರೆ ಮಾರಾಟದಲ್ಲಿ ವಿದೇಶಿ ಬಂಡವಾಳಕ್ಕೆ ಅನುಮತಿ ನೀಡಬೇಕೆಂದು ಒತ್ತಾಯ ಮಾಡಲಾಗುವುದು."

*- ವರದಿ*

# ಹಣದ ಹಾರ ಮತ್ತು ಮಾಯಾ ಜಗತ್ತು...

ಬಹುಜನ ಸಮಾಜ ಪಕ್ಷದ ರಜತಮಹೋತ್ಸವ ಾರಂಭದಲ್ಲಿ ಆ ಪಕ್ಷದ ನಾಯಕಿ ಮಾಯಾವತಿಗೆ ಮಾನಿಗಳು ಲಕ್ಷಾಂತರ ರೂಪಾಯಿಗಳನ್ನು ಹಾರದ ದಲ್ಲಿ ಅರ್ಪಿಸಿದ್ದು ವ್ಯಾಪಕ ಟೀಕೆಗೆ ಗುರಿಯಾಯಿತು. ದೆ ಇಂತಹ ಟೀಕಾ ಪ್ರಹಾರಗಳಿಗೆ ಎಂದೂ ಕೇರ್ ದ ಮಾಯಾವತಿ "ನೀವು ಹೇಳೋದು ಹೇಳಿ, ಮಾಡೋದ್ದನ್ನೇ ಮಾಡುತ್ತೇನೆ" ಎಂಬಂತೆ ಮರು ್ನೂ ಸುಮಾರು 18 ಲಕ್ಷ ರೂಪಾಯಿಗಳನ್ನು ಮತ್ತೆ ದ ರೂಪದಲ್ಲಿ ಪಡೆದು ತನ್ನ `dont care' ತ್ತಿಯನ್ನು ಮತ್ತೆ ಸಾಬೀತುಪಡಿಸಿದರು.

ಮಾಯಾವತಿ ಎಂದಾಕ್ಷಣ ಒಂದು ಬಿಕ್ಕಟ್ಟು ರಾಗುತ್ತದೆ. ಹಲವರ ಪ್ರಕಾರ ಆಕೆ ದಲಿತ ಮಹಿಳೆ ುವುದರಿಂದಲೇ ಆಕೆಯನ್ನು ಟೀಕಿಸುವುದನ್ನೇ ಕೆಲವರು ತ್ನದ ಕಾಯಕ ಮಾಡಿಕೊಂಡಿದ್ದಾರೆ. ಬಹಳಷ್ಟು ಕಾರಣಿಗಳು ದೇವಸ್ಥಾನಗಳಲ್ಲಿ ಮಾಡಿಸಿಕೊಳ್ಳುವ ಭಾರಕ್ಕೂ, ಮಾಯಾವತಿ ಸಾರ್ವಜನಿಕವಾಗಿ ಸಿದ ಹಣದ ಹಾರಕ್ಕೂ ಏನೂ ವ್ಯತ್ಯಾಸವಿಲ್ಲ. ದುವಾಗ ತುಲಾಭಾರವನ್ನು ಟೀಕಿಸದ ಜನ ಈ ದ ಹಾರವನ್ನು ಮಾತ್ರ ಯಾಕೆ ಟೀಕಿಸಬೇಕು?


ಅವರು ಈ ವಾದದಲ್ಲಿ ಸತ್ಯಾಂಶ ಇದೆ ಎಂಬುದನ್ನು ೂ ತಿರಸ್ಕರಿಸಲಾಗುವುದಿಲ್ಲ.

ಈ ಗುಂಪಿನ ಇನ್ನೊಂದು ವಾದ ಹೀಗಿದೆ: ಇತರ ಸ ನಾಯಕರು ಈ ದೇಶದ ಅಥವಾ ಅವರವರ ಗಳ ದಲಿತರಿಗೆ, ಹಿಂದುಳಿದವರಿಗೆ ಮತ್ತು ಬಡವರಿಗೆ ಕಟ್ಟೆ ಹಾಕಿರುವುದು ಅಷ್ಟರಲ್ಲೇ ಇದೆ. ಹಾಗಿದ್ದೂ ಮಾವತಿ ಮಾತ್ರ ಈ ಜನಸಮುದಾಯಗಳಿಗೆ ಏನನ್ನೂ ಲ್ಲ ಎಂದು ಆರೋಪಿಸುವ ನೈತಿಕತೆ ಅವರಿಗೆಲ್ಲಿದೆ? ವರ ಈ ವಾದದಲ್ಲೂ ತಿರುಳು ಇದೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕು.

ದರೆ ಮಾಯಾವತಿ ಕುರಿತಂತೆ ಇರುವ ದೊಡ್ಡ ು ಏನೆಂದರೆ ಆಕೆ ದಲಿತರ ಹೆಸರು ಹೇಳಿಕೊಂಡೇ ರಪಡೆದಿದ್ದರೂ ಆಕೆಯೇ ದಲಿತರಿಗೆ ದ್ರೋಹ ುತ್ತಿರುವುದು. ಹಾಗೆಯೇ ಅಂಬೇಡ್ಕರ್ ಅವರ ನ್ನು ಜಪಿಸುತ್ತಲೇ ಅಂಬೇಡ್ಕರರ ಎಲ್ಲಾ ತತ್ವ ತಗಳಿಗೂ ಮಸಿ ಬಳಿಯುತ್ತಿರುವುದು.

ಲ್ಲಿ ವಿವರಗಳಿಗೆ ಹೋಗುವ ಮುನ್ನ ಒಂದು ಅಂಶವನ್ನು ಗಮನಿಸಬೇಕು. ಅದೇನೆಂದರೆ ಒಂದು ತ ಸಮುದಾಯದ ಪ್ರತಿನಿಧಿ ಅಧಿಕಾರದ ಚುಕ್ಕಾಣಿ ಾಗ ಅವರಿಂದ ಎಲ್ಲರೂ ನಿರೀಕ್ಷಿಸುವುದು ಸ್ಥಾಪಿತ ು ಮುಂದುವರಿಕೆಯನ್ನಲ್ಲ; ಬದಲಾಗಿ ಅವರಿಂದ ಹೊಸಬಗೆಯ ಪರ್ಯಾಯ ಸಮಾಜವನ್ನು ವ್ಯವಸ್ಥೆಯನ್ನು ನಿರೀಕ್ಷಿಸುತ್ತಾರೆ. ಈ ಹಿನ್ನೆಲೆಯಲ್ಲಿ ದಾಗ ಮಾಯಾವತಿ ಎಲ್ಲಿ ಸೋತಿದ್ದಾರೆ ಎಂಬುದು ಗುತ್ತದೆ.

ವರೆ ಸಮಸ್ಯೆ ಇರುವುದು ಕೇವಲ ಮಾಯಾವತಿ "ಅಧಿಕಾರವನ್ನು ಹಿಡಿಯುವ ಮೂಲಕವೇ ತಣೆ" ಎಂಬ ಅವರ ಪಕ್ಷದ ಏಕೈಕ ಸಿದ್ಧಾಂತದಲ್ಲೇ ಅಡಗಿದೆ. ಆ ಸಿದ್ಧಾಂತಕ್ಕೂ ಮಾಯಾವತಿಯ ೂ ಸರಿಹೋಗಿರುವುದರಿಂದ ಇವತ್ತು ಉತ್ತರ ರಲ್ಲಿ ಆಕೆ ನಡೆಸಿದ್ದೇ ಆಡಳಿತ, ಹೇಳಿದ್ದೇ ಸರ್ಕಾರದ ಹಣದ ಹಾರವೇ ದಲಿತರ ಶ್ರೇಯೋಭಿವೃದ್ಧಿ ಬಿಂಬಿಸುವ ಪ್ರಯತ್ನ ಆಕೆಯ ಬೆಂಬಲಿಗರಿಂದ ತ್ತಿದೆ.



ತನ್ನ ಅಭಿಮಾನಿಗಳಿಂದ ಹಣದ ಹಾರ ಸ್ವೀಕರಿಸುವುದರಲ್ಲಿ ಯಾವ ತಪ್ಪೂ ಇಲ್ಲ ಎಂದು ಘೋಷಿಸಿರುವ ಮಾಯಾವತಿ, "ನಾನು ಬದುಕಿರುವಾಗಲೇ ನನ್ನ ಪ್ರತಿಮೆಗಳನ್ನು ಸ್ಥಾಪಿಸ ಕೂಡದೆಂದು ಯಾವ ಕಾನೂನು ಹೇಳುವುದಿಲ್ಲ" ಎಂದು ವಾದಿಸಿದ್ದಾರಲ್ಲದೆ, "ತಮ್ಮ ಪ್ರತಿಮೆಯೊಂದಿಗೆ ನನ್ನ ಪ್ರತಿಮೆಗಳನ್ನೂ ಸ್ಥಾಪಿಸಬೇಕೆಂದು ಕಾನ್ಶೀರಾಂ ಲಿಖಿತ ಉಯಿಲು ಬರೆದಿದ್ದರು" ಎಂಬ ಹಾಸ್ಯಾಸ್ಪದ ಸಮರ್ಥನೆಯನ್ನು ನೀಡಿದ್ದಾರೆ.

ಓರ್ವ ವ್ಯಕ್ತಿ ತಾನು ಬದುಕಿರುವಾಗಲೇ, ತನ್ನ ಪ್ರತಿಮೆಗಳನ್ನು ತಾನೇ ಸರ್ಕಾರದ ಹಣದಲ್ಲಿ ಸ್ಥಾಪಿಸುವುದು ಕಾನೂನಿಗೆ ಸಂಬಂಧಿಸಿದ್ದಲ್ಲ. ಬದಲಿಗೆ ಲಜ್ಜೆಗೆ, ಮಾನಮರ್ಯಾದೆಗೆ ಸಂಬಂಧಿಸಿದ್ದು ಎಂಬ ಅರಿವೂ ಆಕೆಗಿಲ್ಲದಿರುವುದು ಶೋಚನೀಯ. ಹಾಗೆಯೇ ಅಂಬೇಡ್ಕರ್ ಅವರು ಇಂತಹ ಪ್ರತಿಮೆ ಸಂಸ ತಿಯನ್ನು ವಿರೋಧಿಸಿದ್ದು, ಪ್ರತಿಮೆಗಳ ಬದಲಾಗಿ ಜನರಿಗೆ ಉಪಯೋಗವಾಗುವಂತಹ ಕಾಲೇಜು, ಗ್ರಂಥಾಲಯಗಳನ್ನು ನಾಯಕರ ಹೆಸರಿನಲ್ಲಿ ಸ್ಥಾಪಿಸಬೇಕೆಂದು ವಾದಿಸಿದ್ದರು ಎಂಬುದೂ ಈ ಅಂಬೇಡ್ಕರ್ ಭಕ್ತೆಗೆ ಗೊತ್ತಿಲ್ಲದಿರುವುದು ದೊಡ್ಡ ದುರಂತ ಎಂದರೆ ತಪ್ಪಾಗಲಾರದು.

ಮಾಯಾವತಿ ಬರೋಬ್ಬರಿ ನಾಲ್ಕು ಬಾರಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಿದ್ದಾರೆ. ಆದರೆ 95 ರಿಂದ 2003 ರ ತನಕ ಆಕೆ ಮೂರು ಬಾರಿ ಮುಖ್ಯಮಂತ್ರಿ ಆಗಿದ್ದರೂ ಆಕೆ ಆಡಳಿತ ನಡೆಸಿದ್ದು ಒಟ್ಟು ಹದಿನಾಲ್ಕೂವರೆ ತಿಂಗಳು ಕಾಲ ಮಾತ್ರ. ಅಷ್ಟು ಚಿಕ್ಕ ಅವಧಿಯಲ್ಲಿ ಯಾರಿಂದಲೂ ದೊಡ್ಡ ಸಾಧನೆಗಳನ್ನು ನಿರೀಕ್ಷಿಸುವುದು ತಪ್ಪು. ಅದು ಮಾಯಾವತಿಗೂ ಅನ್ವಯಿಸುತ್ತದೆ. ಆದರೆ ವಿಪರ್ಯಾಸದ ಸಂಗತಿ ಯಾವುದೆಂದರೆ ಈ ಮಾಯಾವತಿ ಅಷ್ಟೇ ಚಿಕ್ಕ ಅವಧಿಯಲ್ಲಿ ಸಾಧನೆ ಮಾಡಿದ್ದು ಪಕ್ಕಕ್ಕಿರಲಿ, ಆಕೆ ಮಾಡಿದ ಹಗರಣಗಳಿಗೆ ಮಾತ್ರ ಲೆಕ್ಕವಿಲ್ಲ. ೨೦೦೭ ರಲ್ಲಿ ಮಾಯಾವತಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿ ಆದಾಗ ಈಕೆ ಘೋಷಿಸಿದ ಸ್ವಂತ ಆಸ್ತಿಯ ಒಟ್ಟು ಮೊತ್ತ ಎಷ್ಟು ಗೊತ್ತಾ? ಬರೋಬ್ಬರಿ ಅರವತ್ತು ಕೋಟಿ ರೂಪಾಯಿಗಳು. ಅದಾದನಂತರ ಈಕೆ 2007-08 ನೇ ಆರ್ಥಿಕ ವರ್ಷದಲ್ಲಿ ಕಟ್ಟಿದ ಆದಾಯ ತೆರಿಗೆ ಎಷ್ಟಿತ್ತೆಂದರೆ ಅದು ಈ ದೇಶದ ಅತಿ ಸಾಹುಕಾರನಾದ ಮುಖೇಶ್ ಅಂಬಾನಿ ಕಟ್ಟಿದ ಆದಾಯ ತೆರಿಗೆಯನ್ನೇ ಮೀರಿಸಿತ್ತು! ಅಂದರೆ ಆಕೆ ಆ ಒಂದೇ ವರ್ಷದಲ್ಲಿ ಅದೆಷ್ಟು ಸರ್ಕಾರಿ ಹಣವನ್ನು ದೋಚಿರಬೇಕೆಂದು ಲೆಕ್ಕ ಹಾಕಿ. ತಾಜ್ ಕಾರಿಡಾರ್ ಹಗರಣದಿಂದ ಹಿಡಿದು ಮೊನ್ನಿನ ಹಣದ ಹಾರದವರೆಗೂ ಮಾಯಾವತಿ ಲೂಟಿ ಮಾಡಿರುವ ಮೊತ್ತದ ವಿರುದ್ಧ ಈಗ ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯಿಂದ ತನಿಖೆ ನಡೆಯುತ್ತಿದೆ.

ಹಣದ ಹಾರ, ಬೆಳ್ಳಿಯ ಕುರ್ಚಿ, ಅಪಾರ ಮೌಲ್ಯದ ವಜ್ರ ವೈಢೂರ್ಯ, ಐಷಾರಾಮಿ ವಿಮಾನ, ಅರಮನೆಯಂತಹ ಸ್ವಂತ ಬಂಗಲೆ... ಇಂತಹವುಗಳನ್ನು ಸಂಗ್ರಹಿಸಿರುವ ಮಾಯಾವತಿ ತಾನು ತನ್ನ ರಾಜ್ಯದ ದೀನದಲಿತರನ್ನು ಉದ್ಧಾರ ಮಾಡಿದ್ದೇನೆಂದು ಪೋಸು ಕೊಡುತ್ತಾರೆ. ಆದರೆ ವಾಸ್ತವವಾಗಿ ಉತ್ತರ ಪ್ರದೇಶದ ಪ್ರಸ್ತುತ ಸ್ಥಿತಿ ಮತ್ತು ಅಲ್ಲಿನ ದಲಿತರ ಬಡತನ ನೋಡಿದರೆ ಶಾಕ್ ಆಗುತ್ತದೆ.

ಇವತ್ತು ನಮ್ಮ ದೇಶದಲ್ಲೇ ಉತ್ತರ ಪ್ರದೇಶ ಅತಿ ಭ್ರಷ್ಟ ರಾಜ್ಯವೆಂದು ಕುಖ್ಯಾತಿ ಪಡೆದಿದೆಯಲ್ಲದೆ ಅತಿ ಹಿಂದುಳಿದ ರಾಜ್ಯಗಳಲ್ಲೂ ಒಂದಾಗಿದೆ. ಅನರಕ್ಷತೆ, ಲಿಂಗಾನುಪಾತ, ತಲಾ ಆದಾಯ, ಶಿಶುಮರಣ, ಮಕ್ಕಳಲ್ಲಿ ಪೌಷ್ಠಿಕ ಆಹಾರ ಕೊರತೆ, ಮಹಿಳೆಯರಲ್ಲಿ ರಕ್ತಹೀನತೆ, ನಿರುದ್ಯೋಗ ಇತ್ಯಾದಿ ಅಭಿವೃದ್ಧಿ ಸೂಚಕಗಳಲ್ಲಿ ಉತ್ತರ ಪ್ರದೇಶ ಅತಿ ಹೀನಾಯಸ್ಥಿತಿಯಲ್ಲಿದೆ. ಅಷ್ಟು ಮಾತ್ರವಲ್ಲ, ಉತ್ತರ ಪ್ರದೇಶದಲ್ಲಿ ಮೂರುವರೆ ಕೋಟಿ ದಲಿತರು ವಾಸಿಸುತ್ತಿದ್ದು ಅವರೆಲ್ಲರೂ ಅತಿ ಬಡತನದಲ್ಲಿ ಬದುಕುತ್ತಿದ್ದಾರೆ.

ತಾನು ದಲಿತರ ಪ್ರತಿನಿಧಿ, ತನಗೆ ಅಧಿಕಾರ ನೀಡುವ ಮೂಲಕ ದಲಿತರು ಅಭಿವೃದ್ಧಿ ಹೊಂದುತ್ತಾರೆ ಎಂದೇ ವಾದಿಸಿದ್ದ ಮಾಯಾವತಿ ಸ್ವತಃ ಉದ್ಧಾರವಾಗಿದ್ದಾರೆಯೇ ಹೊರತು ದಲಿತರಿಗೆಂದು ಏನೇನನ್ನೂ ಮಾಡಿಲ್ಲ. ಆದರೆ ಯಾಕೆ ನೀವು ದಲಿತರಿಗಾಗಲಿ, ಇತರರಿಗಾಗಲಿ ಏನನ್ನೂ ಮಾಡಿಲ್ಲ ಎಂದು ಮಾಯಾವತಿಯನ್ನು ಪ್ರಶ್ನಿಸುವಂತೆಯೂ ಇಲ್ಲ. ಯಾಕೆಂದರೆ ಆಕೆ ಜನರ ಉದ್ಧಾರ ಮಾಡುತ್ತೇನೆಂದು ಯಾವತ್ತೂ ಯಾವ ಭರವಸೆಯನ್ನು ನೀಡಿಲ್ಲ. ಈ ದೇಶದಲ್ಲಿ ಯಾವ ಪ್ರಣಾಳಿಕೆಯೂ ಇಲ್ಲದೆ ಚುನಾವಣೆ ಕಣದಲ್ಲಿ ಗುದ್ದಾಡುವ ಏಕೈಕ ಪಕ್ಷ ಬಿಎಸ್‌ಪಿ. ಅದಕ್ಕೆ ಕಾರಣವೂ ಇದೆ. ಇತರರಂತೆ ಪ್ರಣಾಳಿಕೆಯಲ್ಲಿ ಜನರಿಗೆ ಹತ್ತಾರು ಭರವಸೆಗಳನ್ನು ನೀಡಿದರೆ ನಾಳೆ ಆ ಭರವಸೆಗಳನ್ನು ಯಾಕೆ ಈಡೇರಿಸಲಿಲ್ಲ ಎಂಬ ಪ್ರಶ್ನೆಯೇ ಉದ್ಭವಿಸಬಾರದೆಂಬುದು ಮಾಯಾವತಿಯ ಲೆಕ್ಕಾಚಾರ.

ಇದಿಷ್ಟೇ ಆಗಿದ್ದರೆ ಸುಮ್ಮನಿರಬಹುದಿತ್ತು, ಆದರೆ ಅವಕಾಶವಾದಿ ರಾಜಕಾರಣವನ್ನು ಮಾಡಿಕೊಂಡೇ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಮಾಯಾವತಿ ವಾಸ್ತವವಾಗಿ ಎಂತಹ ದಲಿತ ದ್ರೋಹಿ ಎಂದರೆ ಆಕೆ ಮೊದಲ ಬಾರಿಗೆ ಮುಖ್ಯಮಂತ್ರಿ ಆದಕೂಡಲೆ ಮಾಡಿದ ಮೊದಲ ಕೆಲಸವೆಂದರೆ ದಲಿತ ದೌರ್ಜನ್ಯ ಕಾಯಿದೆಯಿಂದ ದಲಿತ ಎಂಬ ಪದವನ್ನೇ ಕೈಬಿಟ್ಟಿದ್ದು. ಈ ನಿರ್ಧಾರದ ಹಿಂದೆ ಒಂದು ದುಷ್ಟ ಉದ್ದೇಶ ಅಡಗಿತ್ತು. ಅದೇನೆಂದರೆ ತನ್ನ ರಾಜ್ಯದಲ್ಲಿ ದಲಿತರ ಮೇಲಾಗುವ ದೌರ್ಜನ್ಯಗಳನ್ನು ಜಾತಿನಿಂದನೆ ಎಂಬ ಲೆಕ್ಕಕ್ಕೆ ಬಾರದೆ ಕೇವಲ ದೌರ್ಜನ್ಯ ಪ್ರಕರಣಗಳಾಗಿ ಬಿಂಬಿತವಾಗುವುದು. ಮತ್ತು ಆ ಮೂಲಕ ತನ್ನ ಆಡಳಿತದಲ್ಲಿ ದಲಿತರ ಮೇಲೆ ದೌರ್ಜನ್ಯಗಳೇ ನಡೆದಿಲ್ಲ ಎಂಬಂತೆ ತೋರಿಸುವುದು. ಆದರೆ ಆಕೆಯ ಈ ನಿರ್ಧಾರದ ವಿರುದ್ಧ ಜನ ಪ್ರತಿಭಟಿಸಿದ್ದರಿಂದ ಮತ್ತೆ ದಲಿತ ಪದವನ್ನು ಸೇರಿಸಬೇಕಾಯಿತು.



## ಕಂಡಹಾಗೆ

ಗೌರಿ ಲಂಕೇಶ್

ಆದರೆ ಮಾಯಾವತಿ ಅಷ್ಟಕ್ಕೆ ಸುಮ್ಮನಾಗಲಿಲ್ಲ. ಈ ಬಾರಿ ಅಧಿಕಾರಕ್ಕೆ ಬಂದನಂತರ ಆಕೆ ಆ ಕಾಯಿದೆಯಲ್ಲಿಯೇ ತಿದ್ದುಪಡಿಯನ್ನು ತಂದಳು. ಆ ತಿದ್ದುಪಡಿಯ ಪ್ರಕಾರ ದಲಿತರ ಮೇಲೆ ದೌರ್ಜನ್ಯದ ಆರೋಪ ನ್ಯಾಯಾಲಯದಲ್ಲಿ ಸಾಬೀತಾಗದಿದ್ದರೆ ಆರೋಪ ಮಾಡಿದವರ ವಿರುದ್ಧವೇ ಕಾನೂನು ಕ್ರಮ ತೆಗೆದುಕೊಳ್ಳುವುದು! ಇದರ ಪರಿಣಾಮ ಎಷ್ಟು ಆಘಾತಕಾರಿ ಆಗಿದೆ ಎಂದರೆ ಉತ್ತರ ಪ್ರದೇಶದ ದಲಿತರು ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳನ್ನಾಗಲಿ, ಜಾತಿನಿಂದನೆಯನ್ನಾಗಲಿ ಕುರಿತಂತೆ ಪೊಲೀಸರಿಗೆ ದೂರು ಕೊಡಲೂ ಮುಂದಾಗುತ್ತಿಲ್ಲ.

ಒಂದು ರಾಜ್ಯದ ಬಡವರ, ದಲಿತರ ಏಳಿಗೆಗೆ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳಿಗೆ ರಾಜ್ಯದ ಬೊಕ್ಕಸದಿಂದಲೇ ಹಣವನ್ನು ನೀಡಬೇಕು. ಆದರೆ ಮಾಯಾವತಿಯ ಆಡಳಿತದಲ್ಲಿ ಅಂಥದ್ದೇನೂ ಆಗುತ್ತಿಲ್ಲ. ಬಡವರಿಗಾಗಲಿ, ದಲಿತರಿಗಾಗಲಿ ಇಲ್ಲಿಯತನಕ ಒಂದೇ ಒಂದು ಕಾರ್ಯಕ್ರಮವನ್ನು ರೂಪಿಸದಿರುವ ಮಾಯಾವತಿ, ಅದೇ ರಾಜ್ಯ ಬೊಕ್ಕಸದಿಂದ ಕೋಟ್ಯಂತರ ರೂಪಾಯಿಗಳನ್ನು ತನ್ನ ಮತ್ತು ಇತರರ ಪ್ರತಿಮೆಗಳಿಗೆ, ಸ್ಮಾರಕಗಳಿಗೆ, ಪಾರ್ಕ್‌ಗಳಿಗೆ ವಿನಿಯೋಗಿಸಿದ್ದಾರೆ. ಒಂದು ಅಂದಾಜಿನ ಪ್ರಕಾರ ಆಕೆ ಇಲ್ಲಿಯವರೆಗೂ ತನ್ನ ಮತ್ತು ಕಾನ್ಶೀರಾಂ ಅವರ ಪ್ರತಿಮೆಗಳಿಗೆಂದೇ ವ್ಯಯ ಮಾಡಿರುವ ಮೊತ್ತ ಸುಮಾರು 3000 ಕೋಟಿ ರೂಪಾಯಿಗಳು.

ಮಾಯಾವತಿ ಎಂಬ ದಲಿತ ನಾಯಕಿಯ ಸೋಗಲಾಡಿತನಕ್ಕೆ ಒಂದು ಉದಾಹರಣೆಯನ್ನು ನೀಡಿ ಇದನ್ನು ಮುಗಿಸಬಹುದೆನ್ನಿಸುತ್ತದೆ. ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ಬೆಂಬಲದಿಂದಲೇ ಮುಖ್ಯಮಂತ್ರಿ ಆಗಿರುವ ಮಾಯಾವತಿ ಹುಟ್ಟಿದ್ದು ಬಡ ಕುಟುಂಬದಲ್ಲಾದರೂ ಇವತ್ತು ಕೋಟ್ಯಾಧೀಶೆ. ಆದರೆ ತನ್ನ ಹುಟ್ಟುಹಬ್ಬದ ದಿನವನ್ನು ಆಕೆ 'ಜನ ಕಲ್ಯಾಣ ದಿನ' ಎಂದು ಘೋಷಿಸಿದ್ದಾಳೆ. ಇಂತಹ ವ್ಯಕ್ತಿಯ ಹಣದ ಹಾರ ಟೀಕಾ ಪ್ರಹಾರಕ್ಕೆ ಕಾರಣವಾಗುತ್ತದೆಯೇ ಹೊರತು ಅಭಿನಂದನೆಗಲ್ಲ... ●

**ಗಮನಿಸಿ : ಬಿಬಿಎಂಪಿ ಚುನಾವಣೆ ನಡೆಯುತ್ತಿರುವುದರಿಂದ ಮುಂದಿನ ಸಂಚಿಕೆ ಮಾರ್ಚ್ 25ರಂದು ಬಿಡುಗಡೆಯಾಗಲಿದೆ**

# ...ತಿಕ ಪೊಲೀಸ್‌ಗಿರಿಯ ...ಂದು ಹೇಯ ಪ್ರಕರಣ

ಉಡುಪಿಯ ಹೊರವಲಯದಲ್ಲಿರುವ ಕಡೆಕಾರು ಎಂಬ ಊರಿನಲ್ಲಿ 45ರ ಹರೆಯದ ಓರ್ವ ಗಂಡಸು 15 ಪ್ರಾಯದ ತನ್ನ ಮಗಳ ಮೇಲೆ ಅತ್ಯಾಚಾರ ನಡೆಸುತ್ತಿದ್ದುದು ಇತ್ತೀಚೆಗೆ ಬಹಿರಂಗವಾಯಿತು. 10ನೇ ಯ ವಿದ್ಯಾರ್ಥಿನಿಯಾಗಿದ್ದ ತನ್ನ ಮಗಳನ್ನು ಆ ಗಂಡಸು, ಹಲವು ತಿಂಗಳುಗಳಿಂದ ಬಲಾತ್ಕರಿಸುತ್ತಿದ್ದು, ಮೊನ್ನೆ 3.2010ರಂದು ಅನಿವಾರ್ಯ ಕಾರಣಗಳಿಂದ ಅದು ಎಲ್ಲರೂ ಗಮನಿಸುವಂತಾಯಿತು. ಈ ಸುದ್ದಿ ಹೊರಬಿದ್ದದ್ದೇ ಕಡೆಕಾರು ಮತ್ತು ಆಸುಪಾಸಿನ ನೂರಾರು ಜನ ಒಟ್ಟಾಗಿ, ಆ ಹುಡುಗಿಯ ತಂದೆಗೆ ಹೊಡೆದು ಬಡಿದು, ಮಲ್ಪೆ ಪೊಲೀಸು ಠಾಣೆಗೆ ಒಪ್ಪಿಸಿದ್ದಾರೆ. ಪೊಲೀಸರು ಈಗ ಆತನ ಮೇಲೆ ಕ್ರಿಮಿನಲ್ ಯ ಸೆಕ್ಷನ್ 376 (ಅತ್ಯಾಚಾರ) ಅನ್ವಯ ಕೇಸು ಹಾಕಿದ್ದಾರೆ.

ಪ್ರಕರಣದಲ್ಲಿ ಕಳವಳಕಾರಿಯಾದ ಹಲವು ಅಂಶಗಳಿವೆ.

1. ುಟುಂಬವೊಂದರ ಒಳಗಿನ ವಿಷಮ ವಿದ್ಯಮಾನ, ದಾರಿಹೋಕರ ಬಾಯಿ ತಾಂಬೂಲವಾಗುವುದರ ೊತೆಗೆ ಗುಂಪು ಹಿಂಸೆಗೂ ಕಾರಣವಾಗಿದೆ. ಆ ನತದೃಷ್ಟ ಬಾಲಕಿಯ ತಂದೆಗೆ ಹೊಡೆಯಲು ಊರಿನವರಿಗೆ ಯಾವ ಹಕ್ಕೂ ಇಲ್ಲ; ಅವರು ಈ ಪ್ರಕರಣದಲ್ಲಿ ನೇರವಾಗಿ ನೊಂದವರೂ ಲ್ಲ, ನೊಂದ ಹುಡುಗಿಗೆ ನ್ಯಾಯ ಒದಗಿಸುವ ಪರಿಯೂ ಇದಲ್ಲ.

2. ುಂಪುನ್ಯಾಯ ಮತ್ತು ಗುಂಪುಶಿಕ್ಷೆ-Lynching-ಈಗ ಕರಾವಳಿಯ ಊರುಗಳ ಸಂಸ್ಕೃತಿಯಲ್ಲೇ ರಿಹೋಗಿರುವಂತೆ ಭಾಸವಾಗುತ್ತಿದೆ. "ನಮ್ಮ ಧರ್ಮ ಶ್ರೇಷ್ಠ, ನಮ್ಮ ಸಂಸ್ಕೃತಿ ಶ್ರೇಷ್ಠ, ನಮ್ಮಷ್ಟು ಸಜ್ಜನರು ಯಾರೂ ಇಲ್ಲ" ಎಂಬ ನೈತಿಕ ಅಹಮಿಕೆ, ಸ್ವಪ್ರತಿಷ್ಠೆ ಮತ್ತು ಸೋಗಲಾಡಿತನ ಗ ಕರಾವಳಿಯ ಜೀವನಕ್ರಮವೇ ಆಗಿಹೋಗಿದೆ. ಗುಂಪಿನ ಮೃಗೀಯ ನ್ಯಾಯವಲ್ಲದೆ ಲ್ಲಿ ಬೇರೆ ಯಾವ ತರಹದ ನ್ಯಾಯ ಇರಲು ಸಾಧ್ಯ?

3. ತಂದೆ-ಮಗಳು, ತಾಯಿ-ಮಗ ಅಥವಾ ಸೋದರ-ಸೋದರಿಯರ ನಡುವೆ ಲೈಂಗಿಕ ಸಂಬಂಧ ಪಾಪಕೃತ್ಯವೆಂಬುದು ನಮ್ಮ ಸಮಾಜದ ರೂಢಿಗತ ನಂಬಿಕೆಯಾದರೂ, ಮನಃಶಾಸ್ತ್ರಜ್ಞರ ಪ್ರಕಾರ ಈ ಬಗೆಯ ಲೈಂಗಿಕತೆ ಮನುಷ್ಯನ ಮನಸ್ಸಿನ ಆಳದಲ್ಲಿ ಸುಪ್ತವಾಗಿರುವ ಪ್ರವೃತ್ತಿ. ಬಹುತೇಕ ಜನರಲ್ಲಿ ಈ ಪ್ರವೃತ್ತಿಯನ್ನು ಅದುಮಿ ಹಿಡಿಯಬಲ್ಲ ಸಾಂಸ್ಕೃತಿಕ ಪ್ರತಿರೋಧದ ಶಕ್ತಿ ಇರುತ್ತದೆ. ಆದರೆ ಲಕ್ಷದಲ್ಲಿ ಒಬ್ಬನಿಗೆ ಈ ಶಕ್ತಿ ಇರುವುದಿಲ್ಲ, ಅಂತಹ ವ್ಯಕ್ತಿ ವಿಕ್ಷಿಪ್ತನಾದ್ದರಿಂದ, ಆತನ ಕೃತ್ಯ ಕಾನೂನುರೀತ್ಯಾ ಅಪರಾಧಕ್ಕಿಂತ ಹೆಚ್ಚಾಗಿ ಒಂದು ಮನೋರೋಗ. ಗುಂಪುಹಿಂಸೆ, ಆತನ ಕೃತ್ಯಕ್ಕೆ ಚಿಕಿತ್ಸೆಯೂ ಅಲ್ಲ; ಕಾನೂನಿನ ಕ್ರಮವೂ ಅಲ್ಲ.

## ಒಂದು ಪತ್ರ

4. ಈ ಪ್ರಕರಣದಲ್ಲಿ ಕರಾವಳಿಯ ಪತ್ರಿಕೆ ಮತ್ತು ದೃಶ್ಯ ಮಾಧ್ಯಮಗಳು ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿವೆ. ಇಂತಹ ಒಂದು ಘಟನೆ ಸುದ್ದಿಯಾಗುವ ಅವಶ್ಯಕತೆಯಾದರೂ ಏನಿತ್ತು? ತನ್ನ ತಂದೆಯಿಂದಲೇ ಅತ್ಯಾಚಾರಕ್ಕೆ ಒಳಗಾದ ಆ ಹುಡುಗಿಯ ವಯಸ್ಸು, ಆಕೆ ಓದುತ್ತಿರುವ ಶಾಲೆಯ ಹೆಸರು ಮತ್ತು ತರಗತಿ, ಆಕೆಯ ತಾಯಿಯ ಹೆಸರು, ತಂದೆ ಕಡೆಕಾರಿನಲ್ಲಿ ಹೇರ್ ಕಟ್ಟಿಂಗ್ ಸಲೂನಿನ ಹೆಸರು-ವಿಳಾಸಗಳನ್ನು ಫೋಟೊ ಸಮೇತ ಪ್ರಕಟ ಮಾಡಿದ್ದಂತೂ ಅಕ್ಷಮ್ಯ ಅಪರಾಧ. ಕಡೆಯ ಪಕ್ಷ, ಆ ಹುಡುಗಿಯ ... ಎಂಬ ಭವಿಷ್ಯ ಜೀವನದ ದೃಷ್ಟಿಯಿಂದ ಆಕೆಯ ಖಾಸಗಿತನವನ್ನು ಕಾಪಾಡ... ವಿವೇಕವನ್ನೂ ಮಾಧ್ಯಮಗಳು ತೋರಿಸಲಿಲ್ಲ. ನಾವು ಇದನ್ನು ತೀವ್ರವಾಗಿ ಖಂಡಿಸುತ್ತೇವೆ. ಕಡೆಕಾರಿನ 15ರ ಹರೆಯದ ಆ ಬಾಲಕಿಗೆ ಸರಕಾರ ಕೂಡಲೆ ದೈಹಿಕ ಮತ್ತು ಮಾನಸಿಕ ಚಿಕಿತ್ಸೆ, ಶುಶ್ರೂಷೆ ಮತ್ತು ಸಾಂತ್ವನಗಳಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದೂ ನಾವು ಒತ್ತಾಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ.




- ಜಿ.ರಾಜಶೇಖರ್, ಯು.ಆರ್.ಜಯವಂತ್, ಕೆ.ಫಣಿರಾಜ್.

# ಕತ್ತಿಯಡಿಯ ಕತ್ತಲ ಕೋಣೆಯಲ್ಲಿ ಇಪ್ಪತ್ತೆಂಟು ವರ್ಷಗಳು!

ಇದು ಇಡೀ ಜಗತ್ತಿಗೆ ಮಾನವೀಯತೆಯ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಬಿಗಿಯುವ ದೇಶದಲ್ಲೇ ಅಮಾನವೀಯತೆ ತಾಂಡವ ನೃತ್ಯವಾಡುತ್ತಿರುವ ಕತೆ. ತಮ್ಮದು ವಿಶ್ವದ ಅತ್ಯಂತ ಪುರಾತನ ಪ್ರಜಾಪ್ರಭುತ್ವವೆಂದು ಜಗತ್ತಿನೆದುರು ಎದೆಯುಬ್ಬಿಸಿಕೊಂಡು ಬೀಗುತ್ತಿರುವ ದೇಶದಲ್ಲೇ ಅಪ್ರಜಾತಾಂತ್ರಿಕತೆ ಮೆರೆದಾಡುತ್ತಿರುವ ಕತೆ. ಕಪ್ಪು ವ್ಯಕ್ತಿಯೊಬ್ಬ ದೇಶದ ಪರಮೋಚ್ಚ ಅಧಿಕಾರವನ್ನು ಹೊಂದಿರುವ ದೇಶದಲ್ಲೇ ಸಾಮಾನ್ಯ ಕಪ್ಪು ಜನತೆ ಅನುಭವಿಸುತ್ತಿರುವ ಜನಾಂಗೀಯ ದ್ವೇಷ, ಅವಹೇಳನಗಳನ್ನು ಪ್ರಾತಿನಿಧಿಕವಾಗಿ ವರ್ಣಿಸುವ ಕತೆ. ಇದು ಜನಾಂಗೀಯ ಅವಹೇಳನಕ್ಕೆ ಇದಿರಾಗಿ ಎದೆ ಸೆಟೆಸಿ ನಿಂತು ಕಳೆದ ಇಪ್ಪತ್ತೆಂಟು ವರ್ಷಗಳಿಂದ ನೇಣುಕುಣಿಕೆಗಾಗಿ ಕಾಯುತ್ತಾ ಹೊರ ಪ್ರಪಂಚವನ್ನೇ ಕಾಣದೇ ಜೈಲಿನಲ್ಲೇ ಕೊಳೆಯುತ್ತಿರುವ ಸ್ವಾಭಿಮಾನಿ ಕಪ್ಪು ಪತ್ರಕರ್ತನೊಬ್ಬನ ದಾರುಣ ಕತೆ.

ಆತನ ಹೆಸರು ಮುಮಿಯ ಅಬು-ಜಮಾಲ್. ಆಫ್ರಿಕನ್ ಮೂಲದ ಕಪ್ಪು ಜನಾಂಗಕ್ಕೆ ಸೇರಿದ ಆತ ಅಮೆರಿಕದಲ್ಲಿ ಪತ್ರಕರ್ತನಾಗಿದ್ದವನು. ಈತನ ಹೆಸರಿನಲ್ಲಿರುವ 'ಮುಮಿಯ' ಆತನ ತಂದೆಯಿಟ್ಟ ಹೆಸರಲ್ಲ, ಆತನ ಶಿಕ್ಷಕ ಇಟ್ಟ ಹೆಸರು. ನಮ್ಮ ದೇಶವನ್ನು ಬ್ರಿಟಿಷರು ಆಕ್ರಮಿಸಿಕೊಂಡಿದ್ದಂತೆಯೇ ಇಡೀ ಆಫ್ರಿಕಾ ಖಂಡವನ್ನು ಮುನ್ನೂರು ವರ್ಷಗಳ ಕಾಲ ಯೂರೋಪಿಯನ್ ದೇಶಗಳು ಆಕ್ರಮಿಸಿಕೊಂಡು ಅಲ್ಲಿನ ಸಂಪತ್ತನ್ನೆಲ್ಲಾ ಲೂಟಿ ಹೊಡೆದದ್ದು ನಮಗೆಲ್ಲಾ ಗೊತ್ತೆ ಇದೆ. ಆ ಸಂದರ್ಭದಲ್ಲಿ ಪರಕೀಯ ಶಕ್ತಿಗಳನ್ನು ಹೊಡೆದಟ್ಟಿ ತಮ್ಮ ತಮ್ಮ ದೇಶಗಳನ್ನು ವಿಮೋಚನೆಗೊಳಿಸುವ ಸ್ವಾತಂತ್ರ್ಯ ಚಳವಳಿ ಅಲ್ಲೂ ಕೂಡ ಬಲವಾಗಿ ನಡೆಯಿತು. ಹೀಗೆ, ಕೀನ್ಯಾವನ್ನು ಆಕ್ರಮಿಸಿಕೊಂಡಿದ್ದ ಬ್ರಿಟಿಷರ ವಿರುದ್ಧ ಬಂದೂಕೆತ್ತಿ ಹೋರಾಡುತ್ತಿದ್ದ ರಾಷ್ಟ್ರೀಯವಾದಿ ಕ್ರಾಂತಿಕಾರಿಗಳನ್ನು 'ಮುಮಿಯ' (ರಾಜಕುಮಾರ) ಎನ್ನುತ್ತಿದ್ದರು. ಆಫ್ರಿಕನ್ ಸಂಸ್ಕೃತಿಗಳ ಬಗ್ಗೆ ಪಾಠ ಮಾಡುತ್ತಿದ್ದ ಶಿಕ್ಷಕರೊಬ್ಬರು ಅಬು-ಜಮಾಲ್‌ಗೆ 'ಮುಮಿಯ' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಅಲ್ಲಿಂದಾಚೆಗೆ ಅವರ ಹೆಸರು ಮುಮಿಯ ಅಬು-ಜಮಾಲ್ ಎಂದಾಗಿಬಿಟ್ಟಿತು. ಪ್ರಾಯಶಃ ತನ್ನ ಶಿಷ್ಯ ಎಷ್ಟೇ ಕಷ್ಟವಾದರೂ ಸರಿ ತನ್ನತನವನ್ನು ಇನ್ನೊಬ್ಬರ ಕಾಲಡಿಯಿಡದೇ ಎದೆಯುಬ್ಬಿಸಿಕೊಂಡು ಸ್ವಾಭಿಮಾನಿಯಾಗಿ ಬದುಕಬೇಕೆಂಬುದು ಆ ಶಿಕ್ಷಕನ ಆಶೆಯಿದ್ದಿರಬೇಕು. ಗುರುವಿನ ಆಶೆಯಂತೆಯೇ ಮುಮಿಯ ಅಬು-ಜಮಾಲ್ ಬದುಕಿದ. ಅದಕ್ಕಾಗಿಯೇ ಯಾವ ಕ್ಷಣದಲ್ಲಿ ತನ್ನ ಕೊರಳಿಗೆ ಉರುಳು ಬೀಳುತ್ತದೆಂಬುದನ್ನು ಕಾಯುತ್ತಾ ಕಳೆದ ಇಪ್ಪತ್ತೆಂಟು ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿದ್ದಾನೆ.

ಇಷ್ಟಕ್ಕೂ ಆತ ಮಾಡಿದ ಅಪರಾಧವೇನು ಎಂದು ಕೆದಕಿದರೆ ನಿಮಗೆ ಸಿಗುವುದು ಆತನ ಸ್ವಾಭಿಮಾನ. ಇನ್ನೊಬ್ಬರ ಮೇಲಾಗುತ್ತಿರುವ ಅನ್ಯಾಯವನ್ನು, ದೌರ್ಜನ್ಯವನ್ನು ಪ್ರತಿಭಟಿಸುವ ಮನೋಧರ್ಮ. ಜನರ ಮೇಲಿನ ಪ್ರಭುತ್ವದ



ಅಬು-ಜಮಾಲ್ ಇಪ್ಪತ್ತೇಳು ವರ್ಷದ ಯುವಕನಾಗಿದ್ದಾಗ ಜೈಲುಪಾಲಾಗಿದ್ದು. ಅಲ್ಲಿಂದಾಚೆಗೆ ಇಪ್ಪತ್ತೆಂಟು ವರ್ಷಗಳನ್ನು ಆತ ಜೈಲಿನಲ್ಲಿ ಕಳೆದಿದ್ದಾನೆ. ಅಂದರೆ, ಆತ ತನ್ನ ಬದುಕಿನಲ್ಲಿ ಹೊರಗೆ ಸ್ವತಂತ್ರವಾಗಿ ಕಳೆದದ್ದಕ್ಕಿಂತ ಹೆಚ್ಚು ಸಮಯವನ್ನು ಜೈಲಿನಲ್ಲಿ ಬಂಧಿಯಾಗಿ ಕಳೆದಿದ್ದಾನೆ. ಇಪ್ಪತ್ತೇಳು ವರ್ಷದ ಯುವಕನಾಗಿ ಜೈಲಿಗೆ ಹೋದವನು ಈಗ ಐವತ್ತೈದು ವರ್ಷದ ಬಸವಳಿದ ವ್ಯಕ್ತಿಯಾಗಿದ್ದಾನೆ.


ಹಿಂಸೆಯ ವಿವಿಧ ರೂಪಗಳನ್ನು, ಆಯಾಮಗಳನ್ನು ಬಯಲಿಗೆಳೆಯುವ ಮೂಲಕ, ಪ್ರಭುತ್ವದ ನೈಜ ಚಿತ್ರಣವನ್ನು ಜನರೆದುರು ತೆರೆದಿಡುವ ಮೂಲಕ ಪ್ರಭುತ್ವವನ್ನು ನಿಜಾರ್ಥದಲ್ಲಿ ಜನರ ಸೇವಕನನ್ನಾಗಿ ಮಾಡುವುದಕ್ಕಾಗಿ ಆತ ನಡೆಸಿದ ಪ್ರಯತ್ನ. ಒಟ್ಟಾರೆಯಾಗಿ ಸಮಾಜವನ್ನು ಇನ್ನಷ್ಟು ಮಾನವೀಯಗೊಳಿಸಬೇಕೆಂಬ ಉತ್ಕಟ ವಾಂಛೆಯಿಂದ ಆತ ನಿಷ್ಕಲ್ಮಷವಾಗಿ ನಡೆಸಿದ ಪತ್ರಿಕೋದ್ಯಮ.

ಒಂಭತ್ತು ವರ್ಷದ ಬಾಲಕನಾಗಿದ್ದಾಗಲೇ ತನ್ನ ತಂದೆಯನ್ನು ಕಳೆದುಕೊಂಡಿದ್ದ ಮುಮಿಯ ಅಬು-ಜಮಾಲ್ ತನ್ನ ಬದುಕಿನುದ್ದಕ್ಕೂ ಬಹಳ ಕಷ್ಟಪಟ್ಟು ಮೇಲೆ ಬಂದ ವ್ಯಕ್ತಿ. ಅಮೆರಿಕದಲ್ಲಿ ಬಿಳಿ ಜನಾಂಗೀಯರಿಂದ ಆತ ಅನುಭವಿಸಿದ ಅವಹೇಳನ, ಅವಮಾನ, ನಿಂದನೆ, ದೌರ್ಜನ್ಯ, ತಾರತಮ್ಯಗಳು ಒಂದೆ ಎರಡೆ? ಆತನ ಮಾತಿನಲ್ಲೇ ಹೇಳುವುದಾದರೆ ಬಾಲ್ಯದಲ್ಲಿ ಆತ ಅನುಭವಿಸಿದ ಈ ಕಷ್ಟಕಾರ್ಪಣ್ಯಗಳೇ ಆತನನ್ನು ಬಿಳಿಯರಿಂದ ಕರಿಯರ ಮೇಲೆ ನಡೆಯುತ್ತಿದ್ದ ಈ ಜನಾಂಗೀಯ ದೌರ್ಜನ್ಯಗಳ ವಿರುದ್ಧವಾಗಿ ಹೋರಾಡುವುದಕ್ಕಾಗಿಯೇ ಸ್ಥಾಪನೆಗೊಂಡಿದ್ದ ಬ್ಲಾಕ್ ಪ್ಯಾಂಥರ್ಸ್ ಪಾರ್ಟಿ ಸೇರಿಕೊಳ್ಳುವಂತೆ ಮಾಡಿದವು. ಹದಿನೈದನೇ ವಯಸ್ಸಿಗಾಗಲೇ ಆತ ಪ್ಯಾಂಥರ್ಸ್ ಪಾರ್ಟಿಯಲ್ಲಿ ಸಕ್ರಿಯ ಕಾರ್ಯಕರ್ತನಾಗಿ ಕೆಲಸ ಮಾಡಲಾರಂಭಿಸಿದ್ದ. "ಬಂದೂಕಿನ ನಳಿಗೆಯಿಂದ ರಾಜಕೀಯಾಧಿಕಾರ ಹೊರಹೊಮ್ಮುತ್ತದೆ" ಎಂಬ ಚೀನಾ ಕ್ರಾಂತಿಯ ರೂವಾರಿ ಮಾವೋ ತ್ಸೆ ತುಂಗ್‌ರ ಮಾತುಗಳನ್ನು ಆಗಾಗ ಉದ್ಧರಿಸುತ್ತಿದ್ದ. ಈತನ ಕ್ರಾಂತಿಕಾರಿ ಚಟುವಟಿಕೆಗಳ ಮೇಲೆ ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್ (ಎಫ್‌ಬಿಐ) ನಿಗಾ ಇಟ್ಟಿತ್ತು.

ತೀವ್ರ ಬಡತನದ ಹಿನ್ನೆಲೆಯಿಂದ ಬಂದಿದ್ದ ಮುಮಿಯ ಅಬು-ಜಮಾಲ್ ಪಾರ್ಟ್ ಟೈಂ ಕೆಲಸ ಮಾಡುತ್ತಲೇ ತನ್ನ ವಿದ್ಯಾಭ್ಯಾಸವನ್ನೂ ಮುಗಿಸಿದ. ನಂತರ ಹಲವಾರು ಪತ್ರಿಕೆಗಳಿಗೆ, ರೇಡಿಯೋ ಸ್ಟೇಶನ್‌ಗಳಿಗೆ ವರದಿಗಾರನಾಗಿ ಕಾರ್ಯನಿರ್ವಹಿಸಿದ. ತನ್ನ ಸ್ವಂತ ಜೀವನದಲ್ಲೇ ತೀವ್ರ ಜನಾಂಗೀಯ ಶೋಷಣೆಯ ಕಹಿ ಅನುಭವವನ್ನು ಉಂಡಿದ್ದ ಆತ ಅದನ್ನೇ ತನ್ನ ವೃತ್ತಿಯ ಕೇಂದ್ರ ವಿಷಯವನ್ನಾಗಿಸಿಕೊಂಡ. ಕಪ್ಪು ಜನರ ವಿರುದ್ಧ ಎಲ್ಲೇ ಬಿಳಿಯರ ಜನಾಂಗೀಯ ದಾಳಿಗಳು, ದೌರ್ಜನ್ಯಗಳು, ತಾರತಮ್ಯಗಳು ನಡೆದರೂ ಅಲ್ಲಿಗೆ ಎಲ್ಲರಿಗಿಂತ ಮೊದಲು ತಲುಪಿ ಯಾವುದೇ ಪೂರ್ವಗ್ರಹಕ್ಕೂ ಒಳಗಾಗದೇ ಸುದ್ದಿಯನ್ನು ವಸ್ತುನಿಷ್ಠವಾಗಿ ವರದಿ ಮಾಡುತ್ತಿದ್ದ. ಜನಸಾಮಾನ್ಯರ ಮೇಲೆ ಪೊಲೀಸರು ದೌರ್ಜನ್ಯವೆಸಗಿದ ಸುದ್ದಿ ಕಿವಿಗೆ ಬಿದ್ದಾಕ್ಷಣವೇ ಆತ ಸ್ಥಳಕ್ಕೆ ಧಾವಿಸಿ ಘಟನೆಯನ್ನು ವರದಿ ಮಾಡುತ್ತಿದ್ದ. ದೌರ್ಜನ್ಯಕ್ಕೊಳಗಾದವರನ್ನು ಮಾತನಾಡಿಸಿ ಅವರ ನೋವುಗಳನ್ನು ಇಡೀ ದೇಶವೇ ಹಂಚಿಕೊಳ್ಳುವ ಹಾಗೆ ಮಾಡುತ್ತಿದ್ದ. ಇದರಿಂದ ಸರ್ಕಾರ ಮತ್ತು ಪೊಲೀಸರೂ ಬಹಳಷ್ಟು ಸಲ ಇಕ್ಕಟ್ಟಿಗೆ ಸಿಲುಕಿದ್ದುಂಟು. ತನ್ನ ಇಂತಹ ವರದಿಗಳ ಮೂಲಕವೇ ಮುಮಿಯ ಅಬು-ಜಮಾಲ್ ಅಮೆರಿಕನ್ ಕಪ್ಪು ಪತ್ರಕರ್ತರ ವಲಯದಲ್ಲಿ 'ದನಿಯಿಲ್ಲದವರ ದನಿ' ಎಂದೇ ಪ್ರಖ್ಯಾತನಾಗಿದ್ದ. ಪೊಲೀಸರು, ಎಫ್‌ಬಿಐ ಈತನನ್ನು ಬೆದರಿಸುತ್ತಿದ್ದರೂ ಎಂದೂ ಆತ ತನ್ನ ಆಶಯಗಳೊಂದಿಗೆ, ತಾನು ನಂಬಿದ್ದ ಉದಾತ್ತ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಹಣಕಾಸಿನ ವಿಚಾರದಲ್ಲಿ ಎಷ್ಟೇ ಕಷ್ಟ ಬಂದರೂ ಎಂದೂ ಆತ ಅನ್ಯಾಯದ ದುಡ್ಡಿಗೆ ಕೈಯೊಡ್ಡಲಿಲ್ಲ. ಬಹಳ ಪ್ರಖ್ಯಾತ ಪತ್ರಕರ್ತನಾಗಿದ್ದರೂ, ಫಿಲಿಡೆಲ್ಫಿಯ ಕಪ್ಪು ಪತ್ರಕರ್ತರ ಸಂಘಕ್ಕೆ ನಾಯಕನಾಗಿದ್ದರೂ ಆತ ಹಗಲಿನಲ್ಲಿ ಪತ್ರಕರ್ತನಾಗಿ ಕೆಲಸ ಮಾಡುತ್ತಾ ರಾತ್ರಿ ಟ್ಯಾಕ್ಸಿ ಡ್ರೈವರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಎಂದರೆ ಆತನ ಜೀವನ ಮೌಲ್ಯಗಳು ಅರ್ಥವಾಗುತ್ತವೆ.

1981ರ ಡಿಸೆಂಬರ್ 9ರ ರಾತ್ರಿ ಎಂದಿನಂತೆ ಮುಮಿಯ ಅಬು-ಜಮಾಲ್ ಫಿಲಿಡೆಲ್ಫಿಯದಲ್ಲಿ ಟ್ಯಾಕ್ಸಿ ಓಡಿಸುತ್ತಿದ್ದ. ಬೆಳಗಿನ ಜಾವ 4 ಗಂಟೆಯ ಹೊತ್ತಿಗೆ ಫಿಲಿಡೆಲ್ಫಿಯದ 13 ಅಂಡ್ ಲೋಕಸ್ಟ್ ಸ್ಟ್ರೀಟ್ಸ್‌ನ ಟ್ರಾಫಿಕ್ ಸ್ಟಾಪ್‌ನಲ್ಲಿ ಈತ ತನ್ನ ಟ್ಯಾಕ್ಸಿ ನಿಲ್ಲಿಸಿಕೊಂಡು ನಿಂತಿದ್ದಾಗಲೇ ಅನತಿ ದೂರದಲ್ಲಿ ಗುಂಡಿನ ಸದ್ದು ಕೇಳಿಸಿತು. ತಿರುಗಿ ನೋಡಿದರೆ ಈತನ ಸ್ವಂತ ತಮ್ಮ ವಿಲಿಯಮ್ ಕುಕ್ ರಸ್ತೆಯ ಮೇಲೆ ಬಿದ್ದಿದ್ದ. ಕೂಡಲೇ ಆತ ಟ್ಯಾಕ್ಸಿಯಿಂದ ಇಳಿದು ಅಲ್ಲಿಗೆ ಓಡಿಹೋಗುತ್ತಿದ್ದಂತೆಯೇ ಸಮವಸ್ತ್ರ ಧರಿಸಿದ್ದ ಪೊಲೀಸ್ ಅಧಿಕಾರಿಯೊಬ್ಬ (ಡೇನಿಯಲ್ ಫಾಲ್ಕನರ್) ಈತನ ಮೇಲೆ ಗುಂಡು ಹಾರಿಸಿದ. ತಕ್ಷಣವೇ ಮುಮಿಯ ಅಬು-ಜಮಾಲ್ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದ. ತುಸು ಹೊತ್ತಿನಲ್ಲೇ ಅಲ್ಲಿಗೆ ಪೊಲೀಸರು ಬಂದು ನೋಡಿದರೆ ಡೇನಿಯಲ್ ಫಾಲ್ಕನರ್ ಮತ್ತು ಅಬು-ಜಮಾಲ್ ಇಬ್ಬರಿಗೂ ಗುಂಡೇಟು ಬಿದ್ದಿತ್ತು. ತಕ್ಷಣವೇ ಆಸ್ಪತ್ರೆಗೆ ಸೇರಿಸಲಾಯಿತಾದರೂ ಮುಮಿಯ ಅಬು-ಜಮಾಲ್ ಹೇಗೋ ಬದುಕುಳಿದ. ಡೇನಿಯಲ್ ಫಾಲ್ಕನರ್ ಎಂಬ ಪೊಲೀಸ್ ಅಧಿಕಾರಿ ಸತ್ತುಹೋದ. ಇದಿಷ್ಟು ಆ ಹೊತ್ತು ನಡೆದ ಘಟನೆ.

ಮುಮಿಯ ಅಬು-ಜಮಾಲ್ ಅವರನ್ನು ಕೂಡಲೇ ಬಂಧಿಸಲಾಯಿತು. ಪೊಲೀಸ್ ಸ್ಟೇಶನ್‌ನಲ್ಲಿ ಚಿತ್ರಹಿಂಸೆಗೆ ಒಳಪಡಿಸಲಾಯಿತು. ಅಂತಿಮವಾಗಿ ಡೇನಿಯಲ್ ಫಾಲ್ಕನರ್ ಎಂಬ ಪೊಲೀಸ್ ಅಧಿಕಾರಿಯ ಹತ್ಯೆಯ ಕೇಸನ್ನು ಹಾಕಿ ಸೆರೆಮನೆಗೆ ತಳ್ಳಲಾಯಿತು. 1982ರಲ್ಲಿ ನ್ಯಾಯಾಲಯದಲ್ಲಿ ಈ ಕೇಸಿನ ವಿಚಾರಣೆ ಪ್ರಾರಂಭವಾಯಿತು. ಸಾಬೋ ಎಂಬ ನ್ಯಾಯಾಧೀಶನೇ ಇದರ ವಿಚಾರಣೆ ನಡೆಸಿದ. ಈತ ಅಮೆರಿಕದಲ್ಲಿ ಅತ್ಯಂತ ಹೆಚ್ಚು ಜನರಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಕುಖ್ಯಾತನಾಗಿರುವ ವ್ಯಕ್ತಿ. ಮುಮಿಯ ಅಬು-ಜಮಾಲ್ ಕೇಸು ಈತನ ಮುಂದೆ ಬಂದಾಗಲೇ ಈತ ಎಂಥ ಶಿಕ್ಷೆ



## ಸುತ್ತ-ಮುತ್ತ


ಕುಮಾರ್ ಬುರಡಿಕಟ್ಟಿ

## Hats off to Grace Groner!

ಜನರು ಮೂಢನಂಬಿಕೆ, ಕಂದಾಚಾರಗಳಲ್ಲಿ ಕುತ್ತಿಗೆ ತನಕ ಮುಳುಗಿ ತಮ್ಮೆಲ್ಲಾ ಶ್ರಮ, ಹಣ, ಸಮಯವನ್ನೆಲ್ಲಾ ಅನವಶ್ಯಕವಾಗಿ ಪೋಲು ಮಾಡುತ್ತಿರುವುದನ್ನು ನೋಡಿದರೆ ಒಂದೊಂದು ಸಾರಿ ಈ ಪ್ರಪಂಚ ಒಂಥರಾ ಹುಚ್ಚರ ಆಸ್ಪತ್ರೆ ಇದ್ದಂಗಿದೆ ಅನ್ನಿಸುತ್ತೆ. ಎಲ್ಲೆಲ್ಲೂ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಲಂಚಗುಳಿತನಗಳೇ ರಾಜ್ಯಭಾರ ಮಾಡುತ್ತಿರುವ ಇಂದಿನ ಪರಿಸ್ಥಿತಿಯನ್ನು, ದುಡ್ಡಿಗಾಗಿ, ಆಧಿಪತ್ಯಕ್ಕಾಗಿ, ಅಧಿಕಾರಕ್ಕಾಗಿ ಕೊಲೆಸುಲಿಗೆಗಳು, ಯುದ್ಧಗಳು, ಮಾರಣಹೋಮಗಳು ನಡೆಯುತ್ತಿರುವ ಭೀಕರತೆಯನ್ನು ನೋಡಿದಾಗ ಒಂದೊಂದು ಸಾರಿ ಇಂಥ ಕೆಟ್ಟ ಪ್ರಪಂಚದಲ್ಲಿ ಯಾಕಪ್ಪ ಬದುಕಿರಬೇಕು ಅನ್ನಿಸುತ್ತೆ. ಆದರೆ ಇಂಥ ಕೆಟ್ಟ ಪ್ರಪಂಚದೊಳಗೂ ಜನ ನೆಮ್ಮದಿಯಿಂದ ಬದುಕುವುದಕ್ಕಾಗಿ ತಮ್ಮದೇ ಆದ ಹಾದಿಗಳನ್ನು ಕಂಡುಕೊಂಡಿರುತ್ತಾರೆ. ಕೆಲವರು ಪಕ್ಕದ ಮನೆಗೆ ಬೆಂಕಿಬಿದ್ದರೂ ಕಿಂಚಿತ್ತೂ ತಲೆಕೆಡಿಸಿಕೊಳ್ಳದೇ ತಮ್ಮದೇ ಲೋಕದೊಳಗೆ 'ನೆಮ್ಮದಿ'ಯಿಂದ ಬದುಕುವ ಹಾದಿ ಕಂಡುಕೊಂಡರೆ ಮತ್ತೆ ಕೆಲವರು ಅವಕಾಶ ವಂಚಿತ ಜನಸಮುದಾಯಗಳ ಶ್ರೇಯೋಭಿವೃದ್ಧಿಗೆ ತಮ್ಮ ಅಳಿಲುಸೇವೆ ಸಲ್ಲಿಸುವ ಮೂಲಕ ನೆಮ್ಮದಿಯನ್ನು ಕಂಡುಕೊಳ್ಳುತ್ತಾರೆ. ಅಂಥವರನ್ನೆಲ್ಲಾ ನೋಡಿದಾಗ ಬದುಕಿನ ಬಗ್ಗೆ ಜಿಗುಪ್ಸೆಯಿದ್ದವರಿಗೂ ಏನೋ ಒಂದು ರೀತಿಯ ಸ್ಫೂರ್ತಿ ಬಂದುಬಿಡುತ್ತದೆ. ಈ ಎರಡನೇ ಕ್ಯಟಗರಿಗೆ ಸೇರಿದ ಮಹಿಳೆಯೊಬ್ಬಳು ಕೊನೆವರೆಗೂ ನೆಮ್ಮದಿಯಿಂದ ಬದುಕಿ ಮೊನ್ನೆ ತನ್ನ ನೂರನೇ ವಯಸ್ಸಿನಲ್ಲಿ ಅಸುನೀಗಿದ್ದಾಳೆ.

ಆಕೆಯ ಹೆಸರು ಗ್ರೇಸ್ ಗ್ರೋನರ್. ಅಮೆರಿಕದ್ದ ಕ್ಯಾಲಿಫೋರ್ನಿಯ ಪ್ರಾಂತ್ಯದ ಲೇಕ್ ಫಾರೆಸ್ಟ್ ನಗರದವಳು. ಆಕೆ ಅಬ್ಬೋಟ್ ಲ್ಯಾಬರೋಟರೀಸ್ ಎಂಬ ಕಂಪೆನಿಯಲ್ಲಿ ಕಾರ್ಯದರ್ಶಿಯಾಗಿ ನಲ್ವತ್ತಮೂರು ವರ್ಷಗಳ ಕಾಲ ದುಡಿದಿದ್ದಳು. ಎಲ್ಲರಿಗೂ ಒಂದೊಂದು ಹವ್ಯಾಸವಿರುತ್ತದೆಯಲ್ಲವೆ? ಅದೇ ರೀತಿಯಲ್ಲಿ ಗ್ರೋನರ್‌ಗೂ ಒಂದು ಹವ್ಯಾಸವಿತ್ತು, ವಿಚಿತ್ರವೇ ಎನ್ನಬಹುದಾದ ಹವ್ಯಾಸವದು. ಅದೇನೆಂದರೆ ದುಡಿದ ದುಡ್ಡನ್ನು ಅನಿವಾರ್ಯತೆಗಳಿಗಷ್ಟೇ ಬಳಸಿ ಉಳಿದದ್ದನ್ನು ಕೂಡಿಡುವ ಹವ್ಯಾಸ! ಯಾವುದೋ ಕಂಪೆನಿಯಲ್ಲಿ ಒಂದಿಷ್ಟು ಷೇರುಗಳನ್ನೂ ತೊಡಗಿಸಿದ್ದರಿಂದ ಅದೂ ಬೆಳೆಯುತ್ತಿತ್ತು. ಅಮೆರಿಕ ಎಂದರೆ ಮಧ್ಯಮ ವರ್ಗದವರಿರಲಿ, ಬೀದಿ ಗುಡಿಸುವವರೂ ಕಾರಿನಲ್ಲಿ ಓಡಾಡುತ್ತಾರೆ. ಆದರೆ, ಕೈ ತುಂಬ ಸಂಬಳ ಪಡೆಯುತ್ತಿದ್ದ, ಕಂಪೆನಿಯ ಷೇರುಗಳ ಒಡತಿಯಾಗಿದ್ದ ಮಧ್ಯಮ ವರ್ಗದ ಈ ಮಹಿಳೆ ಒಂದು ಕಾರನ್ನು ಕೊಂಡುಕೊಂಡಿರಲಿಲ್ಲ. ನಮ್ಮಲ್ಲಿ ಹಾದಿಬೀದಿ ಬಳಿ ಬಟ್ಟೆ ಮಾರುತ್ತಾರಲ್ಲವೇ? ಅದೇ ರೀತಿಯಲ್ಲಿ ಅಮೆರಿಕದಲ್ಲಿ ಗುಡ್ಡೆ ಹಾಕಿ ಮಾರುವ ಹಳೆಯ ಬಟ್ಟೆಗಳನ್ನು ಕೊಂಡುಕೊಳ್ಳುತ್ತಿದ್ದಳೇ ಹೊರತು ಎಂದೂ ಶೋರೂಮ್‌ಗೆ ಹೋಗಿ ದುಬಾರಿ ಬೆಲೆಯ ಬಟ್ಟೆಗಳನ್ನು ಖರೀದಿಸಲಿಲ್ಲ. ಆಕೆಗೆ ಬರುವ ಆದಾಯವನ್ನು ಲೆಕ್ಕಾ ಹಾಕಿದರೆ ಲೇಕ್ ಫಾರೆಸ್ಟ್‌ನಲ್ಲಿ ಅತೀ ದೊಡ್ಡ ಬಂಗಲೆಯಲ್ಲೇ ಆಕೆ ವಾಸ ಮಾಡಬಹುದಿತ್ತು. ಆದರೆ, ಹಾಗೇ ಮಾಡದೇ ಆಕೆ ಎರಡು ಬೆಡ್‌ರೂಮ್‌ಗಳ ಒಂದು ಪುಟ್ಟ ಮನೆಯಲ್ಲಿ ತನ್ನ ಜೀವಮಾನವನ್ನೇ ಕಳೆದಳು. ಇನ್ನೂ ವಿಶೇಷ ಎಂದರೆ ಆಕೆಗಿದ್ದ ಸ್ನೇಹಿತ/ತೆಯರೂ ಕೂಡ ಆಕೆಯಂತೆ ಬಹಳ ಸಿಂಪಲ್ ಲೈಫ್‌ಸ್ಟೈಲ್ ಅನ್ನು ರೂಢಿಸಿಕೊಂಡವರು.


ಹಾಗಿದ್ದ ಮೇಲೆ ಆಕೆ ತನ್ನ ಸಂಬಳವನ್ನೆಲ್ಲಾ ಏನು ಮಾಡುತ್ತಿದ್ದಳು? ಲೇಕ್ ಫಾರೆಸ್ಟ್ ನಗರದಲ್ಲಿರುವ ಒಂದು ಕಾಲೇಜಿನಲ್ಲಿ ಬಡ ಮಕ್ಕಳ ಓದಿಗೆ ಅನುಕೂಲವಾಗಲೆಂದು



ಸ್ಕಾಲರ್‌ಷಿಪ್ ಪ್ರೋಗ್ರಾಮ್ ಅನ್ನು ಪ್ರಾರಂಭಿಸಿದ್ದಳು. ತನಗೆ ಬರುವ ಸಂಬಳದಲ್ಲಿ ಒಂದು ಚಿಕ್ಕ ಭಾಗವನ್ನು ಇದಕ್ಕೆ ದಾನವಾಗಿ ಕೊಡುತ್ತಿದ್ದಳು. "ಓದಬೇಕೆಂಬ ಇಚ್ಛೆ, ಹಂಬಲ ಹಾಗೂ ಆಸಕ್ತಿ ಇರುವ ಅನೇಕ ವಿದ್ಯಾರ್ಥಿಗಳು ನಮ್ಮಲ್ಲಿದ್ದಾರೆ. ಆದರೆ ಬಡತನದ ಕಾರಣದಿಂದಾಗಿ ಉನ್ನತ ಶಿಕ್ಷಣ ಪಡೆಯುವುದಕ್ಕೆ ಬಹುತೇಕರಿಗೆ ಸಾಧ್ಯವಾಗುತ್ತಿಲ್ಲ. ನಾನು ಸತ್ತ ಮೇಲೆ ಈ ಕಾಲೇಜಿಗೆ ಇನ್ನೂ ಹೆಚ್ಚಿನ ಹಣಸಹಾಯವಾಗುವಂತೆ ನೋಡಿಕೊಳ್ಳುತ್ತೇನೆ" ಎಂದು ಆಕೆ ಆಗಾಗ ಹೇಳುತ್ತಿದ್ದಳು. ತಾನು ಸತ್ತ ತಕ್ಷಣವೇ ತನ್ನ ಬದುಕಿನುದ್ದಕ್ಕೂ ಬ್ಯಾಂಕಿನಲ್ಲಿ ಕೂಡಿಟ್ಟ ಹಣವೆಲ್ಲಾ ನೇರವಾಗಿ ಲೇಕ್ ಫಾರೆಸ್ಟ್ ಕಾಲೇಜಿಗೆ ಹೋಗುವಂತೆ ವ್ಯವಸ್ಥೆ ಮಾಡಿಟ್ಟಿದ್ದಳು.

...ಸುತ್ತಾನೆಂಬುದು ನಿರ್ಧಾರವಾಗಿಬಿಟ್ಟಿತ್ತು. ಅಂತೆಯೇ ಅಬು-ಜಮಾಲ್‌ಗೆ ...ರಣದಂಡನೆ ಶಿಕ್ಷೆಯನ್ನೇ ಕೊಟ್ಟ.

...ದುರಂತ ನೋಡಿ. ಮುಮಿಯ ಅಬು ಜಮಾಲ್ ಕಾನೂನುಬದ್ಧವಾಗಿ ...ಸವಾನಗಿ ಪಡೆದ .38 ಕಾಲಿಬರ್ ವೆಪನ್‌ನಿಂದ ಡೇನಿಯಲ್ ಫಾಲ್ಕನರ್‌ನನ್ನು ...ಂದ ಎಂದು ಪೊಲೀಸರು ಆರೋಪಪಟ್ಟಿ ಸಲ್ಲಿದ್ದರು. ಆದರೆ, ಸತ್ತ ...ಲೀಸ್ ಅಧಿಕಾರಿಯ ಮಿದುಳಿನಿಂದ ಹೊರ ತೆಗೆದ ಬುಲೆಟ್ .44 ...ಲಿಬರ್ ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ವರದಿಯಲ್ಲಿ ...ಮೂದಿಸಲಾಗಿದೆ. ಆದರೆ, ಈ ಸತ್ಯವನ್ನು ನ್ಯಾಯಾಧೀಶನ ಗಮನಕ್ಕೇ ...ಬರದಂತೆ ಬಚ್ಚಿಡಲಾಯಿತು. ಇದೀ ಘಟನೆಗೆ ಸಾಕ್ಷಿಯಾಗಿ ಪೊಲೀಸರು ...ಥಿಯ ವೈಟ್ ಎಂಬ ವೇಶ್ಯೆಯನ್ನು ಕರೆದುಕೊಂಡು ಬಂದಿದ್ದರು. ಮುಮಿಯ ...ರ ಸಹೋದರನ ವಿಚಾರಣೆಯ ಸಂದರ್ಭದಲ್ಲಿ ಆಕೆ ನೀಡಿದ ಹೇಳಿಕೆ ...ಗೂ ಕೆಲವೇ ವಾರದ ನಂತರ ಮುಮಿಯ ಅಬು-ಜಮಾಲ್ ಅವರ ...ಚಾರಣೆಯ ಸಂದರ್ಭದಲ್ಲಿ ಆಕೆ ನೀಡಿದ ಹೇಳಿಕೆ ಪರಸ್ಪರ ತದ್ವಿರುದ್ಧವಾಗಿದ್ದವು. ...ದರೆ, ಪೊಲೀಸರು ಬೇಕಂತಲೇ ಒಂದು ಸುಳ್ಳು ಸಾಕ್ಷಿ ಸೃಷ್ಟಿಸಿದ್ದಾರೆಂಬುದು ...ಲ್ನೋಟಕ್ಕೇ ಕಾಣುತ್ತಿತ್ತು. ಇಷ್ಟೆಲ್ಲಾ ಇದ್ದರೂ ಅಬು-ಜಮಾಲ್‌ರನ್ನು ...ತಸ್ತ ಎಂದು ನಿರ್ಧರಿಸಿದ ನ್ಯಾಯಾಧೀಶ ಸಾಬೋ ಅಬು-ಜಮಾಲ್‌ಗೆ ...ರಣದಂಡನೆ ಶಿಕ್ಷೆ ವಿಧಿಸಿಬಿಟ್ಟ.



1999ರಲ್ಲಿ ಅರ್ನಾಲ್ಡ್ ಬೆವರ್ಲಿ ಎಂಬಾತ ತಾನೇ ಫಾಲ್ಕನರ್‌ನನ್ನು ಕೊಂದಿದ್ದಾಗಿ ತಪ್ಪೊಪ್ಪಿಕೊಂಡ. ಸುಳ್ಳುಪತ್ತೆ ತಜ್ಞ ಪಾಲಿಗ್ರಾಫ್ ಎಕ್ಸ್‌ಪರ್ಟ್ ಚಾರ್ಲ್ಸ್ ಹಾಂಟ್ಸ್ ಕೂಡ ಈತ ಸುಳ್ಳು ಹೇಳುತ್ತಿಲ್ಲ ಎಂಬುದುನ್ನು ಖಾತ್ರಿಪಡಿಸಿದರು. ಆದರೂ ಫಿಲಿಡೆಲ್ಫಿಯ ಡಿಸ್ಟ್ರಿಕ್ ಅಟಾರ್ನಿ ಈ ನಿಟ್ಟಿನಲ್ಲಿ ತನಿಖೆ ನಡೆಸುವುದಕ್ಕೆ ಒಪ್ಪಲಿಲ್ಲ. ನ್ಯಾಯಾಲಯವಂತೂ ಪ್ರಕರಣವನ್ನು ಮತ್ತೆ ವಿಚಾರಣೆಗೆ ಒಳಪಡಿಸುವುದಕ್ಕೆ ತಯಾರಿರಲಿಲ್ಲ. 1981ರಲ್ಲಿ ಮುಮಿಯ ಅಬು-ಜಮಾಲ್ ಬಂಧನವಾದಾಗಿನಿಂದಲೂ ...ವಕೀಲರ ತಂಡ ಹೀಗೆ ಕಾನೂನುಬದ್ಧ ಹೋರಾಟಗಳನ್ನು ನಡೆಸುತ್ತಲೇ ...ಯಾದರೂ ಯಾವುದೇ ಪ್ರಯೋಜನವಾಗಿಲ್ಲ. ಈಗ ಅಂತಿಮವಾಗಿ ...-ಜಮಾಲ್ ಬೆಂಬಲಿಗರು ಬೀದಿಗಿಳಿದು ಪ್ರತಿಭಟನೆ ಪ್ರಾರಂಭಿಸಿದ್ದಾರೆ. ...ಲ ಅಮೆರಿಕದಲ್ಲಿ ಮಾತ್ರವಲ್ಲ ಇಡೀ ವಿಶ್ವದಾದ್ಯಂತ ಪತ್ರಕರ್ತರು, ...ಜೀವಿಗಳು, ಮಾನವೀಯ ಸಂವೇದನೆಗಳಿರುವ ಜನರು ಈ ಹೋರಾಟಕ್ಕೆ ...ು ಬೆಂಬಲ ವ್ಯಕ್ತಪಡಿಸುವುದರೊಂದಿಗೆ ಅದು ಇತ್ತೀಚಿನ ದಿನಗಳಲ್ಲಿ ... ಸ್ವರೂಪ ಪಡೆದುಕೊಳ್ಳುತ್ತಿದೆ. ಡ್ಯಾನಿ ಗ್ಲೋವರ್, ಓಸಿಸ್ ಡೇವಿಸ್, ...ನ್ ಸರಂಡೋನ್‌ರಂಥ ಅಮೆರಿಕನ್ ಸಾಂಸ್ಕೃತಿಕ ನಾಯಕರು, ನೆಲ್ಸನ್ ...ಡೇಲಾ, ಡ್ಯಾನಿಯಲ್ ಮಿಟ್ಟರ್‍ರ್ಯಾಂಡ್, ಫಿಡೆಲ್ ಕ್ಯಾಸ್ಟ್ರೋರಂಥ ವಿಶ್ವ ...ಕೀಯ ನಾಯಕರು, ಜಪಾನಿನ ಡಯೆಟ್, ಬ್ರಿಟಿಷ್ ಪಾರ್ಲಿಮೆಂಟ್, ...ರೋಪಿಯನ್ ಪಾರ್ಲಿಮೆಂಟ್‌ಗಳು ಮುಮಿಯ ಅಬು-ಜಮಾಲ್‌ಗೆ ...ಿವ, ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿವೆ. ಆದರೆ ದುರಂತ ...ರೆ ಅಮೆರಿಕದ ದಪ್ಪ ಚರ್ಮಕ್ಕೆ ಅವೆಲ್ಲಾ ತಾಕುವುದೇ ಇಲ್ಲ. ಈ ...ದಿಂದಲೇ ಅನಿವಾರ್ಯವಾಗಿ ಬೀದಿಗಿಳಿದು ಹೋರಾಡುವ ಪರಿಸ್ಥಿತಿ ...ರ್ಮಾಣವಾಗಿದೆ.

...ಅಬು-ಜಮಾಲ್ ಇಪ್ಪತ್ತೇಳು ವರ್ಷದ ಯುವಕನಾಗಿದ್ದಾಗ ಜೈಲುಪಾಲಾ... ಅಲ್ಲಿಂದಾಚೆಗೆ ಇಪ್ಪತ್ತೆಂಟು ವರ್ಷಗಳನ್ನು ಆತ ಜೈಲಿನಲ್ಲಿ ಕಳೆದಿದ್ದಾನೆ. ...ೆ, ಆತ ತನ್ನ ಬದುಕಿನಲ್ಲಿ ಹೊರಗೆ ಸ್ವತಂತ್ರವಾಗಿ ಕಳೆದದ್ದಕ್ಕಿಂತ ಹೆಚ್ಚು ...ರುವನ್ನು ಜೈಲಿನಲ್ಲಿ ಬಂಧಿಯಾಗಿ ಕಳೆದಿದ್ದಾನೆ. ಇಪ್ಪತ್ತೇಳು ವರ್ಷದ ...ಕನಾಗಿ ಜೈಲಿಗೆ ಹೋದವನು ಈಗ ಐವತ್ತೈದು ವರ್ಷದ ಬಸವಳಿದ ...ಾಗಿದ್ದಾನೆ. ಒಬಾಮನಂಥ ಒಬ್ಬ ಕಪ್ಪು ನಾಯಕ ಅಮೆರಿಕದ ಅಧ್ಯಕ್ಷನಾದ ...ದರೂ ಮುಮಿಯ ಅಬು-ಜಮಾಲ್‌ಗೆ ನ್ಯಾಯ ದೊರೆಯುತ್ತದೆ, ...ಉಳಿದ ವರ್ಷಗಳನ್ನಾದರೂ ಅಬು ಜಮಾಲ್ ಅರ್ಥಪೂರ್ಣವಾಗಿ ...ುವುದಕ್ಕೆ ಅವಕಾಶ ಸಿಗುತ್ತದೆ ಎಂದು ಬಹಳ ಜನ ನಿರೀಕ್ಷಿಸಿದ್ದರು. ... ಅದೂ ಈಗ ಸುಳ್ಳಾಗಿದೆ. ●

---

...ೊನ್ನೆ ಜನವರಿ ತಿಂಗಳಲ್ಲಿ ಆಕೆ ಬರೊಬ್ಬರಿ ನೂರು ವರ್ಷಗಳನ್ನು ...ಿ ನಿಧನಳಾಗಿದ್ದಾಳೆ. ಬ್ಯಾಂಕಿನವರು ಶಾಲೆಗೆ ಆಕೆ ಕೂಡಿಟ್ಟ ಹಣವನ್ನೆಲ್ಲಾ ...ಕೊಟ್ಟಿದ್ದಾರೆ. ಎಷ್ಟಿತ್ತು ಗೊತ್ತೆ? ಬರೊಬ್ಬರಿ 7 ಮಿಲಿಯನ್ ಡಾಲರ್! ..., ಹೆಚ್ಚೂ ಕಡಿಮೆ ಮೂವತ್ತೆರಡು ಕೋಟಿ ರೂಪಾಯಿ!! ಈ ... ಹಣವನ್ನು ನೋಡಿದ ಕಾಲೇಜಿನ ಅಧ್ಯಕ್ಷ ಸ್ಟೀವ್ ಸ್ಕಟ್‌ಗೆ ಒಂದು ...ರೆಗಿಲಾಗಿ ಮೂರ್ಛೆ ಹೋದ. ಆಕೆ ತಾನು ಸತ್ತ ಮೇಲೆ ಹಣ ...ೆಗೆ ಸಿಗುವಂತೆ ಮಾಡುತ್ತೇನೆಂದು ಹೇಳಿದ್ದು ಆತನಿಗೂ ಗೊತ್ತಿತ್ತು. ...ಇಷ್ಟು ದೊಡ್ಡ ಮೊತ್ತದ ಹಣ ಸಿಗುತ್ತೆ ಅಂತ ಯಾರೂ ನಿರೀಕ್ಷಿಸಿರಲಿಲ್ಲ. ...ಣ ಮಾತ್ರವಲ್ಲ, ಲೇಕ್ ಫಾರೆಸ್ಟ್‌ನಲ್ಲಿ ಆಕೆ ವಾಸವಿದ್ದ ಮನೆಯನ್ನೂ ...ಗೆ ಬಿಟ್ಟುಹೋಗಿದ್ದಾಳೆ.

... ಕೊಟ್ಟು ಹೋಗಿರುವ ಹಣದಲ್ಲಿ 1300 ವಿದ್ಯಾರ್ಥಿಗಳು ...ರ್‌ಶಿಪ್ ಮಾಡುವುದಕ್ಕೆ, ವಿವಿಧ ದೇಶಗಳಿಗೆ ಹೋಗಿ ಉನ್ನತ ...ಪಡೆಯುವುದಕ್ಕೆ ಬಳಸಬಹುದೆಂದು ಕಾಲೇಜಿನ ಆಡಳಿತ ಮಂಡಳಿ ...ಸುತ್ತಿದೆ. ಅಲ್ಲದೇ ಆಕೆಯ ಹಣದಿಂದ ಸ್ಕಾಲರ್‌ಶಿಪ್ ಪಡೆದ ...ವಂತ ವಿದ್ಯಾರ್ಥಿಗಳನ್ನು ಆಕೆ ಬಿಟ್ಟುಹೋಗಿರುವ ಮನೆಯಲ್ಲೇ ...ುವುದಕ್ಕೆ ನಿರ್ಧರಿಸಲಾಗಿದೆ.

...ತ್ರ ಕೆಲವೊಮ್ಮೆ ಯಾವುದೋ ಸಾಮಾಜಿಕ ಕೆಲಸಕ್ಕೆ ನೂರು ರೂಪಾಯಿ ... ಕೊಟ್ಟು ಒಂದು ಹತ್ತು ಸಾವಿರ ರೂಪಾಯಿ ಕೊಟ್ಟವರಂತೆ ...ುತ್ತೇವೆ. ಆಕೆ ಇಷ್ಟೊಂದು ಹಣವನ್ನು ದೇಣಿಗೆಯಾಗಿ ಕೊಡುತ್ತೇನೆಂದು ...ೂ ಹೇಳಿರಲಿಲ್ಲ, ಕೊಟ್ಟ ಮೇಲೆ ಯಾರ್‍ಯಾರು ಹೇಗ್ಹೇಗೆ ಹೊಗಳುತ್ತಾ...ನ್ನು ನೋಡಿ ಆನಂದಿಸುವುದಕ್ಕೂ ಆಕೆ ಇಷ್ಟಪಡಲಿಲ್ಲ, ಸುಮ್ಮನೇ ...ಕಣ್ಮರೆಯಾಗಿಬಿಟ್ಟಳು. ●

...ats off to Grace Groner!

---

# ಪೊಲೀಸು, ಅಡ್ವೋಕೇಟುಗಳ ನಡುವೆ ಅಸಹಾಯಕ ಪ್ರಮೀಳೆಯರು...

"ನಿನಗೆ ಒಂದು ಪೈಸೆಯೂ ಸಿಗುವುದಿಲ್ಲ, ಹಾಗೆ ಮಾಡ್ತೀನಿ, ನೋಡ್ತಾ ಇರು..."

ಇದು ಫ್ಯಾಮಿಲಿ ಕೋರ್ಟ್ ಆವರಣದಲ್ಲಿ ಅಸಹಾಯಕ ಕಕ್ಷಿದಾರ ಹೆಣ್ಣುಮಗಳೊಬ್ಬಳಿಗೆ ಎದುರು ಪಾರ್ಟಿಯ ವಕೀಲರು ಹೇಳಿದ ಮಾತು..... ಧಮಕಿ ಅಂದರೂ ತಪ್ಪೇನಿಲ್ಲ ಬಿಡಿ.



ಈ ರೀತಿ ಮಾತಾಡಿದ ವಕೀಲರು ಹಿಂದೊಮ್ಮೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿದ್ದವರು, ಬಿಜೆಪಿಯಿಂದ ಎಂಎಲ್‌ಸಿಯಾಗಿದ್ದವರು. ಗೊತ್ತಾಯಿತಲ್ಲ, ಪ್ರಮೀಳಾ ನೇಸರ್ಗಿ. ಹೆಸರಲ್ಲೇ 'ಪ್ರಮೀಳೆ' ಎಂಬ ಪದವಿದ್ದರೂ, ಇವರಿಗೆ ಅಸಹಾಯಕ ಪ್ರಮೀಳೆಯರ ಮೇಲೆ ಅದೆಷ್ಟು 'ಪ್ರೀತಿ' ಇದೆ ಎಂಬುದಕ್ಕೆ ಮೇಲಿನ ಮಾತೇ ಸಾಕ್ಷಿ.

ಮಕ್ಕಳನ್ನು ತನ್ನ ಬಳಿ ಇಟ್ಟುಕೊಂಡಿರುವ, ದೌರ್ಜನ್ಯ ನಡೆಸಿ ತನ್ನನ್ನು ದೂರ ಮಾಡಿರುವ ಗಂಡ ಆನಂದನ ವಿರುದ್ಧ ಹೆಂಡತಿ ಲಕ್ಷ್ಮಿ ನಡೆಸುತ್ತಿರುವ ನ್ಯಾಯಾಂಗ ಹೋರಾಟದ ಕತೆಯಿದು. ಆಶೆಬುರುಕ ನಿರ್ಲಜ್ಜ ಗಂಡ, ಆತನಿಗಿರುವ ಬೆಂಬಲ, ಪೊಲೀಸರ ಉದ್ದೇಶಪೂರ್ವಕ ಅಸಹಕಾರ, ಎದುರು ಪಾರ್ಟಿಯ ವಕೀಲರ 'ಚಮತ್ಕಾರ'- ಇವುಗಳ ಮಧ್ಯೆ ಸಿಕ್ಕಿ ನೋಯುತ್ತಿದ್ದಾರೆ ಲಕ್ಷ್ಮಿ ಎಂಬ ಹೆಣ್ಣುಮಗಳು. ಇದು ಬರೀ ಲಕ್ಷ್ಮಿಯೊಬ್ಬರ ಗೋಳಿನ ಕತೆಯಲ್ಲ; ಫ್ಯಾಮಿಲಿ ಕೋರ್ಟುಗಳಲ್ಲಿ ನಿತ್ಯ ಇಂತಹ ಸಾವಿರಾರು ಲಕ್ಷ್ಮಿಯರು ಗೋಳು ಅನುಭವಿಸುತ್ತಲೇ ಇರುವುದರಿಂದ ಇಲ್ಲಿ ಲಕ್ಷ್ಮಿಯ ಕತೆ ನೀಡುತ್ತಿದ್ದೇವೆ. ಹಾಗೆಯೇ ಹಿಂದೂ ಮಹಿಳೆ ದೇವತೆ ಎಂಬಂತೆ ಹೊರಗೆಲ್ಲ ಅರಚಾಡುವ ಪ್ರಮೀಳಾಮಣಿಗಳ ನಿಜರೂಪಗಳೂ ಇಲ್ಲಿ ಗೋಚರಿಸಬಹುದೇನೋ....

ಜಯನಗರ 9 ನೇ ಬ್ಲಾಕ್ ನಿವಾಸಿ ಲಕ್ಷ್ಮಿಯವರು 2001 ರಲ್ಲಿ



ಆನಂದ್ ಎಂಬುವವರೊಂದಿಗೆ ಮದುವೆಯಾದರು. ಇದಕ್ಕೂ ಮೊದಲು ಲಕ್ಷ್ಮಿಯವರಿಗೆ ಒಂದು ಮದುವೆಯಾಗಿದ್ದು ಅದು ಮುರಿದು ಬಿದ್ದಿತ್ತು ಮತ್ತು ನಂತರ ಅವರ ಮೊದಲ ಗಂಡ ತೀರಿಹೋದರು. ಆ ಮದುವೆಯಿಂದ ಲಕ್ಷ್ಮಿಗೊಂದು ಗಂಡು ಮಗುವೂ ಪ್ರಾಪ್ತವಾಗಿತ್ತು. ಲಕ್ಷ್ಮಿಯ ತಾಯಿ ಮನೆಯಲ್ಲಿ ಬಾಡಿಗೆಗೆ ಇದ್ದ ಆನಂದನ ಕುಟುಂಬಕ್ಕೆ ಇದೆಲ್ಲ ಗೊತ್ತೂ ಇತ್ತು. ಮೊದಲ ಮದುವೆ ಕುರಿತು ಯಾವ ಆಕ್ಷೇಪಣೆಗಳೂ ಇಲ್ಲದ ಆನಂದ್ ಕುಟುಂಬ ಹಿರಿಯರ ಸಮ್ಮುಖದಲ್ಲಿ ಆನಂದ್, ಲಕ್ಷ್ಮಿಯರ ಮದುವೆ ಮಾಡಿದ್ದರು.



ಮದುವೆಯಾದ ಮೊದಲ ಆರು ತಿಂಗಳು ಸಂಸಾರ ಚೆನ್ನಾಗಿತ್ತು. ಮುಂದೆ ಆನಂದನ ಧನದಾಹಿ ಮುಖ ಮತ್ತು ವಿಕೃತ ಬುದ್ಧಿಗಳು ಅನಾವರಣಗೊಳ್ಳತೊಡಗಿದವು. ಲಕ್ಷ್ಮಿ ಗರ್ಭಿಣಿ ಆಗಿದ್ದು ಗೊತ್ತಾದ ಮೇಲಂತೂ ಆನಂದ್ ವಿಚಿತ್ರವಾಗಿ ಆಡತೊಡಗಿದ. ಅತಿಯಾದ ಪರಸ್ತ್ರೀಯರ ಸಹವಾಸ, ಕುಡಿತ, ಇಸ್ಪೀಟುಗಳ ದಾಸನಾದ ಆನಂದ್ ವರದಕ್ಷಿಣೆಗೆ ಪೀಡಿಸತೊಡಗಿದ. ಆನಂದ್ ಲಕ್ಷ್ಮಿ ಮತ್ತು ಆಕೆಯ ಮಗನನ್ನು ಹಿಂಸಿಸಲಾರಂಭಿಸಿದ. ಆನಂದ್ ಕೊನೆಗೂ ಲಕ್ಷ್ಮಿ ತಾಯಿಯಿಂದ 20 ಲಕ್ಷ ಕೀಳುವಲ್ಲಿ ಸಫಲನಾದ. ಮತ್ತೆ ಸಂಸಾರಬಂಡಿ ಮುಂದೆ ಸಾಗತೊಡಗಿತು.

ಲಕ್ಷ್ಮಿಗೆ ಗಂಡುಮಗು (ಈಗ 7 ವರ್ಷ)ವಾಯ್ತು. ಲಕ್ಷ್ಮಿಯ ತಾಯಿ ನೀಡಿದ ಹಣದಿಂದ ಲಕ್ಷ್ಮಿ ಮತ್ತು ಆನಂದ್ ಜೆ.ಪಿ. ನಗರದ 5ನೇ ಹಂತದಲ್ಲಿ ಒಂದು ಸೈಟು, ಮೂರು ಕಾರು ಮತ್ತು ಹತ್ತು ದ್ವಿಚಕ್ರವಾಹನ ಖರೀದಿಸಿ, ಇಲಿಯಾಸ್ ನಗರದಲ್ಲಿ 'ಶಕ್ತಿ ಡ್ರೈವಿಂಗ್ ಸ್ಕೂಲ್' ಆರಂಭಿಸಿ, ಆರ್‌ಟಿಓ ಏಜೆನ್ಸಿಯನ್ನು ಪಡೆದರು. ಮನೆಯೊಂದನ್ನು ಕಟ್ಟಿಕೊಂಡರು. ಪುಟ್ಟೇನಹಳ್ಳಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದನ್ನು ಖರೀದಿಸಿದರು. ಆದರೆ ಸ್ವಲ್ಪ ತಿಂಗಳುಗಳಲ್ಲಿ ಆನಂದ್ ಸೈಟನ್ನು ತನ್ನ ತಂಗಿ ಹೆಸರಿಗೆ ಮಾಡಿಸಿಬಿಟ್ಟ. ಆದರೂ ಎರಡೂ ಮಕ್ಕಳ ಸಲುವಾಗಿ ಲಕ್ಷ್ಮಿ ಸುಮ್ಮನೇ ಇದ್ದರು. 2007 ರ ಹೊತ್ತಿಗೆ ಮತ್ತೆ ತಾಯಿಯ ಮನೆಯಿಂದ ಹಣ ತರುವಂತೆ ಆನಂದ್ ಹಿಂಸಿಸತೊಡಗಿದ. ಅದನ್ನು ಸಹಿಸಲಾಗದೆ ಕೊನೆಗೊಂದು ದಿನ ತಮ್ಮಿಬ್ಬರು ಮಕ್ಕಳನ್ನು ಕರೆದುಕೊಂಡು ತನ್ನ ತಾಯಿಯ ಮನೆ ಸೇರಿದರು. ಒಂದಿನ ಲಕ್ಷ್ಮಿ ಬಳಿ ಬಂದ ಆನಂದ್ ಇಬ್ಬರು ಮಕ್ಕಳನ್ನು ಸ್ಕೂಲಿಗೆ ಕರೆದುಕೊಂಡು ಹೋಗುವುದಾಗಿ ಹೇಳಿ ಕರೆದುಕೊಂಡು ಹೋದವನು ನಾಪತ್ತೆಯಾಗಿಬಿಟ್ಟ. ಲಕ್ಷ್ಮಿ ಜೆ.ಪಿ.ನಗರ ಠಾಣೆಗೆ ದೂರು ಕೊಟ್ಟರೆ, ಎಸ್.ಐ. ನವೀನ್ 'ಏನಾಗಲ್ಲ ಹೋಗಮ್ಮ' ಎಂದುಬಿಟ್ಟ. ಆದರೆ ಒಂದು ವಾರದ ನಂತರ (19.1.2008) ಇದೇ ಎಸ್‌ಐ ನವೀನ್ ಕೋರ್ಟಿನ ಆದೇಶಪತ್ರವೊಂದನ್ನು ಲಕ್ಷ್ಮಿಗೆ ತಲುಪಿಸಿದ. 'ಆನಂದ್‌ನಿಂದ ಮಕ್ಕಳನ್ನು ಬಲವಂತವಾಗಿ ಕಿತ್ತುಕೊಳ್ಳಬಾರದು' ಎಂದು ಥರ್ಡ್ ಫ್ಯಾಮಿಲಿ ಕೋರ್ಟ್ ಲಕ್ಷ್ಮಿಗೆ ಆದೇಶ ನೀಡಿತ್ತು! ಜಯನಗರದ ಬಿಜೆಪಿ ಮಾಜಿ ಕೌನ್ಸಿಲರ್ ಸೋಮಶೇಖರ್ ಜೊತೆ ಸೇರಿ ವಕೀಲೆ ಪ್ರಮೀಳಾ ನೇಸರ್ಗಿಯವರನ್ನು ಕಂಡಿದ್ದ ಆನಂದ್ ಮಕ್ಕಳನ್ನು ಹೆದರಿಸಿ 'ಟ್ರೇನ್' ಮಾಡಿ 18.1.2008 ರಂದು ಕೋರ್ಟ್ ಮುಂದೆ ನಿಲ್ಲಿಸಿ ಮೇಲಿನ ಇಂಜೆಂಕ್ಷನ್ ಆರ್ಡರ್ ಪಡೆದಿದ್ದ. ಮುಂದೆ ಲಕ್ಷ್ಮಿ ಆದೇಶ ಹಿಂಪಡೆಯಬೇಕೆಂದು ಕೇಸು ಹಾಕಿದರು. ಆಗ ಆನಂದನ ಸಂಬಂಧಿಕರು, ಸ್ನೇಹಿತರು ಕೇಸ್ ವಾಪಸ್ ಪಡೆಯಲು ಲಕ್ಷ್ಮಿಯನ್ನು ಒತ್ತಾಯಿಸತೊಡಗಿದರು. ನಂತರ 7 ತಿಂಗಳು ಜಡ್ಜ್ ಹುದ್ದೆ ಖಾಲಿ ಇದ್ದಿದ್ದರಿಂದ ಕೇಸ್ ನಿಂತಿತ್ತು. ಲಕ್ಷ್ಮಿ ಆಗಾಗ ಆನಂದನ ಮನೆಗೆ ಹೋಗಿ ಮಕ್ಕಳನ್ನು ನೋಡಿಕೊಂಡು ಬರುತ್ತಿದ್ದರು. 2008 ರ ಜುಲೈ 23 ರಂದು ಮಧ್ಯರಾತ್ರಿ ಲಕ್ಷ್ಮಿಗೆ ಫೋನ್ ಮಾಡಿದ ಆನಂದ್ ಮಕ್ಕಳನ್ನು ನೋಡಲು ಬರದಂತೆ ಆವಾಜ್ ಹಾಕಿದ. ಅಷ್ಟೊತ್ತಿಗೆ ಆನಂದ್ ಇಬ್ಬರು ಯುವತಿಯರನ್ನು ಮನೆಯಲ್ಲಿ ತಂದಿಟ್ಟುಕೊಂಡಿದ್ದ.

ಮುಂದೆ ಲಕ್ಷ್ಮಿ ಫ್ಯಾಮಿಲಿ ಕೋರ್ಟಿನಿಂದ ಆನಂದ್ ತಂದಿದ್ದ ಇಂಜಂಕ್ಷನ್ ಆರ್ಡರ್ ತೆರವುಗೊಳಿಸಿಕೊಂಡರು. 'ಮೈನರ್ ಮಕ್ಕಳು ತಾಯಿಯ ಜೊತೆ ಇರುವುದೇ ಲೇಸು' ಎಂದು ಕೋರ್ಟು ಹೇಳಿತು. ಆದರೆ ಆನಂದ್ ಕೋರ್ಟ್ ಆದೇಶ ಪಾಲಿಸಲಿಲ್ಲ. ಲಕ್ಷ್ಮಿ ಇದನ್ನು ಜೆಪಿನಗರ ಪೊಲೀಸರ ಗಮನಕ್ಕೆ ತಂದಿದ್ದೂ ಉಪಯೋಗವಾಗಲಿಲ್ಲ. ಈ ಹೊತ್ತಿನಲ್ಲಿ ಆನಂದ ತನ್ನಲ್ಲಿದ್ದ ಲಕ್ಷ್ಮಿಯ ಸೀರೆಗಳನ್ನೆಲ್ಲ ಸುಟ್ಟು ಹಾಕಿ, ಒಡವೆಗಳನ್ನೆಲ್ಲ ತನ್ನ ಕಬ್ಜಾಕ್ಕೆ ತೆಗೆದುಕೊಂಡ. ಮಕ್ಕಳನ್ನು ನೋಡಲು ಹೋದ ಲಕ್ಷ್ಮಿಗೆ ಒಮ್ಮೆ ಹೊಡೆದೂ ಕಳಿಸಿದ್ದ.

ಇದೆಲ್ಲದರ ವಿರುದ್ಧ ಕೌಟುಂಬಿಕ ಹಿಂಸೆಯ ಕೇಸು ಹಾಕಿದ ಲಕ್ಷ್ಮಿ ಅದರಲ್ಲಿ ಗೆದ್ದಳು. ಆನಂದ್ ಲಕ್ಷ್ಮಿಗೆ ಮಾಸಿಕ 15 ಸಾವಿರ ರೂ. ನೀಡಬೇಕೆಂದು, ಇರಲು ವಸತಿ ವ್ಯವಸ್ಥೆ ಮಾಡಬೇಕೆಂದು ಆದೇಶಿಸಿತು. ಆದೇಶ ಬಂದನಂತರ ಎಂಟು ತಿಂಗಳವರೆಗೆ ಆನಂದ್ ಏನನ್ನೂ ಕೊಡಲಿಲ್ಲ. ಆಗಲೇ ನೇಸರ್ಗಿ ಮೇಡಂ 'ನಿನಗೆ ನಯಾಪೈಸೆ ಸಿಗದಂತೆ ಮಾಡುವೆ' ಎಂದು ಲಕ್ಷ್ಮಿಗೆ ಹೇಳಿದ್ದು. ಅವರು ಹಾಗೆ ಮಾಡಿಬಿಟ್ಟರೂ ಕೂಡಾ. ಅದೇ ಕೋರ್ಟಿನಿಂದಲೇ ಫೈಟು ಮಾಡಿದ ನೇಸರ್ಗಿ ಮೇಡಮ್ಮರವರು ಲಕ್ಷ್ಮಿ ಸುತ್ತ ಅನೈತಿಕ ಸಂಬಂಧದ ವಿಷಯ ತಂದು, ಗಂಡ ಹಲ್ಲೆ ಮಾಡೇ ಇಲ್ಲವೆಂಬಂತೆ ವಾದಿಸಿ ಗೆಲುವಿನ ನಗೆ ಬೀರಿದರು. ಲಕ್ಷ್ಮಿಗೆ ಪರಿಹಾರ ಘೋಷಿಸಿದ್ದ ಕೋರ್ಟೇ 'ನೋ ನೋ ಸದ್ಯಕ್ಕೆ ಸಾಧ್ಯವಿಲ್ಲ' ಎಂದುಬಿಟ್ಟಿತು.

ಮೈನರ್ ಮಕ್ಕಳನ್ನು ತನ್ನ ಬಳಿ ಇಟ್ಟುಕೊಳ್ಳಲು ಕೋರ್ಟೇ ಹೇಳಿದ್ದರೂ ಲಕ್ಷ್ಮಿ ಪಾಲಿಗೆ ಆ ಭಾಗ್ಯ ಸಿಗುತ್ತಿಲ್ಲ. ಇದಕ್ಕೆ ಜೆಪಿನಗರ ಪೊಲೀಸರೂ ಕಾರಣರಾಗಿದ್ದಾರೆ.


ಹೀಗೆ ಈ ಪುರುಷ ವ್ಯವಸ್ಥೆಯಲ್ಲಿ ಲಕ್ಷ್ಮಿ ತನ್ನ ಹೋರಾಟವನ್ನು ಮುಂದುವರೆಸಿದ್ದಾರೆ. ಪ್ರಚಂಡ ಪೊಲೀಸರು, ಉರಿಬೆಂದು ಅಡ್ವೋಕೇಟ್‌ಗಳ ... ಲಕ್ಷ್ಮಿಗೆ ನ್ಯಾಯ ಸಿಗುತ್ತದೆಯಾ?

● ಪಿ.ಕೆ.ಮಲ್ಲನಗೌಡರ್

# ಬಿಜೆಪಿ: ಒಕ್ಕಲಿಗ ನಾಯಕರು ಮೂಲೆಗುಂಪು

ರಾಜ್ಯ ಬಿಜೆಪಿಯ ಪ್ರಮುಖರು ಬಿಬಿಎಂಪಿ ಚುನಾವಣೆಯಲ್ಲಿ ಗೆಲ್ಲುವುದು ಹೇಗೆಂದು ತಲೆಕೆಡಿಸಿಕೊಂಡು ಕೂತಿರುವಾಗಲೇ, ನಿನ್ನೆ ಮೊನ್ನೆಯವರೆಗೂ 'ಪಕ್ಷ... ಪಕ್ಷ... ನಮ್ಮ ಪಕ್ಷ' ಎಂದು ಬಾಯಿ ಬಡಿದುಕೊಳ್ಳುತ್ತಿದ್ದ ಬಿಜೆಪಿಯ ಮೂವರು ಒಕ್ಕಲಿಗ ಮುಖಂಡರು ತಲೆ ಮೇಲೆ ಕೈಹೊತ್ತು ಕೂತಿದ್ದಾರೆ.

ಹೌದು, ಬಿಜೆಪಿ ಇವರನ್ನು ಅಕ್ಷರಶಃ ಊಟದ ಎಲೆಯಂತೆ ಬಳಸಿಕೊಂಡು ಬಿಸಾಡಿದೆ. ಇವರ ಪ್ರಸ್ತುತ ಸ್ಥಿತಿ ನೋಡಿದ ಬಿಜೆಪಿಯ ಮಂದಿಯೇ ಗರ್ಭಗುಡಿ ಸಂಸ್ಕೃತಿ ವ್ಯವಸ್ಥೆಯಲ್ಲಿ ಶೂದ್ರರಿಗೆ ಇದೇ ಗತಿಯೇನೋ ಎಂದು ಮನಸ್ಸಿನಲ್ಲಿಯೇ ಗೊಣಗಲಾರಂಭಿಸಿದ್ದಾರೆ.


ಸದಾನಂದಗೌಡ

ಸಂಘ ಪರಿವಾರವನ್ನು ನಂಬಿ ಈಗ ಕೆಟ್ಟಿರುವ ಬಿಜೆಪಿಯ ರಾಜಕೀಯ ನಾಯಕರೆಂದರೆ, ಬಿಜೆಪಿಯ ಮಾಜಿ ಅಧ್ಯಕ್ಷ ಮತ್ತು ಹಾಲಿ ಸಂಸದ ಸದಾನಂದ ಗೌಡ, ಮಾಜಿ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಬಿಜೆಪಿಯ ಮಾಜಿ ವಕ್ತಾರ ಕಂ ಶಾಸಕ ಸಿ.ಟಿ.ರವಿ. ಇವರುಗಳ ಅಪಾರ ಶ್ರಮದಿಂದಾಗಿಯೇ ರಾಜ್ಯದಲ್ಲಿ ಇಂದು ಬಿಜೆಪಿ ಅಧಿಕಾರದಲ್ಲಿದೆ. ಆದರೆ ಈ ಮೂವರ ರಾಜಕೀಯ ಭವಿಷ್ಯ ಮಾತ್ರ ಈಗ ದಿಕ್ಕು ಕಾಣದ ಸ್ಥಿತಿಯಲ್ಲಿದೆ.

## ಸದಾನಂದಗೆ ಸಿಗದ ಮನ್ನಣೆ

ಬಿಜೆಪಿಯನ್ನು ಅಧಿಕಾರಕ್ಕೆ ತರಲು ಹಗಲಿರುಳು ಯಡ್ಡಿಯಂತೆಯೇ ಶ್ರಮಿಸಿದವರೆಂದರೆ ಹುಲ್ಮುಖಿ ಗೌಡ. ಪಕ್ಷದ ಅಧ್ಯಕ್ಷರಾಗಿ ಅವರು ಎಲ್ಲವನ್ನೂ ನಗುನಗುತ್ತಲೇ ನಿಭಾಯಿಸಿದ್ದರಿಂದಲೇ ರಾಜ್ಯದಲ್ಲಿ ಪಕ್ಷ ಮುನ್ನಡೆ ಸಾಧಿಸಲು ಸಾಧ್ಯವಾಯಿತು ಎನ್ನುವವರೂ ಇದ್ದಾರೆ. ಬಿಜೆಪಿ ನಾಯಕರ ಮಾತಿನಲ್ಲೇ ಹೇಳುವುದಾದರೆ 'ಸದಾನಂದ ಗೌಡ ರಾಜ್ಯ ಬಿಜೆಪಿ ಪಾಲಿಗೆ ಅದೃಷ್ಟವಂತ ಅಧ್ಯಕ್ಷ!' ಕಾರಣವೇನೇ ಇರಲಿ, ಗೌಡ ಸತತ ಎರಡು ಅವಧಿಗೆ ರಾಜ್ಯಾಧ್ಯಕ್ಷರಾಗಿದ್ದಲ್ಲದೆ, ಹೆಚ್ಚುವರಿ ಸಮಯ ಕೆಲಸ ಮಾಡಿ, ಪಕ್ಷವನ್ನು ಚುನಾವಣೆಗಳಲ್ಲಿ ಗೆಲ್ಲಿಸಿದ ಕೀರ್ತಿ ಇವರದು.

ಆದರೆ ಇವತ್ತು ಏನಾಗಿದೆ ನೋಡಿ. ಗೌಡರು ಪಕ್ಷದ ಅಧ್ಯಕ್ಷ ಸ್ಥಾನ ತ್ಯಜಿಸುತ್ತಿದ್ದಂತೆಯೇ ಅವರ 'ಪ್ರತಿಭೆ'ಗೆ, 'ಸಂಘಟನಾ ಚಾತುರ್ಯ'ಕ್ಕೆ ಬೆಲೆ ಇಲ್ಲವಾಗಿಹೋಗಿದೆ. ಅವರ ಮಾತನ್ನು ಈಗ ಯಾರೂ ಕೇಳುತ್ತಿಲ್ಲ. ಅಷ್ಟೇ ಅಲ್ಲ, ಅವರ ಸಲಹೆಗಳಂತೂ ಪಕ್ಷಕ್ಕೆ ಬೇಡವೇ ಬೇಡದಂತಾಗಿದೆ. ಹತ್ತರ ಜೊತೆಗೆ ಹನ್ನೊಂದನೆಯವರಂತೆ ಈಗ ಬರೀ ಸಂಸದರಾಗಿ ಉಳಿದುಕೊಂಡಿದ್ದಾರೆ ಹುಲ್ಮುಖಿ ಗೌಡ.

ಪಕ್ಷ ಕಟ್ಟುವಾಗ ತಾವು ಪಟ್ಟ ಶ್ರಮಕ್ಕೆ ಮುಂದೆ ಪ್ರತಿಫಲ ದೊರೆಯಬಹುದು ಎಂದು ನಿರೀಕ್ಷಿಸಿದ್ದ ಗೌಡರಿಗೆ ಅಧ್ಯಕ್ಷ ಹುದ್ದೆ ಹೋಗುತ್ತಿದ್ದಂತೆಯೇ ವಾಸ್ತವದ ಅರಿವಾಗಿದೆ. ಮುಖ್ಯಮಂತ್ರಿ ಯಡ್ಡಿ ತಮಗಾಗಿ ಯಾವುದಾದರೂ ಗೂಟದ ಕಾರಿನ ವ್ಯವಸ್ಥೆ ಖಂಡಿತವಾಗಿಯೂ ಮಾಡಬಹುದು ಎಂದು ಲೆಕ್ಕಹಾಕಿದ್ದ ಹುಲ್ಮುಖಿ ಗೌಡರಿಗೆಂದು ಯಡ್ಡಿ ಗೂಟದ ಕಾರಿರಲಿ, ಕಾಸಿನ ವ್ಯವಸ್ಥೆ ಕೂಡ ಮಾಡಿಲ್ಲ.

ಕೊನೇ ಪಕ್ಷ, ಕೆಎಂಎಫ್ ಅಧ್ಯಕ್ಷಗಿರಿ ಮೇಲೆ ಕಣ್ಣಿಟ್ಟಿದ್ದ ಗೌಡರಿಗೆ ಅದೂ ಸಿಗಲಿಲ್ಲ. ಮೂರು ತಿಂಗಳಿಗೆ ಮಾತ್ರ ಅಧ್ಯಕ್ಷನಾಗಿರುತ್ತೇನೆ ಎಂದು ಹಾಲಿನ ಪೇಡದ ಮೇಲೆ ಕುಳಿತ ಗಣಿಧಣಿ ಸೋಮಶೇಖರ ರೆಡ್ಡಿ ಪೇಡ ರುಚಿ ನೋಡಿದ್ದೇ ಬಂತು "ನಾನು ಈ ಜಾಗ ಬಿಟ್ಟುಕೊಡಲ್ಲ, ಇಲ್ಲಿರೋದೆಲ್ಲಾ ನನಗೇ ಬೇಕು" ಎಂದು ಪಟ್ಟು ಹಿಡಿದು ಕುಳಿತುಬಿಟ್ಟ. ಈತನನ್ನು ಗದರಿಸಿ, ಕೆಳಗಿಳಿಸಿ ಗೌಡರಿಗೆ ಆ ಸ್ಥಾನವನ್ನು ನೀಡುವ ತಾಕತ್ತನ್ನು ಯಡ್ಡಿ ಎಂದೋ ಕಳೆದುಕೊಂಡಿದ್ದಾರೆ. ಆದ್ದರಿಂದ ಈಗ ಸದಾನಂದ ಗೌಡ ತಮ್ಮ ಎದುರಿಗೆ ಬಂದರೆ ಯಡ್ಡಿ ತಮ್ಮ ಮುಖವನ್ನು ತಿರುಗಿಸಿಕೊಂಡು ಓಡಾಡುತ್ತಿದ್ದಾರೆ.

ತಾನು ನಂಬಿದ ನಾಯಕ ಕೈಕೊಟ್ಟರೇನಾಯಿತು, ತನ್ನ ಪಕ್ಷ ಎಂದಿಗೂ ತನ್ನ ಕೈಬಿಡದು ಎಂದೇ ಗೌಡರು ನಂಬಿದ್ದರು. ರಾಜ್ಯಾಧ್ಯಕ್ಷರಾಗಿ ತಮ್ಮ ಅಪಾರ ಅನುಭವವನ್ನು ಬಳಸಿಕೊಳ್ಳಲು ಪಕ್ಷ ರಾಷ್ಟ್ರೀಯ ಮಟ್ಟದಲ್ಲಿ ತನಗೆ ಅಧಿಕಾರ ಅಥವಾ ಯಾವುದಾದರೂ ಸ್ಥಾನ ನೀಡಬಹುದು ಎಂದೂ ಭ್ರಮಿಸಿದ್ದರು. ಎಷ್ಟರ ಮಟ್ಟಿಗೆ ಅಂದರೆ, ಅವರು ಯಡ್ಡಿಯಿಂದ ವಂಚನೆಗೆ ಒಳಗಾಗಿದ್ದರೂ ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಮೇಲೆ ಅಪಾರ ವಿಶ್ವಾಸ ಇಟ್ಟು ಹಸನ್ಮುಖಿಯಾಗೇ ಇದ್ದರು. ಆದರೆ ಯುಗಾದಿಯ ದಿನದಂದು ಗೌಡರಿಗೆ ದೆಹಲಿಯಿಂದಲೂ ಕಹಿ ಸುದ್ದಿಯೇ ಬಂತು.

ಪಕ್ಷದ ಪದಾಧಿಕಾರಿಗಳನ್ನು ನೇಮಿಸಿರುವ ನೂತನ ಅಧ್ಯಕ್ಷ ಗಡ್ಕರಿ, ರಾಜ್ಯದಲ್ಲಿ ಪಕ್ಷಕಟ್ಟಲು ಹಗಲಿರುಳು ಶ್ರಮಿಸಿದ ಗೌಡರಿಗೆ ನೆಪಮಾತ್ರಕ್ಕೆ ಸ್ಥಾನ ನೀಡಿದ್ದಾರೆ. ತಮಗೆ ಪ್ರಧಾನ ಕಾರ್ಯದರ್ಶಿಯಾಗಿಯೋ, ಸಂಘಟನೆಯ ಕೆಲಸದಲ್ಲಿ ಪ್ರಮುಖ ಹುದ್ದೆಯೋ ದೊರೆಯಬಹುದೆಂಬ ಗೌಡರ ನಿರೀಕ್ಷೆ ಹುಸಿಯಾಗಿದೆ. ಏನೂ ಜವಾಬ್ದಾರಿ ಇಲ್ಲದ ಅಲಂಕಾರಿಕ ಪದಾಧಿಕಾರಿಗಳ ಪಟ್ಟಿಯಲ್ಲೂ ಗೌಡರ ಹೆಸರು ಮೊದಲನೆ ಸ್ಥಾನದಲ್ಲಿಲ್ಲ, ಅಲ್ಲೂ ಅವರಿಗೆ ಸಿಕ್ಕಿರುವುದು ಐದನೇ ಸ್ಥಾನ. ಈಗ ಸಂಸದರಾಗಿರುವ ಗೌಡರನ್ನು ಕನಿಷ್ಠ ಸಂಸದೀಯ ನಾಯಕರ ಪಟ್ಟಿಯಲ್ಲಿಯಾದರೂ ಸೇರಿಸಬಹುದಿತ್ತು. ಆದರೆ ಗಡ್ಕರಿಗೆ ಗೌಡರ ಬಗ್ಗೆ ಪ್ರೀತಿ ಇದ್ದಂತಿಲ್ಲ.

ಅಧ್ಯಕ್ಷ ಸ್ಥಾನ ತ್ಯಜಿಸಿದ ನಂತರ ಕೆಲಸವಿಲ್ಲದೆ ಅಂಡಲೆಯುತ್ತಿದ್ದ ಗೌಡರನ್ನು ಮಾತನಾಡಿಸಿದ ಬಿಜೆಪಿ ನಾಯಕರು ಮತ್ತು ಸಂಘಪರಿವಾರದ ಮಂದಿ "ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ನಿಮಗೊಂದು ಜವಾಬ್ದಾರಿ ವಹಿಸಲಾಗುತ್ತದೆ, ಯೋಚನೆ ಮಾಡಬೇಡಿ" ಎಂದು ಸಾಮಾಧಾನ ಮಾಡಿದ್ದರು. ಆದರೆ ಈಗ ಅವರೆಲ್ಲರೂ ಸೇರಿ ಗೌಡರನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿದ್ದಾರೆ. ಗೌಡರಿನ್ನೆ ಇವತ್ತು ಎಂತಹ ಸ್ಥಿತಿ ಎದುರಾಗಿದೆ ಅಂದರೆ ಪಕ್ಷದ ಸಂಪೂರ್ಣ ಪದಾಧಿಕಾರಿಗಳ ಸಭೆ ನಡೆದಾಗ ಮಾತ್ರ ಅವರು ದೆಲ್ಲಿ ಫ್ಲೈಟ್ ಹತ್ತಬಹುದಷ್ಟೆ. ಇಲ್ಲದಿದ್ದರೆ, ಚಿಕ್ಕಮಗಳೂರಿನ ಕಾಫಿ ಕುಡಿಯುತ್ತಾ ಮನೆಯಲ್ಲಿಯೇ ಕೂರಬೇಕು. ಪಾಪ, ಸದಾ ನಗುತ್ತಲೇ ಇದ್ದ ಸದಾನಂದ ಗೌಡರಿಗೆ ಈ ಗತಿ ಬರಬಾರದಿತ್ತು.

## ಶೋಭಕ್ಕಾಗೆ ಮತ್ತೆ ಅನ್ಯಾಯ

ಇನ್ನು ಶೋಭಾ ಕರಂದ್ಲಾಜೆಯ ಕತೆಯೂ ಸದಾನಂದರ ಕತೆಗಿಂತ ಭಿನ್ನವಾಗಿಲ್ಲ. ಗಣಿಧಣಿಗಳ ಮತ್ತು ಇನ್ನಿತರ ಭಿನ್ನರ ಮಾತಿಗೆ ಮಣಿದ ಯಡ್ಡಿ, ಕಣ್ಣೀರಿಡುತ್ತಲೇ ಶೋಭಾರನ್ನು ಸಚಿವ ಸಂಪುಟದಿಂದ ಕೈಬಿಟ್ಟಿದ್ದರು. ಆಕೆ ಅಧಿಕಾರದಲ್ಲಿದ್ದಾಗ ಒಂದು ರೀತಿಯಲ್ಲಿ ಆಕೆಗೆ ಸದಾ ಕಾಟ ಕೊಡುತ್ತಿದ್ದ ಬಿಜೆಪಿ ಮಂದಿ, ಆಕೆ ಅಧಿಕಾರದಿಂದ ಇಳಿದ ಮೇಲೂ ಆಕೆಯನ್ನು ಸುಮ್ಮನೆ ಬಿಡಲಿಲ್ಲ, ಮಂತ್ರಿ ಸ್ಥಾನ ಹೋಯಿತು ಬಿಡಿ, ಕನಿಷ್ಠ ಶಾಸಕಿಯಾಗಿ ಕೆಲಸ ಮಾಡಲೂ ಆಕೆಗೆ ಬಿಡದೆ ಕಾಡುತ್ತಲೇ ಇದ್ದಾರೆ. ಅದಿರಲಿ, ಸಚಿವ ಸ್ಥಾನಕಳೆದುಕೊಂಡ ಶೋಭಕ್ಕಾಗೆ ಕಡೆ ಪಕ್ಷ ಪಕ್ಷದಲ್ಲಿ ಯಾದರೂ ಸ್ಥಾನ ಸಿಗುತ್ತದೆ ಎಂದರೆ ಈಗ ಅದೂ ಇಲ್ಲವಾಗಿದೆ.



ಶೋಭಾ

ಮೊದಲಿಗೆ ಪಕ್ಷದ ರಾಜ್ಯಾಧ್ಯಕ್ಷೆಯ ಸ್ಥಾನಕ್ಕೆ ಶೋಭಕ್ಕನ ಹೆಸರು ಕೇಳಿಬಂದಿತ್ತು, ಆದರೆ ಆಕೆಯ ರಾಜಕೀಯ ಬೆಳವಣಿಗೆ ಕಂಡು ಬೆಚ್ಚಿ ಬಿದ್ದಿದ್ದ ಚೆಡ್ಡಿಗಳು ಅದಕ್ಕೆ ಮತ್ತೆ ಅಡ್ಡಗಾಲು ಹಾಕಿದ್ದರು. ಶೋಭಾ ಆಗ ಪಕ್ಷದ ಪ್ರಮುಖರನ್ನು ಮತ್ತು ಸಂಘಪರಿವಾರದ ದೊಡ್ಡ ಚೆಡ್ಡಿಗಳನ್ನು ಕಂಡು "ನನ್ನ ತಪ್ಪಾದರೂ ಏನು ಎಂದು ಹೇಳಿ, ಶಿಕ್ಷೆ ಕೊಡಿ" ಎಂದು ಅಂಗಲಾಚಿದ್ದರು. ಆದರೆ ಅವರ್ಯಾರೂ ಉತ್ತರ ಕೊಡುವ ಗೊಡವೆಗೆ ಹೋಗಿರಲಿಲ್ಲ.

ಬದಲಾಗಿ "ನೀವು ಪಕ್ಷದ ಆಸ್ತಿ, ನಿಮ್ಮ ಸಾಮರ್ಥ್ಯ ರಾಜ್ಯದಲ್ಲಿ ಬಳಕೆಯಾಗದಿದ್ದರೆ ಹೋಗಲಿ, ರಾಷ್ಟ್ರಮಟ್ಟದಲ್ಲಿ ಬಳಸಿಕೊಳ್ಳುತ್ತೇವೆ" ಎಂದು ಬಣ್ಣದ ಮಾತನಾಡಿ ಶೋಭಕ್ಕನನ್ನು ಸಾಗಹಾಕಿದ್ದರು. ಈಗ ಈ ನಾಯಕರು ಶೋಭಕ್ಕಾಗೆ ಕೊಟ್ಟ ಮಾತಿಗೆ ತಪ್ಪಿದ್ದಾರೆ. ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಆಕೆಯ ಹೆಸರು ದುರ್ಬಿನ್ ಹಾಕಿಕೊಂಡು ನೋಡಿದರೂ ಕಾಣಿಸುತ್ತಿಲ್ಲ.

ರಾಜ್ಯದಲ್ಲಿ ಅವಮಾನ ಅನುಭವಿಸಿರುವ ಶೋಭಾರಿಗೆ ರಾಷ್ಟ್ರ ಮಟ್ಟದಲ್ಲಿ ಒಂದು ಸ್ಥಾನವನ್ನಾದರೂ ಬಿಜೆಪಿ ನೀಡುತ್ತದೆ ಎಂದೇ ಎಲ್ಲರೂ ಎಷ್ಟು ನಂಬಿದ್ದರೆಂದರೆ ಕೆಲ ಪತ್ರಿಕೆಗಳು 'ರಾಷ್ಟ್ರೀಯ ರಾಜಕಾರಣಕ್ಕೆ ಶೋಭ' ಎಂದೂ ವರದಿ ಮಾಡಿದ್ದವು. ಆದರೀಗ ಶೋಭ ವಿನಾಕಾರಣ ಮತ್ತೆ ಅವಮಾನ ಅನುಭವಿಸುವಂತಾಗಿದೆ.

ಇದನ್ನೆಲ್ಲ ಕಂಡು 'ಆಕೆಗೊಂದು ಹುದ್ದೆ ಕೊಡಿ' ಎಂದು ಗಟ್ಟಿ ಧ್ವನಿಯಲ್ಲಿ ಕೇಳುವ ಎದೆಗಾರಿಕೆ ಯಡ್ಡಿಗೆ ಇಲ್ಲವೇ ಇಲ್ಲ, ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪನಿಗೆ ಆಕೆಯ ಮುಖ ನೋಡಿದರೇ ಆಗುವುದಿಲ್ಲ. ಹೀಗಿರುವಾಗ ಶೋಭಕ್ಕನ ಭವಿಷ್ಯ ಮಣ್ಣುಪಾಲಲ್ಲದೆ ಇನ್ನೇನು?


ಸಿ.ಟಿ.ರವಿ

"ನಾನೂ ಪಕ್ಷಕ್ಕಾಗಿ ದುಡಿದಿದ್ದೇನೆ, ಪಕ್ಷವನ್ನು ಬೆಳೆಸಿದ್ದೇನೆ, ಕಟ್ಟಿದ್ದೇನೆ. ಆದ್ದರಿಂದ ಪಕ್ಷದಲ್ಲಿಯಾದರೂ ನನಗೊಂದು ಅಧಿಕಾರ ಕೊಡಿ" ಎಂದು ಶೋಭಕ್ಕ ಸಂಘಪರಿವಾರದ ಮಂದಿಯನ್ನು, ಪಕ್ಷದ ನಾಯಕರನ್ನು ಇನ್ನಿಲ್ಲದಂತೆ ಬೇಡಿಕೊಂಡಿದ್ದರು. ಆದರೆ ಪಕ್ಷ ಆಕೆಯನ್ನು ನಿಧಾನವಾಗಿ ಮೂಲೆಗುಂಪು ಮಾಡುತ್ತಿದೆ. ಆರೆಸ್ಸೆಸ್ಸಿನ ಚೆಡ್ಡಿಗಳನ್ನು, ಬಿಜೆಪಿಯ ನಾಯಕರನ್ನು ನಂಬಿದ್ದ ಶೋಭ ಈಗ ಕೈಚೆಲ್ಲಿ ಕೂರುವಂತಾಗಿದೆ.

## ಸೀಟಿ ರವಿಗೆ ಸೀಟಿಲ್ಲ

ಬಿಜೆಪಿ ನಾಯಕತ್ವದಿಂದ ಅನ್ಯಾಯಕ್ಕೊಳಗಾದ ಇನ್ನೋರ್ವ ಒಕ್ಕಲಿಗ ನಾಯಕನೆಂದರೆ ಚಿಕ್ಕಮಗಳೂರಿನ ಶಾಸಕ ಸಿ.ಟಿ.ರವಿ. ವಿವಾದವೇ ಆಗಿರದ ಬಾಬಾ ಬುಡನ್‌ಗಿರಿ ವಿಷಯವನ್ನು ಎತ್ತಿ ಮಲೆನಾಡು ಭಾಗಕ್ಕೆ ಕೋಮುವಾದದ ಬೆಂಕಿ ಹಚ್ಚಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರವಿ ಕೂಡ ಈಗ ಬಿಜೆಪಿಗೆ ಬೇಕಾಗಿಲ್ಲ.

ಬಿಜೆಪಿ ಅಧಿಕಾರಕ್ಕೆ ಬಂದರೆ ತನಗೊಂದು ಸಚಿವ ಸ್ಥಾನ ಸಿಗಬಹುದು ಎಂದು ಕನಸು ಕಂಡಿದ್ದ ರವಿಯನ್ನು ಯಡ್ಡಿ ಕಣ್ಣೆತ್ತಿಯೂ ನೋಡಲಿಲ್ಲ. ಪಕ್ಷಕ್ಕೆ ಹೊಸದಾಗಿ ಸೇರ್ಪಡೆಯಾದವರನ್ನು, ನೆಪಮಾತ್ರಕ್ಕೆ ಪಕ್ಷದಲ್ಲಿದ್ದವರನ್ನು ಯಡ್ಡಿ ಕರೆದು ಸಚಿವ ಸ್ಥಾನ ನೀಡಿದಾಗ, ಒಳಗೊಳಗೇ ಕುದ್ದು ಹೋಗಿದ್ದ ರವಿ, ವಿಧಿ ಇಲ್ಲದೆ ಮೇಲ್ನೋಟಕ್ಕೆ ಪಕ್ಷದ ಈ ನಿರ್ಧಾರವನ್ನು ಭಯಂಕರವಾಗಿ ಸಮರ್ಥಿಸಿಕೊಂಡೇ ಬಂದಿದ್ದ.

ಸಚಿವ ಸಂಪುಟದ ವಿಸ್ತರಣೆಯ ವಿಷಯ ಬಂದಾಗಲೆಲ್ಲಾ ರವಿಯ ಹೆಸರು ಚರ್ಚೆಗೆ ಬರುತ್ತಲೇ ಇದ್ದರೂ ಇಲ್ಲಿಯತನಕ ಆತನಿಗೆ ಅಧಿಕಾರ ಮಾತ್ರ ಮರೀಚಿಕೆಯಾಗಿದೆ. ದಾವಣಗೆರೆಯಲ್ಲಿ ಆರೆಸ್ಸೆಸ್‌ನ ಸಭೆ ನಡೆದಾಗ ಅಲ್ಲಿಗೆ ಹೋಗಿದ್ದ ರವಿ ತನ್ನೊಳಗಿನ ಅಸಮಾಧಾನವನ್ನು ಹೊರಹಾಕಿಯೇ ಬಂದಿದ್ದ. ಹೀಗೆ ಪಕ್ಷದ ವೇದಿಕೆಯಲ್ಲಿ, ಸಂಘಪರಿವಾರದ ಬೈಠಕ್‌ನಲ್ಲಿ ತನಗೆ ಅಧಿಕಾರ ನೀಡಬೇಕೆಂದು ರವಿ ಪಟ್ಟು ಹಿಡಿದಿದ್ದು ಒಂದೆರಡು ಬಾರಿಯಲ್ಲ. ಆಗೆಲ್ಲಾ "ಪಕ್ಷದ ಹಿತದೃಷ್ಟಿಯಿಂದ ನೀವು ತ್ಯಾಗ ಮಾಡಬೇಕಾಗಿರುವುದು ಅನಿವಾರ್ಯ, ಮುಂದೆ ನಿಮಗೆ ಅಧಿಕಾರ ದೊರೆಯಲಿದೆ" ಎಂದೇ ಆತನ ಮೂಗಿಗೆ ಸಂಘಪರಿವಾರದ ಮಂದಿ ತುಪ್ಪಸವರಿ ಕಳುಹಿಸಿದ್ದರು.

ತನ್ನ ಪಕ್ಷ ತನ್ನನ್ನು ನಿರ್ಲಕ್ಷಿಸಿ, ಅನರ್ಹರಿಗೆ ಅಧಿಕಾರ ನೀಡಿದ್ದು ಸಹಜವಾಗಿಯೇ ರವಿಗೆ ಸಿಟ್ಟು ತರಿಸಿದೆ. ಈ ಮಧ್ಯೆ ರವಿಗೆ ನೀಡಲಾಗಿದ್ದ ಪಕ್ಷದ ವಕ್ತಾರ ಹುದ್ದೆಯನ್ನೂ ಕಸಿದುಕೊಂಡು, ಅದರ ಬದಲಾಗಿ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ಆದರೆ ಆತನಿಗೆ ಅಧಿಕಾರ ನೀಡುವ ಮಾತಂತೂ ನಾಯಕರು ಆಡಿಲ್ಲ. ಇದೆಲ್ಲ ಇರಲಿ, ಕೊನೇ ಪಕ್ಷ ತನ್ನ ಕ್ಷೇತ್ರದಲ್ಲಿ ಒಂದಿಷ್ಟು ಅಭಿವೃದ್ಧಿ ಕೆಲಸ ಮಾಡಿಸಿ, ಆ ಮೂಲಕ ತನ್ನ ಜೇಬನ್ನೂ ತುಂಬಿಸಿಕೊಂಡು, ಮತದಾರರ ಮುಂದೆ ತನ್ನ ಮುಖವನ್ನಾದರೂ ಉಳಿಸಿಕೊಳ್ಳೋಣ ಎಂದರೆ ಅದಕ್ಕೂ ಮುಖ್ಯಮಂತ್ರಿ ಯಡ್ಡಿ ಅವಕಾಶ ನೀಡಿಲ್ಲ.

ಹೀಗಾಗಿ ರವಿ ಈಗ ಪಕ್ಷದ ವಿರುದ್ಧ ಒಳಗೊಳಗೇ ತಿರುಗಿ ಬಿದ್ದಿದ್ದಾನೆ. ಯಡ್ಡಿಯ ವಿರುದ್ಧ ತಾನು ಮಾತನಾಡದೇ ತನ್ನ ಬೆಂಬಲಿಗರನ್ನು ಛೂಬಿಟ್ಟಿದ್ದಾನೆ. 'ಚಿಕ್ಕಮಗಳೂರು ಕ್ಷೇತ್ರಕ್ಕೆ ಹೆಚ್ಚಿನ ಹಣ ನೀಡಿಲ್ಲ' ಎಂದು ದೂರುತ್ತಾ ರಾಜೀನಾಮೆ ನೀಡುವ ಮಾತುಗಳನ್ನಾಡಿದ್ದಾನೆ. ಪಕ್ಷದಲ್ಲಿ ತನಗೆ ಅಧಿಕಾರ ಸಿಗಬೇಕಾದರೆ, ತನ್ನ ಮಾತು ನಡೆಯಬೇಕಾದರೆ, ತಾನು ಕೇವಲ ಶಿಸ್ತಿನ ಸಿಪಾಯಿಯಾಗಿದ್ದರೆ ಸಾಲುವುದಿಲ್ಲ, ರೇಣುಕಾಚಾರ್ಯನಂತೆ ಬಂಡಾಯವೇಳಬೇಕು ಎಂಬ ಸತ್ಯ ಈಗ ಸಿಟಿ ರವಿಗೂ ಹೊಳೆದಂತಿದೆ. ಹೀಗಾಗಿಯೇ ನಿಧಾನವಾಗಿ ಬಂಡಾಯದ ಬಾವುಟ ಹಾರಿಸಲಾರಂಭಿಸಿದ್ದಾನೆ.

ಮೊದಲು ಯಡ್ಡಿಯ ಬಜೆಟ್ ವಿರುದ್ಧ ಹೇಳಿಕೆ ನೀಡಿದ ರವಿ, ಈಗ ಪಶ್ಚಿಮ ಘಟ್ಟದಲ್ಲಿ ಯಡ್ಡಿ ಗಣಿಗಾರಿಕೆಗೆ ಅವಕಾಶ ನೀಡಿರುವುದನ್ನೇ 'ಅಸ್ತ್ರ'ವಾಗಿಸಿಕೊಂಡು ಯಡ್ಡಿ ವಿರುದ್ಧದ ಹೋರಾಟಕ್ಕೆ ಸಜ್ಜಾಗಿದ್ದಾರೆ. ಜೊತೆಗೆ ನಂಬರ್ ಒನ್ ಚೆಡ್ಡಿ ಪತ್ರಿಕೆ 'ವಿಜಯ ಕರ್ನಾಟಕದಲ್ಲಿ' ಗಣಿಗಾರಿಕೆಯ ವಿರುದ್ಧ ಯಾರಿಂದಲೇ ಲೇಖನ ಬರೆಸಿ, ಅದಕ್ಕೆ ತನ್ನ ಹೆಸರನ್ನು ಹಾಕಿಸಿ ಪ್ರಕಟಿಸಿದ್ದಾರೆ. ಅಷ್ಟೇ ಅಲ್ಲದೆ, ಬಿಜೆಪಿಯ ಒಳಗೇ ಗಣಿಗಾರಿಕೆ ವಿರುದ್ಧ ಹೋರಾಟ ಆರಂಭವಾಗಿದೆ ಎಂಬ ಸುದ್ದಿಯೂ ಪ್ರಕಟಗೊಳ್ಳುವಂತೆ ನೋಡಿಕೊಂಡಿದ್ದಾನೆ. ಬರುವ ದಿನಗಳಲ್ಲಿ ಅಕಸ್ಮಾತ್ ಯಡ್ಡಿ ರವಿಯ ಮಾತು ಕೇಳದಿದ್ದಲ್ಲಿ, ಗಣಿಗಾರಿಕೆ ವಿರುದ್ಧದ ಆತನ ಹೋರಾಟ ಬಲಗೊಳ್ಳಲಿದೆ! ಇದೆಲ್ಲದರ ಹಿಂದೆ ರವಿಗೆ ಪರಿಸರದ ರಕ್ಷಣೆ ಕುರಿತು ಕಾಳಜಿಯೇನಿಲ್ಲ, ಬದಲಾಗಿ ತನಗೆ ಅಧಿಕಾರ ಸಿಗಬೇಕೆಂಬ ಆಕಾಂಕ್ಷೆ ಇರುವುದು ಸ್ಪಷ್ಟವಾಗಿದೆ.

ರೇಣುಕಾಚಾರ್ಯ ಯಡ್ಡಿಯನ್ನು ಬಹಿರಂಗವಾಗಿ ಬೈದು, ಆ ಮೂಲಕ ಸಚಿವ ಸ್ಥಾನವನ್ನೂ ಪಡೆದು, ಈಗ ಅದೇ ಯಡ್ಡಿಯನ್ನು ಹೊಗಳುತ್ತಾ ರೇಣುಕಾ ದುಡ್ಡು ಮಾಡಿಕೊಳ್ಳುತ್ತಿದ್ದರೆ, ಸಿ.ಟಿ.ರವಿ ಎಂಬ ಹುಂಬ ರೇಣುಕನ ಬೆನ್ನಿಗೆ ಚೂರಿಹಾಕುವ ತಂತ್ರ ಹೂಡುತ್ತಿದ್ದಾನೆ. ಆದರೆ ತನ್ನ ರಾಜಕೀಯ ಭವಿಷ್ಯಕ್ಕೆ ವ್ಯವಸ್ಥಿತವಾಗಿ ಸಂಘಪರಿವಾರವೇ ಕಲ್ಲು ಹಾಕುತ್ತಿದೆ ಎಂಬುದಿನ್ನೂ ರವಿಯ ತಲೆಗೆ ಹೊಕ್ಕಂತಿಲ್ಲ. ಅದು ಗೊತ್ತಾದ ದಿನ ಬಾಬಾ ಬುಡನ್‌ಗಿರಿಯಲ್ಲಿ ಶಾಂತಿ ನೆಲೆಸಲಿದೆ.

ಬಿಜೆಪಿ 'ಆಪರೇಷನ್ ಕಮಲ' ನಡೆಸಿದಾಗ, ಪಕ್ಷ ಇಕ್ಕಟ್ಟಿನಲ್ಲಿದ್ದಾಗ ವಕ್ತಾರನಾಗಿ ರವಿ ಪಕ್ಷವನ್ನು ಬಲವಾಗಿ ಸಮರ್ಥಿಸಿಕೊಳ್ಳುವ ಕೆಲಸ ಮಾಡಿದ್ದ. ಈಗ ಪಕ್ಷ ಅಧಿಕಾರದಲ್ಲಿದೆ, ಆದರೆ ಈತನಿಗೆ ಅಧಿಕಾರವೂ ಇಲ್ಲ, ವಕ್ತಾರನ ಕೆಲಸವೂ ಇಲ್ಲದಂತಾಗಿದೆ. ವಕ್ತಾರನಾಗಿದ್ದಾಗ ಒಂದಿಷ್ಟು ಅಬ್ಬರ ಸೃಷ್ಟಿಸಿ ಮಾಧ್ಯಮಗಳಲ್ಲಿ ಮಿಂಚುವ ಅವಕಾಶವಾದರೂ ಇತ್ತು. ಆದರೀಗ ಅದನ್ನು ಕಸಿದುಕೊಂಡಿದೆ ಪಕ್ಷ. ಇದೆಲ್ಲದರಿಂದ ರವಿಗೆ ಅಧಿಕಾರವೂ ಇಲ್ಲ, ಹೆಸರೂ ಇಲ್ಲ ಎನ್ನುವ ಸ್ಥಿತಿ ಎದುರಾಗಿದೆ.

ಒಟ್ಟಾರೆ ಹೇಳಬೇಕೆಂದರೆ ಸದಾನಂದ ಗೌಡ, ಶೋಭ ಕರಂದ್ಲಾಜೆಯಂತೆ ಸಿ.ಟಿ. ರವಿಯನ್ನೂ ಪಕ್ಷ ಮೂಲೆಗುಂಪು ಮಾಡಿದೆ. ಈ ಮೂವರ ಪರಿಸ್ಥಿತಿಯನ್ನು ಕಂಡು ರಾಜ್ಯ ಬಿಜೆಪಿಯಲ್ಲಿನ ಒಕ್ಕಲಿಗರು "ನಮ್ಮವರನ್ನು ಬೇಕಂತಲೇ ಪಕ್ಷ ಮೂಲೆಗುಂಪು ಮಾಡುತ್ತಿದೆ" ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಸಚಿವ ಆರ್. ಅಶೋಕ್‌ರ ಬೆಳವಣಿಗೆಯನ್ನು ಹತ್ತಿಕ್ಕುವ ಕೆಲಸ ಕೂಡ ನಡೆಯುತ್ತಿರುವುದನ್ನು ಅವರು ಗಮನಿಸಿದ್ದಾರೆ. ವಲಸೆ ಹಕ್ಕಿ ಸೋಮಣ್ಣನಿಗೆ ಮುಖ್ಯಮಂತ್ರಿ ಯಡ್ಡಿ ಎಲ್ಲಿಲ್ಲದ ಆದ್ಯತೆ ನೀಡುತ್ತಿರುವುದು, ಅಶೋಕ್ ಹೇಳಿದ್ದಕ್ಕೆಲ್ಲಾ ಕೊಂಕು ತೆಗೆಯುತ್ತಿರುವುದು 'ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ' ಎಂಬುದನ್ನು ಎತ್ತಿ ತೋರಿಸುತ್ತಿದೆ. ಗರ್ಭಗುಡಿಯಲ್ಲಿ ಒಕ್ಕಲಿಗರಿಗೆ ಜಾಗವಿಲ್ಲ ಎಂಬುದು ಪದೇ ಪದೇ ಸಾಬೀತಾಗುತ್ತಿದೆ.

ಬಿಜೆಪಿಯನ್ನು ನಂಬಿರುವ, ಬೆಂಬಲಿಸುವ, ಕೆಲಸ ಮಾಡುವ, ಮತಕೊಡುವ ಒಕ್ಕಲಿಗರು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು.

• ನೀರದ ಬೆಂಗಳೂರು

## ಗಡ್ಕರಿಗೂ ಮೋಡಿ ಮಾಡಿದ ಅನಂತು!



ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಎದ್ದು ಕಾಣುವ ಹೆಸರೆಂದರೆ ಅನಂತಕುಮಾರರದ್ದು. ಈ ಹಿಂದೆ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಅರುಣ್ ಜೇಟ್ಲಿ ಮತ್ತಿತರ ಪ್ರಮುಖ ನಾಯಕರನ್ನು ಅಧ್ಯಕ್ಷ ಗಡ್ಕರಿ ಮೂಲೆಗುಂಪು ಮಾಡಿ, ಹೊಸಬರಿಗೆ ಮಣೆ ಹಾಕಿದ್ದಾರೆ. ಆದರೆ ಅನಂತು ಮಾತ್ರ ಆಶ್ಚರ್ಯಕರ ರೀತಿಯಲ್ಲಿ ತಮ್ಮ ಸ್ಥಾನ ಉಳಿಸಿಕೊಂಡಿದ್ದಾರೆ.

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ರಾಜ್ಯದ ಹಲವಾರು ಪ್ರಮುಖರಿಗೆ ಸ್ಥಾನ ಸಿಗದಿದ್ದರೂ, ಅನಂತು ಮಾತ್ರ ಮಿಂಚುತ್ತಿದ್ದಾರೆ. ಇದೆಲ್ಲದರ ಮಧ್ಯೆ ಮುಖ್ಯಮಂತ್ರಿ ಯಡ್ಡಿ ದುರ್ಬಲರಾಗುತ್ತಿರುವುದು ಕೂಡ ಅನಂತು ದಾರಿ ಸುಗಮಮಾಡಿಕೊಟ್ಟಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲುಳಿಯಬೇಕಾದರೆ, ಅನಂತುವನ್ನು ಕೇಂದ್ರದಲ್ಲಿಯೇ ಇಟ್ಟುಕೊಳ್ಳುವುದು ಒಳ್ಳೆಯದು ಎಂದು ಲೆಕ್ಕ ಹಾಕಿಯೇ ಗಡ್ಕರಿ ಅವರಿಗೆ ಈ ಸ್ಥಾನ ನೀಡಿರಲೂಬಹುದು.

ಒಟ್ಟಾರೆ ಅನಂತು ಮತ್ತೆ ಸ್ಟ್ರಾಂಗ್ ಆಗಿರುವುದರಿಂದ ಯಡ್ಡಿಯ ಮುಖದಲ್ಲಿ ಮತ್ತೊಂದಿಷ್ಟು ಚಿಂತೆಯ ಗೆರೆ ಮೂಡಿದೆ. ಬಿಬಿಎಂಪಿ ಚುನಾವಣೆ ನಂತರ ಅನಂತು ಆಟ ಪ್ರಾರಂಭವಾಗುವ ಎಲ್ಲ ಸೂಚನೆಗಳೂ ಇವೆ ಎಂದು ಚೆಡ್ಡಿಗಳೇ ಭವಿಷ್ಯ ನುಡಿಯುತ್ತಿದ್ದಾರೆ!



# ಆರೆಸ್ಸೆಸ್ ವರ್ಸಸ್ ಬಿಜೆಪಿ!

...ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ...ಾವಣೆಗಳು ಘೋಷಣೆಯಾಗುತ್ತಿದ್ದಂತೆಯೇ ಆರೆಸ್ಸೆಸ್ ...ತ್ತು ಬಿಜೆಪಿಯ ನಡುವೆ ಸಣ್ಣದೊಂದು ಮುಸುಕಿನ ...ದ್ದಾಟ ಪ್ರಾರಂಭವಾಗಿದೆ. ಸಾರಾಂಶದಲ್ಲಿ ...ಳುವುದಾದರೆ ಈ ಗುದ್ದಾಟ ನಡೆಯುತ್ತಿರುವುದು ...ವುದೇ ತತ್ವ ಸಿದ್ಧಾಂತಗಳಿಗಾಗಿ ಅಲ್ಲ, ಬದಲಿಗೆ, ...ಕಾರಕ್ಕಾಗಿ! ಆರೆಸ್ಸೆಸ್ ಮೂಲತಃ ಒಂದು ಸಮಾಜ ...ಾ ಸಂಘಟನೆಯಾಗಿದ್ದು ಅದೆಂದೂ ಅಧಿಕಾರಕ್ಕಾಗಿ ...ಂಬಲಿಸುವುದಿಲ್ಲ ಎಂದೇ ಬಹಳಷ್ಟು ಜನ ಬಲವಾಗಿ ...ರುವುದುಂಟು. ಅಂತಹವರಿಗೆ ಸಹಜವಾಗಿಯೇ ...ಗುದ್ದಾಟ ಒಂದಿಷ್ಟು ಕಸಿವಿಸಿ ಮಾಡಿರುವುದು ...

...ಬೆಂಗಳೂರು ಮಹಾನಗರ ಪಾಲಿಕೆಯ ...ಾವಣೆಯಲ್ಲಿ ಬಿಜೆಪಿಯು ಆರೆಸ್ಸೆಸ್ ಕಾರ್ಯಕರ್ತರಿಗೆ ...ಯ ಪ್ರಮಾಣದಲ್ಲಿ ಸೀಟು ಕೊಡಬೇಕೆಂಬುದು ...ಸ್ ಕಾರ್ಯಕರ್ತರ ಬಲವಾದ ಒತ್ತಾಯವಾಗಿತ್ತು. ..., ಆರೆಸ್ಸೆಸ್‌ನ ಹಿರಿಯ ಕುಳ ಹಾಗೂ ಈಗ ...ಯೊಳಗೂ ಅಧಿಕಾರ ಅನುಭವಿಸುತ್ತಿರುವ ...ತ.ಜಯದೇವ ಅದಕ್ಕೆ ಸಿದ್ಧವಿರಲಿಲ್ಲ. "ಒಂದೊಂದು ...ಸಸಭಾ ಕ್ಷೇತ್ರದಲ್ಲೂ ಒಬ್ಬೊಬ್ಬ ಬಿಜೆಪಿಯ ...ಲ್ಲೆಯ ಹಿಂದೆ ಅಥವಾ ಎಮ್ಮೆಲ್ಲೆ ಚುನಾವಣೆಯಲ್ಲಿ ... ಬಿಜೆಪಿ ನಾಯಕನ ಹಿಂದೆ ಎರಡನೇ ಹಂತದ ...ಕರ ಒಂದು ಹಿಂಡೇ ಇರುತ್ತದೆ. ಬಿಜೆಪಿಯ ...ನೇ ಹಂತದ ನಾಯಕರೇ ಪ್ರತೀ ವಿಧಾನಸಭಾ, ...ಸಭಾ ಚುನಾವಣೆಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯ ...ಗಾಗಿ ಹಗಲು ರಾತ್ರಿ ಕಾರ್ಯನಿರ್ವಹಿಸಿರುತ್ತಾರೆ. ...ಲ್ಲಾ ಕಾರ್ಪೋರೇಶನ್ ಚುನಾವಣೆಯಲ್ಲಿ ಪಕ್ಷದ ... ಮೇಲೆ ಕಣ್ಣಿಟ್ಟೇ ಕೆಲಸ ಮಾಡಿರುತ್ತಾರೆ. ಈಗ ...ವರನ್ನು ಬಿಟ್ಟು ಎಲ್ಲಿಂದಲೋ ಪ್ರತ್ಯಕ್ಷವಾಗುವ ... ಕಾರ್ಯಕರ್ತರಿಗೆ ಟಿಕೆಟ್ ಕೊಟ್ಟು ಬಿಟ್ಟರೆ ...ಲ್ಲಾ ಬಂಡಾಯ ಏಳುತ್ತಾರೆ. ಅಷ್ಟೇ ಏಕೆ, ಅವರ ...ಕ್ಕೆ ನಿಂತಿರುವ ಬಿಜೆಪಿಯ ಎಂಪಿ, ಎಮ್ಮೆಲ್ಲೆಗಳೂ ...ಯವೇಳುತ್ತಾರೆ. ಇದರಿಂದ ಸರ್ಕಾರವೂ ಬೀಳುವ ...ಯಿರುತ್ತದೆ. ನಮಗೆ ಅಧಿಕಾರ ಉಳಿಸಿಕೊಳ್ಳುವುದು ... ಹಾಗಾಗಿ, ಎರಡನೇ ಹಂತದ ಬಿಜೆಪಿ ...ಕರಿಗೇ ಟಿಕೆಟ್ ಕೊಡಬೇಕು. ಆರೆಸ್ಸೆಸ್ ...ಕರ್ತರು ಮೂಲಭೂತವಾಗಿ ಸಮಾಜ ...ಾಗಿರುವುದರಿಂದ ಅವರು ಅಧಿಕಾರದ ಆಸೆಗಾಗಿ ...ಯುಕ್ಕಿಳಿಯಬಾರದು" ಎಂಬುದು ಆತನ ವಾದ.

...ದರೆ, ಗೆದ್ದು ಅಧಿಕಾರ ಅನುಭವಿಸಬೇಕು, ಒಂದಿಷ್ಟು ...ಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯಿಟ್ಟುಕೊಂಡಿದ್ದ ... ಕಾರ್ಯಕರ್ತರು ಮಾತ್ರ ತಮಗೆ ಹೆಚ್ಚಿನ ...ಲ್ಲಿ ಟಿಕೆಟ್ ಕೊಡಬೇಕೆಂದು ಪಟ್ಟು ಹಿಡಿದಿದ್ದರು. ...ಯುವರು ಅಧಿಕಾರ ಹಿಡಿದು ಭ್ರಷ್ಟಾಚಾರದಲ್ಲಿ ... ತನಕ ಮುಳುಗಿದ್ದಾರೆ. ನಾವು ತಳಮಟ್ಟದಲ್ಲಿ ಕೆಲಸ ಮಾಡಿ ಅವರನ್ನು ಗೆಲ್ಲಿಸುವುದು ಈ ಘನಂದಾರಿ ಕೆಲಸ ಮಾಡುವುದಕ್ಕೇನು? ಅವರು ಭ್ರಷ್ಟಾಚಾರ ಮಾಡುತ್ತಾ ಪಕ್ಷದ, ಸಂಘಪರಿವಾರದ ವರ್ಚಸ್ಸಿಗೆ ಕಳಂಕ ತರುತ್ತಿದ್ದರೂ ನಾವದನ್ನು ನೋಡಿಕೊಂಡು ಸುಮ್ಮನಿರಬೇಕೇನು? ನಾವೂ ಚುನಾವಣೆಗೆ ಇಳಿಯುವ ಮೂಲಕವಷ್ಟೇ ಉಳಿದವರನ್ನೂ ಸರಿದಾರಿಗೆ ತರಬಹುದು" ಎಂದು ಅವರೆಲ್ಲಾ ತಮ್ಮ ಒಳಗಿನ ಅಧಿಕಾರದಾಸೆಗೆ ಒಂದಿಷ್ಟು ಪ್ರಾಮಾಣಿಕ ರಾಜಕಾರಣದ ಕವಚ ತೊಡಿಸಿ ವಾದಿಸಿದರು.

ಕೊನೆಗೆ ಈ ಎರಡೂ ಗುಂಪಿಗೆ ಸಮಾಧಾನ ಮಾಡುವುದಕ್ಕೋಸ್ಕರ ಅರ್ಧ ಬಿಜೆಪಿ ಕಾರ್ಯಕರ್ತರಿಗೆ ಇನ್ನರ್ಧ ಆರೆಸ್ಸೆಸ್ ಕಾರ್ಯಕರ್ತರಿಗೆ ಟಿಕೆಟ್ ಕೊಡುವ ತೀರ್ಮಾನಕ್ಕೆ ಬರಲಾಯಿತು. ಒಟ್ಟು 198 ವಾರ್ಡುಗಳಲ್ಲಿ ಬಿಜೆಪಿ ಯಾರ್‍ಯಾರಿಗೆ ಟಿಕೆಟ್ ಕೊಟ್ಟಿದೆಯೋ ಅವರ ಪೂರ್ವಾಪರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆರೆಸ್ಸೆಸ್ ಕಾರ್ಯಕರ್ತರು ಅಥವ ಆರೆಸ್ಸೆಸ್ ಹಿನ್ನೆಲೆಯುಳ್ಳವರೇ ಹೆಚ್ಚೂಕಡಿಮೆ ಅರ್ಧದಷ್ಟು ಜನ ಸಿಗುತ್ತಾರೆ.

ವಾಸ್ತವದಲ್ಲಿ ಇದು ಬಿಜೆಪಿಯೊಳಗಿನ ಕಿತ್ತಾಟವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಅನುಕೂಲವಾಗಿದೆಯೇ ಹೊರತು ಅದನ್ನು ನಿವಾರಿಸುವುದಕ್ಕಲ್ಲ. ಆಗಲೇ ರಾಜ್ಯ ಬಿಜೆಪಿ ಅಧಿಕಾರಕ್ಕಾಗಿ ಹಲವಾರು ಬಣಗಳಾಗಿ ಛಿದ್ರವಾಗಿರುವುದು ನಮಗೆ ಗೊತ್ತೇ ಇದೆ. ಒಂದೆಡೆ ರೆಡ್ಡಿಗಳು, ಇನ್ನೊಂದೆಡೆ ಯಡ್ಡಿ, ಮತ್ತೊಂದೆಡೆ ಅನಂತೂ-ಶೆಟ್ಟರ್, ಮಗದೊಂದೆಡೆ ಸದಾನಂದಗೌಡ, ಈಶ್ವರಿ, ನರ್ಸ್ ರೇಣುಕ, ಅಷ್ಟೇ ಏಕೆ ಸಚಿವಸ್ಥಾನ ವಂಚಿತ ಹಿಂಡು ಹಿಂಡು ಎಮ್ಮೆಲ್ಲೆಗಳು - ಹೀಗೆ ಇಡೀ ಬಿಜೆಪಿಯೇ ತೇಪೆ ಹಚ್ಚಲಾರದಷ್ಟು ಒಡೆದುಹೋಗಿದೆ.

ಒಬ್ಬೊಬ್ಬ ಬಂಡುಕೋರ ನಾಯಕನ ಹಿಂದೆಯೂ ಆತನದ್ದೇ ಆದ ಕಾರ್ಯಕರ್ತರ ಹಿಂಡು ಇದೆ. ಯಾವ ನಾಯಕನ ಹಿಂಬಾಲಕನಿಗೆ ಟಿಕೆಟ್ ಕೊಡಬೇಕು, ಯಾರಿಗೆ ಕೊಡಬಾರದು ಎಂಬುದೇ ದೊಡ್ಡ ಸಮಸ್ಯೆಯಾಗಿರುವಾಗ ಈಗ ಆರೆಸ್ಸೆಸ್ಸಿನವರು ತಮಗೂ ಬೇಕು ಅಂತ ಕುಳಿತದ್ದು ಸಮಸ್ಯೆ ಮತ್ತಷ್ಟು ಬಿಗಡಾಯಿಸುವುದಕ್ಕೆ ಕಾರಣವಾಗಿದೆ. ಕಳೆದ ಐದಾರು ವರ್ಷಗಳಿಂದ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿಯುತ್ತಾ "ಮುಂದಿನ ಕಾರ್ಪೋರೇಶನ್ ಚುನಾವಣೆಯಲ್ಲಿ ಈ ವಾರ್ಡಿನ ಬಿಜೆಪಿ ಟಿಕೆಟ್ ನನಗೇ" ಅಂತ ಚುನಾವಣೆಗೆ ಸಿದ್ಧತೆ ಮಾಡಿಕೊಂಡಿದ್ದ ಅದೆಷ್ಟೋ ಸ್ಥಳೀಯ ಬಿಜೆಪಿ ನಾಯಕರ ಟಿಕೆಟ್‌ನ್ನು ಹೀಗೆ ಎಲ್ಲಿಂದಲೋ ದಿಢೀರನೇ ಪ್ರತ್ಯಕ್ಷರಾದ ಆರೆಸ್ಸೆಸ್ಸಿಗರು ಕಿತ್ತುಕೊಂಡರೆ ಆ ನಾಯಕರ ಪಾಡೇನಾಗಬೇಡ?

ಈಗ ಅಂಥ ನಾಯಕರೆಲ್ಲಾ ಒಂದೋ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿರುವ ಆರೆಸ್ಸೆಸ್ಸಿಗನಿಗೆ ಚಳ್ಳೆ ಹಣ್ಣು ತಿನ್ನಿಸಲು ಹೊರಟಿದ್ದಾರೆ. ಇಲ್ಲವೋ ಇಷ್ಟು ವರ್ಷ ದುಡಿದರೂ ಪಕ್ಷ, ಸಂಘ ತಮಗೆ ಮೋಸ ಮಾಡಿತು ಎಂಬ ಭಾವನೆಯಲ್ಲಿ ಚುನಾವಣೆಯ ಉಸಾಬರಿಗೆ ಹೋಗದೆ ಮನೆಯಲ್ಲಿ ಕುಳಿತಿದ್ದಾರೆ. ಇಂಥವರ ಬೆನ್ನ ಹಿಂದಿರುವ ಕಾರ್ಯಕರ್ತರೂ ಕೂಡ ತಮ್ಮ ನಾಯಕರಿಗಾದ ಅನ್ಯಾಯವನ್ನು ಪ್ರತಿಭಟಿಸುತ್ತಾ ಚುನಾವಣೆಯಿಂದ ದೂರವುಳಿಯುತ್ತಿದ್ದಾರೆ. ಅದರಲ್ಲಿ ಕೆಲವರು ಬೇಸತ್ತು ಜೆಡಿಎಸ್ ಮತ್ತು ಕಾಂಗ್ರೆಸ್ ಕಡೆಗೂ ವಾಲುವ ಸಾಧ್ಯತೆಯಿದೆ. ಸಾರಾಂಶದಲ್ಲಿ ಹೇಳುವುದಾದರೆ ಈ ಬೆಳವಣಿಗೆ ಬಿಜೆಪಿಯ ಫಜೀತಿಯನ್ನು ಮತ್ತಷ್ಟು ಹೆಚ್ಚಿಸಿರುವುದಂತೂ ಸತ್ಯ.

ಇದು ಚುನಾವಣೆಯ ಫಲಿತಾಂಶದ ಮೇಲೂ ಪ್ರಭಾವ ಬೀಳುವ ಸಾಧ್ಯತೆಯಿದೆ. ಕಾಂಗ್ರೆಸ್ಸಿನಲ್ಲೂ ಬಂಡಾಯದ ಬಿಸಿ ಬಿಜೆಪಿಗಿಂತ ಕಡಿಮೆಯೇನಿಲ್ಲ. ಈ ಎರಡು ಪ್ರಮುಖ ಪಕ್ಷಗಳ ಬಂಡಾಯ, ಕಿತ್ತಾಟಗಳು ಜೆಡಿಎಸ್‌ಗೆ ವರದಾನವಾಗಿ ಅಚ್ಚರಿಯ ಫಲಿತಾಂಶ ಹೊರಬಿದ್ದರೂ ಆಶ್ಚರ್ಯವಿಲ್ಲ. ●

# ಲಂಕೇಶ್ ಚೆಡ್ಡಿಗಳಿಗೂ ಪ್ರಿಯರಾಗಿದ್ದರಂತಲ್ಲಾ...

ಕೃಷ್ಣಭಟ್ಟ ಎಂಬ ಪ್ರೊಫೆಸರ್‌ಗೆ ಗೌರವ ಡಾಕ್ಟರೇಟ್ ಕೊಟ್ಟೇ ಬಿಟ್ಟರಂತಲ್ಲಾ, ಇದರಿಂದ ಖುಷಿಯಾಗಬೇಕಿದ್ದ ಭಟ್ಟರು ಶಾನೆ ಬೇಜಾರಿನಿಂದಲೇ ಡಾಕ್ಟರೇಟ್ ಪಡೆಯಲು ಹೊರಟರಂತಲ್ಲಾ, ಇದಕ್ಕೆ ಹಲವಾರು ಜನ ಹಲವು ಕಾರಣ ಹೇಳುತ್ತಿರಲಾಗಿ ಒಂದೆರಡನ್ನು ಹೇಳಲೇಬೇಕಿದೆಯಲ್ಲಾ, ಕುವೆಂಪು ತಮ್ಮ ಬದುಕಿನುದ್ದಕ್ಕೂ ಜಾತ್ಯತೀತ ಮನಸ್ಸಿನಿಂದ ಆಲೋಚಿಸಿ ನಿರಂಕುಶಮತಿಗಳಾಗಿದ್ದವರು. ಕಡೆಗೆ ಅವರಿಗೆ ಸಿಕ್ಕ ದಿವ್ಯ ಸಂದೇಶ 'ವಿಶ್ವಮಾನವ'. ಮನುಷ್ಯ ಜಗತ್ತಿನ ಯಾವ ಮೂಲೆಯಲ್ಲೇ ಇರಲಿ ಅವನು ಮಾನವ. ಹುಟ್ಟಿದ ಮಗು ವಿಶ್ವಕ್ಕೆ ಸೇರಿದ್ದು, ಅದನ್ನು ವಿಶ್ವಮಾನವನನ್ನಾಗಿ ರೂಪಿಸಬೇಕೆ ಹೊರತು ಹಾಲುಗಲ್ಲದ ಕೂಸಿಗೆ ಒರಟಾದ ಖಾಕಿ ಚೆಡ್ಡಿ ತೊಡಿಸಿ, ಅದರ ಕೈಗೆ ಬಿದಿರುಕೋಲು ಕೊಡಬೇಡಿ. ಕೊಟ್ಟದ್ದೇ ಆದರೆ ಆ ಕೂಸು ಇಲ್ಲಿ ನರಕ ಸೃಷ್ಟಿಸುತ್ತದೆ, ಅಂತಹ ಕೆಲಸ ಮಾಡಬೇಡಿ ಎಂದಿದ್ದರಂತಲ್ಲಾ. ಅಂತಹ ಕೆಲಸವನ್ನೇ ಮಾಡಿಕೊಂಡು ಬಂದ ಭಟ್ಟನಿಗೆ ಅದೇ ಕುವೆಂಪು ವಿ.ವಿ. ಗೌರವ ಡಾಕ್ಟರೇಟ್ ಕೊಟ್ಟಿತಂತಲ್ಲಾ, ಥೂತ್ತೇರಿ!

******

ದಿಢೀರನೆ ಬಂದ ಡಾಕ್ಟರೇಟಿನಿಂದ ಬೆಚ್ಚಿಬಿದ್ದ ಭಟ್ಟರು "ನಾನು ಈ ಗೌರವ ಡಾಕ್ಟರೇಟ್ ಪಡೆಯಲು ಹೋಗಲಾರೆ. ಕುವೆಂಪು ಆಶಯಗಳಿಗೆ ಗೌರವ ಕೊಡುವುದೇ ಆದರೆ, ನಮ್ಮಂತವರು ಕುವೆಂಪು ವಿ.ವಿ. ಆವರಣದಲ್ಲಿ ಕಾಣಿಸಿಕೊಳ್ಳಬಾರದು. ಏಕೆಂದರೆ, ಕುವೆಂಪು ವಿಶ್ವಮಾನವ ಸಂದೇಶ ಬೀರಿದವರು. ನಾನಾದರೊ ಚೆಡ್ಡಿ ಸಂದೇಶ ಸಾರಿದವನು. ನನಗೆ ಗೋಳವಲಕರನ ಚಿಂತನ ಗಂಗೆಯೇ ಭಗವದ್ಗೀತೆ. ಅದರ ಹೊರತಾಗಿ ಅದೂ ಇದೂ ಓದಿದವನಲ್ಲ. ಪುರೋಹಿತರು ಚೆನ್ನಾಗಿದ್ದರೆ ದೇಶ ಚೆನ್ನಾಗಿರುತ್ತದೆ. ಪುರೋಹಿತರು ಉಂಡು ಉಟ್ಟು ಸಮಾಧಾನದಿಂದಿದ್ದರೆ ದೇಶವೂ ಸುಭಿಕ್ಷವಾಗಿರುತ್ತದೆ. ಪುರೋಹಿತಶಾಹಿಯನ್ನು ರಕ್ಷಿಸಬೇಕಾದರೆ ಆರೆಸ್ಸೆಸ್ ಬೆಳೆಸಬೇಕು. ಆರೆಸ್ಸೆಸ್ ಬೆಳೆಸಬೇಕಾದರೆ ಮತೀಯ ಗಲಭೆ ಮಾಡುತ್ತಿರಬೇಕು. ಹೀಗೆ ಯೋಚಿಸುತ್ತಿರುವ ನಾನೆಲ್ಲಿ? ವಿಶ್ವಮಾನವತ್ವದ ಕುವೆಂಪು ಎಲ್ಲಿ? ಆದ್ದರಿಂದ ನಾನು ಗೌರವ ಡಾಕ್ಟರೇಟ್ ಪಡೆಯಲಾರೆ" ಎಂದುಬಿಟ್ಟರಂತಲ್ಲಾ, ಥೂತ್ತೇರಿ!!

* * * *

## ಥೂತ್ತೇರಿ

▸ಯಾಹೂ

ಮೊದಲು ಮಾಮೂಲು ಮನುಷ್ಯರಂತಿದ್ದು ಈಚೆಗೆ ಚೆಡ್ಡಿಗಳಾದವು ಹೇಳುವ ಪ್ರಕಾರ, ಕೃಷ್ಣಭಟ್ಟರು ಮತೀಯವಾದಿಗಳಾಗಿದ್ದರೂ ಭ್ರಷ್ಟರಲ್ಲವಂತಲ್ಲಾ, ಆದರೆ ಕುವೆಂಪು ವಿವಿಯ ಕುಲಪತಿ ಮೇಲೆ ಭ್ರಷ್ಟತೆಯ ಆಪಾದನೆಯಿದೆ. ಕುವೆಂಪು ಬರೆದಿರುವ ಮಹಾ ಕಾದಂಬರಿ "ಕಾನೂರು ಹೆಗ್ಗಡತಿ"ಯಲ್ಲಿ ಒಬ್ಬ ಶೇರೇಗಾರ ಬರುತ್ತಾನೆ. ಚಂದ್ರಯ್ಯಗೌಡರ ಮನೆ ಸೇರಿಕೊಂಡ ಅವನು ಗೌಡರ ಮಹಾಮನೆಯನ್ನು ಹಾಳು ಮಾಡಿದ್ದಲ್ಲದೆ, ಅವರ ಪ್ರಾಯದ ಹೆಂಡತಿ ಸುಬ್ಬಮ್ಮನನ್ನೇ ಹಾಳುಮಾಡಿ, ಆಕೆ ಗರ್ಭವತಿಯಾಗಿ, ಕಡೆಗೆ ಗರ್ಭಪಾತದ ಔಷಧಿ ತಿಂದು ಪ್ರಾಣ ನೀಗುವಾಗ ಶೇರೇಗಾರರು ಪರಾರಿಯಾಗುತ್ತಾರೆ. ಆ ಶೇರೇಗಾರನಿಗೂ, ಈಗ ಹಾಲಿ ಇರುವ ಕುವೆಂಪು ವಿ.ವಿ. ಕುಲಪತಿ ಶೇರೇಗಾರರಿಗೂ ಯಾವ ಸಂಬಂಧವೂ ಇಲ್ಲ. ಆದರೂ ಚಂದ್ರಯ್ಯಗೌಡರ ಮನೆಯ ಸ್ಥಿತಿಗೆ ಕುವೆಂಪು ವಿ.ವಿ.ಯನ್ನು ತರಬೇಕಾದರೆ ಈ ಶೇರೇಗಾರ ಆ ಶೇರೇಗಾರನ ಸಂತತಿಯವರೇ ಇರಬೇಕು. ಇಲ್ಲವಾದರೆ ಇಂತಹ ಪತನ ಸಾಧ್ಯವಿಲ್ಲ, ಆದ್ದರಿಂದಲೇ ಭಟ್ಟರು ಡಾಕ್ಟರೇಟ್ ಪಡೆಯಲು ಹೋಗಲಿಲ್ಲ ಎನ್ನುತ್ತಿವೆಯಲ್ಲಾ, ಥೂತ್ತೇರಿ!!!

* * * *

ಕುವೆಂಪು ವಿ.ವಿ. ಪ್ರಭಾವದ ಒತ್ತಡದಿಂದ ನೀಡಿದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆಯಲು ಹೋಗದ ಭಟ್ಟರ ಹಿಂಜರಿಕೆಗೆ ಕಾರಣವೇನೆಂಬುದು ಚಿದಂಬರ ರಹಸ್ಯವಾಗುಳಿದಿರುವ ಈ ಸಮಯದಲ್ಲಿ, ಈ ವಿವಿಗಳು ಡಾಕ್ಟರೇಟನ್ನು ಕೊಡುತ್ತಿವೆಯೋ ಅಥವಾ ಮಾರಿಕೊಳ್ಳುತ್ತಿವೆಯೋ, ಇಲ್ಲ ಇದಕ್ಕೆ ತಲೆಕೆಟ್ಟಿದೆಯೋ ಎಂಬುದನ್ನು ಪತ್ತೆಹಚ್ಚಬೇಕಾಗಿದೆಯಂತಲ್ಲಾ, ಏಕೆಂದರೆ, ನೇಗಿಲಯೋಗಿ ಕವನ ಬರೆದ ಕುವೆಂಪು ಆಶಯಗಳಿಗೆ ಗೌರವ ಸಲ್ಲುವಂತಹ ಒಂದೇ ಒಂದು ಡಾಕ್ಟರೇಟ್ ಈವರೆಗೂ ಕೊಡದಿರುವ ಈ ವಿ.ವಿ. ಬೃಹಸ್ಪತಿಗಳಿಗೆ ಒಳ್ಳೆ ಕೃಷಿಕ, ಹೆಚ್ಚು ಬತ್ತ ಬೆಳೆದವನು, ಹೆಚ್ಚು ರಾಗಿ ಬೆಳೆದವನು, ಹೈನುಗಾರಿಕೆಯಲ್ಲಿ ಪ್ರಗತಿ ಸಾಧಿಸಿದವನು ಸಾವಿರ ಕೃಷ್ಣಭಟ್ಟರಿಗಿಂತ ಮೇಲು ಎಂಬುದು ಈ ಮೂರ್ಖರಿಗೆ ಹೊಳೆಯುವುದು ಯಾವಾಗ ಎಂಬುದೇ ಸಮಸ್ಯೆಯಾಗಿದೆಯಲ್ಲಾ, ಥೂತ್ತೇರಿ!!


* * * *

ಅಂದಹಾಗೆ ಹೇಳಬೇಕಾದ ಪ್ರಸಂಗವೊಂದು ಮರೆತುಹೋಗಿತ್ತಲ್ಲಾ, ಅದೇನೆಂದರೆ, ಲಂಕೇಶರಿಗೆ ಎಪ್ಪತ್ತೈದು ವರ್ಷ ತುಂಬಿದ್ದಕ್ಕೆ ನಡೆದ ಸಮಾರಂಭದ ಸೆನೆಟ್ ಹಾಲಿನ ಮೂಲೆಯಲ್ಲಿ ಒಂದೆರಡು ಚೆಡ್ಡಿಗಳು ಬಂದು ಕೂತಿದ್ದವಲ್ಲಾ, ಈ ಬಗ್ಗೆ ಕಿ.ರಂ. ನಾಗರಾಜರನ್ನು ಕೇಳಲಾಗಿ ಅವರು "ಪಾಪ ಹೋಗಲಿಬಿಡಿ. ಲಂಕೇಶ್ ಒಮ್ಮೊಮ್ಮೆ ಚೆಡ್ಡಿಗಳಿಗೂ ಪ್ರಿಯರಾಗಿ ಕಾಣುತ್ತಿದ್ದರು. ಯಾವಾಗೆಂದರೆ ಪ್ರಾಯ ಉಕ್ಕುವ ಸಮಯದಲ್ಲಿ ಅಂಗೈಯನ್ನೇ ಹೆಂಡತಿ ಮಾಡಿಕೊಂಡು ಸದಾ ಮತೀಯ ರೋಗದಿಂದ ಬಿಳಿಚಿಕೊಂಡ ಚೆಡ್ಡಿಗಳನ್ನು ನೋಡಿ ಪಾಪ ಎನ್ನುತ್ತಿದ್ದರು. ಅದೂಅಲ್ಲದೆ, ಒಂದೆರಡು ಚೆಡ್ಡಿಗಳು ಲಂಕೇಶ್ ಪತ್ರಿಕೆಯಲ್ಲೇ ಬರೆದು ಖ್ಯಾತಿ ಪಡೆದು, ಈಗ ಕೇಶವಕೃಪ ಸೇರಿಕೊಂಡಿವೆ. ಅವುಗಳು ಕೇಶವಕೃಪದಲ್ಲಿದ್ದರೂ, ಮನಸ್ಸು ಮೇಷ್ಟ್ರನ್ನು ನೆನೆಸುವ ಸಭೆಯಾದ್ದುದರಿಂದ ಇಲ್ಲಿ ಬಂದಿರಬಹುದು, ಪಾಪ" ಎಂದರಲ್ಲಾ, ಥೂತ್ತೇರಿ!!


* * * *

ಈ ಪಾಪ ಎಂಬ ಪದವನ್ನು ದೇವನೂರು ಮಹಾದೇವರ ಪ್ರಕಾರ ವಿಶ್ಲೇಷಿಸುವುದಾದರೆ "ಪಾಪ ಅಂದರೆ (sin). ಹಾಗೆಯೇ ಕರುಣೆ (pity) ಗೂ ಬಳಸುತ್ತಾರೆ. ಪಾಪಕ್ಕೆ ಬಳಸಿದರೆ ಪಾಪಿಷ್ಟ ಆಗುತ್ತಾರೆ. ಕರುಣೆಗೆ ಬಳಸಿದರೆ ಪಾಪದವರು ಆಗುತ್ತಾನೆ. ಪಾಪದವನು ಒಂದುಪಟ್ಟು ಪತನಗೊಂಡಿದ್ದರೆ, ಪಾಪಿಷ್ಟರು ನೂರುಪಟ್ಟು ಪತನಗೊಂಡವನಾಗಿರುತ್ತಾನೆ. ಅಸ್ಪೃಶ್ಯತೆಗೆ ಅಥವಾ ತಾರತಮ್ಯಕ್ಕೆ ಒಳಗಾದವರು ಪಾಪದವರು ಆಗುತ್ತಾರೆ. ಇವರ ಮನೋಭಾವದಲ್ಲಿ ತಾರತಮ್ಯ ಇರುವುದಿಲ್ಲ. ಯಾರು ಅಸ್ಪೃಶ್ಯತೆ, ತಾರತಮ್ಯ ಆಚರಿಸುತ್ತಾರೋ ಅವರ ಮನಸ್ಸಿನಲ್ಲಿ ಅವೇ ತುಂಬಿರುತ್ತವೆ. ಆದ್ದರಿಂದ ಅಸ್ಪೃಶ್ಯತೆ, ತಾರತಮ್ಯ ಆಚರಿಸುವವರು ಪಾಪಿಷ್ಟರಾಗುತ್ತಾರೆ. ಇಂತಹ ಪಾಪಿಷ್ಟರ ಸಂಖ್ಯೆಯನ್ನು ಸೃಷ್ಟಿಸುವ ಸಂತತಿಯವರಿಗೆ ಪಾಪ ಅನ್ನುವುದಾದರೆ ನಮ್ಮಂತಹ ಪಾಪಿಗಳೇ ಇಲ್ಲ ಅಲ್ಲವೇ?"

ಥೂತ್ತೇರಿ!!!




# ಮುನಿಕೃಷ್ಣರ ಬೆನ್ನಿಗೆ ಹೆಬ್ಬಾಳ ಕ್ರಿಮಿನಲ್ ಜಯಪ್ಪ ರೆಡ್ಡಿಗೆ ಕಟ್ಟಾ ಟಿಕೆಟ್ಟು



ಮುನಿಕೃಷ್ಣ

ಕಟ್ಟಾ ಸ್ವಕ್ಷೇತ್ರ ಹೆಬ್ಬಾಳದ ಇಡೀ ಬಿಜೆಪಿಯೇ ಇವತ್ತು ಕಟ್ಟಾ ಗ್ಯಾಂಗ್ ವಿರುದ್ಧ ತಿರುಗಿಬಿದ್ದಿದೆ. ಆ ಕಾಲದಿಂದ ಪಕ್ಷಕ್ಕಾಗಿ ಜೀವ ತೇದವರು, ನಿಷ್ಠಾವಂತ ಕಾರ್ಯಕರ್ತರನ್ನೆಲ್ಲ ಬೀದಿಪಾಲು ಮಾಡಿದ ಮಂತ್ರಿ ಕಟ್ಟಾ ಈಗ ಯಾರನ್ನೆಲ್ಲ ಕೌನ್ಸಿಲರ್‌ಗಳಾಗಿ ಮಾಡಹೊರಟಿದ್ದಾರೋ ಅವರೆಲ್ಲರೂ ರಿಯಲ್ ಎಸ್ಟೇಟ್ ನೆಲಕಂಟಕರೇ.



ಜಯಪ್ಪರೆಡ್ಡಿ

ಶುರುವಿನಿಂದಲೂ ಯಲಹಂಕ ಸುತ್ತಮುತ್ತ ಬಿಜೆಪಿಯನ್ನು ಕಟ್ಟಿ ಬೆಳೆಸಿದ್ದು ಹೆಬ್ಬಾಳದ ಮಾಜಿ ಕೌನ್ಸಿಲರ್ ಮತ್ತು ರಾಜ್ಯ ಬಿಜೆಪಿ ದಲಿತ ಮೋರ್ಚಾದ ಹಾಲಿ ಅಧ್ಯಕ್ಷ ಮುನಿಕೃಷ್ಣ ಸಿನಿಯಾರಿಟಿಯಲ್ಲಿ ಮುನಿಕೃಷ್ಣ ಕಟ್ಟಾಗಿಂತಲೂ ಹಿರೀಕ. 2004 ರ ತನಕ ಯಲಹಂಕಕ್ಕೆ ಎಮ್ಮೆಲ್ಲೇ ಕ್ಯಾಂಡಿಡೇಟಾಗಿ ಕೂದಲೆಳೆಯಿಂದ ಸೋಲುತ್ತಲೇ ಬಂದಿದ್ದ ಮುನಿಕೃಷ್ಣ ಕಳೆದ ಬಾರಿ ಹೆಬ್ಬಾಳಕ್ಕೇನೇದರೂ ನಿಂತಿದ್ದರೆ ಖಂಡಿತ ಗೆದ್ದು ಎಮ್ಮೆಲ್ಲೇಯಾಗುತ್ತಿದ್ದರು.

ಆದರೆ ಶಿವಾಜಿನಗರ ತೊರೆದು ವಲಸೆ ಬಂದಿದ್ದ ಕಟ್ಟಾಗಾಗಿ ಹೆಬ್ಬಾಳವನ್ನು ಬಿಟ್ಟುಕೊಟ್ಟರು. ಅದೇ ಮುನಿಕೃಷ್ಣರಿಗೆ ಮುಳುವಾಯಿತು. ತಾನೇ ಕಟ್ಟಿದ ಕಾರ್ಯಕರ್ತರ ಪಡೆಯನ್ನು ಕಟ್ಟಾ ಗೆಲುವಿಗೆ ನಿಲ್ಲಿಸಿದ ಮುನಿಕೃಷ್ಣರ ಶ್ರಮದಿಂದಾಗಿ ಗೆದ್ದ ಕಟ್ಟಾ ಎಂಥಾ ದೋಖಾ ಕೊಟ್ಟನೆಂದರೆ, ಇವತ್ತಲ್ಲಾ ನಾಳೆ ತನಗೆ ಪ್ರತಿಸ್ಪರ್ಧಿಯಾಗಬಲ್ಲ ಮುನಿಕೃಷ್ಣರನ್ನೇ ರಾಜಕೀಯವಾಗಿ ಮುಗಿಸಲು ಕತ್ತಿ ಮಸೆಯುತ್ತಲೇ ಬಂದ. ಈ ನಿಟ್ಟಿನಲ್ಲಿ ಕಟ್ಟಾ ಮಾಡಿದ ಮೊದಲ ಕುತಂತ್ರವೆಂದರೆ ಮುನಿಕೃಷ್ಣ ಯಾವುದೇ ನಿಗಮ-ಮಂಡಳಿಗೆ ಅಧ್ಯಕ್ಷರಾಗದಂತೆ ಅಡ್ಡಗಾಲಿಟ್ಟದ್ದು!

ಬಿಜೆಪಿಯ ಬೇರೆಲ್ಲ ಮೋರ್ಚಾಗಳ ರಾಜ್ಯ ಅಧ್ಯಕ್ಷರೆಲ್ಲ ಒಂದಲ್ಲಾ ಒಂದು ನಿಗಮಗಳ ಅಧ್ಯಕ್ಷರಾಗಿ ಅಧಿಕಾರದ ರುಚಿ ಕಂಡರೆ ದಲಿತ ಮೋರ್ಚಾದ ರಾಜ್ಯಾಧ್ಯಕ್ಷ ಮುನಿಕೃಷ್ಣ ಮಾತ್ರ ವನವಾಸದಲ್ಲೇ ಉಳಿದುಬಿಟ್ಟರು. ಇದು ಹೆಬ್ಬಾಳದ ಲೋಕಲ್ ಬಿಜೆಪಿ ನಾಯಕರನ್ನು ರೊಚ್ಚಿಗೆಬ್ಬಿಸಿ ಕಟ್ಟಾ ವಿರುದ್ಧ ಸ್ಥಳೀಯ ಬಿಜೆಪಿ ನಾಯಕರೇ ಬೀದಿಗಿಳಿದು ಪ್ರತಿಭಟಿಸಿದರು. ಇದರಿಂದ ಜಿದ್ದಿಗೆ ಬಿದ್ದ ಕಟ್ಟಾ ತನ್ನ ಚೇಲಾ ಎಸಿಪಿ ಮುನಿರತ್ನಂ ನಾಯ್ಡು ಎಂಬ ಪೊಲೀಸಪ್ಪನನ್ನು ಛೂಬಿಟ್ಟು ಮುನಿಕೃಷ್ಣರ ಮೇಲೆ ಖೊಟ್ಟಿ ಕೇಸುಗಳನ್ನು ಹಾಕಿಸಿದ.

ಹೀಗೆ ಮುನಿಕೃಷ್ಣರನ್ನು ತುಳಿಯುತ್ತಲೇ ಬಂದ ಕಟ್ಟಾ ಅವರ ವಿರುದ್ಧ ಎತ್ತಿಕಟ್ಟಿದ್ದು ಜಯಪ್ಪ ರೆಡ್ಡಿ ಎಂಬ ಹಾಲಿ ಲ್ಯಾಂಡ್ ರಾಬರ್ ಕಂ ಮಾಜಿ ರೌಡಿಯನ್ನು!

ಕಟ್ಟಾ ತನ್ನನ್ನು ಎಷ್ಟೇ ತುಳಿದರೂ ಕನಿಷ್ಠ ಪಾಲಿಕೆ ಚುನಾವಣೆಯಲ್ಲಾದರೂ ಸಹಿಸಿಕೊಳ್ಳುತ್ತಾನೆಂದೇ ಲೆಕ್ಕ ಹಾಕಿದ ಮುನಿಕೃಷ್ಣ ಬಹಿರಂಗವಾಗಿ ಕಟ್ಟಾ ವಿರುದ್ಧವಾಗಲಿ ಬಿಜೆಪಿ ವಿರುದ್ಧವಾಗಲಿ ತೊಡೆತಟ್ಟಿರಲಿಲ್ಲ. ಯಾವತ್ತು ಪಾಲಿಕೆ ಚುನಾವಣೆ ಘೋಷಣೆಯಾಗಿ ಬಿಜೆಪಿ ಟಿಕೆಟ್ ಹಂಚಿಕೆಯಾಯ್ತೋ ಕೇವಲ ಮುನಿಕೃಷ್ಣರಿಗಷ್ಟೇ ಅಲ್ಲ; ಹೆಬ್ಬಾಳದ ಬಿಜೆಪಿಯೇ ಕುಸಿದು ಬಿತ್ತು.

ಮುನಿಕೃಷ್ಣರ ಹೆಬ್ಬಾಳ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿ ಕ್ರಿಮಿನಲ್ ಜಯಪ್ಪ ರೆಡ್ಡಿಯನ್ನು ಕಟ್ಟಾ ಆಯ್ಕೆ ಮಾಡಿದ್ದ!

ಈ ಜಯಪ್ಪ ರೆಡ್ಡಿ ಮೂಲತಃ ಹೆಬ್ಬಾಳದವನಾದರೂ ಬಿಜೆಪಿಗೆ ಬಂದಿದ್ದು ಕಟ್ಟಾ ಮಂತ್ರಿಯಾದ ನಂತರವೇ. ಮೂಲ ಬಿಜೆಪಿಯವನಲ್ಲ, ಸಂಘ ಪರಿವಾರದ ಗಂಧಗಾಳಿಯಿಲ್ಲ, ಸಭ್ಯನಲ್ಲ, ಒಳ್ಳೆಯ ಹೆಸರಿಲ್ಲ, ಹುಟ್ಟಾ ಕ್ರಿಮಿನಲ್ ಮತ್ತು ನೆಲಕಂಟಕ. ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ ಅದಕ್ಕೆ ನಕಲಿ ದಾಖಲೆ ಸೃಷ್ಟಿಸಿ ಮಾರುವುದು ಜಯಪ್ಪ ರೆಡ್ಡಿಯ ಕುಲಕಸುಬು.

## ವಾರ್ಡ್ ವಾರ್ BBMP

ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ಸಿಕ್ಕಾಪಟ್ಟೆ ಸರ್ಕಾರಿ ಭೂಮಿ ಕಬಳಿಸಿದ ಜಯಪ್ಪ ರೆಡ್ಡಿ ತನ್ನಂತೆಯೇ ಏರ್‌ಪೋರ್ಟ್ ಸುತ್ತಮುತ್ತಲ ಬಡರೈತರ ಆಸ್ತಿಗೆ ವಕ್ಕರಿಸಿದ್ದ ಮಂತ್ರಿ ಕಟ್ಟಾನ ಜೊತೆ ಕೈಜೋಡಿಸಿದ. ಭೂಕಬಳಿಕೆಯೊಂದೇ ಕಟ್ಟಾ ಮತ್ತು ಜಯಪ್ಪ ರೆಡ್ಡಿಗಿರುವ ಸಮಾನ ಆಸಕ್ತಿ ಮತ್ತು ಅಭಿರುಚಿ.

ಹೋಗಲಿ ಬಿಜೆಪಿಗಾದರೂ ಜಯಪ್ಪ ರೆಡ್ಡಿ ನಿಷ್ಠನಾ ಎಂದರೆ ಆತ ಸರ್ವಪಕ್ಷ ಸಂಸಾರಿ. ನಾಳೆ ಕಟ್ಟಾ ಸೋತು ಕಾಂಗ್ರೆಸ್ ಅಧಿಕಾರಕ್ಕೆ ಬಂತೆಂದರೆ ಮತ್ತೊಬ್ಬ ನೆಲಗಳ್ಳ ಕುಪೇಂದ್ರ ರೆಡ್ಡಿಯ ಮನೆಬಾಗಿಲು ಕಾಯುತ್ತಾನೆ. ಯಾರಿಗೂ ಯಾವ ಪಕ್ಷಕ್ಕೂ ಆತ ನಿಷ್ಠನಲ್ಲ, ಅಸಲಿಗೆ ಈತ ಓರ್ವ ಹಳೇ ಕ್ರಿಮಿನಲ್. ಹೆಬ್ಬಾಳ-ಯಲಹಂಕ ವ್ಯಾಪ್ತಿಯಲ್ಲಿ ಒಂದಲ್ಲ ಎರಡು ಕೊಲೆ ಕೇಸುಗಳಲ್ಲಿ ಜೈಲು ಕಂಡು ಬಂದವನು ಕ್ರಮೇಣ ತನ್ನ ರೌಡಿ ಇಮೇಜ್ ಬಳಸಿಕೊಂಡೇ ಲ್ಯಾಂಡ್ ರಾಬರಿಗೆ ನಿಂತ.

ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೋಡಿಗೇಹಳ್ಳಿಯ ನೂರಾರು ಎಕರೆ ಬಡರೈತರ ಭೂಮಿ ದೋಚಲು ಕಟ್ಟಾ ಗ್ಯಾಂಗಿಗೆ ಜಯಪ್ಪ ರೆಡ್ಡಿಯಂಥ ನುರಿತ ಪಾತಕಿಯೇ ಬೇಕಿತ್ತು. ಈತನನ್ನು ಮುಂದಿಟ್ಟುಕೊಂಡೇ ಅಕ್ಕಪಕ್ಕದ ದಲಿತರು, ರೈತರನ್ನು ಬೆದರಿಸಿದ ಕಟ್ಟಾ ಪುಡಿಕಾಸಿಗೆ ಅವರ ಭೂಮಿ ಕಿತ್ತ. ರೈತರ ಪರ ನಿಂತು ಹೋರಾಡಿದ ಡಿ.ಎಸ್. ಗೌಡರಂಥ ರೈತನಾಯಕರನ್ನು ಜಯಪ್ಪ ರೆಡ್ಡಿಯೇ ತನ್ನ ರೌಡಿ ಪಡೆ ಬಿಟ್ಟು ಬಾಯಿಮುಚ್ಚಿಸಿದ.

ಇಂಥ ಹಳೇ ಕ್ರಿಮಿನಲ್‌ಗೆ ಬಿಜೆಪಿ ಟಿಕೆಟ್ಟು ಕೊಟ್ಟು ಹೆಬ್ಬಾಳದಿಂದ ಗೆಲ್ಲಿಸಿ ಕೌನ್ಸಿಲರ್ ಮಾಡುವ ಕಟ್ಟಾ ದುಷ್ಟತನದ ವಿರುದ್ಧ ಸದ್ಯ ಸ್ಥಳೀಯ ಬಿಜೆಪಿಯಷ್ಟೇ ಅಲ್ಲ; ಹೆಬ್ಬಾಳಕ್ಕೆ ಹೆಬ್ಬಾಳವೇ ತಿರುಗಿಬಿದ್ದಿದೆ. ಜಯಪ್ಪ ರೆಡ್ಡಿ ವಿರುದ್ಧ ಮುನಿಕೃಷ್ಣ ಪಕ್ಷೇತರ ಅಭ್ಯರ್ಥಿಯಾಗಿ ನಿಂತಿದ್ದಾರೆ. ವಿಶೇಷವೆಂದರೆ ಸ್ಥಳೀಯ ಬಿಜೆಪಿಯವರಷ್ಟೇ ಅಲ್ಲ, ಬಹುತೇಕ ಕಾಂಗ್ರೆಸ್ ಕಾರ್ಯಕರ್ತರೂ ಮುನಿಕೃಷ್ಣರ ಬೆನ್ನಿಗೆ ನಿಂತುಬಿಟ್ಟಿದ್ದಾರೆ.

ಏಕೆಂದರೆ ಜಯಪ್ಪ ರೆಡ್ಡಿ ಪರ ಕಾಂಗ್ರೆಸ್ ನಾಯಕರಿಗೇ ರೊಕ್ಕ ತಿನ್ನಿಸಿದ ಕಟ್ಟಾ ರಾಮಮೂರ್ತಿ ಎಂಬ ಡೆಮ್ಮಿ ಅಭ್ಯರ್ಥಿಯನ್ನು ಹಾಕಿಸಿಕೊಂಡಿದ್ದ. ಅಸಲಿಗೆ ಕಾಂಗ್ರೆಸ್ ಟಿಕೆಟ್ ಸಿಗಬೇಕಿದ್ದದ್ದು ಸ್ಥಳೀಯ ಯುವ ನಾಯಕ ಆನಂದ್‌ಗೆ. ಅದುಬಿಟ್ಟರೆ ಹೆಬ್ಬಾಳ ವಾರ್ಡ್ ಅಧ್ಯಕ್ಷರಿಗಾದರೂ ಕಾಂಗ್ರೆಸ್ ಟಿಕೆಟ್ ಸಿಗಬೇಕಿತ್ತು. ಈ ಇಬ್ಬರ ಪೈಕಿ ಯಾರೇ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೂ ಜಯಪ್ಪ ರೆಡ್ಡಿ ಮಣ್ಣು ಮುಕ್ಕುತ್ತಿದ್ದ. ಆದರೆ ಕಟ್ಟಾ ರೊಕ್ಕ ತಿನ್ನಿಸಿ ರಾಮಮೂರ್ತಿ ಎಂಬ ಡೆಮ್ಮಿಯನ್ನು ಹಾಕಿಸಿಕೊಂಡ.

ಯಾವತ್ತು ಪಕ್ಷೇತರರಾಗಿ ಮುನಿಕೃಷ್ಣ ನಾಮಪತ್ರ ಸಲ್ಲಿಸಿದರೋ ಕಟ್ಟಾ-ಜಯಪ್ಪ ರೆಡ್ಡಿ ಲೆಕ್ಕಾಚಾರ ತಲೆಕೆಳಕಾಗಿದೆ. ಒಂದೆಡೆ ರೊಚ್ಚಿಗೆದ್ದ ಲೋಕಲ್ ಬಿಜೆಪಿ ಕಾರ್ಯಕರ್ತರು ಮತ್ತೊಂದೆಡೆ ಅತೃಪ್ತ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಈಗ ಮುನಿಕೃಷ್ಣರನ್ನು ಬೆಂಬಲಿಸುತ್ತಿದ್ದಾರೆ. ಜಯಪ್ಪರೆಡ್ಡಿಯ ಅಟ್ಟಹಾಸದ ವಿರುದ್ಧ ಮೊದಲೇ ಹೆಬ್ಬಾಳದ ಜನ ರೊಚ್ಚಿಗೆದ್ದಿದ್ದಾರೆ. ಕಟ್ಟಾ ತಾನೇ ನಿಂತು ರೊಕ್ಕ ಹಂಚಿದರೂ ಜಯಪ್ಪ ರೆಡ್ಡಿ ಗೆಲ್ಲಲಾರ. ನಾಮಕಾವಸ್ತೆಗಷ್ಟೇ ಇಲ್ಲಿ ರೆಡ್ಡಿ ಅಭ್ಯರ್ಥಿಯೇ ಹೊರತು ಹಣಾಹಣಿಯಿರುವುದು ಮುನಿಕೃಷ್ಣ ಮತ್ತು ಕಟ್ಟಾ ಮಧ್ಯೆಯೇ.

ಪಕ್ಷೇತರ ಅಭ್ಯರ್ಥಿ ಮುನಿಕೃಷ್ಣ ಗೆದ್ದಿದ್ದೇ ಆದರೆ ಅದು ಹೆಬ್ಬಾಳದ ಮಟ್ಟಿಗೆ ಕಟ್ಟಾ ಶವಪೆಟ್ಟಿಗೆಗೆ ಬಿದ್ದ ಮೊದಲ ಮೊಳೆಯಾಗುತ್ತದೆ. ಸದ್ಯದ ಟ್ರೆಂಡ್ ನೋಡಿದರೆ ಈ ಬಾರಿ ಹೆಬ್ಬಾಳದ ಜನ ಮುನಿಕೃಷ್ಣರನ್ನು ಗೆಲ್ಲಿಸುವ ಸಾಧ್ಯತೆಯೇ ಹೆಚ್ಚಿದೆ. ●

## ಹೆಬ್ಬಾಳದ ಬಿಜೆಪಿಗೆ ಕಟ್ಟಾನೇ ಕಂಟಕ

ಇಡೀ ಹೆಬ್ಬಾಳದುದ್ದಕ್ಕೂ ಮುನಿಕೃಷ್ಣರ ಒಬ್ಬೇ ಒಬ್ಬ ಅನುಯಾಯಿಗೆ ಬಿಜೆಪಿ ಟಿಕೆಟ್ ದಕ್ಕದ ಹಾಗೇ ಮಾಡಿದ ಕಟ್ಟಾ ದುರ್ಬುದ್ಧಿಗೆ ಈ ಬಾರಿ ಹೆಬ್ಬಾಳದ ಮತದಾರರೇ ತಕ್ಕ ಪಾಠ ಕಲಿಸಲಿದ್ದಾರೆ.

ವಿದ್ಯಾರಣ್ಯಪುರ ವಾರ್ಡಿಗೆ ಸ್ಥಳೀಯ ಬಿಜೆಪಿ ಕಾರ್ಯಕರ್ತೆ ಶೈಲಜಾಗೆ ಬಿಜೆಪಿ ಟಿಕೆಟ್ ಸಿಕ್ಕಬೇಕಿತ್ತು. ಎಷ್ಟೆಂದರೂ ಆಕೆ ಮುನಿಕೃಷ್ಣರ ಶಿಷ್ಯೆ. ಜಿದ್ದಿಗೆ ಬಿದ್ದ ಕಟ್ಟಾ ಶೈಲಜಾ ಬದಲಿಗೆ ಶ್ರೀನಿವಾಸ್ ಎಂಬಾತನ ಪತ್ನಿ ನಂದಿನಿಗೆ ಟಿಕೆಟ್ ಕೊಟ್ಟಿದ್ದಾರೆ. ಈಕೆ ಬಿಜೆಪಿ ಕಾರ್ಯಕರ್ತೆಯಲ್ಲ, ಮನೆಬಿಟ್ಟು ಆಚೆಗೆ ಕಾಲಿಟ್ಟವಳೇ ಅಲ್ಲ. ಶೈಲಜಾಗೆ ಅಲ್ಲದೇ ಹೋದರೂ ಬಿಜೆಪಿಗಾಗಿ ದುಡಿದ ಇನ್ನೂ ಅನೇಕ ಮಹಿಳೆಯರಿದ್ದರು. ಅಷ್ಟಕ್ಕೂ ನಂದಿನಿಯ ಗಂಡ ಶ್ರೀನಿವಾಸ್ ಸ್ಥಳೀಕನಲ್ಲ, ಬಿಜೆಪಿಯ ನಿಷ್ಠನೂ ಅಲ್ಲ.

ಬ್ಯಾಟರಾಯನಪುರ ವಾರ್ಡಿಗೆ ಯಲಹಂಕ ತಾಲ್ಲೂಕು ಬಿಜೆಪಿ ಅಧ್ಯಕ್ಷನಾಗಿದ್ದ ನಂಜಪ್ಪನ ಪತ್ನಿಗೆ ಟಿಕೆಟ್ ಕೊಡಬೇಕಿತ್ತು. ಏಕೆಂದರೆ ಜೀವನಪರ್ಯಂತ ಬಿಜೆಪಿಗಾಗಿ ಹೆಣಗಾಡಿದ್ದ ನಂಜಪ್ಪ ಬ್ಯಾಟರಾಯನಪುರಕ್ಕಲ್ಲದೇ ಹೋದರೂ ಪಕ್ಕದ ಕೆಂಪಾಪುರಕ್ಕಾದರೂ ತನಗೆ ಟಿಕೆಟ್ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ. ಆದರೆ ಕಟ್ಟಾಗೆ ಬಿಜೆಪಿ ನಿಷ್ಠರಿಗಿಂತಲೂ ತನ್ನ ಮನೆಚಾಕರಿ ಮಾಡುವವರು ಬೇಕು. ಅದಕ್ಕೆ ಬ್ಯಾಟರಾಯನಪುರಕ್ಕೆಂದು ದೂರದ ಜೋಗುಪಾಳ್ಯದ ಮಂಗಳಾ ಶ್ರೀಧರ್ ಎಂಬಾಕೆಯನ್ನು ಕರೆಸಿ ಆಕೆಗೆ 'ಬಿ' ಫಾರ್ಮ್ ಕೊಟ್ಟ. ಈ ಮಂಗಳಾ ಶ್ರೀಧರ್ ಜಾತಿಯಲ್ಲಿ ಬ್ರಾಹ್ಮಣೆ. ತಾನು ಪರಿಶಿಷ್ಟ ಪಂಗಡದವಳೆಂದು ನಕಲಿ ಜಾತಿ ಪತ್ರ ಕೊಟ್ಟಿದ್ದಾಳೆ. ಕನಿಷ್ಠ ರಾಧಾಕೃಷ್ಣ ವಾರ್ಡಿಗಾದರೂ ನಂಜಪ್ಪನಿಗೆ ಟಿಕೆಟ್ ಕೊಡಬೇಕಿತ್ತು, ಆದರೆ ಕಟ್ಟಾ ಟಿಕೆಟ್ ಕೊಟ್ಟಿದ್ದು ತನ್ನ ಛೇಲಾ ಜಯಪ್ಪರೆಡ್ಡಿಯ ಬಂಟ ವೆಂಕಟೇಶ್‌ಗೆ. ಹಾಗೇ ಕೆಂಪಾಪುರ ವಾರ್ಡಿಗೆ ನಂಜಪ್ಪನವರ ಪತ್ನಿಯನ್ನು ಕೈಬಿಟ್ಟು ಮಂಜು ಎಂಬ ಮಾಜಿ ಕೌನ್ಸಿಲರ್ ಪತ್ನಿಗೆ ಕಟ್ಟಾ ಟಿಕೆಟ್ ಕೊಟ್ಟಿದ್ದಾನೆ.

ಪಕ್ಕದ ವಿಶ್ವನಾಥ ನಾಗೇನಹಳ್ಳಿಯದೂ ಇದೇ ಕತೆ. ಅಲ್ಲಿ ನಿಷ್ಠಾವಂತ ಬಿಜೆಪಿಗಳ ದಂಡೆ ಇದ್ದಾದರೂ ಅವರ್‍ಯಾರನ್ನೂ ಲೆಕ್ಕಿಸದೇ ತನಗೆ ಚಾಕರಿ ಮಾಡಿಕೊಂಡಿದ್ದ ಬಂಟನೊಬ್ಬನ ಮಗಳೆಂದು ಮಮತಾ ರವಿ ಎಂಬಾಕೆಯನ್ನು ಕಟ್ಟಾ ನಿಲ್ಲಿಸಿದ್ದಾನೆ. ಇದಕ್ಕೂ ಜಯಪ್ಪ ರೆಡ್ಡಿಯದೇ ಪೌರೋಹಿತ್ಯವಂತೆ. ಕ್ರಿಮಿನಲ್ ಜಯಪ್ಪ ರೆಡ್ಡಿಯ ಮಾತು ಕೇಳಿ ಮೂಲ ಬಿಜೆಪಿಯವರನ್ನೇ ಮೂಲೆಗುಂಪು ಮಾಡಿದ ಕಟ್ಟಾ ಅವನತಿ ದೂರವೇನಿಲ್ಲ.

ಸದ್ಯ ಕಾರಿನ ಚಾಲಕನನ್ನು ಬಿಟ್ಟರೆ ಜಯಪ್ಪರೆಡ್ಡಿಯ ಬೆನ್ನಿಗೆ ಹೆಬ್ಬಾಳದ ನರಪಿಳ್ಳೆ ಕೂಡ ಉಳಿದಿಲ್ಲ.

# ರಾಜರಾಜೇಶ್ವರಿನಗರ: ಭೂಗಳ್ಳನೇ ಇಲ್ಲಿ ಬಿಜೆಪಿ ಅಭ್ಯರ್ಥಿ

ಮೈಸೂರು ರಸ್ತೆಯಲ್ಲಿ ಶುರುವಾಗಿ ನೈಸ್ ರಸ್ತೆಯಲ್ಲಿ ಕೊನೆಗೊಳ್ಳುವ ಅತೀ ದೊಡ್ಡದಾದ ರಾಜರಾಜೇಶ್ವರಿನಗರ ವಾರ್ಡಿನಲ್ಲಿ ಹಣ ಮತ್ತು ಹೆಂಡಕ್ಕೆ ಏನೇನೂ ಕೊರತೆಯಿಲ್ಲದಂತೆ ಮಾಡಿರುವ ಪುಣ್ಯಾತ್ಮನ ಹೆಸರು ಜಿ.ಎಚ್. ರಾಮಚಂದ್ರ!

ಈತ ಬಿಜೆಪಿ ಅಭ್ಯರ್ಥಿ. ಸಾಕ್ಷಾತ್ ಶ್ರೀರಾಮಚಂದ್ರನೇ ನಾಚಿಕೊಳ್ಳಬೇಕು. ಪ್ರತಿ ಸಂಜೆಯಾದರೆ ಕನಿಷ್ಠ ಐನೂರು ಮಂದಿಗೆ ಗುಂಡು ತುಂಡು. ತನ್ನ ಜೊತೆ ಪ್ರಚಾರಕ್ಕೆ ಬರುವ ಪ್ರತಿ ವ್ಯಕ್ತಿಗೆ ದಿನಕ್ಕೆ ಐನೂರು ರೂಪಾಯಿ. ಮೈಸೂರು ರಸ್ತೆಯ ಮೂರು ಬಾರುಗಳಲ್ಲಿ ಎಣ್ಣೆಗಿರಾಕಿಗಳಿಗೆಂದೇ ಕೂಪನ್ ವ್ಯವಸ್ಥೆ. ಮತ್ತು ಪ್ರತಿ ಮನೆಗೂ ಕನಿಷ್ಠ ಐನೂರು ರೂಪಾಯಿ!'


ಇದು ರಾಮಚಂದ್ರ ರಾಜರಾಜೇಶ್ವರಿ ನಗರದ ಮತದಾರರಿಗೆ ಕಲ್ಪಿಸಿದ ವಿಶೇಷ ಸೌಲಭ್ಯಗಳು. ಬಹುಶಃ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಗ ಜಗ್ಗನನ್ನು ಹೊರತುಪಡಿಸಿದರೆ ಬಿಜೆಪಿ ಪರವಾಗಿ ಅತೀ ಹೆಚ್ಚು ಕಾಸು ಮತ್ತು ಹೆಂಡ ವಿತರಿಸುತ್ತಿರುವವನು ರಾಮಚಂದ್ರನೇ. ಹಿಂದೆ ಪಟ್ಟಣಗೆರೆ ಸಿಎಂಸಿಗೆ ಅಧ್ಯಕ್ಷನಾಗಿದ್ದ ಇದೇ ರಾಮಚಂದ್ರ ಲೋಕಾಯುಕ್ತ ವೆಂಕಟಾಚಲರ ಕೈಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ. ಆವತ್ತು ಸಿಎಂಸಿಗಳಿಗೆ ನಡೆದ 240 ಕೋಟಿ ರೂಪಾಯಿಗಳ ಹಗರಣದ ಪಾತ್ರಧಾರಿಗಳ ಪೈಕಿ ಈತನೂ ಒಬ್ಬ. ಈತನ ಬಂಗಲೆಯೊಂದೇ ಸಾಕು, ಈತ ಎಂಥಾ ದಕಾಯಿತನೆಂಬುದಕ್ಕೆ. ಮೈಸೂರು ಅರಮನೆಗೆ ಕೊಂಚ ಮಾತ್ರ ಕಮ್ಮಿಯೆಂಬಂತಿರುವ ಈತನ ರಾಜರಾಜೇಶ್ವರಿನಗರದ ಬಂಗಲೆಯೇ 10 ಕೋಟಿಯ ಸೊತ್ತಾಗುತ್ತದೆ. ಮನೆ ಮುಂದೆ ಒಂದು ಎಕರೆಯಷ್ಟಿರುವ ಪಾರ್ಕ್ ನೋಡಿಯೇ ಶೋಭಾ ಕರಂದ್ಲಾಜೆ ದಂಗುಬಡಿದರಂತೆ!

ಇಂಥಾ ರೊಕ್ಕಸ್ಥನಿಗಲ್ಲದೇ ಬಿಜೆಪಿ ಇನ್ನಾರಿಗೆ ಟಿಕೆಟ್ ಕೊಡಬೇಕು? ರಾಜರಾಜೇಶ್ವರಿನಗರದ ಬಿಜೆಪಿ ಶಾಸಕ ಎಂ. ಶ್ರೀನಿವಾಸ್ ಈತನಿಗೆ ಟಿಕೆಟ್ ತಪ್ಪಿಸಲು ಏನೆಲ್ಲಾ ಸರ್ಕಸ್ ಮಾಡಿದರೂ ಪ್ರಯೋಜನವಾಗಲಿಲ್ಲವಂತೆ. ಏಕೆಂದರೆ ಈತ ಮಂತ್ರಿ ಅಶೋಕ್ ಸಾಹೇಬರ ನಂಬಿಕಸ್ತ ಬಂಟ!

ಇಲ್ಲಿಗೆ 25 ವರ್ಷದ ಹಿಂದೆ ಬಾಪೂಜಿನಗರದ ಕಿರಾಣಿ ಅಂಗಡಿಯೊಂದರಲ್ಲಿ ಪೊಟ್ಟಣ ಕಟ್ಟಿಕೊಂಡಿದ್ದು ಒಪ್ಪೊತ್ತು ಊಟಕ್ಕೂ ಇಟ್ಟಾಡುತ್ತಿದ್ದ ರಾಮಚಂದ್ರ ಯಾವ ಮುಖ್ಯಮಂತ್ರಿಯೂ ಕಟ್ಟಿಸಲಾಗದಷ್ಟು ಅಸಾಧಾರಣ ಬಂಗಲೆ ಕಟ್ಟಿಸುವ ಮಟ್ಟಕ್ಕೆ ಬೆಳೆದದ್ದೇ ರೋಚಕ ಕತೆಯಾಗುತ್ತದೆ.

ಹಾಗೇ ಕಿರಾಣಿ ಅಂಗಡಿಯಲ್ಲಿ ದಿನಗೂಲಿಗಿದ್ದ ರಾಮಚಂದ್ರ ಒಂದಷ್ಟು ದಿನ ಹಾಲು ಹಾಕಿದ್ದು ಬಿಟ್ಟರೆ ಮಿಕ್ಕಂತೆ ಫುಲ್‌ಟೈಮ್ ನೆಲಗಳ್ಳನತಕ್ಕಿಳಿದದ್ದು 1995 ರಲ್ಲಿ. ಅದಕ್ಕೂ ಮುನ್ನ ಸ್ಲಂ ರಮೇಶ್ ಪಟಾಲಮ್ಮಿನಲ್ಲಿದ್ದ. ಬಂಗಾರಪ್ಪ ಸಂಪುಟದಲ್ಲಿ ಮಂತ್ರಿಯಾಗಿದ್ದ ಸ್ಲಂ ರಮೇಶ್‌ನ ಪಾಲುದಾರನಂತಿದ್ದವನು ನಟೋರಿಯಸ್ ಪಾತಕಿ ಮತ್ತು ಎಲ್ಟಿಟಿಇ ಬೆಂಬಲಿಗನಾಗಿದ್ದ ಬೆಸ್ಟ್‌ಕ್ಲಬ್ ಅರುಣಾಚಲಂ. ಈತನಿಗೆ ಲ್ಯಾಂಡ್ ಬ್ರೋಕರ್‌ನಂತೆ ರೈತರನ್ನು ಯಾಮಾರಿಸಿ ಭೂಮಿ ಕೊಡಿಸುತ್ತಿದ್ದದ್ದು ಇದೇ ರಾಮಚಂದ್ರ. ಸಿಕ್ಕಾಪಟ್ಟೆ ಕಮಿಷನ್ ಹೊಡೆದು ರೈತರನ್ನು ಮುಂಡಾಯಿಸಿದ ದುಡ್ಡಲ್ಲಿ ತಾನೂ ಒಂದಷ್ಟೂ ಜಮೀನು ಖರೀದಿಸಿದ. ಅರುಣಾಚಲಂನ ಯಾವುದೇ ಭೂಮಿಯ ಡಿಸ್‌ಪ್ಯೂಟ್ ಇತ್ತೆಂದರೆ ತಾನೇ ರೌಡಿಗಳನ್ನೊಯ್ದು ಬಡಿದಾಡುತ್ತಿದ್ದ. ಆ ಹೊತ್ತಿಗೆ ಉತ್ತರಹಳ್ಳಿಯ ಆಶ್ರಯ ಕಮಿಟಿಗೆ ಇದೇ ಅರುಣಾಚಲಂ ಅಧ್ಯಕ್ಷನಾಗಿದ್ದ. ಆತನ ಜೊತೆ ಸೇರಿದ ರಾಮಚಂದ್ರ ಎಲ್ಲೆಲ್ಲಿ ಸರ್ಕಾರಿ ಜಮೀನಿತ್ತೋ ಅದೆಲ್ಲವನ್ನೂ ನುಂಗಿ ಅರುಣಾಚಲಂನ ಜೊತೆ ಹಂಚಿಕೊಂಡ.

ಇದು ರಾಮಚಂದ್ರನ ಸಂಪತ್ತಿನ ಮೂಲ. ಹೀಗೆ ಆಶ್ರಯ ಜಮೀನು ನುಂಗೀ ಕುಬೇರನಾದ ರಾಮಚಂದ್ರ ಮುಂದೆ ಜನತಾದಳ ಸೇರಿ ಶ್ರೀನಿವಾಸ್ ಬಿಜೆಪಿಗೆ ಬರುತ್ತಿದ್ದಂತೆ ಆರ್. ಅಶೋಕ್ ಶಿಷ್ಯನಾದ. ಅದೇನಾಯಿತೋ ಅಶೋಕ್ ಜೊತೆ ಬಿದ್ದಿದ್ದೇ ರಾಮಚಂದ್ರನ ಗೆಟಪ್ಪೇ ಬದಲಾಯಿತು. ಆತನಕ ಯಕಶ್ಚಿತ್ ಲ್ಯಾಂಡ್ ಬ್ರೋಕರ್ ಆಗಿದ್ದವನು ಬಿಜೆಪಿಯ ಲೀಡರ್ ಆದ. ಪಟ್ಟಣಗೆರೆ ಸಿಎಂಸಿಗೆ ಅಧ್ಯಕ್ಷನಾಗಿ ಕೋಟಿಗಟ್ಟಲೇ ದೋಚಿದ. ಬಹುಶಃ ಸಿಎಂಸಿ ಕರ್ಮಕಾಂಡ ಅಥವಾ ಆಶ್ರಯ ಭೂಕಬಳಿಕೆ ಬಗ್ಗೆ ತನಿಖೆಯಾಗಿದ್ದರೆ ರಾಮಚಂದ್ರ ಯಾವತ್ತೋ ಜೈಲು ಪಾಲಾಗಬೇಕಿತ್ತು.



ರಾಜ್‌ಕುಮಾರ್

ಇವತ್ತು ತನ್ನ ಬಂಗಲೆಯಷ್ಟೇ ಐಷಾರಾಮಿಯ ಗೆಸ್ಟ್ ಹೌಸ್ ಒಂದನ್ನು ಕುಂಬಳಗೋಡು ಬಳಿಯ ಗವಿಪುರದಲ್ಲಿ ರಾಮಚಂದ್ರ ಕಟ್ಟಿಸಿದ್ದಾನೆ. ಅದು ಸಂಜೆಯ ಶೋಕಿಗೆಂದೇ ಇರುವ ರೆಸಾರ್ಟ್ ಮಾದರಿಯ ಅಡ್ಡೆ. ಅಲ್ಲಿಗೆ ಮಂತ್ರಿ ಅಶೋಕ್ ಕೂಡ ಬರುತ್ತಾರಂತೆ. ಈ ಎಲ್ಲಾ ವ್ಯವಸ್ಥೆ ಮಾಡಿಕೊಂಡೇ ರಾಮಚಂದ್ರ ರಾಜರಾಜೇಶ್ವರಿ ನಗರ ಸುತ್ತಮುತ್ತ ಒಟ್ಟು 60 ಎಕರೆ ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಮಾರಿ ಹಾಕಿದ್ದಾನೆ. ಸರ್ಕಾರಿ ಭೂಕಬಳಿಕೆಗೆ ಸಂಬಂಧಪಟ್ಟಂತೆ ಎ.ಟಿ. ರಾಮಸ್ವಾಮಿ ಆಯೋಗ ಪತ್ತೆಹಚ್ಚಿದ ನಟೋರಿಯಸ್ ಭೂಗಳ್ಳರ ಪೈಕಿ ಈತನೂ ಒಬ್ಬ. ಈತನ 10 ಕೋಟಿಯ ಬಂಗಲೆ ಕೂಡ ದೋಚಿದ ಸರ್ಕಾರಿ ಆಸ್ತಿಯೇ. ಹೀಗೆ ಯಾರ್‍ಯಾರದೋ ಆಸ್ತಿ ದೋಚಲೆಂದೇ ರೌಡಿ ಗ್ಯಾಂಗ್ ಒಂದನ್ನು ಕಟ್ಟಿಕೊಂಡ. ಈಗ ಈತನ ಪರಪ್ರಚಾರಕ್ಕಿಳಿದಿರುವುದು ಇದೇ ರೌಡಿ ಪಡೆಯೇ.

ಇಂಥವನನ್ನು ರಾಜರಾಜೇಶ್ವರಿನಗರದ ಕೌನ್ಸಿಲರ್ ಮಾಡುವ ಬಿಜೆಪಿಯ ದುರಾಚಾರಕ್ಕೆ ಸದ್ಯ ಸ್ಥಳೀಯ ಬಿಜೆಪಿ ಕಾರ್ಯಕರ್ತರೇ ತಿರುಗಿಬಿದ್ದಿದ್ದಾರೆ. ಈತನ ವಿರುದ್ಧ ಜೆಡಿಎಸ್ ಗೋವಿಂದರಾಜು ಎಂಬ ಡೆಮ್ಮಿ ಅಭ್ಯರ್ಥಿಯನ್ನು ಹಾಕಿದೆ. ಆದರೆ ಕಾಂಗ್ರೆಸ್ ಅಭ್ಯರ್ಥಿ ಎಂ. ರಾಜ್‌ಕುಮಾರ್ ಹಾಗಲ್ಲ, ಆವತ್ತಿನಿಂದಲೂ ರಾಜರಾಜೇಶ್ವರಿನಗರದ ಪ್ರತಿನಿತ್ಯದ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಬಂದವರು. ಸದ್ಯ ಇಲ್ಲಿನ ಮೂಲ ಬಿಜೆಪಿ ಕಾರ್ಯಕರ್ತರೆಲ್ಲ ರಾಜ್‌ಕುಮಾರ್ ಬೆನ್ನಿಗೆ ನಿಂತಿದ್ದಾರೆ. ಏಕೆಂದರೆ ರಾಮಚಂದ್ರನಿಗಿಂತಲೂ ಯೋಗ್ಯರೂ ನಿಷ್ಠರೂ ಪ್ರಾಮಾಣಿಕರಾಗಿದ್ದ ಬಸವರಾಜ್, ಚನ್ನಸಂದ್ರದ ನರಸಿಂಹಯ್ಯ ಮತ್ತು ಹಲಗೆ ವಡೇರಹಳ್ಳಿ ಮಂಜು ಥರದವರಿಗೆ ಬಿಜೆಪಿ ಟಿಕೆಟ್ ಕೊಟ್ಟಿಲ್ಲ.

ಭೂಮಿ ದೋಚಿದ ದುಡ್ಡಲ್ಲೇ ಎಲೆಕ್ಷನ್ ಗೆದ್ದು ಆ ಅಧಿಕಾರ ಬಲದಿಂದಲೇ ತನ್ನೆಲ್ಲಾ ಭೂಕಬಳಿಕೆಯನ್ನು ಮುಚ್ಚಿ ಹಾಕುವ ರಾಮಚಂದ್ರನ ದುರಾಸೆಗೆ ರಾಜರಾಜೇಶ್ವರಿನಗರದ ಜನ ತಕ್ಕ ಉತ್ತರ ಕೊಡುವುದಂತೂ ಗ್ಯಾರಂಟಿ. ●

# ಯಡಿಯೂರು ವಾರ್ಡ್ ದಳದವನು ರೌಡಿ ಕಾಂಗ್ರೆಸ್ಸಿನವನು ಪೋಲಿ ಬಿಜೆಪಿಯ ರಮೇಶ್ ಬೆಟರ್

ಯಡಿಯೂರು ವಾರ್ಡಿನಲ್ಲಿ ಬಿಜೆಪಿ ಈಗಾಗಲೇ ಮೇಲುಗೈ ಸಾಧಿಸಿದೆ. ಇಲ್ಲಿನ ಬಿಜೆಪಿ ಅಭ್ಯರ್ಥಿ ಎನ್.ಆರ್. ರಮೇಶ್‌ರ ಬಿರುಸಿನ ಪ್ರಚಾರ, ಪಾಪ್ಯುಲಾರಿಟಿ ಹಾಗೂ ಸಜ್ಜನಿಕೆಯ ಎದುರು ದಳ ಹಾಗೂ ಕಾಂಗ್ರೆಸ್ ಕ್ಯಾಂಡಿಡೇಟುಗಳು ಡಲ್ಲು ಹೊಡೆಯುತ್ತಿದ್ದಾರೆ. ಯಡಿಯೂರಿಗೆ ಅಭ್ಯರ್ಥಿಯನ್ನು ಆರಿಸುವಾಗ ದಳ ಹಾಗೂ ಕಾಂಗ್ರೆಸ್ ಮಾಡಿಕೊಂಡಿರುವ ಯಡವಟ್ಟುಗಳೇ ಇಲ್ಲಿ ಬಿಜೆಪಿ ಗೆಲುವಿಗೆ ಸಹಾಯ ಮಾಡುತ್ತಿದೆ. ಜೆಡಿಎಸ್‌ನ ಗೋವರ್ಧನ್‌ಗಿರುವ ರೌಡಿ ಇಮೇಜು ಹಾಗೂ ಕುಡಿತದ ಚಟಗಳ ಬಗ್ಗೆ ಕತೆಗಳೇ ಇವೆ.


ರಮೇಶ್

ಕಬಡ್ಡಿ ಬಾಬು ಶಿಷ್ಯನಾದ ಗೋವರ್ಧನ್ ಇರುವುದು ಕುಮಾರಸ್ವಾಮಿ ಕ್ಯಾಂಪ್‌ನಲ್ಲಿ ಈತ ಆಕಸ್ಮಾತ್ ಗೆದ್ದರೆ ಈತನನ್ನು ಹುಡುಕಿಕೊಂಡು ಹಗಲು ಹೊತ್ತಿನಲ್ಲಾದರೆ ಕುಮಾರಸ್ವಾಮಿ ಲೇಔಟ್‌ತನಕ ಅಲೆಯಬೇಕು. ...ನ್ನು ರಾತ್ರಿಯಾದರೆ ಗೋವರ್ಧನ ಯಾವ ಬಾರ್‌ನಲ್ಲಿ ಕೂತಿರುತ್ತಾನೋ ...ದು ಜನ ಈಗಾಗಲೇ ನಿರಾಸಕ್ತಿ ತಾಳಿದ್ದಾರೆ.

ಇನ್ನು ಕಾಂಗ್ರೆಸ್ ಅಭ್ಯರ್ಥಿ ...ಮಣ್ಣನದೂ ಇದೇ ಕತೆ. ಈತ ...ಲತಃ ವಿಲ್ಸನ್ ಗಾರ್ಡನ್ ವಾಸಿ. ...ಡಿಯೂರಿನವರಿಗೆ ವಿಲ್ಸನ್ ಗಾರ್ಡನ್ ...ರ ಎಂಬುದಕ್ಕಿಂತ ಶಾಮಣ್ಣ ಬಾಯಿ ...ದರೆ ಉದುರುವ 'ಅಮ್ಮ ಅಕ್ಕ' ಹಲ್ಕಾ ...ತುಗಳನ್ನು ಕೇಳಿದರೆ ಸಾಕು ಸಜ್ಜನರು ...ದೂರ ಓಡಿಹೋಗಬೇಕಾಗುತ್ತದೆ. ಇವರಿಬ್ಬರಿಗೆ ಹೋಲಿಸಿದರೆ ...ಜೆಪಿಯ ಎನ್.ಆರ್. ರಮೇಶ್ ನೂರು ಪಾಲು ವಾಸಿ. ಕಳೆದ 20 ...ರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿರುವ ರಮೇಶ್ ಎಜುಕೇಟೆಡ್ ...ನುಷ್ಯ. ಸಭ್ಯ ವ್ಯಕ್ತಿ. ಒಂದು ದಶಕದ ಹಿಂದೆ ಕಾಂಗ್ರೆಸ್‌ನಲ್ಲಿದ್ದ ...ರು ಅಲ್ಲಿ ತುಳಿಯುವವರೇ ಜಾಸ್ತಿಯಿದ್ದ ಕಾರಣ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿ ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ.

ಯಡಿಯೂರು ವಾರ್ಡ್ ವ್ಯಾಪ್ತಿಗೆ ತ್ಯಾಗರಾಜನಗರ, ಶಾಸ್ತ್ರಿನಗರ, ಯಡಿಯೂರು, ಜಯನಗರ 3, 6 ಹಾಗೂ 9ನೇ ಬ್ಲಾಕ್‌ಗಳು ಟಾಟಾ ಸಿಲ್ಕ್ ಫಾರಂ, ಸಾಕಮ್ಮ ಗಾರ್ಡನ್ ಏರಿಯಾಗಳು ಬರುತ್ತವೆ. ಒಟ್ಟು 36 ಸಾವಿರದಷ್ಟು ಮತದಾರರಿದ್ದಾರೆ. ಕಳೆದ ಬಾರಿ ಇಲ್ಲಿಂದ ಕಾಂಗ್ರೆಸ್ಸಿನ ವೆಂಕಟೇಶ್ ರೆಡ್ಡಿ ಗೆದ್ದಿದ್ದರು. ಈ ಬಾರಿ ಕ್ಯಾಟಗರಿ ಬದಲಾದ ಕಾರಣ ರೆಡ್ಡಿಗೆ ಬದಲಾಗಿ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯನವರ ಶಿಷ್ಯ ಶಾಮಣ್ಣ ಟಿಕೆಟ್ ಗಿಟ್ಟಿಸಿದ್ದಾರೆ. 2001ರಲ್ಲಿ ಪಟ್ಟಾಭಿರಾಮ ನಗರ ವಾರ್ಡ್‌ನಿಂದ ಸ್ಪರ್ಧಿಸಿ ಸೋತಿದ್ದ ಶಾಮಣ್ಣಗೆ ವೈಯಕ್ತಿಕ ವರ್ಚಸ್ಸು ಇಲ್ಲ. ಮತದಾರರಿಗಿರಲಿ ಅಸಲಿಗೆ ಪಾರ್ಟಿ ವರ್ಕರುಗಳಿಗೇ ಶಾಮಣ್ಣನ ನೇರ ಪರಿಚಯವಿಲ್ಲ.

ಇನ್ನು ಜೆಡಿಎಸ್‌ನ ಗೋವರ್ಧನ ಈ ಮೊದಲು ಪದ್ಮನಾಭನಗರದಿಂದ ಸ್ಪರ್ಧಿಸಿ ಸೋತವನು.. ಹೀಗೆ ಕಾಂಗ್ರೆಸ್ ಹಾಗೂ ದಳ ಕ್ಯಾಂಡಿಡೇಟುಗಳು ಬೇರೆ ಎಲ್ಲೆಲ್ಲೋ ಎಲೆಕ್ಷನ್‌ಗೆ ನಿಂತು ಸೋತು ಈಗ ಯಡಿಯೂರು ವಾರ್ಡ್‌ಗೆ ವಲಸೆ ಬಂದಿರುವುದೇ ಅವರಿಗೆ ಅನಾನುಕೂಲಕರ ಅಂಶವಾಗಿದೆ.


ಮತ್ತೊಂದೆಡೆ ಬಿಜೆಪಿಯ ರಮೇಶ್ ಯಡಿಯೂರು ವಾರ್ಡ್‌ನ ಇಂಚಿಂಚೂ ಬಲ್ಲಾತ. ಪದ್ಮನಾಭನಗರದ ಬಿಜೆಪಿ ಶಾಸಕ ಕಂ ಸಾರಿಗೆ ಸಚಿವ ಅಶೋಕರ ಮೇಲೆ ಒತ್ತಡ ಹಾಕಿ ಈಗಾಗಲೇ ಯಡಿಯೂರಿನಲ್ಲಿ 45 ಕೋಟಿ ರೂಪಾಯಿಗಳ ಕೆಲಸ ಮಾಡಿಸಿದ್ದಾರೆ. ವಾರ್ಡ್ ಏರಿಯಾದ ಪ್ರತಿಯೊಂದು ಕಡೆಯೂ ಟಾರ್ ರಸ್ತೆ, ಬೀದಿ ದೀಪ, ಉತ್ತಮ ಚರಂಡಿ ಹಾಗೂ ಕಸ ವಿಲೇವಾರಿ ಕಾಮಗಾರಿಗಳು ಆಗುವಂತೆ ನೋಡಿಕೊಂಡಿದ್ದಾರೆ. ರಮೇಶ್‌ಗೆ ಇವೆಲ್ಲಾ ಪ್ಲಸ್ ಪಾಯಿಂಟ್‌ಗಳು. ಇದರ ಜೊತೆಯಲ್ಲಿ ವಾರ್ಡ್‌ನ ಅನೇಕ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಣ ಸಹಾಯ ಮಾಡುತ್ತಿರುವ ರಮೇಶ್ ತಮ್ಮ ಸರಳತೆ, ಸೌಜನ್ಯದ ವ್ಯಕ್ತಿತ್ವದಿಂದಲೇ ಮಾಸ್ ಲೀಡರ್ ಆಗಿ ಬೆಳೆದುಬಂದಿದ್ದಾರೆ. ಯಡಿಯೂರು ವಾರ್ಡ್‌ನಲ್ಲಿ ಮೂವತ್ತಾರು ಸಾವಿರ ಮತದಾರರ ಪೈಕಿ ಬಿಜೆಪಿಯ ಸಾಂಪ್ರದಾಯಿಕ ಬೆಂಬಲಿಗರು ತ್ಯಾಗರಾಜನಗರ, ಶಾಸ್ತ್ರಿನಗರ, ಜಯನಗರ, ಯಡಿಯೂರುಗಳಲ್ಲಿ ಮೆಜಾರಿಟಿ ಸಂಖ್ಯೆಯಲ್ಲಿದ್ದಾರೆ. ಹೀಗೆ ವೈಯಕ್ತಿಕ ವರ್ಚಸ್ಸು ಹಾಗೂ ಬಿಜೆಪಿ ಪಾರ್ಟಿಯ ಬೆಂಬಲ ಎರಡೂ ಇರುವ ರಮೇಶ್ ಈಗ ಮೇಲುಗೈ ಸಾಧಿಸಿದಂತೆ ಕಾಣುತ್ತಿದೆ.


ವಾರ್ಡ್ ವಾರ್ BBMP

ರಮೇಶ್ ಗೆದ್ದು ಬೆಂಗಳೂರಿನ ಉತ್ತಮ ಕಾರ್ಪೋರೇಟರ್‌ಗಳ ಪೈಕಿ ಒಬ್ಬರೆನಿಸಿಕೊಂಡರೆ ಏನೂ ಆಶ್ಚರ್ಯವಿಲ್ಲ. ●

# ಬೈರಸಂದ್ರ: ಪಾರ್ಕ್ ನಾಗರಾಜು ಮುಂದೆ ಡೆಮ್ಮಿಗಳು


ನಾಗರಾಜು




ಮಹಮ್ಮದ್ ರಸೂಲ್

ಒಬ್ಬ ಕಳ್ಳ ಮತ್ತೊಬ್ಬ ಸುಳ್ಳ, ಇವರಿಬ್ಬರಲ್ಲಿ ಯಾರು ಹಿತವರೆಂದರೆ ಜನ ಹಣೆ ಚಚ್ಚಿಕೊಳ್ಳದೇ ಇನ್ನೇನು ಮಾಡಲು ಸಾಧ್ಯ?

ಸದ್ಯ ಬೈರಸಂದ್ರ ವಾರ್ಡಿನ ಪರಿಸ್ಥಿತಿಯಿದು. ಬಿಜೆಪಿ ಬಗ್ಗೆ ಜನಕ್ಕೆ ಏನೇ ಮುನಿಸಿದ್ದರೂ ಇಲ್ಲಿ ಬಿಜೆಪಿಯ ಹೊರತಾಗಿ ಬೇರೆ ಆಯ್ಕೆಯೇ ಇದ್ದಂತಿಲ್ಲ. ನಿನ್ನೆಮೊನ್ನೆ ತನಕ ಕಾಂಗ್ರೆಸ್ಸಿನಲ್ಲಿದ್ದು ರಾಮಲಿಂಗಾರೆಡ್ಡಿಗೆ ಪರಮಾಪ್ತರಾಗಿದ್ದ ಮಾಜಿ ಕೌನ್ಸಿಲರ್ ಎನ್. ನಾಗರಾಜು ಇಲ್ಲಿ ಬಿಜೆಪಿ ಅಭ್ಯರ್ಥಿ. ಪಕ್ಷ ಬಿಜೆಪಿಯಾದರೂ ಹಿಂದಿದ್ದ ಅಷ್ಟೂ ಮಂದಿ ಕಾಂಗ್ರೆಸ್ ಕಾರ್ಯಕರ್ತರ ಹಿಂಡು ನಾಗರಾಜ್ ಬೆನ್ನಿಗೆ ನಿಂತಿದೆ. ಈಗ ನಾಗರಾಜ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಜೋಸೆಫ್ ಒಂದಾನೊಂದು ಕಾಲಕ್ಕೆ ಇದೇ ನಾಗರಾಜ್‌ರ ಕಾರಿಗೆ ಡ್ರೈವರ್ ಆಗಿದ್ದ. ಈತನದು ಮೀಟರ್ ಬಡ್ಡಿ ದಂಧೆ. ಜೆಡಿಎಸ್ ಅಭ್ಯರ್ಥಿ ಜರ್ದಾ ಮುಜೀಬ್ ಅಲಿಯಾಸ್ ಮಹಮ್ಮದ್ ರಸೂಲ್ ಹೇಳಿಕೇಳಿ ಹಳೇ ಕ್ರಿಮಿನಲ್.

ಬೈರಸಂದ್ರದ ಜನಕ್ಕೆ ಬೇರೆ ಆಯ್ಕೆಯಾದರೂ ಎಲ್ಲಿದೆ? ಬಹುಶಃ ಕಾಟಾಚಾರಕ್ಕೆ ಕಾಂಗ್ರೆಸ್-ಜೆಡಿಎಸ್‌ಗಳು ಅಭ್ಯರ್ಥಿಗಳನ್ನು ಹಾಕಿರಬೇಕು. ಏಕೆಂದರೆ ನಾಗರಾಜು ಇವತ್ತಲ್ಲ ನಾಳೆ ಜಯನಗರಕ್ಕೆ ಎಮ್ಮೆಲ್ಲೇಯಾಗಬಹುದಾದ ವ್ಯಕ್ತಿಯೆ. ಹಿಂದೆ ಕಾಂಗ್ರೆಸ್ಸಿನಿಂದ ಗೆದ್ದು ಕೌನ್ಸಿಲರ್ ಆಗಿದ್ದ ನಾಗರಾಜು ಎಂಥಾ ಪರಿಸರ ಪ್ರೇಮಿಯೆಂದರೆ ಇಡೀ ಬೈರಸಂದ್ರದುದ್ದಕ್ಕೂ ಪಾರ್ಕ್‌ಗಳನ್ನು ಸ್ಥಾಪಿಸಿದರು. ಎಲ್‌ಐಸಿ ಪಾರ್ಕ್‌ನಲ್ಲಿ ಮಕ್ಕಳಿಗೆಂದೇ ವಿಶೇಷ ಚಿಗುರು ಮಂಟಪ, ಪ್ರತಿ ಶನಿವಾರ ಕಾರ್ಯಕ್ರಮ, ಪಕ್ಕದ ಸ್ವಿಮ್ಮಿಂಗ್ ಪೂಲ್ ಎಕ್ಸ್‌ಟೆನ್ಷನ್‌ನಲ್ಲಿ ಪಾಳು ಭೂಮಿಯಲ್ಲಿ ಮತ್ತೊಂದು ಸುಸಜ್ಜಿತ ಪಾರ್ಕ್ ನಿರ್ಮಿಸಿದ್ದು ಮತ್ತು ಅಲ್ಲೊಂದು ವಿಶಿಷ್ಟ ಜಲಪಾತ ಸೃಷ್ಟಿಸಿದ್ದು ನಾಗರಾಜ್ ಸೂಕ್ಷ್ಮತೆಗೆ ನಿದರ್ಶನವಷ್ಟೇ.

ಇವತ್ತು ಇಡೀ ಬೈರಸಂದ್ರ ಸುತ್ತಿದರೂ ಒಂದೇ ಒಂದು ರಸ್ತೆ ಗುಂಡಿಯಿಲ್ಲ, ಪ್ರತಿ ರಸ್ತೆಗೂ ಸೋಡಿಯಮ್ ಬಲ್ಬ್ ಇದೆ. ಒಳಚರಂಡಿ ವ್ಯವಸ್ಥೆಯ ಬಗ್ಗೆ ಯಾರೊಬ್ಬರೂ ತಕರಾರೆತ್ತುವಂತಿಲ್ಲ. ಇದಿಷ್ಟೇ ಅಲ್ಲದೇ ಹದಿನಾರು ಎಕರೆ ವಿಸ್ತೀರ್ಣದಲ್ಲಿ ಇಡೀ ಬೆಂಗಳೂರಿಗೇ ವಿಶಿಷ್ಟವಾದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣವನ್ನು ನಿರ್ಮಿಸಿದ್ದು ನಾಗರಾಜು. ಇಲ್ಲಿರುವ ಸ್ಕೇಟಿಂಗ್ ರಿಂಗ್ ಮತ್ತು ವಾಕಿಂಗ್ ಟ್ರ್ಯಾಕ್ ಅಂತರರಾಷ್ಟ್ರೀಯ ಮಟ್ಟಕ್ಕಿದೆ. ಜೊತೆಗೆ ಸುಸಜ್ಜಿತ ಜಿಮ್, ಬಾಸ್ಕೆಟ್‌ಬಾಲ್ ಕೋರ್ಟ್, ಇತ್ಯಾದಿ ಪ್ರತಿಯೊಂದು ಕ್ರೀಡೆಗೂ ಒಂದೊಂದು ಕೋರ್ಟ್ ಇರುವ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನ ನಿರ್ಮಾಣಕ್ಕಾಗಿ ನಾಗರಾಜು ಶ್ರಮಿಸಿದ್ದು ಅಷ್ಟಿಷ್ಟಲ್ಲ.


ಬಹುಶಃ ನಾಗರಾಜು ನೆಲಗಳ್ಳರ ಜೊತೆಗೇನಾದರೂ ಕೈಜೋಡಿಸಿದ್ದರೆ ಇಂಥದೊಂದು ಕ್ರೀಡಾಂಗಣವೇ ಇರುತ್ತಿರಲಿಲ್ಲ. ನೆಲಕಂಟಕರಿಂದ ಗಿಟ್ಟುತ್ತಿದ್ದ ಕೋಟಿಗಟ್ಟಲೇ ಕಾಸಿಗೆ ಕೈಚಾಚದೇ ಜನರಿಗಾಗಿ 16 ಎಕರೆ ಉಳಿಸಿಕೊಟ್ಟ ನಾಗರಾಜುಗೂ ಸದ್ಯ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಜೋಸೆಫ್‌ಗೂ ಅಜಗಜಾಂತರ ವ್ಯತ್ಯಾಸವಿದೆ. ಇಲ್ಲಿಗೆ 5 ವರ್ಷದ ಹಿಂದೆ ಬಿಟಿಎಸ್‌ನ ಲೇಡಿ ಕಂಡಕ್ಟರ್ ಚಂಪಾ ಎಂಬಾಕೆಯ ಗಂಡ ನೇಣು ಹಾಕಿಕೊಂಡು ಸತ್ತ. ಏಕೆಂದರೆ ಚಂಪಾಳನ್ನು ಇದೇ ಜೋಸೆಫ್ ಪೀಡಿಸುತ್ತಿದ್ದ. ಇವತ್ತು ಜೋಸೆಫ್ ಪರ ಪ್ರಚಾರಕ್ಕಿಳಿದಿರುವುದು ಆತನ ಅಕ್ಕನ ಮಗ ಪ್ರೇಮ್ ಮತ್ತು ಆತನ ರೌಡಿಗ್ಯಾಂಗ್ ಮಾತ್ರ. ತನ್ನ ಮೀಟರ್ ಬಡ್ಡಿ ವಸೂಲಿಗಾಗಿ ಕಟ್ಟಿಕೊಂಡ ರೌಡಿ ಗ್ಯಾಂಗನ್ನೇ ಪ್ರೇಮ್ ತನ್ನ ಚಿಕ್ಕಪ್ಪನ ಪರ ಪ್ರಚಾರಕ್ಕಿಳಿಸಿದ್ದಾನೆ.

ಇನ್ನು ಜೆಡಿಎಸ್ ಅಭ್ಯರ್ಥಿ ಜರ್ದಾ ಮುಜೀಬ್ ಗುಜರಿ ಅಂಗಡಿ ಇಟ್ಟುಕೊಂಡು ಕದ್ದ ಸ್ಕ್ರ್ಯಾಪ್ ದಂಧೆ ನಡೆಸುತ್ತಿದ್ದ. ಸಿಕ್ಕಾಪಟ್ಟೆ ಪೊಲೀಸ್ ಕೇಸುಗಳಾದ ಮೇಲೆ ದುಡಿದ ದುಡ್ಡಲ್ಲೇ ರಿಯಲ್ ಎಸ್ಟೇಟ್ ದಂಧೆಗಿಳಿದ. ಅಕ್ಷಯ ಲೇಔಟ್ ಮಾಡಿ ಒಂದೇ ಸೈಟನ್ನು ಹತ್ತಾರು ಜನಕ್ಕೆ ಮಾರುತ್ತಿದ್ದ. ಹೀಗೆ ಮುಂದಾಯಿಸಿಕೊಂಡ ಸೈಟುದಾರರನ್ನು ಬೆದರಿಸಲೆಂದು ಲೋಕಿ ಅಲಿಯಾಸ್ ಬೂಸಿ ಎಂಬಾ ರೌಡಿಯೊಬ್ಬನನ್ನು ಮುಜೀಬ್ ಬೆಳೆಸಿದ್ದ. ಇವತ್ತು ಇಡೀ ಬೂಸಿಲೋಕಿಯ ರೌಡಿ ಗ್ಯಾಂಗೇ ಮುಜೀಬ್‌ನ ಎಲೆಕ್ಷನ್ ಕಾರ್ಯಕರ್ತರು.


ಪಾರ್ಕ್ ನಾಗರಾಜು ಬಿಟ್ಟರೆ ಬೈರಸಂದ್ರದ ಜನಕ್ಕೆ ಬೇರೆ ಆಯ್ಕೆಯಾದರೂ ಎಲ್ಲಿದೆ? ●

# ಹನುಮಂತನಗರ: ಈಶ್ವರ್ ಕುತ್ತಿಗೆ ಕುಯ್ದ ರವಿಸುಬ್ರಮಣ್ಯ ಕಾಂಗ್ರೆಸ್ ಚಂದ್ರಶೇಖರ್‌ಗೆ ಅನುಕೂಲ

...ಬೆಂಗಳೂರು ಕಂಡ ಅತ್ಯಂತ ದಕ್ಷ ಕಾರ್ಪೋರೇಟರುಗಳಲ್ಲಿ ...ಂದ್ರಶೇಖರ್ ಒಬ್ಬರು. ಒಮ್ಮೆ ಮೇಯರ್ ಆಗಿದ್ದು ನಂತರ ...ವನಗುಡಿ ಶಾಸಕರೂ ಆಗಿದ್ದ ಚಂದ್ರಶೇಖರ್ ಈ ಬಾರಿ ...ಮಂತನಗರ ವಾರ್ಡ್‌ನಿಂದ ಕಾಂಗ್ರೆಸ್ ಅಭ್ಯರ್ಥಿ ...ಗಿ ಸ್ಪರ್ಧಿಸಿದ್ದಾರೆ. ತಮಾಷೆ ಏನೆಂದರೆ ಬಲಿಷ್ಠ ...ದ್ರಶೇಖರ್ ವಿರುದ್ಧ ಸೆಣೆಸಾಡಬೇಕಿದ್ದ ಬಿಜೆಪಿ ...ಮೂರು ಗುಂಪುಗಳಾಗಿ ಒಡೆದುಹೋಗಿದೆ. ...ಅದು ಬಿಜೆಪಿ ಶಾಸಕ ರವಿಸುಬ್ರಮಣ್ಯ ...ಡಿಕೊಂಡ ಎಡವಟ್ಟು. ಬಿಜೆಪಿಯಲ್ಲೀಗ ...ಕೃತ ಅಭ್ಯರ್ಥಿ ಜಗದೀಶ್ ಗುಂಪು, ಟಿಕೆಟ್ ...ತ ಈಶ್ವರ್ ಗುಂಪು ಹಾಗೂ ಹುಚ್ಚಯ್ಯ ...ಮುಗಳು ಪರಸ್ಪರ ಕತ್ತಿ ಮಸೆಯುತ್ತಿವೆ. ಕಳೆದ ...ರು ವರ್ಷಗಳಿಂದ ಕಾರ್ಪೋರೇಶನ್ ಎಲೆಕ್ಷನ್‌ಗೆ ...ನ ತಯಾರಿ ಮಾಡಿಕೊಂಡಿದ್ದ ಬಿಜೆಪಿಯ ಈಶ್ವರ್‌ಗೆ ಶಾಸಕ ...ಸುಬ್ರಮಣ್ಯ ಯಾವ ರೀತಿ ಟಿಕೆಟ್ ವಂಚಿಸಿ ಮೋಸ ...ಡಿದರೆಂದು ಜನ ನಾನಾರೀತಿ ಮಾತನಾಡುತ್ತಿದ್ದಾರೆ. ...ಮಂತನಗರದಲ್ಲಿ ಬಹುತೇಕರಿಗೆ ಪರಿಚಿತರಾಗಿರುವ ಈಶ್ವರ್ ...ಬಾರಿ ಬಿಜೆಪಿ ಅಭ್ಯರ್ಥಿ ಪರ ಕೆಲಸ ಮಾಡುತ್ತಿಲ್ಲ ...ದೇ ಬಿಜೆಪಿಗೆ ಮೊಟ್ಟಮೊದಲ ಡೇಂಜರ್ ಆಗಿದೆ. ...ಸ್‌ನ ಚಂದ್ರಶೇಖರ್‌ಗೆ ಇದು ಪ್ಲಸ್‌ಪಾಯಿಂಟು. ...ಂದಿಗೆ ಈ ಹಿಂದೆ ಕಾರ್ಪೋರೇಟರ್, ಮೇಯರ್ ...ಶಾಸಕರಾಗಿದ್ದಾಗ, ಚಂದ್ರಶೇಖರ್ ಮಾಡಿಸಿರುವ ...ವೃದ್ಧಿ ಕೆಲಸಗಳೂ, ಜನಸಾಮಾನ್ಯರೊಂದಿಗೆ ಬೆರೆತು ...ಮಾಡಿಕೊಡುತ್ತಿದ್ದ ಸರಳತೆಯನ್ನು ಜನ ಮರೆತಿಲ್ಲ. ...ನುಮಂತನಗರ ವಾರ್ಡ್‌ಗೆ ಗವೀಪುರ, ...ನಗರ, ಸುಂಕೇನಹಳ್ಳಿ, ಹನುಮಂತನಗರ ಸೇರಿದ್ದು ...ವತ್ತಾರು ಸಾವಿರ ಮತದಾರರಿದ್ದಾರೆ. ಇಲ್ಲಿನ ...ಕ ಬ್ರಾಹ್ಮಣರಿಗೆ ಬಿಜೆಪಿ ಬಗ್ಗೆ ಒಲವಿರುವುದು ...ದರೂ ನ್ಯಾಯ ಪಕ್ಷಪಾತಿಗಳೂ ಅಷ್ಟೇ ...ಮಲ್ಲಿದ್ದಾರೆ. ಜೊತೆಗೆ ಒಕ್ಕಲಿಗ, ಲಿಂಗಾಯತ, ...ಹಾಗೂ ಮುಸ್ಲಿಂ ಮತಗಳಿವೆ. ಬೆಂಗಳೂರಿನ ಅತ್ಯುತ್ತಮ ...ಪೈಕಿ ಒಬ್ಬರಾಗಿದ್ದ ಚಂದ್ರಶೇಖರರನ್ನು ಕಳೆದ ಅಸೆಂಬ್ಲಿ ...ನಲ್ಲಿ ಬರೀ ಸುಳ್ಳು ಪ್ರಚಾರ ಮಾಡಿಯೇ ಬಿಜೆಪಿಗಳು ...ಸಿದ್ದರು. ಆಗ ರವಿಸುಬ್ರಮಣ್ಯ ಇದೇ ಈಶ್ವರನನ್ನು ಚೆನ್ನಾಗಿ ಬಳಸಿಕೊಂಡಿದ್ದರು. ನಗರಪಾಲಿಕೆ ಎಲೆಕ್ಷನ್‌ಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿಯೂ ಆಸೆ ತೋರಿಸಿದ್ದರು. ಆದರೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದ ಮಾರ್ಚ್ 15ರಂದು ಈಶ್ವರನನ್ನು ವಂಚಿಸಲಾಯಿತು. ಅವತ್ತು ಶಾಸಕ ರವಿ ಸುಬ್ರಮಣ್ಯ ತಮ್ಮ ಮನೆಗೆ ಈಶ್ವರರನ್ನು ಕರೆಸಿಕೊಂಡು ನೀವು ಇಲ್ಲೇ ಕಾದಿರಿ. ಬಿ ಫಾರಂ ತರಿಸುತ್ತೇನೆ. ಆಮೇಲೆ ನಿಮ್ಮ ನಾಮಿನೇಷನ್ ಸಲ್ಲಿಸಲು ನಾನೂ ಜೊತೆಗೆ ಬರ್ತೀನೆ" ಎಂದರು. ಇದನ್ನು ನಿಜ ಎಂದು ನಂಬಿದ ಈಶ್ವರ್ ಬೆಳಗ್ಗೆ ಹನ್ನೊಂದು ಗಂಟೆಯತನಕ ಕಾದರೂ ಕೂಡ ಬಿ ಫಾರಂ ಸಿಗಲಿಲ್ಲ. ಕೊನೆಗೆ ಅವರ ಪರಿಚಿತನೊಬ್ಬ ಫೋನ್ ಮಾಡಿ ಬಿಜೆಪಿ ಟಿಕೆಟ್ ಜಗದೀಶ್ ಎಂಬುವವರಿಗೆ ಸಿಕ್ಕಿರುವ ವಿಚಾರ ತಿಳಿಸಿದಾಗಲೇ ಈಶ್ವರ್‌ಗೆ ತಾನು ಮೋಸ ಹೋದ ಸಂಗತಿ ಅರಿವಾಗಿದೆ. ಆದರೇನು ಅಷ್ಟರಲ್ಲಿ ಪರಿಸ್ಥಿತಿ ಕೈಮೀರಿತ್ತು. ಈಶ್ವರ್ ಹತಾಶೆಯಿಂದ ಮನೆಗೆ ಹೋದರು. ಈಗ ನೋಡಿದರೆ ಶಾಸಕ ರವಿಸುಬ್ರಮಣ್ಯ ಏನೂ ಆಗೇ ಇಲ್ಲವೆಂಬಂತೆ ಈಶ್ವರ್‌ಗೆ ಕೈಕೊಟ್ಟು ಜಗದೀಶನ ಕೈಹಿಡಿದಿದ್ದಾರೆ.


ಚಂದ್ರಶೇಖರ್

ಇಲ್ಲಿ ಜೆಡಿಎಸ್‌ನ ಬಲ ಹೇಳಿಕೊಳ್ಳುವಷ್ಟಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ಚಂದ್ರಶೇಖರ್‌ರನ್ನು 'ಬೇಡ' ಎಂದ ಜನ ರವಿ ಸುಬ್ರಮಣ್ಯರನ್ನು ಆರಿಸಿ ಎಂತಹ ತಪ್ಪು ಮಾಡಿದರೆಂಬುದಕ್ಕೆ ಅನೇಕ ಸಾಕ್ಷಿಗಳಿವೆ. ಶಾಸಕರಾದ ನಂತರ ರವಿ ಸುಬ್ರಮಣ್ಯ ಯಾರ ಕೈಗೂ ಸಿಗುತ್ತಿಲ್ಲ. ಅದೆಲ್ಲಿಂದ ಹಣ ಹರಿದು ಬರುತ್ತಿದೆಯೋ ಗೊತ್ತಿಲ್ಲ ಆದರೆ ಬಿಡದಿ ಬಳಿ ಹಾಗೂ ತಮಿಳುನಾಡಿನಲ್ಲಿ ಕೋಟ್ಯಂತರ ರೂಪಾಯಿಗಳ ಆಸ್ತಿ ಖರೀದಿಸುತ್ತಿದ್ದಾರೆ. ಈ ರವಿಸುಬ್ರಮಣ್ಯರ ಅಣ್ಣ ಚಂದ್ರಶೇಖರ್ ಎಂಬಾತ ಕ್ಷೇತ್ರದ ಯಾವುದೇ ಅಭಿವೃದ್ಧಿ ಕಾಮಗಾರಿಯಿರಲಿ ಹದಿನೈದು ಪರ್ಸೆಂಟ್ ಕಮಿಷನ್ ಕೀಳುತ್ತಿದ್ದಾನೆ. ಬಿಜೆಪಿಗಳ ಈ ಪರಿ ಸುಲಿಗೆ, ಅವ್ಯವಹಾರ ಅದಕ್ಷತೆ ನೋಡುತ್ತಿರುವ ಜನ ಈಗ ಮತ್ತೆ ಕಾಂಗ್ರೆಸ್‌ನ ಅಭ್ಯರ್ಥಿ ಚಂದ್ರಶೇಖರ್‌ರತ್ತ ನೋಡುತ್ತಿದ್ದಾರೆ. ಹನುಮಂತನಗರ ವಾರ್ಡಿನ ಜನ ಚಂದ್ರಶೇಖರ್ ಒಳ್ಳೆಯ ಕೆಲಸಗಾರ ಎಂಬುದನ್ನು ಒಪ್ಪುತ್ತಾರೆ. ಈ ಸುತ್ತ ಬೆಂಬಲಿಗರ ಅಲೆಯನ್ನು ಸರಿಯಾಗಿ ಬಳಸಿಕೊಂಡರೆ ಕಾಂಗ್ರೆಸ್‌ಗೆ ಇಲ್ಲಿ ಗೆಲ್ಲುವುದೇನೂ ಕಷ್ಟವಾಗಲಾರದು. ●


ರವಿಸುಬ್ರಮಣ್ಯ


Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

**FROM - IV**

(See Rule 8)

| | | |
|---|---|---|
| 1. | Place of Publication | : Bangalore |
| 2. | Periodicity of Publication | : Weekly |
| 3. | Printer's Name | : Gauri Lankesh |
| | Whether Citizen of India | : Yes |
| | Address | : No. 9, E.A.T. Street, Basavanagudi, Bangalore-560 004. |
| 4. | Publisher's Name | : Gauri Lankesh |
| | Whether Citizen of India | : Yes |
| | Address | : No. 9, E.A.T. Street, Basavanagudi, Bangalore-560 004. |
| 5. | Editor's Name | : Gauri Lankesh |
| | Whether Citizen of India | : Yes |
| | Address | : No. 9, E.A.T. Street, Basavanagudi, Bangalore-560 004. |

I, Gauri Lankesh, hereby declare that the particulars given above are true to the best of my knowledge and belief.

Date : 8.3.2010

Sd/-
GAURI LANKESH

# ಚುನಾವಣೆ ಗೆಲ್ಲಲು ನರಬಲಿ





ಬಿಬಿಎಂಪಿ ಚುನಾವಣೆಯಲ್ಲಿ ಚಲವಾದಿ ಪಾಳ್ಯ ವಾರ್ಡ್‌ನಿಂದ ತನ್ನ ಪತ್ನಿ ರೇಖಾಳನ್ನು ಗೆಲ್ಲಿಸಲು ಬಿಜೆಪಿಯ ರೌಡಿ ಕದಿರೇಶ ನವಜಾತ ಶಿಶುವನ್ನು ಬಲಿಕೊಟ್ಟಿರುವ ಭಯಾನಕ ಕತೆ ಇದು...

ಒಂದು ಚುನಾವಣೆ ಗೆಲ್ಲಲು ನಮ್ಮ ರಾಜಕಾರಣಿಗಳು ಏನೇನು ಅನಾಹುತ ಮಾಡುತ್ತಾರೆ, ಎಂತೆಂತಹ ನೀಚ ಮಾರ್ಗ ಹಿಡಿಯುತ್ತಾರೆಂಬುದನ್ನು ನಾವೆಲ್ಲಾ ನೋಡಿದ್ದೇವೆ.

ದುಡ್ಡು ಹಂಚುವುದು, ಜಾತಿ, ಸಾರಾಯಿ, ಗೂಂಡಾಗಿರಿ, ಕೊಲೆ.... ಇವೆಲ್ಲಾ ನಮ್ಮ ಡೆಮಾಕ್ರಸಿಯಲ್ಲಿ ಮಾಮೂಲಿ ವಿಚಾರಗಳಾಗಿಬಿಟ್ಟಿವೆ.

ಆದರೆ ಬೆಂಗಳೂರು ಮಹಾನಗರ ಪಾಲಿಕೆ ಎಲೆಕ್ಷನ್ ಗೆಲ್ಲಲು ದುರುಳನೊಬ್ಬ ಆಗತಾನೇ ಹುಟ್ಟಿದ ಹಸುಗೂಸೊಂದನ್ನು ಬಲಿಕೊಟ್ಟನೆಂಬ ಗುಮಾನಿ ಕೇಳಿ ಬರುತ್ತಿದೆ. ಈ ಕರಾಳಕೃತ್ಯ ಎಸಗಿರುವವನು ಕುಖ್ಯಾತ ಪಾತಕಿ ಕದಿರೇಶ ಎಂಬ ಪುಕಾರುಗಳಿವೆ.

ಇವನು ವಿನಾಯಕ ಟಾಕೀಸ್ ಹಿಂಭಾಗದ ಕಳ್ಳಭಟ್ಟಿ ಕೊಂಪೆ ಆಂಜನಪ್ಪ ಗಾರ್ಡನ್ನಿನ ಪಾಳೇಗಾರ. ಅಷ್ಟೇ ಅಲ್ಲ ಬೆಂಗಳೂರು ಸೆಂಟ್ರಲ್‌ನ ಬಿಜೆಪಿ ಸಂಸದ ಪಿ.ಸಿ.ಮೋಹನ್ ಬಂಟ. ಈ ಕದಿರೇಶನ ಹೆಂಡತಿ ರೇಖಾ ಕದಿರೇಶ್ ಹಾಲಿ ಚಲವಾದಿಪಾಳ್ಯದ ವಾರ್ಡ್ ನಂಬರ್ 138ರ ಬಿಜೆಪಿ ಕ್ಯಾಂಡಿಡೇಟು!

ಮಾಟ-ಮಂತ್ರ, ವಾಸ್ತು, ತಂತ್ರಗಳನ್ನೆಲ್ಲಾ ಗ್ಯಾರಂಟಿಯಾಗಿ ನಂಬುವ ಕದಿರೇಶ ಬೆಂಗಳೂರಿನ ನಟೋರಿಯಸ್ ಪಾತಕಿಗಳಲ್ಲೊಬ್ಬ. ಆಂಜನಪ್ಪ ಗಾರ್ಡನ್ನಿನಲ್ಲಿ ಕುಮರೇಶ, ಕದಿರೇಶ, ಸುರೇಶ್ ಎಂಬ ಅಣ್ಣತಮ್ಮಂದಿರು ಹೋಲ್‌ಸೇಲಾಗಿ ಕಳ್ಳಭಟ್ಟಿ, ರೌಡಿಸಂ ದಂಧೆಯಲ್ಲಿದ್ದಾರೆ. ಇವರ ಸಂಬಂಧಿ ಮಾಲಾ ಎಂಬುವವಳು ಏರಿಯಾದ ಕಳ್ಳಭಟ್ಟಿ ರಾಣಿಯಂತಿದ್ದಾಳೆ. ಇಂತಹ ಪಾತಕ ಮನೆತನದಲ್ಲಿ ಬೆಳೆದಿರುವ ಕದಿರೇಶನಿಗೆ ರಾಜಕೀಯದ ಆಕಾಂಕ್ಷೆಯೂ ಇದೆ. ಕಳೆದ ಆರೆಂಟು ತಿಂಗಳುಗಳಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಎಲೆಕ್ಷನ್ ನಡೆಯುವ ಮಾತುಗಳು ಕೇಳಿಬರುತ್ತಿದ್ದವಲ್ಲ, ಆಗಲೇ ಕದಿರೇಶ ಎಲೆಕ್ಷನ್‌ಗೆ ರೆಡಿಯಾಗತೊಡಗಿದ. ಆಗಿನ್ನೂ ವಾರ್ಡ್ ಮರುವಿಂಗಡಣೆ ಪೂರ್ತಿಯಾಗಿರಲಿಲ್ಲ. ಕದಿರೇಶನ ಏರಿಯಾ ಚಾಮರಾಜಪೇಟೆ ಅಸೆಂಬ್ಲಿ ವ್ಯಾಪ್ತಿಯೊಳಗಿತ್ತು. ಮತ್ತೊಂದೆಡೆ ಚಿಕ್ಕಪೇಟೆಯ ಶಾಸಕರಾಗಿದ್ದ ಪಿ.ಸಿ.ಮೋಹನ್ ಶಾಸಕನಾಗಿ ನಂತರ ಸಂಸತ್ತಿಗೆ ಆಯ್ಕೆಯಾಗಿ ಹೋಗಿದ್ದರು. ಗೂಂಡಾಗಿರಿ, ಕಳ್ಳಭಟ್ಟಿ ದಂಧೆಯಲ್ಲಿ ಕೋಟ್ಯಾಂತರ ರೂಪಾಯಿ ಕಮಾಯಿಸಿದ್ದ ಕದಿರೇಶನಿಗೆ ರಾಜಕೀಯ ಮಾಡಿ ಅಧಿಕಾರ ಪಡೆಯುವ ವಾಂಛೆ ಶುರುವಾಗಿತ್ತು. ಆಗಲೇ ಅವನಿಗೆ ಯಾರೋ ಮಂತ್ರವಾದಿಯೊಬ್ಬ ಆಗತಾನೇ ಹುಟ್ಟಿದ್ದ ಮಗುವೊಂದನ್ನು ಬಲಿಕೊಟ್ಟರೆ ಆಸೆ ಈಡೇರುತ್ತದೆಂದು ಹೇಳಿರಬೇಕು. ಅದರ ಪರಿಣಾಮವೇ ಈ ನರಬಲಿ ಪ್ರಕರಣ ಎಂಬ ಮಾತು ಕೇಳಿಬರುತ್ತಿದೆ.

## ಮಗು ಯಾರದ್ದು!

ಇದು ನಡೆದಿರುವುದು ಐದು ತಿಂಗಳ ಹಿಂದೆ. 2009ರ ನವೆಂಬರ್‌ನಲ್ಲೊಂದು ದಿನ ಬೆಳಗ್ಗೆ ಆಂಜನಪ್ಪ ಗಾರ್ಡನ್ನಿನ ಬಂಡೆಯ ಮೇಲಿರುವ ಕದಿರೇಶನ ಮನೆಯಿಂದ ಕೊಂಚ ಪಕ್ಕದಲ್ಲಿ ಒಂದು ನವಜಾತ ಶಿಶುವಿನ ಮೃತದೇಹ ಕಾಣಸಿಕ್ಕಿತು. ಆ ನತದೃಷ್ಟ ಶಿಶುವಿನ ಹೊಟ್ಟೆ ಬಗೆದು, ದೇಹದ ಭಾಗಗಳನ್ನೆಲ್ಲ ಹೊರತೆಗೆದು ಅಲ್ಲಿ ಇರಿಸಲಾಗಿತ್ತು. ಅದರ ಶವದ ಪಕ್ಕದಲ್ಲೇ ಹೂವು, ನಿಂಬೆಹಣ್ಣು, ಕುಂಕುಮ ಹಾಗೂ ಪೂಜಾ ಸಾಮಾನುಗಳೂ ಬಿದ್ದಿದ್ದವು. ಅಲ್ಲಿಂದಾಚೆಗೆ ಈ ಪ್ರಕರಣ ಎರಡು ಕವಲಾಗಿ ಮುಂದುವರೆಯಿತು. ಕಾಟನ್‌ಪೇಟೆ ಪೊಲೀಸರು ಬಂದು ಸ್ಥಳ ಪರೀಕ್ಷೆ ಮಾಡಿ 'ಯಾರೋ ನವಜಾತ ಶಿಶುವನ್ನು ತಂದು ಎಸೆದು ಹೋಗಿದ್ದಾರೆ. ಬೀದಿನಾಯಿಗಳು ಮಗುವನ್ನು ಅರೆಬರೆ ತಿಂದುಹಾಕಿದ ಕಾರಣ ಮರಣ ಸಂಭವಿಸಿದೆ' ಎಂದು ಬರಿ ರಿಪೋರ್ಟ್ ಬರೆದು ಕೈತೊಳೆದುಕೊಂಡರು.

ಆದರೆ ವಿಷಯ ಅಷ್ಟು ಸರಳವಾಗಿರಲಿಲ್ಲ. ಮೃತ ಶಿಶುವಿನ ದೇಹವನ್ನು ಸರಿಯಾಗಿ ಗಮನಿಸಿದರೆ ಅನುಮಾನ ಹುಟ್ಟಿಸುವ ಅನೇಕ ಸಂಗತಿಗಳೇ ಅಲ್ಲಿದ್ದವು. ಮಗುವಿನ ಮುಖ, ಕೈ, ಕಾಲುಗಳಿಗೆ ಯಾವುದೇ ಗಾಯಗಳಾಗಿರಲಿಲ್ಲ. ಕೇವಲ ಹೊಟ್ಟೆಯ ಭಾಗವನ್ನು ಮಾತ್ರ ಬಗೆದು ಹಾಕಲಾಗಿತ್ತು. ಒಂದು ವೇಳೆ ಬೀದಿನಾಯಿಗಳು ಕಚ್ಚಿ ತಿಂದಿದ್ದಾಗಿದ್ದರೆ ಮಗುವಿನ ದೇಹದಲ್ಲೆಲ್ಲಾ ಗಾಯಗಳಾಗಲೇಬೇಕಿತ್ತು ಅಲ್ಲವೇ?

## ಬಿಜೆಪಿ ರೌಡಿ ಕದಿರೇಶನ ಕರಾಳ ಕೃತ್ಯ

• ಪಾರ್ವತೀಶ

ಪೊಲೀಸರು ಈ ಪ್ರಶ್ನೆ ಹಾಕಿಕೊಳ್ಳಲಿಲ್ಲ. ಆದರೆ ಆಂಜನಪ್ಪ ಗಾರ್ಡನ್ನಿನ ಜನರಿಗೆ ಅನುಮಾನ ಬಂತು. ಕದಿರೇಶನಿಗಿದ್ದ ಮಾಟ-ಮಂತ್ರಗಳ ಮೇಲಿನ ನಂಬಿಕೆ ಬಗ್ಗೆ ಅಲ್ಲಿನ ಜನರಿಗೆ ಗೊತ್ತಿತ್ತಾದ್ದರಿಂದ ಈ ನರಬಲಿ ಘಟನೆಯ ಹಿಂದಿದ್ದ ದುರುದ್ದೇಶ ಅವರಿಗೆ ಅರ್ಥವಾಗಿ ಹೋಯಿತು. ಅದೇ ವೇಳೆಗೆ ಕದಿರೇಶನ ಮನೆಯ ಬಲಗಡೆ ದಿಕ್ಕಿನಲ್ಲಿ ಅನತಿ ದೂರದಲ್ಲಿನ ಮನೆಯಲ್ಲಿ ವಾಸವಿದ್ದ ದಂಪತಿಗಳಿಬ್ಬರು ಊರು ತ್ಯಜಿಸಿ ಹೊರಟುಹೋದದ್ದನ್ನೂ ಕೆಲವರು ಗಮನಿಸಿದರು. ಅವರು ವೇಲು ಹಾಗೂ ಸರಸ್ವತಿ (ಹೆಸರು ಬದಲಿಸಿದೆ) ದಂಪತಿ. ಆಕೆ ಗರ್ಭಿಣಿಯಾಗಿದ್ದರೂ ಡೆಲಿವರಿಯಾಗಿ ಶಿಶು ಜನನವಾದ ಸುದ್ದಿ ನೆರೆಯ ಜನರಿಗೆ ಗೊತ್ತಾಗಲೇ ಇಲ್ಲ. ಕದಿರೇಶನಿಗೆ ಬಲಿಯಾದ ಮಗು ಈ ದಂಪತಿಗಳದ್ದೇ ಆಗಿತ್ತು ಎನ್ನುವ ಅನುಮಾನ ಜನರಿಗೆ ಬಂತು. ವೇಲು ದಂಪತಿ ಕದಿರೇಶನ ಗೂಂಡಾಗಿರಿಗೆ ಬೆದರಿ ಆಗತಾನೇ ಹುಟ್ಟಿದ ತಮ್ಮ ಮಗುವನ್ನು ನರಬಲಿಗಾಗಿ ಕೊಟ್ಟರೋ ಅಥವಾ ಹಣದ ಆಮಿಷಕ್ಕೆ ಒಳಗಾದರೋ ಖಚಿತವಾಗಿ ಗೊತ್ತಾಗಲೇ ಇಲ್ಲ. ತನಿಖೆ ಮಾಡಿ ತಿಳಿದುಕೊಳ್ಳಬೇಕೆಂದರೆ ಅಸಲಿಗೆ ವೇಲು ದಂಪತಿಗಳೇ ಈಗ ಆಂಜನಪ್ಪ ಗಾರ್ಡನ್‌ನಲ್ಲಿ ವಾಸವಿಲ್ಲ. ರೌಡಿ ಕದಿರೇಶನ ಮನೆಯ ಸಾಲಿನಲ್ಲೇ ಇದ್ದ ಅವರ ಮನೆ ಕಳೆದ ಮೂರ್ನಾಲ್ಕು ತಿಂಗಳಿನಿಂದ ಖಾಲಿ ಬಿದ್ದಿದೆ.

ಬಿಜೆಪಿಗಳು ಏನೇ ನ್ಯಾಯ ದ' ೀ ಶ' ಭ' ಕ್ತಿ ಯ' ... ಮಾತನಾಡಿದರೂ ಎಲೆಕ್ಷನ್ ಬಂದಾಗ ಯಾವ ಹೀನಕಾರ್ಯಕ್ಕೂ ಹೇಸುವವರಲ್ಲ. ಬೆಂಗಳೂರು ಸೆಂಟ್ರಲ್‌ನ ಸಂಸದ ಪಿ.ಸಿ.ಮೋಹನ್ ಅಂತೂ ನರಹಂತಕ ಕದಿರೇಶನಿಗೆ ಕಳೆದ ಒಂದು ದಶಕದಿಂದಲೂ ಆಶ್ರಯ ಕೊಟ್ಟಿದ್ದಾರೆ. ಈ ಹಿಂದೆ 1999ರ ಅಸೆಂಬ್ಲಿ ಎಲೆಕ್ಷನ್ ಆದಾಗ ಕದಿರೇಶನ ಗ್ಯಾಂಗ್ ಆರ್.ವಿ.ದೇವರಾಜ್ ಪರ ಇತ್ತು. ಕದಿರೇಶನಿಂದ ಹತ್ಯೆಗೀಡಾದ ಜೋಪಡಿ ರಾಜೇಂದ್ರ ಆಗ ಪಿ.ಸಿ.ಮೋಹನ್ ಪರ ಇದ್ದ. ದೇವರಾಜ್ ಮೂಲಕವೇ ಮಾರ್ಕೆಟ್ ಮೇಡಿಯ ಲಿಂಕ್ ಪಡೆದ ಕದಿರೇಶ ಈಗ ಇನ್ನೊಬ್ಬ ಕ್ರಿಮಿನಲ್ ಸೈಲೆಂಟ್ ಸುನೀಲನ ಜೊತೆಗೂ ವ್ಯವಹಾರವಿಟ್ಟುಕೊಂಡಿದ್ದಾನೆ. ಒಮ್ಮೆ ಕಾಟನ್‌ಪೇಟೆ ಇನ್ಸ್‌ಪೆಕ್ಟರ್ ಆಗಿದ್ದ ಅಬ್ದುಲ್ ಅಜೀಂ ಕದಿರೇಶನ ವಿರುದ್ಧ ರೌಡಿಶೀಟ್ ತೆರೆದಿದ್ದರು. ಇನ್ನೊಬ್ಬ ಖಡಕ್ ಪೊಲೀಸ್ ಆಫೀಸರ್ ಕೊಟ್ಟೂರು ಬಸಪ್ಪ ಕಾಟನ್‌ಪೇಟೇಲಿ ಇದ್ದಷ್ಟು ಕಾಲ ಕದಿರೇಶನಾಗಲೀ, ಆಂಜನಪ್ಪ ಗಾರ್ಡನ್ನಿನ ರೌಡಿಗಳಾಗಲಿ ಉಸಿರೆತ್ತದಂತೆ ಮಾಡಿದ್ದರು. ಇದೆಲ್ಲ ಹಳೇ ಕತೆ. ಈಗ ಸಂಸದ ಪಿ.ಸಿ.ಮೋಹನ್ ತನಗೆ ಬೇಕಾದ ಹಾಗೆ ಗೋಪಾಲ್ ಎಂಬುವವರನ್ನು ಕಾಟನ್‌ಪೇಟೆ ಠಾಣೆಗೆ ತಂದು ಕೂರಿಸಿದ್ದಾರೆ. ಬೇರೆಲ್ಲಾ ವಿಚಾರಗಳಲ್ಲೂ ನ್ಯಾಯವಂತಿಕೆ ತೋರಿಸುವ ಗೋಪಾಲ್ ಈ ಕದಿರೇಶನ ಗೂಂಡಾಗಿರಿಗೆ ಮಾತ್ರ ಲಗಾಮು ಹಾಕುತ್ತಿಲ್ಲ. ಹಾಗಾಗಿ ಆಂಜನಪ್ಪ ಗಾರ್ಡನ್‌ನಲ್ಲಿ ಕದಿರೇಶನನ್ನು ಕಂಟ್ರೋಲ್ ಮಾಡುವವರೇ ಇಲ್ಲವಾಗಿದ್ದಾರೆ. ಕಾಟನ್‌ಪೇಟೆ ಪೊಲೀಸರು ಆಗ ಸ್ವಲ್ಪ ದಕ್ಷತೆ ತೋರಿಸಿದ್ದಿದ್ದರೂ ಸಾಕಿತ್ತು. ಕದಿರೇಶ ಎಲೆಕ್ಷನ್ ಗೆಲುವಿಗಾಗಿ ನರಬಲಿ ಕೊಟ್ಟನೆಂಬ ಪುಕಾರಿಗೆ ಸಾಕ್ಷಿಯೂ ಸಿಕ್ಕಿರುತ್ತಿತ್ತು. ಆದರೆ ಪೊಲೀಸರು ಮೈಮರೆತರು.





ಕದಿರೇಶ್‌ನಿಗೆ ಬಲಿಯಾದ ಶಿಶುವಿನ ಮೃತ ದೇಹ ಮತ್ತು ಪೂಜಾ ಸಾಮಗ್ರಿಗಳು...

ಆಂಜನಪ್ಪ ಗಾರ್ಡನ್‌ನ ಭಯಾನಕ ಸತ್ಯ ಏನೆಂದರೆ ಅಲ್ಲಿ ಯಾವ ಕಾಲದಲ್ಲೂ ಯಾರೂ ಕೂಡಾ ಈ ಗೂಂಡಾಗಳ ವಿರುದ್ಧ ಸೊಲ್ಲೆತ್ತುವುದಿಲ್ಲ. ಗಾರ್ಡನ್ ಮಣಿ, ಜೋಪಡಿ ರಾಜ, ಚಾಮರಾಜ, ಆಲ್ಬೈ ಮಣಿ.. ಮುಂತಾದ ರೌಡಿಗಳು ಇಲ್ಲಿ ಮೆರೆದಾಡಿ ಹೋಗಿದ್ದಾರೆ. ಹಲ್ಲೆ ಹತ್ಯೆಗಳು ಇಲ್ಲಿ ಮಾಮೂಲೆಂಬಂತೆ ನಡೆಯುತ್ತಿರುತ್ತವೆ.



ಮೋಹನ್

ಕದಿರೇಶ ಇಂತಹ ಪಾಪಿಗಳ ಲೋಕದಿಂದಲೇ ಎದ್ದು ಬಂದವನು. ಗೂಂಡಾಗಿರಿ, ಕಳ್ಳಭಟ್ಟಿ ದಂಧೆ, ಹಲವು ಕೊಲೆಗಳ ರೂವಾರಿಯಾದವನು. ಇಂತಹ ಹೀನ ಕ್ರಿಮಿ ತಾನು ಕಾರ್ಪೋರೇಟರ್ ಆಗಬೇಕೆಂದು ಹಸುಗೂಸೊಂದನ್ನು ನರಬಲಿ ಕೊಡುವ ಲೆವೆಲ್‌ಗೂ ಇಳಿದರೆ ಆಶ್ಚರ್ಯವೇನೂ ಇಲ್ಲ.



ಆಜೀಂ

## ಬಾಂಬ್ ನಾಗನ ಎಂಟ್ರಿ

ವಾರ್ಡ್ ಪುನರ್ ವಿಂಗಡಣೆಯ ಪ್ರಕ್ರಿಯೆ ನಡೆಯುತ್ತಿದ್ದಾಗ ಆಂಜನಪ್ಪ ಗಾರ್ಡನ್ ಏರಿಯಾ ಮೊದಲು ಚಿಕ್ಕಪೇಟೆ ವಾರ್ಡಿನ ವ್ಯಾಪ್ತಿಯಲ್ಲಿತ್ತು. ಕೊನೆಗೆ ಚಲವಾದಿಪಾಳ್ಯ ಎಂಬ ಹೊಸ ವಾರ್ಡ್ ರಚನೆಯಾಗಿ ಈ ಆಂಜನಪ್ಪ ಗಾರ್ಡನ್ ಅದರ ವ್ಯಾಪ್ತಿಗೆ ಸೇರಿಹೋಯಿತು. ಅಷ್ಟೇ ಅಲ್ಲದೇ ಕ್ಯಾಟಗರಿ ಬದಲಾಗಿ ಮಹಿಳಾ ಮೀಸಲು ವಾರ್ಡ್ ಆಯಿತು. ಈ ನಡುವೆ ಪಕ್ಕದ ಗಾಂಧಿನಗರ ವಾರ್ಡಿನ ವ್ಯಾಪ್ತಿಗೆ ಆಂಜನಪ್ಪ ಗಾರ್ಡನ್ ಸೇರಲಿದೆ ಎಂಬ ಪುಕಾರು ಹಬ್ಬಿತ್ತಾದ್ದರಿಂದ ಇನ್ನೊಬ್ಬ ಪಾತಕಿ ಬಾಂಬ್ ನಾಗ ಇತ್ತ ಕಡೆ ತಲೆಹಾಕಿದ್ದ. ಆಗೊಮ್ಮೆ ಪ್ರಚಾರಕ್ಕೆಂದು ನಾಗನ ಹುಡುಗರು ಆಂಜನಪ್ಪ ಗಾರ್ಡನ್‌ಗೆ ಕಾಲಿಟ್ಟಾಗ ಕದಿರೇಶನ ರೌಡಿ ಪಡೆ ಅವರ ವಿರುದ್ಧ ಬೀದಿ ಜಗಳ ನಡೆಸಿತ್ತು. ಅಂತಿಮವಾಗಿ ಆಂಜನಪ್ಪ ಗಾರ್ಡನ್ ಏರಿಯಾ ವಾರ್ಡ್ ನಂಬರ್ 138 ಆಗಿ ಚಲವಾದಿಪಾಳ್ಯಕ್ಕೆ ಸೇರಿ ಮಹಿಳಾ ಕ್ಷೇತ್ರವಾದ ತಕ್ಷಣ ಕದಿರೇಶ ಇನ್ನೊಂದು ಪ್ಲಾನ್ ಮಾಡಿಬಿಟ್ಟ. ತನ್ನ ಇಬ್ಬರು ಹೆಂಡಿರ ಪೈಕಿ ರೇಖಾಳನ್ನೇ ಕ್ಯಾಂಡಿಡೇಟ್ ಆಗಿಸಿ ಬಿಜೆಪಿ ಟಿಕೆಟ್ ತಂದುಬಿಟ್ಟ. ಈ



ಶ್ರೀನಿವಾಸ್



ಸೂರಿ

## ದಳ-ಕಾಂಗ್ರೆಸ್ ಅಭ್ಯರ್ಥಿಗಳು

ಚಲವಾದಿಪಾಳ್ಯದಲ್ಲಿ ಜೆಡಿಎಸ್‌ನಿಂದ ಸೂರಿ ಹಾಗೂ ಕಾಂಗ್ರೆಸ್‌ನಿಂದ ಶ್ರೀನಿವಾಸ್ ನಿಂತಿದ್ದಾರೆ. ನಾಮಪತ್ರ ಹಾಕುವಾಗ ಇವರಿಬ್ಬರೂ ಯಾವುದೋ ಒಂದು ದಾಖಲೆಯ ಪ್ರತಿಯನ್ನು ಚುನಾವಣಾ ಅಧಿಕಾರಿಗೆ ಒದಗಿಸಿರಲಿಲ್ಲವೆಂದು ನಾಮಪತ್ರವೇ ತಿರಸ್ಕೃತಗೊಳ್ಳುವ ಅಪಾಯ ಎದುರಾಗಿತ್ತು; ಅದೀಗ ಬಗೆಹರಿದಿದೆ. ಆದರೆ ಕದಿರೇಶ ಮಾತ್ರ ತಾನು ಮಗುವನ್ನು ಬಲಿಕೊಟ್ಟಿದ್ದರಿಂದಲೇ ದೇವರು ಕೃಪೆ ಮಾಡಿ ಎದುರಾಳಿಗಳೇ ಇಲ್ಲದಂತಾಗಿ ತನ್ನ ಹೆಂಡತಿ ರೇಖಾ ಗೆಲ್ಲುವ ಛಾನ್ಸ್ ಸಿಗುತ್ತಿದೆ ಎಂದು ನಂಬಿಕೊಂಡಿದ್ದ.

ಆದರೆ ಚಲುವಾದಿಪಾಳ್ಯದಲ್ಲೀಗ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಅಲ್ಲಿನ ಮತದಾರರು ರೇಖಾ ಕದಿರೇಶಳನ್ನು ಸೋಲಿಸುವ ಮೂಲ ಕದಿರೇಶನ ಗೂಂಡಾ ಗ್ಯಾಂಗಿಗೆ ಪಾಠ ಕಲಿಸಬೇಕಿದೆ.

ಕಾಟನ್‌ಪೇಟೆ ಪೊಲೀಸರು ನವಜಾತ ಶಿಶುವಿನ ಹತ್ಯಾ ಪ್ರಕರಣದ ಮರುತನಿಖೆ ಆರಂಭಿಸಿ ಈ ನರಬಲಿ ಘಟನೆಯ ತಲೆಬುಡವನ್ನೆಲ್ಲಾ ಶೋಧಿಸಬೇಕಿದೆ. ಮಗುವನ್ನು ಕಳೆದುಕೊಂಡ ದಂಪತಿ ಎಲ್ಲಿದ್ದಾರೆಂದು ಮೊದಲು ಪತ್ತೆ ಹಚ್ಚಲು ಸಾಧ್ಯವಾದರೆ ಕದಿರೇಶನ ಕರಾಳಕೃತ್ಯಗಳೆಲ್ಲಾ ಹೊರಗೆ ಬಂದೇ ಬರುತ್ತದೆ. ನರಬಲಿ ಪ್ರಕರಣ ನಡೆದು ನಾಲ್ಕೈದು ತಿಂಗಳಾಗಿದ್ದರೂ ಆಂಜನಪ್ಪ ಗಾರ್ಡನ್ನಿನ ಜನ ಅದರ ಬಗ್ಗೆ ಈಗಲೂ ಮಾತನಾಡುತ್ತಿದ್ದಾರೆ. ಕೇಳಿಸಿಕೊಳ್ಳಲು ಕಾಟನ್‌ಪೇಟೆ ಪೊಲೀಸರಿಗೆ ಕಿವಿ ನೆಟ್ಟಗಿರಬೇಕು ಅಷ್ಟೇ. ಈ ಆಂಜನಪ್ಪ ಗಾರ್ಡನ್‌ನ ನಾಲ್ಕು ದಿಕ್ಕಿನಲ್ಲೂ ಸಿಟಿ ಪೊಲೀಸರ ಮುಖ್ಯ ಕಚೇರಿಗಳಿವೆ. ಉತ್ತರಕ್ಕೆ ಕಾಟನ್‌ಪೇಟೆ ಠಾಣೆ, ದಕ್ಷಿಣಕ್ಕೆ ಸೆಂಟ್ರಲ್ ಎಸಿಪಿ ಕಚೇರಿ, ಪೂರ್ವಕ್ಕೆ ಸಿಸಿಬಿ, ಪಶ್ಚಿಮದಲ್ಲಿ ಪೊಲೀಸ್ ಕ್ವಾಟ್ರರ್ಸ್‌ಗಳಿವೆ. ಹೀಗೆ ನಾಲ್ಕೂ ದಿಕ್ಕಿನಲ್ಲೂ ಪೊಲೀಸರಿದ್ದರೂ ಬಿಜೆಪಿಯ ರೌಡಿ ಎಲಿಮೆಂಟ್ ಒಬ್ಬ ಕಾರ್ಪೋರೇಷನ್ ಎಲೆಕ್ಷನ್ ಗೆಲ್ಲಲು ಒಂದು ಮಗುವನ್ನು ಬಲಿ ನೀಡಿ ದಕ್ಕಿಸಿಕೊಳ್ಳುತ್ತಾನೆಂದರೆ ಏನರ್ಥ?

ರೌಡಿ ಕದಿರೇಶ ಬೆಂಗಳೂರು ಪೊಲೀಸರಿಗಿಂತ ದೊಡ್ಡವನಾ? ಬಲಿಷ್ಠನಾ?

## ಕದಿರೇಶನ ಮಾಟ-ಮಂತ್ರ

ಕೇವಲ ನರಬಲಿ ಮಾತ್ರವಲ್ಲ, ಈ ಕದಿರೇಶ ತನಗಾಗದವರ ವಿರುದ್ಧ ಮಾಟ-ಮಂತ್ರ ಮಾಡಿಸುತ್ತಾನೆಂತಲೂ ಆಂಜನಪ್ಪ ಗಾರ್ಡನ್‌ನಲ್ಲಿ ಪುಕಾರುಗಳಿವೆ. ಮುನೇಶ್ವರ ದೇವರು ಹಾಗೂ ಓಂ ಶಕ್ತಿ ಅಮ್ಮನನ್ನು ನಂಬುವ ಕದಿರೇಶ ಈಗ್ಗೆ ಕೆಲ ತಿಂಗಳ ಹಿಂದೆ ತನ್ನ ಇಬ್ಬರು ಹೆಂಡಿರ ಜಗಳದಲ್ಲಿ ಒಬ್ಬಳನ್ನು ರಕ್ಷಿಸಲು ಮರುಮಾಟ ಮಾಡಿಸಿದ್ದ. ಈಗ ಚಲುವಾದಿಪಾಳ್ಯದ ಬಿಜೆಪಿ ಕ್ಯಾಂಡಿಡೇಟ್ ರೇಖಾ ಈ ಕದಿರೇಶನ ಮೊದಲನೇ ಹೆಂಡತಿಯಾದರೆ, ಇನ್ನೊಬ್ಬಳು ಹೆಂಡತಿಯನ್ನು ಕದಿರೇಶ ಬೇರೆ ಏರಿಯಾದಲ್ಲಿ ಮನೆ ಮಾಡಿ ಇರಿಸಿದ್ದಾನೆ. ಅವಳ ವಿರುದ್ಧ ರೇಖಾ ಒಂದು ಸಾರಿ ಮಾಟ ಮಾಡಿಸಿದ್ದಾಳೆಂದು ಕದಿರೇಶನಿಗೆ ಗೊತ್ತಾಯಿತು. ರೇಖಾಳ ಮಾಟದಿಂದ ತನ್ನ ಎರಡನೇ ಹೆಂಡತಿಯನ್ನು ಕಾಪಾಡಲು ಇವನು ಅವಳ ತಲೆಗೂದಲು, ಉಗುರನ್ನು ಸಂಗ್ರಹಿಸಿ ತಂದು ಒಂದು ಮಡಿಕೆಯಲ್ಲಿರಿಸಿ ಮರುಮಾಟ ಮಾಡಿಸಿ ಮಡಿಕೆಯನ್ನು ಕೆಲದಿನ ತನ್ನ ಮನೆಯೊಳಗೆ ಇಟ್ಟುಕೊಂಡಿದ್ದ ನಂತರ ಆ ಮಡಕೆಯನ್ನು ಕದಿರೇಶನ ಮನೆಯ ಮುಂಭಾಗದಲ್ಲೇ ಹೂತು ಹಾಕುತ್ತಿದ್ದುದನ್ನು ಅನೇಕರು ಗಮನಿಸಿದ್ದರು.

ಮಗುವಿನ ನರಬಲಿ ಘಟನೆಯೂ ಇದೇ ರೀತಿಯಲ್ಲೇ ಜನರ ಗಮನಕ್ಕೆ ಬಂದಿದ್ದು. ಆಂಜನಪ್ಪ ಗಾರ್ಡನ್ನಿನ ಓಣಿಯೊಂದರಲ್ಲಿ ಈ ಕದಿರೇಶನ ಆಫೀಸಿದೆ. ಅದಕ್ಕೆ ಡಾ. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘವೆಂಬ ಬೋರ್ಡು ಹಾಕಲಾಗಿದೆ. ಆದರೆ ಅಲ್ಲಿ ಠಳಾಯಿಸುವವರೆಲ್ಲಾ ಶುದ್ಧ ಪೋರ್ಕಿಗಳೇ. ಇವರೆಲ್ಲಾ ಕದಿರೇಶನ ದುಡ್ಡಿಗೆ ಗುಲಾಮರಾಗಿರುವವರು. 2009ರ ನವೆಂಬರ್‌ನಲ್ಲಿ ಈ ಮಗು ಬಲಿ ನಡೆದು ಜನ ಅನುಮಾನಗೊಂಡಾಗ ಜನರನ್ನು ಬೆದರಿಸಿ ಬಾಯಿ ಮುಚ್ಚಿಸಿದವರು ಇದೇ ಗೂಂಡಾಗಳೇ. ಕಾಟನ್‌ಪೇಟೆ ಪೊಲೀಸರು ನರಬಲಿ ಪ್ರಕರಣ ಮುಚ್ಚಿಹಾಕಲು ಏನೇ ಪ್ರಯತ್ನ ಮಾಡಿದರೂ 'ಲಂಕೇಶ್' ಇಲ್ಲಿ ಪ್ರಕಟಿಸಿರುವ ಫೋಟೋಗಳು ನಿಜ ಏನೆಂದು ಹೇಳುತ್ತಿವೆ. ಶಿಶುವಿನ ಶವದ ಸುತ್ತ ಹರಡಿರುವ ಹೂವು, ಸೊಪ್ಪು, ನಿಂಬೆಹಣ್ಣು ಅರಿಶಿನ-ಕುಂಕುಮಗಳೇ ಅದು ಆಕಸ್ಮಿಕ ಸಾವಲ್ಲ ಎಂಬುದನ್ನು ಸಾರಿ ಸಾರಿ ಹೇಳುತ್ತಿವೆ. ಕದಿರೇಶನ ಮನೆಯ ಪಕ್ಕದಲ್ಲೇ ಅವನಿಗೆ ಇನ್ನೆರಡು ಮನೆಗಳಿವೆ. ಅದರಲ್ಲಿ ಒಂದನ್ನು ಅವನು ಟಾರ್ಚರ್ ಚೇಂಬರ್ ಆಗಿ ಬಳಸುತ್ತಾನೆ. ಸಾಲ ತಗೊಂಡು ಬಡ್ಡಿ ಕೊಡದವರು, ವಿರೋಧಿಗಳು, ತನಗೆ ಎದುರಾಡುವ ಜನರನ್ನು ಎಳೆತರಿಸಿ ಈ ಟಾರ್ಚರ್ ಮನೆಯಲ್ಲಿ ಹೊಡೆದು ಬಡಿದು ಹಿಂಸಿಸುವ ವಿಕೃತ ಹವ್ಯಾಸ ಕದಿರೇಶನಿಗಿದೆ.

ಈ ಶಿಶುವಿನ ನರಬಲಿ ನಡೆದಿರುವುದೂ ಅದೇ ಟಾರ್ಚರ್ ಮನೆಯಲ್ಲಿ ಎಂದು ಜನ ಅನುಮಾನ ಪಡುತ್ತಿದ್ದಾರೆ.

# ...ಕಟ್ಟಾ ಜಗ್ಗ ಎಂಬ ...ಹುಟ್ಟಾ ಮುಠ್ಠಾಳ

## ...ಮಗಿಂತಹ ಕಿರಾತಕ ಮೇಯರ್ ಬೇಕಾ?

ರಾಜಕೀಯಕ್ಕೆ ಬರುವ ಮೊದಲು ಸ್ಲಮ್ಮುಗಳನ್ನು ಅತಿಕ್ರಮಣ ಮಾಡುತ್ತಾ ಬಂದಿದ್ದ ಕಟ್ಟಾ ಸುಬ್ರಮಣ್ಯ ನಾಯ್ಡು ಇವತ್ತು ಸಾವಿರಾರು ಎಕರೆ ಭೂಮಿಯನ್ನೇ ಸ್ವಾಹಾ ಮಾಡಬಲ್ಲ. ಅವನ ಮಗ ಕಟ್ಟಾ ಜಗ್ಗನಂತೂ ಅಪ್ಪನಿಗಿಂತ ಒಂದು ಹೆಜ್ಜೆ ಮುಂದೆಯೇ! ಛೇ, ಇಂತವನು ಬೆಂಗಳೂರಿಗೆ ಮೇಯರ್ ಆಗಬೇಕೆ?

...ಚುನಾವಣೆ ನಂತರ ಕಾಂಗ್ರೆಸ್, ಜೆಡಿಎಸ್ ಮೈತ್ರಿ ...ಹೋದರೆ ಬದ್ಮಾಷ್ ಬಿಜೆಪಿ ಮೊದಲ ಸಲ ...ರು ಕಾರ್ಪೊರೇಷನ್‌ಗೆ ಅಮರಿಕೊಳ್ಳಲಿದೆ.

...ಮು ಮೊದಲ ಆತಂಕವಾದರೆ, ಎರಡನೆಯ ಆತಂಕ ...ಭೀಕರವಾಗಿದೆ. ಪಕ್ಕಾ ಪೋಕರಿ, ಅಷ್ಟೇ ಮಟ್ಟದ ... ಕಟ್ಟಾ ಜಗದೀಶ್ ಅಲಿಯಾಸ್ ಕಟ್ಟಾ ಜಗ್ಗ ...ರ್ ಗೌನು ಧರಿಸಲಿದ್ದಾನೆ! ಹೌದು, ವಾರ್ತಾ ...ಪ್ರಸಾರ ಸಚಿವ ಕಟ್ಟಾ ಸುಬ್ರಮಣ್ಯ ಮಗ ಕಟ್ಟಾ ...ನ್ನ ಮೇಯರ್ ಕುರ್ಚಿಯಲ್ಲಿ ಕೂಡ್ರಿಸಲು ಆರು ...ದ ತಾಲೀಮು ನಡೆಸಿದ್ದಾನೆ. ಕೌನ್ಸಿಲರ್ ಒಬ್ಬರಿಗೆ ...ಕ್ಷ ಮಡಗಲು ತಯಾರಾಗಿ ಕುಳಿತಿದ್ದಾನೆ. ...ನಗರದಿಂದ ಕಟ್ಟಾ ಜಗ್ಗ ಗೆದ್ದು ಬಿಜೆಪಿಗೆ ಬಹುಮತ ... ಕಟ್ಟಾ ಜಗ್ಗ ಹೆಚ್ಚೂಕಡಿಮೆ ಮೇಯರ್ ಆದಂತೆಯೇ!

...ಂಗಳೂರು ಬಿಜೆಪಿಗೆ ಇಂತಾ ದುಸ್ಥಿತಿ ಬಂದು ...? ಹಾಳಾಗ್ಲಿಬಿಡಿ, ಪಾಪ ಬೆಂಗಳೂರಿಗರ ಪಾಲಿಗೆ ...ತ ದೌರ್ಭಾಗ್ಯ ಬೇಕೆ? ಕಟ್ಟಾ ...ಂತಹ ಖತರ್‌ನಾಕ್ ನೆಲಗಳ್ಳ ...ದೇವನಹಳ್ಳಿ ಏರ್‌ಪೋರ್ಟ್ ...ತ್ತ ಈ ತಿಮಿಂಗಿಲ ನೂರಾರು ...ರೈತರ ಭೂಮಿಯನ್ನು ಸ್ವಾಹಾ ... ಅಪ್ಪ ಸಚಿವನ ಅಭಯ ...ಕರ್ನಾಟಕ ಕೈಗಾರಿಕಾ ...ಧಿ ಮಂಡಳಿ (ಕೆಐಎಡಿಬಿ)ಯ ...ಗಣ್ಣ ಅಧಿಕಾರಿಗಳ ಸಾಥ್, ...ಟಿಸಿದವರನ್ನು ಅಟ್ಟಾಡಿಸಿ ...ಮಲು ರೌಡಿ ಸುನೀಲನ ...... ಕಟ್ಟಾನ ಭೂದಾಹ ... ಇರುತ್ತಾ? ಇಂತಹವ ...ಸೂ ಮೇಯರ್ ಆದರೆ ಸಾವಿರ ಸಾವಿರ ಎಕರೆಗಳನ್ನು ... ಇರುತ್ತಾನಾ? ಕಾಮಗಾರಿಗಳಲ್ಲಿ ಗೋಲ್‌ಮಾಲ್ ...ರುತ್ತಾನಾ? ಕೆಐಎಡಿಬಿ ಬಳಸಿಕೊಂಡಂತೆ ...ರೇಷನ್ನನ್ನೂ ಬಿಡಿಎಯನ್ನೂ ಖರಾಬು ಮಾಡದೇ ...ನಾ?

... ಬೆಂಗಳೂರಿನ ಮತದಾರ ಈ ಕುರಿತು ...ಸಬೇಕಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ...ರು ಮತ್ತು ಹೊರವಲಯದಿಂದ ಗೆದ್ದ ಹದಿನೇಳು ...ಶಾಸಕರ ಪೈಕಿ ಹತ್ತು ಜನ ನೆಲಗಳ್ಳರೇ ಆಗಿದ್ದರು. ...ಲ್ಲಗಳ್ಳ ಶಾಸಕರೊಂದಿಗೆ ಒಬ್ಬ ಮಹಾಭೂಗಳ್ಳ ...ರ್ ಸೇರಿಬಿಟ್ಟರೆ ಇನ್ಮುಂದೆ ಬೆಂಗಳೂರಿನಲ್ಲಿ ...ಳಿಗೆ ಜಾಗ ಉಳಿಯುವುದು ಬಿಡಿ; ಇರುವ ...ಸೂ ಅತಿಕ್ರಮಣಕ್ಕೊಳಗಾಗಲಿವೆ. ಬೆಂಗಳೂರು ...ರೈತರಂತೂ ಭೂಮಿ ಕಳೆದುಕೊಂಡು ಬೀದಿಗೆ ...ದ್ದಾರೆ.

...ದಿಂದ ನೀವು ಯಾವುದೋ ಒಂದು ಕಾರಣಕ್ಕೆ ...ನೀಡುವ ಮತ ಪರೋಕ್ಷವಾಗಿ ಕಟ್ಟಾ ಜಗ್ಗನಿಗೆ .... ಅಂದರೆ ಒಬ್ಬ ಕ್ರಿಮಿನಲ್, ದರೋಡೆಕೋರನನ್ನು ... ಮಾಡಲು ಮತ ನೀಡಿದಂತೆ. ಬೆಂಗಳೂರು ...ರ ಗಮನಕ್ಕಿರಲೆಂದು ಕಟ್ಟಾ ಜಗ್ಗನ ಲ್ಯಾಂಡ್ ...ರಿ, ರೌಡಿಗ್ಯಾಂಗ್‌ಗಳು ನಡೆಸಿದ ಹಗಲುದರೋಡೆ ...ಫೋರ್ಜರಿಗಳ ಕೆಲವು ಸ್ಯಾಂಪಲ್‌ಗಳನ್ನು ಇಲ್ಲಿ ...ದ್ದೇವೆ.

... ಬಾರಿ ಹೆಬ್ಬಾಳದಲ್ಲಿ ಅಪ್ಪ ಕಟ್ಟಾ ಸುಬ್ರಮಣ್ಯನನ್ನು ... ಕಟ್ಟಾ ಜಗ್ಗ ಆಡದ ಆಟವಿಲ್ಲ. ಅಂಧ್ರದಿಂದ ... ಕರೆಸಿ ನಕಲಿ ವೋಟಿಂಗ್ ಮಾಡಿಸಿದ್ದ, ರೌಡಿ ಸುನೀಲನ ಪಡೆಯನ್ನು ಬೆನ್ನಿಗಿಟ್ಟುಕೊಂಡೇ ತಿರುಗುತ್ತಿದ್ದ ಜಗ್ಗ ಬಡ ಮುಸ್ಲಿಮರನ್ನು ಬೆದರಿಸಿ, 2-3 ಸಾವಿರ ಕೈಗಿತ್ತು ಐದಾರು ಸಾವಿರ ವೋಟರ್ ಕಾರ್ಡ್‌ಗಳನ್ನೇ ಖರೀದಿಸಿಬಿಟ್ಟಿದ್ದ. ದುಡಿದದ್ದಲ್ಲ, ಗಳಿಸಿದ್ದಲ್ಲ, ಹಡಬೆ ದುಡ್ಡು ಇತ್ತಲ್ಲ, ಹಣ, ಹೆಂಡ, ಸೀರೆ ಹಂಚಿ ಅಪ್ಪನನ್ನು ಗೆಲ್ಲಿಸಿದ. ಈಗ ವಸಂತನಗರದಲ್ಲಿ ಮತ್ತೆ ವೋಟು ಖರೀದಿಸಲು ಸ್ವತಃ ಜಗ್ಗನೇ ಬರುತ್ತಿದ್ದಾನೆ. ಜೊತೆಗೆ ರೌಡಿಪಡೆ ಇದ್ದೇ ಇರುತ್ತೆ.

ಹಿಂದೆ ಅಪ್ಪ ಸಮ್ಮಿಶ್ರ ಸರ್ಕಾರದಲ್ಲಿ ಕೈಗಾರಿಕಾ ಸಚಿವನಾಗಿದ್ದಾಗ ಜಗ್ಗ ಕೆರೆ, ಅರಣ್ಯಭೂಮಿಗಳನ್ನೇ ನುಂಗಿಹಾಕಿದ. ಚಿಕ್ಕನಾಗಮಂಗಲದ ಕೆರೆಭೂಮಿ ಜಗ್ಗನ ಉದರದ ಪಾಲಾಯ್ತು. ಹಾಗೆಯೇ ದೊಡ್ಡನಾಗಮಂಗಲದ ಅರಣ್ಯಭೂಮಿಯನ್ನೇ ಮುಂಡಾಮೋಚಿದ. ಪ್ರಶ್ನಿಸಿದ ಕಂದಾಯ ಅಧಿಕಾರಿ ಗವಿಯಪ್ಪನವರ ಮೇಲೆ ಗೂಂಡಾಗಿರಿ ನಡೆಸಿದ್ದ. ಇಂದಿಗೂ ಅಲ್ಲಿನ ಸ್ಟೇಷನ್ನಿನಲ್ಲಿ ಈ ಬಗ್ಗೆ ದಾಖಲಾದ ದೂರು ಇದೆ. ಆದರೆ ಜಗ್ಗನನ್ನು ಮುಟ್ಟುವವರಾರು?





ಹೇಗೂ ಅಪ್ಪನೇ ಕೈಗಾರಿಕಾ ಸಚಿವನಾಗಿದ್ದನಲ್ಲ... ಕೆಐಎಡಿಬಿಯನ್ನೇ ಹತೋಟಿಗೆ ತೆಗೆದುಕೊಂಡ ಜಗ್ಗ 'ಇಟಾಸ್ಕಾ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್' ಎಂಬ ನಕಲಿ ಕಂಪೆನಿಯನ್ನು ಹುಟ್ಟುಹಾಕಿ ಕಡಿಮೆ ದರದಲ್ಲಿ ರೈತರ ಭೂಮಿ ದೋಚತೊಡಗಿದ. ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೋಡಿಗೇಹಳ್ಳಿಯ 350 ಎಕರೆ ಜಮೀನನ್ನು ಮಂತ್ರಿಯಾಗುವ ಮೊದಲೇ ಕಟ್ಟಾ ಸುಬ್ರಮಣ್ಯ ಮಗ ಜಗ್ಗ, ಪತ್ನಿ ಸೌಭಾಗ್ಯರ ಹೆಸರಿಗೆ ಜಿಪಿಎ ಮಾಡಿಸಿಕೊಂಡು ಅನೇಕರಿಗೆ ಜುಜುಬಿ ಅಡ್ವಾನ್ಸನ್ನೂ ಕೊಟ್ಟಿದ್ದ. ಸಚಿವನಾದ ಮೇಲೆ ಕೆಐಎಡಿಬಿಯಿಂದ ನೋಟಿಫೈ ಮಾಡಿಸಿ ಭಾರೀ ಕೊಳ್ಳೆ ಹೊಡೆಯಲು ಹೊರಟಾಗ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಅಡ್ಡಬಂದಿದ್ದರು. ಎಕರೆಗೆ 15 ಲಕ್ಷ ಬಿಸಾಕಿ 350 ಎಕರೆ ಲಪಟಾಯಿಸಲು ಹೊರಟಿದ್ದ ಜಗ್ಗನಿಗೆ ಕುಮಾರಸ್ವಾಮಿಯ ಬಿಗಿನಿಲುವು ಅಡ್ಡಿಯಾಯಿತು. ಕೋಟಿಬೆಲೆಯ ಎಕರೆ ಭೂಮಿಗೆ 15ರ ಬದಲು 31 ಲಕ್ಷ ಕೊಡುವಂತಾಯ್ತು ದೇವನಹಳ್ಳಿಯ ಸುತ್ತಮುತ್ತಲಿನ ರೈತರಿದ್ದ 'ರೈತ ಹೋರಾಟ ಸಮಿತಿ' ಜಗ್ಗನ ನೆಲಗಳ್ಳತನಕ್ಕೆ ಅಡ್ಡವಾಗಿತ್ತು. ಮುಂದೆ ಬಿಜೆಪಿ ಪೂರ್ಣಪ್ರಮಾಣದಲ್ಲಿ ಅಧಿಕಾರಕ್ಕೆ ಬಂದ ಮೇಲಂತೂ ಜಗ್ಗನ ಅಟ್ಟಹಾಸ ಮಿತಿಮೀರಿತು. ಹೋರಾಟ ಸಮಿತಿಯ ಅಧ್ಯಕ್ಷ ಹೆಣ್ಣೂರಿನ ಡಿ.ಎಸ್.ಗೌಡರ ಮೇಲೆ ಬಿ.ಕೆ. ಮಂಜ ಮತ್ತು ಸುನೀಲನ ರೌಡಿಗಳನ್ನು ಛೂಬಿಟ್ಟಿದ್ದ ಜಗ್ಗ ಪ್ರಾಣಬೆದರಿಕೆಯನ್ನೂ ಹಾಕಿಸಿದ್ದ. ಈ ಬಗ್ಗೆಯೂ ಹೆಣ್ಣೂರಲ್ಲಿ ದೂರು ದಾಖಲಾಗಿದೆ.

ಬಿ.ಕೆ.ಪಾಳ್ಯ, ಅರೆಭಿನ್ನಮಂಗಲ, ಸಿಂಗಳ್ಳಿ, ಗೊಲ್ಲಹಳ್ಳಿ, ದುಮ್ಮನಹಳ್ಳಿ, ಹೂವಿನ ನಾಯಕನಹಳ್ಳಿಗಳ ನೂರಾರು ಎಕರೆಯನ್ನು ನಕಲಿ ಕಂಪೆನಿಗಳನ್ನು ತೋರಿಸಿ, ಕೆಐಎಡಿಬಿಯ ನೆರವಿನಿಂದ ನುಂಗಿ ನೀರು ಕುಡಿದ. ಕೆಐಎಡಿಬಿ ಯಾವ್ಯಾವ ಭೂಮಿಯನ್ನು ನೋಟಿಫೈ ಮಾಡುತ್ತಿತ್ತೋ ಅಥವಾ ಮಾಡಲಿದೆಯೋ ಅಂತಹ ಭೂಮಿಯನ್ನು ಕಟ್ಟಾ ಜಗ್ಗ ಖರೀದಿಸುತ್ತಾನೆ. ರೈತರ ಕೈಗೆ ಪುಡಿಗಾಸು ಕೊಟ್ಟು ಜಿಪಿಎ ಮಾಡಿಸಿಕೊಳ್ಳುತ್ತಾನೆ. ಕೆಐಎಡಿಬಿಯಿಂದ ತಾನು ಸರಿಯಾಗಿ ತಿಂದು ರೈತರ ಬಾಯಿಗೆ ಮೊಸರು ಒರೆಸುತ್ತಾನೆ.

### ಅಪ್ಪ-ಮಗನ ಫೋರ್ಜರಿ ಪುರಾಣ

ಇದನ್ನು ಇತ್ತೀಚೆಗಷ್ಟೇ ಜನವರಿಯಲ್ಲಿ 'ಲಂಕೇಶ್' ಬಯಲಿಗೆಳೆದಿತ್ತು. ವಾರ್ತಾ ಸಚಿವನಾಗಿದ್ದರೂ ಕಟ್ಟಾ ಸುಬ್ಬುಗೆ ಕೆಐಎಡಿಬಿ ಕೈಕೂಸಿನಂತಾಗಿದೆ. ಅದರಲ್ಲಿ ತನ್ನ ಕೂಸು ಜಗ್ಗನನ್ನು ಹೊಕ್ಕಿಸಿಬಿಟ್ಟಿದ್ದಾನೆ. ಕಳೆದ ವರ್ಷದಿಂದ ಈ ಜಗ್ಗ ಕಂಡುಕೊಂಡ ಹೊಸ 'ಕಲೆ' ಏನೆಂದರೆ, ಕೆಐಎಡಿಬಿ ಸಾವಿರಾರು ಎಕರೆ ಭೂಮಿಯನ್ನು ನೋಟಿಫೈ ಮಾಡುವಾಗ ಅಲ್ಲಿ ನಕಲಿ ಸರ್ವೆ ನಂಬರ್‌ಗಳಿರುವಂತೆ ನೋಡಿಕೊಳ್ಳುತ್ತಾರೆ. ಆ ಸರ್ವೆ ನಂಬರಿನಲ್ಲಿ ಭೂಮಿಯೇ ಇರುವುದಿಲ್ಲ. ಅಂತಾ 'ಭೂಮಿ'ಗೊಬ್ಬ ನಕಲಿ ಒಡೆಯನನ್ನು ಇವರೇ ಸೃಷ್ಟಿಸುತ್ತಾರೆ. ಮುಂದೆ ಭೂಸ್ವಾಧೀನ ಪ್ರಕ್ರಿಯೆ ಚಾಲೂ ಆದಾಗ ತಾವು ಸೃಷ್ಟಿಸಿದ ನಕಲಿ ರೈತರ ಹೆಸರಿಗೆ ಕೆಐಎಡಿಬಿಯಿಂದ ಪರಿಹಾರ ಗಿಂಜುತ್ತಾರೆ!

ಹಾಗೆಯೇ ಅನಕ್ಷರಸ್ಥ ರೈತರಿಗೆ ಕೆಐಎಡಿಬಿಯಿಂದ ಪರಿಹಾರ ಕೊಡಿಸ್ತೀವಿ ಅಂತಾ ಮೋಸ ಮಾಡುತ್ತದೆ ಜಗ್ಗನ ಗ್ಯಾಂಗ್. ಅದಕ್ಕೊಂದು ಉದಾಹರಣೆ ಬಂಡಿಕೋಡಿಗೆಹಳ್ಳಿ ದಲಿತ ಮುನಿ ಅಂಜನಪ್ಪನ ಪ್ರಕರಣ. ಮುನಿಅಂಜನಪ್ಪನಿಗೆ ಒಂದಿಷ್ಟು ಪಿತ್ರಾರ್ಜಿತ ಆಸ್ತಿ ಇತ್ತು. ಆ ಭೂಮಿ ನೋಟಿಫೈ ಆಗಿತ್ತು. ಕೆಐಎಡಿಬಿಯಿಂದ ಬೇಗ ಪರಿಹಾರಧನ ಕೊಡಿಸ್ತೀವಿ ಎಂದ ಜಗ್ಗನ ಗ್ಯಾಂಗ್ ಮುನಿಅಂಜನಪ್ಪ ಅಕೌಂಟಿಗೆ ನಾಲ್ಕು ಖಾಲಿ ಚೆಕ್ ಪಡೆಯಿತು. ಪರಿಹಾರಹಣ ಬಂದ ಕೂಡಲೇ ನಾಲ್ಕೂ ಚೆಕ್ ಬರೆದು ಲೂಟಿ ಮಾಡಿಬಿಟ್ಟಿತು ಕಟ್ಟಾ ಗ್ಯಾಂಗ್. ಒಂದು ಕೋಟಿ ದೋಚಿ ಮುನಿಅಂಜನಪ್ಪನಿಗೆ 24 ಲಕ್ಷ ಮಾತ್ರ ಬಿಟ್ಟಿತ್ತು. ಈ ಕುರಿತು ಜಗ್ಗನ ಮೇಲೆ ಏಪ್ರಿಲ್ 17, 2009ರಂದು ಮುನಿಅಂಜನಪ್ಪ ಬಾಗಲೂರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಮಂತ್ರಿಮಗ, ರೌಡಿ ಹಿಂಡು ಹೊಂದಿರುವ ಜಗ್ಗನಿಗ್ಯಾಕೆ ಪೊಲೀಸರ ಭಯ ಹೇಳಿ?

### ಸುನೀಲನನ್ನು ಉಳಿಸಿದ

ಇತ್ತೀಚೆಗೆ ಫೆಬ್ರವರಿ 16ರಂದು ಸುನೀಲನ ಎನ್‌ಕೌಂಟರ್ ಆಯ್ತು ಎಂದು, ಆಗಲಿದೆ ಎಂದು ಚಾನೆಲ್‌ಗಳಲ್ಲಿ ಸುದ್ದಿ ಬಂತಲ್ಲ, ಆದರೆ ಮರುದಿನ ರವಿವಾರ 17ರಂದು ಸಿಸಿಬಿಯವರು ಸುನೀಲ ಮತ್ತು ಗ್ಯಾಂಗನ್ನು ಬಂಧಿಸಿ ಸ್ಟೇಷನ್‌ಗೆ ಹಾಜರುಪಡಿಸಿದರು. ಆದರೆ 16ರಂದು ಅಲೋಕ್‌ಕುಮಾರ್ ತಂಡ ಸುನೀಲನ ಎನ್‌ಕೌಂಟರ್‌ಗೆ ಎಲ್ಲಾ ರೆಡಿ ಮಾಡಿಕೊಂಡಿತ್ತು. ಆದರೆ ಕಟ್ಟಾ ಸುಬ್ರಮಣ್ಯನ ಮೂಲಕ ರಾತ್ರೋರಾತ್ರಿ ಫೋನ್ ಮಾಡಿಸಿ ಎನ್‌ಕೌಂಟರ್ ತಪ್ಪಿಸಿದ್ದು ಕಟ್ಟಾ ಜಗ್ಗ ಮತ್ತು ಯಲಹಂಕದ ನಟೋರಿಯಸ್ ಚೆಡ್ಡಿ ಶಾಸಕ ವಿಶ್ವನಾಥ್. ಇವರಿಬ್ಬರಿಗೂ ಸುನೀಲನ ಗ್ಯಾಂಗು ಮಾಡಿದುಪಕಾರ ಕಡಿಮೆಯಿದೆಯೇ? ಬುಲೆಟ್ ರವಿ ಕೊಲೆ ಕೇಸಿನಲ್ಲಿ ಸಂಶಯಕ್ಕೊಳಗಾಗಿರುವ ಶಾಸಕ ವಿಶ್ವನಾಥನ ಮನೆಯಲ್ಲೇ ಜಗ್ಗನಿಗೆ ಸುನೀಲನ ಪರಿಚಯವಾಗಿದ್ದು.

ಲ್ಯಾಂಡ್ ರಾಬರಿಗೆ, ರೈತರನ್ನು ಹೆದರಿಸಲಿಕ್ಕೆ, ಕಾಂಪೌಂಡ್ ಹಾಕಿಸಲಿಕ್ಕೆ ಜಗ್ಗನಿಗೆ ರೌಡಿ ಸುನೀಲ್‌ರಂತವರು ಬೇಕೆ ಬೇಕು.


### ಈಗ ಹೇಳಿ ಇಂಥವ್ನು ಮೇಯರಾ?

ಹೀಗೆ ಸಾವಿರಾರು ಎಕರೆ ಭೂಮಿ ಕದಿವ, ಪ್ರಶ್ನಿಸಿದ ಅಧಿಕಾರಿಗಳು, ಪ್ರತಿಭಟಿಸಿದ ರೈತರ ಮೇಲೆ ರೌಡಿಗಳನ್ನು ಛೂಬಿಡುವ ಕಟ್ಟಾ ಜಗ್ಗನಂತವನು ಬೆಂಗಳೂರಿಗೆ ಮೇಯರ್ ಆದರೆ? ಇಲ್ಲಿ ಹೆಣ ಹೂಳಲೂ ಜಾಗ ಸಿಗದಂತಾಗುತ್ತೆ. ಸುನೀಲನಂತಹ ರೌಡಿಗಳು ಹಾಡುಹಗಲೇ ದರ್ಬಾರ್ ನಡೆಸಲು ಶುರು ಮಾಡುತ್ತಾರೆ. ಬಿಜೆಪಿಯಲ್ಲಿ ಒಂದಿಷ್ಟು ಸಭ್ಯರೆನಿಸಿರುವ ಸಚಿವ ಸುರೇಶಕುಮಾರರಂತಹವರು ಕಟ್ಟಾ ಜಗ್ಗನಂತವನನ್ನು ಮೇಯರ್ ಎಂದು ಪ್ರಾಜೆಕ್ಟ್ ಮಾಡುವುದನ್ನು ವಿರೋಧಿಸಬೇಕಲ್ಲವೇ?

ರಾಜಕೀಯಕ್ಕೆ ಬರುವ ಮೊದಲು ಸ್ಲಮ್ಮುಗಳನ್ನು ಅತಿಕ್ರಮಣ ಮಾಡುತ್ತಾ ಬಂದಿದ್ದ ಕಟ್ಟಾ ಸುಬ್ರಮಣ್ಯ ನಾಯ್ಡು ಇವತ್ತು ಸಾವಿರಾರು ಎಕರೆ ಭೂಮಿಯನ್ನೇ ಸ್ವಾಹಾ ಮಾಡಬಲ್ಲ. ಅವನ ಮಗ ಕಟ್ಟಾ ಜಗ್ಗನಂತೂ ಅಪ್ಪನಿಗಿಂತ ಒಂದು ಹೆಜ್ಜೆ ಮುಂದೆಯೇ! ಛೇ, ಇಂತವನು ಬೆಂಗಳೂರಿಗೆ ಮೇಯರ್ ಆಗಬೇಕೆ?

ಜಗ್ಗನನ್ನು ಬಗ್ಗಿಸುವ ಶಕ್ತಿ ಇರುವುದು ಈಗ ವಸಂತನಗರದ ಮತದಾರರಿಗೆ ಮಾತ್ರ! ಹಾಗೆ ಮಾಡಿದರೆ ಅವರು ಇಡೀ ಬೆಂಗಳೂರಿನ ಜನತೆಯ ಭವಿಷ್ಯ ಕಾಪಾಡಿದಂತೆ....

• ಪಿ.ಕೆ.ಮಲ್ಲನಗೌಡರ್



## ಕಟ್ಟಾ ಜಗ್ಗನ ವಿರುದ್ಧ ಕಾಂಗ್ರೆಸ್‌ನ ಡಮ್ಮಿ!

ಸಂತೆಗೆ ಮುನ್ನ ಗಂಟುಕಳ್ಳರು ಸೇರಿದ ಹಾಗೆ ಕಟ್ಟಾ ಮಗನನ್ನು ಮೇಯರ್ ಮಾಡಲು ಕಾಂಗ್ರೆಸ್‌ನ ಓರ್ವ ನಾಯಕರೂ ಕೈಜೋಡಿಸಿದ್ದಾರೆ ಎಂಬ ಗುಲ್ಲು ಹಬ್ಬಿದೆ. ಸದ್ಯ ವಸಂತನಗರ ವಾರ್ಡ್‌ಗೆ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಬಿ.ಆರ್. ನಾಯ್ಡು ಹೇಳಿಕೇಳಿ ಡಮ್ಮಿ ಅಭ್ಯರ್ಥಿ. ಸಾಲದ್ದಕ್ಕೆ ಮಂತ್ರಿ ಕಟ್ಟಾನ ದೂರದ ಸಂಬಂಧಿ ಬೇರೆ.

ಈಗ ಕಟ್ಟಾ ಮಗ ನಿಂತಿರುವ ವಸಂತನಗರ ವಾರ್ಡು ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಜಗ್ಗನ ವಿರುದ್ಧ ಸ್ಪರ್ಧಿಸಿರುವ ಬಿ.ಆರ್.ನಾಯ್ಡು ಸ್ಥಳೀಯ ಯುವ ಕಾಂಗ್ರೆಸ್‌ನ ಬ್ಲಾಕ್ ಅಧ್ಯಕ್ಷ. ಈತನನ್ನು ಯಾಕೆ 'ಡಮ್ಮಿ' ಅಭ್ಯರ್ಥಿ ಎಂದು ಕರೆಯುತ್ತಿದ್ದಾರೆಂದರೆ ಈತ ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೂ ಈತನಕ ಪ್ರಚಾರಕ್ಕೆ ಇಳಿದಿಲ್ಲ, ಕಟ್ಟಾ ವಿರುದ್ಧವಾಗಲಿ ಆತನ ಮಗನ ವಿರುದ್ಧವಾಗಲಿ ಕಾಟಾಚಾರಕ್ಕೂ ಈತನಿಗೆ ಸಿಟ್ಟಿಲ್ಲ. ಕನಿಷ್ಠ ಪತ್ರಕರ್ತರೇ ಫೋನ್ ಮಾಡಿ ಗೋಗರೆದರೂ ತನ್ನದೊಂದು ಫೋಟೊ ಕೊಡಲಾರ. ವಿಕಟವೆಂದರೆ ತಾನೇ ಮೇಲೆ ಬಿದ್ದು ಕಟ್ಟಾ ಗುಣಗಾನ ಮಾಡುತ್ತಾನೆ.

ತನ್ನ ಮಗನನ್ನು ಮೇಯರ್ ಮಾಡಲು ತಾನೇ ರೊಕ್ಕ ಕೊಟ್ಟು ಕಾಂಗ್ರೆಸ್ ಟಿಕೆಟ್ ಖರೀದಿಸಿದ ಕಟ್ಟಾ ಮತ್ತು ಆತನ ಮಗ ಜಗ್ಗ ಬೆಂಗಳೂರಿಗೆ ಇನ್ನೆಂತೆಂತಹ ಅನಾಹುತಗಳನ್ನು ಮಾಡಿಯಾರು?!

# ಉತ್ತರ ಕನ್ನಡ: ಜಾಹೀರಾತು ಮೇನಿಯಾ ಮತ್ತು ಡಾ. ಡಿಸಿ




ಉತ್ತರ ಕನ್ನಡ ಜಿಲ್ಲೆಯಲ್ಲಿ ಘಾತುಕ ಜಾಹೀರಾತು ಸಂಸ್ಕೃತಿ ಹುಟ್ಟುತ್ತಿದೆ. ಮನುಷ್ಯನ ಕ್ರಿಯಾಶೀಲತೆ, ನೈತಿಕತೆ, ನೈಜ ಜೋಣಗಾರಿಕೆ, ಕೊನೆಗೆ ಕನಿಷ್ಠ ಲಜ್ಜೆಯನ್ನೂ ಈ ಜಾಹೀರಾತು ಮೇನಿಯಾ ಹೊಸಕಿ ಹಾಕುತ್ತಿದೆ. ಸಮಾಜದಲ್ಲಿ ಮೂರು ಕಾಸಿನ ಕಿಮ್ಮತ್ತಿಲ್ಲದ ಕಳ್ಳ ಹೂಡದ ಕೊಳಕರು ಯಾರ್‍ಯಾರದೋ ಹೆಸರಲ್ಲಿ ತಮಗೆ ತಾವೇ ತಾರೀಫು ಮಾಡಿಕೊಂಡು ವಿಕೃತಾನಂದ ಅನುಭವಿಸುತ್ತಿದ್ದಾರೆ. ಗೋಲ್‌ಮಾಲ್ ಗಿರಾಕಿಗಳು, ಜನದ್ರೋಹಿ ಪುಢಾರಿಗಳು ಮತ್ತು ಖದೀಮ ಅಧಿಕಾರಿಗಳು ಕಾಸು ಕೊಟ್ಟುಕೊಂಡು ಪತ್ರಿಕೆಗಳಲ್ಲಿ 'ಮಹಾನ್ ಸಾಧಕ'ರಾಗಿ ಮಿಂಚುತ್ತಿದ್ದಾರೆ.

ಜಿಲ್ಲೆಯಲ್ಲಿ ಬುಜುಬಿ ಜಾಹೀರಾತು ತಲಬು ಬೆಳೆಸಿದ "ಕೀರ್ತಿ" ಧನದಾಹಿ ಸಂಪಾದಕ ಶ್ರೇಷ್ಠನೊಬ್ಬನಿಗೆ ಸಲ್ಲಬೇಕು! ಜಾಹೀರಾತಿಗೆ ಯೋಗ್ಯವಲ್ಲದ, ತೀರಾ ಪರ್ಸನಲ್, ಸಾರ್ವತ್ರಿಕವಾಗುವಂಥದ್ದಲ್ಲದ ಮತ್ತು ಹುಸಿ-ಹುಸಿ ಬಂಡಲ್ ಸಂಗತಿಗಳಿಗೆ 'ಜಾಹೀರಾತು' ಮಾನ್ಯತೆ ನೀಡಿದ್ದು ಇಲ್ಲಿನ ಒಂದು ಮುಂಜಾನೆ ಪತ್ರಿಕೆ. ಇದೀಗ ಶಿರಸಿ ಮೂಲದ ಪತ್ರಿಕೆಯೊಂದು ತಾನೇನೂ ಕಮ್ಮಿಯಲ್ಲವೆಂದು ತೋರಿಸಲು ಕೊಸರಾಡುತ್ತಿದೆ.

ಈ ಎಡವಟ್ಟು ಅಡ್ವರ್‌ಟೈಸ್‌ಮೆಂಟ್ ಆರ್ಭಟ ಅದೆಷ್ಟು ಹಾರಿಬಲ್ ಆಗಿದೆಯೆಂದರೆ, ಕೆಲವು ಸಲ ಸದ್ರಿ ಪತ್ರಿಕೆಗಳ ಪುಟ-ಪುಟದಲ್ಲೂ ಜಾಹೀರಾತು ತುಂಬಿರುತ್ತದೆ. ಇದು ವಾರ್ತಾ ಪತ್ರಿಕೆಯೋ ಅಡ್ವರ್‌ಟೈಸ್‌ಮೆಂಟ್‌ನ ಪ್ರಾಯೋಗಿಕ ಸಂಚಿಕೆಯೋ ಎಂಬುದೇ ಅರ್ಥವಾಗದಷ್ಟು ಗಬ್ಬೆದ್ದಿರುತ್ತದೆ.

ಈ ಪತ್ರಿಕೆಗಳಲ್ಲಿ ಬರುತ್ತಿರುವ ಜಾಹೀರಾತುಗಳು ಅದೆಷ್ಟು ಕೆಟ್ಟ ಅಭಿರುಚಿಯವುಗಳೆಂದರೆ, ಕೌಟುಂಬಿಕ-ಖಾಸಗಿ ಖುಷಿ-ಆಚರಣೆ- ಸಂಪ್ರದಾಯಗಳು ಒಣ ಪ್ರತಿಷ್ಠೆಗೆ ಬಹಿರಂಗವಾಗುತ್ತಿವೆ! ದೋಖಾ ಸಮಾಜ ಸೇವಕರು, ಸರ್ಕಾರಿ ನೌಕರರು, ನಿಷ್ಪ್ರಯೋಜಕ ಅಮಾಯಕರಿಗೆಲ್ಲ ವಿಷ್ ಮಾಡುವ ನೆಪದಲ್ಲಿ ಫೋಟೋ ಸಹಿತ ಆ್ಯಡ್ ಕೊಟ್ಟು ಹಲ್ಲು ಕಿಸಿಯುತ್ತಿದ್ದಾರೆ.

ಪ್ರಾಮಾಣಿಕರ್‍ಯಾರು-ನಿಜ ಸಾಧಕರ್‍ಯಾರು-ವಂಚಕ ಪ್ರಚಾರಪ್ರಿಯರ್‍ಯಾರೆಂಬುದೇ ಸಾಮಾನ್ಯ ಜನರಿಗೆ ಅರ್ಥವಾಗದೆ ದಿಕ್ಕೆಡುವಂಥ ಅವಾಂತರಕಾರಿ ಆ್ಯಡ್‌ಗಳನ್ನು ಜಿದ್ದಿಗೆ ಬಿದ್ದಂತೆ ಪತ್ರಿಕೆಗಳು ಪ್ರಕಟಿಸುತ್ತಿವೆ. ಶಾಸಕ, ಜಿಪಂ ಸದಸ್ಯ ಗ್ರಾಪಂ ಸದಸ್ಯ ಶಾಸನಸಭೆ ಅಥವಾ ಇನ್ನಾವುದೋ ಸಮಾರಂಭದಲ್ಲಿ ಸ್ಥಳೀಯ ಗಟಾರ-ಕಕ್ಕಸಿನ ಬಗ್ಗೆ ಮಾತಾಡಿದರೂ ಸಾಕು, ಆ ಸಮಸ್ಯೆ ಪರಿಹಾರವಾಗದಿದ್ದರೂ ಅದೊಂದು ಮಹತ್ ಸಾಧನೆಯಾಗಿ ಸಂಬಂಧಿಸಿದ ಜನಪ್ರತಿನಿಧಿಗೆ ಅಭಿನಂದನೆಯ ಜಾಹೀರಾತುಗಳು ಬರುತ್ತವೆ. ಈ ಜಾಹೀರಾತುದಾರರು ಬೇರ್‍ಯಾರೂ ಅಲ್ಲ, ಶಾಸಕ ಅಥವಾ ಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಯಿಂದ ಲಾಭ ಪಡೆದವರು ಅಥವಾ ಅವರ ಪುಂಡ-ಪೋಲಿ ಚೇಲಾಗಳು!

ಈ ದೌಲು-ದುರಹಂಕಾರದ ಜಾಹೀರಾತುಗಳು ತುಂಬ ದುಬಾರಿ! ಕಾಲು-ಅರ್ಧ-ಒಂದು ಪುಟದ ಆ್ಯಡ್‌ಗೆ ಹತ್ತಿಪ್ಪತ್ತು ಸಾವಿರಕ್ಕಿಂತ ಕಡಿಮೆ ಇಲ್ಲ!! ಮರಳು ಮಾಡುವ ವಿನ್ಯಾಸದ ಈ ಆ್ಯಡ್‌ನಲ್ಲಿ ಜಾಹೀರಾತುದಾರರು ಮತ್ತು ಜಾಹೀರಾತಿಸಲ್ಪಡುವವರ ತರಹೇವಾರಿ ಭಂಗಿಯ ಫೋಟೋ ರಾರಾಜಿಸುತ್ತವೆ. ಮ್ಯಾಟರಂತೂ "ಪೆಕ್ಯೂಲಿಯರ್!" ಕೆಲವು "ಡಂಗುರ ಪ್ರಕಟಣೆ"ಗಳಂತೂ ವಾಕರಿಕೆ ಹುಟ್ಟಿಸುವಂತಿರುತ್ತವೆ. ಯಾರದೋ ಹೆಂಡತಿ ಹಡೆದು ಪುತ್ರೋತ್ಸವವಾದರೆ, ಹುಟ್ಟುಹಬ್ಬವಾದರೆ, ಇನ್ಯಾರೋ ಮಧುಚಂದ್ರಕ್ಕೆ ಹೋದರೆ, ದುಡ್ಡಿದ್ದವರ ಮಕ್ಕಳು ವಿಮಾನದಲ್ಲಿ ಹಾರಿದರೆ, ರೈಲು ಬಿಟ್ಟರೆ, ಕೆಲಸಕ್ಕೆ ಬಾರದ ಸೆಮಿನಾರಿಗೆ ಹೋದರೆ, ದುಡ್ಡು ಕೊಟ್ಟು ಬೋಗಸ್ ಉದ್ಯೋಗ ರತ್ನವೋ, ಇನ್ನಾವುದೋ ಸರ್ಕಾರಿ-ಖಾಸಗಿ ಪ್ರಶಸ್ತಿ ಕೊಂಡುಕೊಂಡರೆ ಅದಕ್ಕೂ ಅಭಿನಂದನೆ.

ಸೋಗಲಾಡಿ ಪೊಲೀಸ್ ಅಧಿಕಾರಿಯೊಬ್ಬ ಪಿಕ್‌ಪಾಕೆಟ್ ಕಳ್ಳನಬೆನ್ನಟ್ಟಿ ಬರಿಗೈಲಿ ವಾಪಸ್ ಬಂದರೂ 'ಸೂಪರ್‌ಕಾಪ್' ಎಂಬ ಜಾಹೀರಾತು. ಶಾಸಕ-ಸಂಸದ ಎಮ್ಮೆಲ್ಲೆ-ಎಂಪಿ ಫಂಡಿನ ಹಣ ಹಳ್ಳಿ ಕಾಮಗಾರಿಗೆ ಕೊಟ್ಟರೆ ಆತ ಕೊಡುಗೈ ದಾನಿ!! ಪ್ರಕೃತಿ ವಿಕೋಪದಲ್ಲಿ ಸತ್ತವರ ಸಂಬಂಧಿಗಳಿಗೆ ಸರ್ಕಾರಿ ಪರಿಹಾರದ ಚೆಕ್‌ಅನ್ನು ಸಂಸದ-ಶಾಸಕ ಕೊಟ್ಟರೆ ಆತ ಜನಪ್ರಿಯ ಜನಪ್ರತಿನಿಧಿ.

ಇದಕ್ಕಿಂತ ದೊಡ್ಡ ದುರಂತವೆಂದರೆ, ಕಡ್ಡಿಯನ್ನು ಗುಡ್ಡಮಾಡಿ ಸೆನ್‌ಸೇಷನಲ್ ಆಗಿ ಜಾಹೀರಾತಗಳನ್ನು ಪತ್ರಿಕಾ ಪ್ರಭೃತಿಗಳು ಪ್ರಕಟಿಸುವುದು! ಶಾಸಕ, ಸಂಸದ, ಮಂತ್ರಿ ಸಾರ್ವಜನಿಕ ಕಾಮಗಾರಿಗೆ ಅವರಪ್ಪನ ಮನೆ ಹಣವೇನಾದರೂ ಕೊಡ್ತಾನಾ? ಅಧಿಕಾರಿ ಎಂಬ ಸರ್ಕಾರಿ ನೌಕರ ಮಾಡುವ ಚಾಕರಿಗೇಕೆ ಶಹಬ್ಬಾಸ್‌ಗಿರಿ? ಇದು ಕರ್ತವ್ಯವೋ? ಸಾಹಸವೋ? ಸಾಧನೆಯೋ? ಈ ಎಚ್ಚರ ಇರಬೇಕಾದ್ದು ಪತ್ರಿಕೆಯ ಸಂಪಾದಕನಿಗೆ.

ಇಲ್ಲಿರುವ ಪ್ರಶ್ನೆ ತುಂಬ ಸರಳ. ಇಂಥ ಮೋಸ-ವಂಚನೆ-ಆತ್ಮರತಿಯ ಬೋಗಸ್ ಜಾಹೀರಾತು ಬಂದಾಗ ಸಂಪಾದಕರು ಪತ್ರಿಕಾ ಧರ್ಮದ ಸೂಕ್ಷ್ಮ ಮರೆತು ಯಾಮಾರುವುದು ಅಕ್ಷಮ್ಯ ಅಲ್ಲವೇ ಎಂಬುದು. ಹಣ ಬೇಕು ನಿಜ; ಇದು ಜಾಹೀರಾತು ಜಮಾನಾನೇ ಇರಬಹುದು. ಹಾಗಂತ ತೀರಾ ಖಾಸಗಿತನ-ಢೋಂಗಿತನ ವಿಜೃಂಭಿಸುವ ಜಾಹೀರಾತಿಂದ ದುಡ್ಡು ಮಾಡುವುದು ಘೋರ ಸಮಾಜ ದ್ರೋಹವೇ ಸರಿ!!

ಉತ್ತರ ಕನ್ನಡದ ಪತ್ರಿಕೆಗಳ ಆ್ಯಡ್ ಗಂಡಾಗುಂಡಿ ಮತ್ತು ಅಡ್ಡಕಸುಬಿಗಳ ಪ್ರಚಾರ ವ್ಯಾಮೋಹದಿಂದ ಸರ್ಕಾರಿ ಬೊಕ್ಕಸಕ್ಕೇ ಕನ್ನ ಬಿದ್ದ ಭಾನ್ಗಡಿಯೊಂದು ಮೊನ್ನೆ ನಡೆದಿದೆ. ಜಿಲ್ಲಾಧಿಕಾರಿ ಚನ್ನಪ್ಪ ಗೌಡರಿಗೆ ಮೈಸೂರು ವಿಶ್ವವಿದ್ಯಾಲಯ ಈಚೆಗೆ ಪಿಎಚ್‌ಡಿ ಕೊಟ್ಟಿತ್ತು, ಅದಕ್ಕಾಗಿ ಡಿಸಿ ಸಾಹೇಬರನ್ನು ಜಿಲ್ಲೆಯ ಅಷ್ಟೂ ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಿಂದ ಬಹುಪರಾಕ್ ಜಾಹೀರಾತು ಸರಣಿಯಾಗಿ ಕೊಡುವ ಸ್ಕೆಚ್ ಹೆಣೆಯಲಾಗಿತ್ತು, ಆ ಆ್ಯಡ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಎಲ್ಲ ಸದಸ್ಯರು-ಕಮಿಷನರ್‌ಗಳ ಫೋಟೋ ಜತೆ ಡಿಸಿ ಸಾಹೇಬರು ಥಳಥಳಿಸುವಂತೆ ವಿನ್ಯಾಸ ಮಾಡಲಾಗಿತ್ತು, ಬಿಲ್ ಸ್ಥಳೀಯ ಸಂಸ್ಥೆಗಳಿಗೆ!

ಈ ಜಿಲ್ಲಾಧಿಕಾರಿ ಉತ್ತರ ಕನ್ನಡಕ್ಕೆ ಬಂದು ಒಂದು ವರ್ಷ ಕಳೆದಿದೆ. ಈ ಅವಧಿಯಲ್ಲೀತ ಜನಪರವಾಗಿ 'ದಂಡ' ಪ್ರಯೋಗಿಸಿದ್ದಕ್ಕಿಂತ ಮಂತ್ರಿದ್ವಯರ ಮರ್ಜಿ ಕಾದಿದ್ದೇ ಹೆಚ್ಚು. ಜಿಲ್ಲೆಯಲ್ಲಿ ಅದಿರು ಲಾರಿಗಳು ಪಡೆಯುತ್ತಿರುವ ನರ ಬಲಿ, ಅದಿರು ಉದ್ಯಮಿಗಳು ಕಾನೂನು ಉಲ್ಲಂಘಿಸಿ ಜನಸಾಮಾನ್ಯರ ಬದುಕು ನರಕವಾಗಿಸುತ್ತಿರುವುದೊಂದೇ ಸಾಕು; ಈ ಡಿಸಿ ಸಾಹೇಬರು ಅದೆಷ್ಟು ದಕ್ಷ-ಕರ್ತವ್ಯ ನಿಷ್ಠರೆಂಬುದನ್ನು ತೋರಿಸುತ್ತದೆ. ಜಿಲ್ಲೆಯ ಕಂದಾಯ ಇಲಾಖೆಯಲ್ಲಂತೂ ಲಂಚಾವತಾರ ತಾಂಡವವಾಡುತ್ತಿದೆ. ಸ್ವತಃ ಜಿಲ್ಲಾಧಿಕಾರಿ ಗೌಡರೇ ಸುಮಾರು 100 ಕೋಟಿ ರೂ.ಗಳ ಕಾಮಗಾರಿ ಕಾಳಿ ನಿರ್ಮಿತಿ ಕೇಂದ್ರ ಮತ್ತು ಲ್ಯಾಂಡ್ ಆರ್ಮಿ ಎಂಬ ಅನರ್ಹ ಏಜೆನ್ಸಿಗಳಿಗೆ ವಹಿಸಿದ್ದು ಅನುಮಾನಾಸ್ಪದವಾಗಿದೆ. ಈ ಅಪಾರದರ್ಶಕ ಪ್ರಕ್ರಿಯೆ ಡಿಸಿ ಸಾಹೇಬರು ಮಂತ್ರಿ ಕಾಗೇರಿಯ ಹಿತಾಸಕ್ತಿ ಕಾಯಲು ಮಾಡಿದರೋ ಅಥವಾ ಪರ್ಸೆಂಟೇಜ್ ಆಸೆಗೆ ಕಾಗೇರಿಗೆ ಮಾ[...] ಹಳಿ ತಪ್ಪಿಸಿದರೋ? ಇದು ಅವರಿಬ್ಬರಿಗೆ ಮಾ[...] ಗೊತ್ತಿರುವ ರಹಸ್ಯ! ಈ ಡೀಲ್‌ನಲ್ಲಿ ಕಾಗೇರಿಗೆ [...] 10 ಮತ್ತು ಡಿಸಿಗೆ ಒಂದಿಷ್ಟು ಕಮಿಷನ್ ಸಿಕ್ಕಿದೆ ಎಂಬುದು ಟಾಕ್ ಆಫ್ ದಿ ಡಿಸ್ಟ್ರಿಕ್ಟ್! ಜಿಲ್ಲೆಯ ಇಬ್ಬರು ಮಂ[...]ಗಳ ಪವರ್‌ಕ್ಲಾಪ್‌ನಲ್ಲಿ ಕ್ರಶ್ ಆಗಿದ್ದ ಚೆನ್ನಪ್ಪಗೌಡ ಜನಪ[...] ಪೋಸು ಕೊಡುತ್ತಲೇ ಹೇತ್ಲಾಂಡಿ ಜಿಲ್ಲಾಧಿಕಾರಿ ಎನಿ[...]ಕೊಂಡಿದ್ದಾರೆ.

ಇಂಥ ಡಿಸಿಗೆ ಮೊನ್ನೆ ಡಾಕ್ಟರೇಟ್ ಬಂದಿದ್ದೇ ತಡ[...] ಸಾಹೇಬರ ಪ್ಲೀಜ್ ಮಾಡಲು ಎಚ್‌ಕ್ಯೂಎ ನರಸಿಂ[...]ಮೂರ್ತಿ ಎಂಬ ಲೇವಾದೇವಿ ಪ್ರವೀಣ ಎಲ್ಲ ಮುನ[...]ಪಾಲಿಟಿಗಳಿಗೆ 'ಡಾ. ಡಿಸಿಗೆ' ಅಭಿನಂದಿಸುವ ಜಾಹೀರಾತು ಸ್ಥಳೀಯ ಪತ್ರಿಕೆಗೆ ಕೊಡುವಂತೆ ಫರ್ಮಾನ್ ಹೊರಡಿಸಿಬಿಟ್ಟರು. ಮೊದಲೆರಡು ದಿನ ಕಾರವಾರ ನಗ[...] ಸಭೆ ಮತ್ತು ಅಂಕೋಲಾ ಪುರಸಭೆ ಅರ್ಧರ್ಧ ಪು[...] ವರ್ಣರಂಜಿತ ಅಭಿನಂದನಾ ಆ್ಯಡ್ ಪ್ರಕಟವೂ ಆಯ[...]

ಮೂರನೇ ದಿನದ ಹೊತ್ತಿಗೆ ಡಿಸಿ ಸಾಹೇಬರಿ[...] ಜ್ಞಾನೋದಯವಾಗಿದೆ. ಪತ್ರಿಕಾಲಯಗಳಿಗೆ ಫೋನಾಯಿ[...] ಆ್ಯಡ್ ನಿಲ್ಲಿಸಿದ್ದಾರೆ. ಏನಿದರ ಗುಟ್ಟು? ಜಾಹೀರಾ[...] ಭಟ್ಟಂಗಿತನ ಡಿಸಿಗೆ ಹೇಸಿಗೆ ಹುಟ್ಟಿಸಿತಾ? ಅಥವಾ ಇದೊಂದು ರಾದ್ಧಾಂತವಾಗಿ ಉಲ್ಟಾ ಹೊಡೀಬಹುದೆಂದ[...] ಆ್ಯಡ್ ಸ್ಟಾಪ್ ಮಾಡಿಸಿದರಾ? ಡಿಸಿ ಗೌಡರು ಅಷ್ಟು ಪ್ರಾಮಾಣಿಕರೇ ಆಗಿದ್ದರೆ ತಕ್ಷಣ ಈ ಜಾಹೀರಾತು ಕುಚೇ[...] ಮಾಡಿದ ಅಧಿಕಾರಿಯನ್ನು ಅಮಾನತ್ತು ಮಾಡಬೇಕಿತ್ತಲ್ಲವೇ? ಈಗಾಗಲೇ ಬಂದಿರುವ ಆ್ಯಡ್ ಬಿಲ್ ಅನ್ನು ಸ್ಥಳೀಯ ಸಂಸ್ಥೆ ತುಂಬಿಸದೆ ಅಧಿಕಪ್ರಸಂಗಿ ಅಧಿಕಾರಿಯ ಕುತ್ತಿಗೆಗೇ ಕಟ್ಟಬೇಕು. ಆಗ ಮಾತ್ರ ಇಂಥ ಬುರ್ನಾಸ[...] ಜಾಹೀರಾತು ಚಟದ ಅಧಿಕಾರಿಗಳು ಪಾಠಕಲಿತಾರು[...]

ಅಷ್ಟಕ್ಕೂ ಈ ಡಾಕ್ಟರೇಟದೆಯಲ್ಲ ಅದ[...] ಐಎಎಸ್‌ನಂಥ ಅಧಿಕಾರಿಗೆ ಸಿಕ್ಕಿರುವುದು ಮು[...]ಪಾಲಿಟಿ ಆಡಳಿತಗಾರರಿಂದ ಅಥವಾ ಕಂದಾಯ ಇಲಾಖೆಯ ಅಧೀನ ನೌಕರರಿಂದ "ಶಹಬ್ಬಾಸ್" ಅನ್ನಿಸಿಕೊಳ್ಳುವಂಥ ಸಾಧನೆಯೇನಲ್ಲ. ಇದು ಜಿಲ್ಲಾಧಿಕಾರಿಯ ಘನತೆಗು[...]ಕುಂದೇ. ಡಿಸಿಗೆ ಅದೇ ಕೇಡರಿನ ಎಸಿಪಿ, ಜಿಪಂ ಸಿಇ[...] ಅಥವಾ ಕಂದಾಯ ಸೆಕ್ರೆಟರಿ-ಶಾಸಕ-ಮಂತ್ರಿಯೇನಾದರೂ ಸ್ವಂತ ಹಣದಿಂದ ಅಭಿನಂದಿಸಿ ಆ್ಯಡ್ ಕೊಟ್ಟಿದ್ದ[...] ಅದಕ್ಕೊಂದು ತೂಕ ಇರುತ್ತಿತ್ತು. ಇಂಥ ಕೆಲಸಕ್ಕೆ ಬಾರ[...] ಲಕ್ಷ-ಲಕ್ಷ ಡಾಕ್ಟರೇಟ್‌ಗಳು ಇಂಡಿಯಾದಲ್ಲಿ ಪ್ರತಿ ವರ್ಷ ಕೊಡಲಾಗುತ್ತಿದೆ. ಇದರಲ್ಲಿ ಪ್ರತಿಭೆಗಿಂತ ಪ್ರಭಾವ[...] ಪ್ರಲೋಭನೆ, ಕಾಸುಗಳಿಗೆ ಡಾಕ್ಟರೇಟ್ ಬಿಕರಿಯಾಗು[...]ವುದೇ ಹೆಚ್ಚು! ಇದೆಲ್ಲರಿಗೂ ಗೊತ್ತಿರುವ ಕಟು ವಾಸ್ತವ.


ಇನ್ನಾದರೂ ಪತ್ರಿಕಾಧಣಿಗಳು ಸರ್ಕಾರಿ ಹ[...] ಪೋಲು ಮಾಡುವ ಮತ್ತು ಒಣ ಪ್ರತಿಷ್ಠೆಯ ಬೋಗ[...] ಜಾಹೀರಾತು ತರುವವರಿಗೆ "ಬುದ್ಧಿ" ಹೇಳಿ ಕಳಿಸಿದರೆ ಅದು ಜಿಲ್ಲೆಯ ಸೌಭಾಗ್ಯವೇ ಸರಿ! ಗೋಮು[...] ವ್ಯಾಘ್ರಗಳು-ಅಯೋಗ್ಯರು- ದೂ(ದು)ರಾಲೋಚನೆ[...] ಹಿಕಮತ್ತುಗಾರರು ಕೊಡುವ ಜಾಹೀರಾತಿನಿಂದ ನಾಗರಿಕ ಸಮಾಜಕ್ಕೆ ತೊಂದರೆ-ಹಾನಿಯಾದರೆ ಅದರ ಪಾಪ ಪತ್ರಿಕೆ ಒಡೆಯರ ಬಳಗಕ್ಕೆ ಖಂಡಿತ ತಟ್ಟೇ ತಟ್ಟುತ್ತದೆ. ಅಲ್ಲವೇ[...]

● ವರದಿಗಾ[...]

## ಜಾತಿ ವೈಷಮ್ಯದ ಕೆನ್ನಾಲಿಗೆಗೆ ಕನ್ನಲಿ ಬಲಿಯಾಗುತ್ತದೆಯೇ?

ಮಂಡ್ಯ ತಾಲ್ಲೂಕಿನ ಕನ್ನಲಿ ಗ್ರಾಮದ ದಲಿತರು ಚನ್ನಕೇಶವನ ದೇವಸ್ಥಾನವನ್ನು ಪ್ರವೇಶಿಸಿ ಪೂಜೆ ಮಾಡಿದ್ದು ಎಂದಿನಂತೆ ಮಾಧ್ಯಮಗಳಲ್ಲಿ ಕೊಂಚ "ವರ್ಣ" ರಂಜಿತವಾಗಿಯೇ ಬಂದಿದೆ. ಕನ್ನಲಿ ಭಾರತದ ಲಕ್ಷಾಂತರ ಹಳ್ಳಿಗಳಂತೆ ಸುಪ್ತವಾಗಿ ಜಾತಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದ ಗ್ರಾಮವೇ ಆಗಿದೆ. ಈಗ ದೇವಸ್ಥಾನ ಪ್ರವೇಶ ಘಟನೆಯ ನಂತರ ಜಾತಿಭೂತ ಹೆಡೆ ಎತ್ತಿನಿಂತಿದೆ.

ಸುಮಾರು 110 ದಲಿತರ ಮನೆಗಳು, ಸುಮಾರು 120 ಒಕ್ಕಲಿಗರ ಮನೆಗಳನ್ನು ಹೊಂದಿರುವ ಕನ್ನಲಿಯನ್ನು ಪ್ರತಿನಿಧಿಸುವ ಜಿಪಂ ಸದಸ್ಯ ಗಂಗಾಮತಸ್ಥ! ಇಂಥಾ ಈ ಊರಿನಲ್ಲಿ ಕಳೆದ ಮಾರ್ಚ್ 13ರಂದು ಪ್ರತಿ ವರ್ಷದಂತೆ ದೇವರ ಉತ್ಸವ ನಡೆದಿತ್ತು, ಆ ವೇಳೆ 'ಸಂಪ್ರದಾಯ'ದಂತೆ ತಮಟೆ ಬಾರಿಸುತ್ತಿದ್ದ ದಲಿತ ಚಂದ್ರು ಎಂಬ ಯುವಕ ತಮಟೆ ಬಡಿಯುವ ಜೋಶಿನಲ್ಲಿ ದೇವಸ್ಥಾನದ ಮೆಟ್ಟಿಲೊಂದನ್ನು ಏರಿದ್ದಾನೆ. ಜನರ ಗಮನಕ್ಕೆ ಇದು ಬಂದಿತಾದರೂ ತಮಟೆಯ ನಾದದ ಗುಂಗಲ್ಲಿದ್ದ ಜನತೆಗೆ ಅದು ಆ ಕ್ಷಣಕ್ಕೆ ದೊಡ್ಡದೇನೂ ಅನಿಸಲಿಲ್ಲ, ಆದರೆ ಖಾಸಗಿ ಶಾಲೆಯೊಂದರ ನಿವೃತ್ತ ಶಿಕ್ಷಕ ನಾರಾಯಣಗೌಡ ಎಂಬಾತ ಚಂದ್ರುವಿಗೆ "ಮಾದಿಗ ನನ್ಮಗನೇ" ಎನ್ನುತ್ತಾ ಹೊಡೆದುಬಿಟ್ಟ. ಚಂದ್ರು ಮತ್ತು ಇತರರು ಇದನ್ನು ಪ್ರಶ್ನಿಸಿದಾಗ ಪುಟ್ಟೇಗೌಡ ಮತ್ತು ನವೀನ್ ಎಂಬ ಒಕ್ಕಲಿಗ ಹುಡುಗರು ತೆಂಗಿನಕಾಯಿಯಿಂದ ಚಂದ್ರು ತಲೆಗೆ ಹೊಡೆದು ದೊಡ್ಡ ಹಗರಣವನ್ನೇ ಮಾಡಿಬಿಟ್ಟರು.



ಅಂದೇ ರಾತ್ರಿ ಈ ವಿಷಯದ ಕುರಿತು ಸಭೆ ಮಾಡಿದ ದಲಿತರು ಪೊಲೀಸರಿಗೆ ದೂರು ನೀಡಿದರು. ಆದರೆ ಪೊಲೀಸರು ದೂರು ಸ್ವೀಕರಿಸದೆ ಶಾಸಕರಿಂದ ಸಂಧಾನ ಮಾಡಿಸುವುದಾಗಿ ಹೇಳತೊಡಗಿದರು. ಆಗ ದಲಿತರು ನಿರ್ವಾಹವಿಲ್ಲದೆ ಕರ್ನಾಟಕ ಜನಪರ ವೇದಿಕೆ (ಕಜವೇ), ಮಂಡ್ಯ ಸ್ಲಂ ಒಕ್ಕೂಟ ಮತ್ತು ಸಮಾನತಾ ಮಹಿಳಾ ವೇದಿಕೆಯಂಥ ಪ್ರಗತಿಪರ ಸಂಘಟನೆಗಳನ್ನು ಸಂಪರ್ಕಿಸಿದರು, ಕಜವೇ ಕೂಡಾ ಪೊಲೀಸರೊಂದಿಗೆ ಮಾತನಾಡಿದಾಗ ಇದೇ ಉತ್ತರ ಬಂದಿತು. ಅಂದೇ ಶಾಸಕ ಎಂ. ಶ್ರೀನಿವಾಸ್ ನೇತೃತ್ವದಲ್ಲಿ ಸಂಧಾನ ಸಭೆಯೂ ನಡೆಯಿತು.

ಶಾಸಕ ಶ್ರೀನಿವಾಸ್ ಒಕ್ಕಲಿಗರಿಗೆ ಬುದ್ಧಿವಾದ ಹೇಳಿ ಕಾಲಾನುಕ್ರಮದಲ್ಲಿ ಬರುತ್ತಿರುವ ಬದಲಾವಣೆಗೆ ತಕ್ಕಂತೆ ಜನರೂ ಬದಲಾಗಬೇಕೆಂದು ಸಲಹೆ ನೀಡಿದರು. ಅಲ್ಲದೆ ಈ ಸಾರಿ ದಲಿತರು ಈ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಕ್ಷಮಿಸಬೇಕೆಂದೂ, ಇನ್ನುಮುಂದೆ ಹೀಗಾಗದ ರೀತಿಯಲ್ಲಿ ನೋಡಿಕೊಳ್ಳುವುದಾಗಿಯೂ ಕೋರಿದರು. ಇದಕ್ಕೊಪ್ಪದ ದಲಿತರು ಸ್ವಾತಂತ್ರ್ಯ-ಸಮಾನತೆಗಳ ಪ್ರಶ್ನೆಯೆತ್ತಿ ತಮಗೆ ದೇವಸ್ಥಾನದ ಪ್ರವೇಶ ನೀಡಬೇಕೆಂದು ಆಗ್ರಹಿಸಿದರು. ಆಗ ಒಕ್ಕಲಿಗರ ಮುಖಂಡ ಮತ್ತು ವಕೀಲನಾದ ಜಯರಾಮ್ ಅಲಿಯಾಸ್ ರಾಜಣ್ಣ ಮತ್ತು ಇತರರು, 15 ವರ್ಷದ ಹಿಂದೆಯೇ ಇಂಥಾ ಪ್ರಸ್ತಾಪ ಬಂದಾಗ ಒಕ್ಕಲಿಗರು ಮುಕ್ತ ಮನಸ್ಸಿನಿಂದ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದರೆಂದು, ಆದರೆ ದಲಿತರೇ ದೇವಾಲಯ ಪ್ರವೇಶಕ್ಕೆ ಮನಸ್ಸು ಮಾಡಲಿಲ್ಲವೆಂದು ಹೇಳಿದರು. ಈ ಬಾರಿ ನಾವು ದೇವಾಲಯ ಪ್ರವೇಶಕ್ಕೆ ದಿನವೊಂದು ನಿಗದಿ ಮಾಡಿ ಕಾರ್ಯಕ್ರಮ ರೂಪಿಸುತ್ತೇವೆಂದು ದಲಿತ ಮುಖಂಡರು ಹೇಳಿದರು. "ಸಮಾಜ ಸುಧಾರಕ"ರಂತೆ ಮಾತನಾಡಿದ್ದ ಶಾಸಕರಿಗೂ ಆಹ್ವಾನ ನೀಡಿದಾಗ ತಮ್ಮ ಜಾಯಮಾನದಂತೆ ಅವರು 'ಅಲ್ಲೇನೂ ಈಗ ಸಮಸ್ಯೆ ಇಲ್ಲವಲ್ಲ, ನೀವು ದೇವಾಲಯ ಪ್ರವೇಶ ಮಾಡಿ, ಸಮಸ್ಯೆ ಆದರೆ ನಾನು ಬರುವೆ' ಎಂದು ನುಣುಚಿಕೊಂಡರು. ಇಲ್ಲಿ ಶಾಸಕರು 'ಜಾತಿವಾದಿ'ಗಳ ತರ ನಡೆದುಕೊಳ್ಳದಿದ್ದರೂ ಅವರೇ ಈ ಜಾತಿ ವಿನಾಶಕ್ಕೆ ನೇತೃತ್ವ ವಹಿಸಲು ಮಾತ್ರ ಸಿದ್ಧರಿರಲಿಲ್ಲ.

ದಲಿತ ಮುಖಂಡ ಕೆಂಪಣ್ಣ ಮತ್ತು ಕಜವೇ ಮಿತ್ರರ ನೇತೃತ್ವದಲ್ಲಿ ಸಭೆ ಮಾಡಿದ ದಲಿತರು ಯುಗಾದಿ ದಿನದಂದು (ಮಾರ್ಚ್ 16ರಂದು) ದೇವಾಲಯ ಪ್ರವೇಶ ಮಾಡಲು ನಿರ್ಧರಿಸಿದರು. ಅಂದು ದೇವಾಲಯ ಪ್ರವೇಶಿಸುವುದಕ್ಕೂ ಮೊದಲು ಕೆಂಪಣ್ಣನ ಮುಖಾಂತರ ಒಕ್ಕಲಿಗ ನಾಯಕರು, ತಹಸೀಲ್ದಾರ್ ಮತ್ತು ಎಸ್ಪಿಯವರಿಗೆ ಈ ವಿಷಯವನ್ನು ತಿಳಿಸಲಾಯಿತು.

ಯುಗಾದಿಯ ದಿನ ಯಾವುದೇ ವಿಶೇಷ ಪ್ರತಿರೋಧವನ್ನೆದುರಿಸದೆ ದಲಿತರು ಪ್ರಗತಿಪರರೊಂದಿಗೆ ಚನ್ನಕೇಶವನ ದೇವಾಲಯ ಪ್ರವೇಶಿಸಿದರು.

'ಒಕ್ಕಲಿಗರು ದೇವಸ್ಥಾನದ ಬಾಗಿಲು ಬಂದ್ ಮಾಡಿದ್ದಾರೆ' ಎಂಬ ಸುದ್ದಿ ಹರಡಿ ಒಕ್ಕಲಿಗರ ಸಭೆ ನಡೆದು ದಲಿತನೊಬ್ಬನ ಮೇಲೆ ಹಲ್ಲೆ ನಡೆಯಿತು.

ಈಗ ಪತ್ರಿಕೆ ಅಚ್ಚಿಗೆ ಹೋಗುವ ವೇಳೆಯಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿದ್ದು 144ನೇ ಸೆಕ್ಷನ್ ಜಾರಿಯಲ್ಲಿದೆ.

ಕನ್ನಲಿಯಲ್ಲಿ ಯಾವತ್ತೂ ಒಕ್ಕಲಿಗರು ದಲಿತರನ್ನು ಭೀಕರವಾಗಿ ದಮನ ಮಾಡಿರುವುದೋ ಅಥವಾ ಜಾತಿ ದೌರ್ಜನ್ಯ ನಡೆಸಿರುವುದೋ ನಡೆದಿಲ್ಲ. ಆದರೆ ಸುಪ್ತವಾಗಿದ್ದ ಜಾತಿ ಪ್ರಜ್ಞೆ ಈಗ ಹಠಾತ್ ಹೆಡೆಯೆತ್ತಿದೆ. ಅರೆಮನಸ್ಸಿನಲ್ಲಿರುವ ಶಾಸಕ ಶ್ರೀನಿವಾಸ್ ಈಗಲಾದರೂ ಖಚಿತವಾದ ನಿಲುವು ಮತ್ತು ಕ್ರಮಗಳನ್ನು ತೆಗೆದುಕೊಂಡರೆ ಕನ್ನಲಿ ಕನಲದಂತೆ ತಡೆಯಬಹುದು.

● ವರದಿಗಾರ

# ಉಡುಪಿ: ಒಬ್ಬ ನಕ್ಸಲ್ ಹುಡುಗನ ಕತೆ

ಸಹ್ಯಾದ್ರಿ ತಪ್ಪಲಿನಲ್ಲಿ ಮತ್ತೆ ಪೊಲೀಸರ ಕೋವಿ ಸದ್ದು ರ್ಜನಿಸಿದೆ! ಕಾರ್ಕಳ ತಾಲ್ಲೂಕಿನ ಮುಟ್ಲಪಾಡಿ ಕಾಡಿನಲ್ಲಿ ಕಟ್ಟು ಮಂದಿಯ ಧ್ವನಿಯಾಗಿದ್ದ ಆನಂದ ಯಾನೆ ವಸಂತ ಕುಡಿಯನೆಂಬ ಮೂವತ್ತೈದರ ಹರೆಯದ ಹುಡುಗ ಪೊಲೀಸ್ ಟಗೆ ಬಲಿಯಾಗಿದ್ದಾನೆ.

ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಗ್ರಾಮ ಏರಿಯಾದ ಕುತ್ಲೂರು ದ ಕೋಟಂದಡ್ಕ ಮಜರೆಯ ಬಾಬು ಮಲೆಕುಡಿಯ ಎಂಬಾತನ ಲ ಮಗ ಆನಂದ. ಈತನಿಗೆ ಒಬ್ಬ ತಮ್ಮ, ಒಬ್ಬಳು ತಂಗಿ . ಆನಂದ ಕಲಿತದ್ದು ಬರೀ ನಾಲ್ಕನೇ ಕ್ಲಾಸು. ಬಡತನ-ಶೈಕ್ಷಣಿಕ ಸೌಲಭ್ಯಗಳಿಲ್ಲದೆ ಕಲಿಯಲಾಗದ ಆನಂದ ವಿದ್ಯೆಯಿಲ್ಲದಿದ್ದರೂ ಮಂತ. ಚಿಕ್ಕಂದಿನಿಂದಲೂ ಅನ್ಯಾಯ-ಶೋಷಣೆ ಕಂಡಾಗ ಬೇಳುತ್ತಿದ್ದ ದೊಡ್ಡವನಾಗುತ್ತಲೇ ಆನಂದ ತನ್ನೂರಿಗೆ ಸಿಗಬೇಕಾದ ಭೂತ ಸೌಕರ್ಯ, ಸ್ವಸಹಾಯ ಸಂಘದ ಹೋರಾಟ-ಚಟುವಟಿಕೆ ಮುಂಚೂಣಿಯಲ್ಲಿರುತ್ತಿದ್ದ.



ಆನಂದನಲ್ಲಿ ಹೋರಾಟಗಾರನಿದ್ದನಾದರೂ ಎಂದೂ ನಕ್ಸಲಿಸಂ ಬಗ್ಗೆ ತಲೆ ಕೆಡಿಸಿಕೊಂಡವ ಲ್ಲ. 1988 ರಲ್ಲಿ ಸರ್ಕಾರ ಹಿಂದೆ-ಮುಂದೆ ದೆ ಏಕಪಕ್ಷೀಯವಾಗಿ ಕುದುರೆಮುಖ ಅಭಯಾರಣ್ಯ ಕಾಯಿದೆ ಜಾರಿಗೊಳಿಸಿದಾಗ ಈ ಪ್ರದೇಶದ ಬುಡಕಟ್ಟು ಮಂದಿಗೆ ಸಂಕಟ ವಾಯ್ತು. ಕಾಡನ್ನೇ ಆಶ್ರಯಿಸಿ ತಲತಲಾಂತರ ಬದುಕು ಸಾಗಿಸುತ್ತಿದ್ದ ಗುಡ್ಡಗಾಡು ನ್ನು ಪ್ರಭುತ್ವ ಬಲವಂತವಾಗಿ ಒಕ್ಕಲೆಬ್ಬಿಸ ಭಿಸಿತು! ಈ ಜನರನ್ನೆಲ್ಲ ಸಂಘಟಿಸ ಗಿದ ಆನಂದ. ತಾವು ಹುಟ್ಟಿ ಬೆಳೆದ ನ್ನ ಬಿಟ್ಟು ಹೋಗುವುದಿಲ್ಲವೆಂದು ಜನ ಳಿ ಮಾಡತೊಡಗಿದರು. ಆನಂದ ಜನರನ್ನು ಹೋರಾಟ-ರಸ್ತೆತಡೆ-ಸಭೆ ಮುಂತಾದ ಟನೆ ಮೂಲಕ ಪ್ರಭುತ್ವವನ್ನು ಎಚ್ಚರಿಸ ದ್ದ. ಇದು ಸಹಜವಾಗಿಯೇ ಮಾನವೀಯತೆ ಇಲ್ಲದ ಪೊಲೀಸರ ೦ ಕೆರಳಿಸಿತು. ಜಿಲ್ಲಾಡಳಿತ-ತಾಲ್ಲೂಕಾಡಳಿತಕ್ಕೆಲ್ಲಾ ಆನಂದ ವಾಗಿ ಹೋದ. ಆತನನ್ನು ಹಿಟ್‌ಲಿಸ್ಟ್‌ಗೆ ಸೇರಿಸಿ ದಮನಿಸುವ ನ್ನು ಪೊಲೀಸರು ಹೆಣೆದರು.

2000ನೇ ಇಸವಿಯ ಹೊತ್ತಿಗೆ ಕುದುರೆಮುಖ ಅರಣ್ಯ ವ್ಯಾಪ್ತಿಯಲ್ಲಿ ದದ ವಿರುದ್ಧದ ಹೋರಾಟ ಹೆಚ್ಚಾಯಿತು. ಬಲವಂತವಾಗಿ ಮಕ್ಕಳನ್ನು ಒಕ್ಕಲೆಬ್ಬಿಸುವ, ಅವರ ಹಕ್ಕನ್ನು ಕಸಿದುಕೊಂಡು ಬೀಳಿಸುವ ಪ್ರಭುತ್ವದ ಪಾತಕದ ವಿರುದ್ಧ ಜನ ದಂಗೆ ರಂಭಿಸಿದರು. ಸಹಜವಾಗೇ ಅಭಯಾರಣ್ಯ ಕಾಯ್ದೆ ವಿರುದ್ಧವಿದ್ದ ಆ ಹೋರಾಟಗಳಲ್ಲಿ ಸಕ್ರಿಯನಾಗಿ ಕೆಲಸಮಾಡಿದ. ಆಗ ಸರ ಕಿರುಕುಳ ಆನಂದನ ಕುಟುಂಬಕ್ಕೆ ಜೋರಾಯ್ತು. ಹೊತ್ತಲ್ಲದ ಲ್ಲಿ ಬಂದು ಆನಂದ ಮತ್ತವನ ತಂಗಿ-ತಮ್ಮ-ಅಪ್ಪ-ಅಮ್ಮಂದಿರನ್ನು ಸರು ಸತಾಯಿಸತೊಡಗಿದರು.

ಪ್ಪಾದರೂ ಆನಂದ ನಕ್ಸಲೈಟ್ ಆಗಲಿಲ್ಲ. ಪ್ರಜಾಸತ್ತಾತ್ಮಕವಾಗೇ ಟ್ಟು ವಿರೋಧಿ ಅಭಯಾರಣ್ಯ ಕಾಯ್ದೆ ವಿರುದ್ಧ ಜನ ಸೇರಿಸಿ ಾಡುತ್ತಲೇ ಇದ್ದ. ಆದರೆ ಆನಂದನನ್ನು ಬಂಧಿಸುವುದು ಸರಿಗೆ ಅಷ್ಟು ಸುಲಭವಾಗಿರಲಿಲ್ಲ. ಒಂದು ಆತನಿಗೆ ಶೋಷಿತ ಟ್ಟು ಜನಸಮೂಹದ ಬೆಂಬಲವಿತ್ತು, ರಕ್ಷಣೆಯಿತ್ತು, ಜತೆಗೆ ಪರ ಹೋರಾಟಗಾರರನ್ನು 'ನಕ್ಸಲ್' ಹಣೆಪಟ್ಟಿ ಕಟ್ಟಿ ಮಾಡುವಂತಿರಲಿಲ್ಲ. ಇದು ಪೊಲೀಸರನ್ನು ಪೇಚಾಟಕ್ಕೆ ತ್ತು. ಆದರೆ ಪ್ರಭುತ್ವ ಆನಂದನನ್ನು ಹಣಿಯಲು ಹೊಂಚುಹಾಕೇ ಕುಂತಿತ್ತು. ಆನಂದನ ಹಲ್ಲು ಮುರಿದರೆ ನಾರಾವಿ ಭಾಗದ ಗಿರಿಜನರ ಹೋರಾಟವನ್ನು ಬಗ್ಗುಬಡಿಯಬಹುದೆಂಬ ಲೆಕ್ಕಾಚಾರ ಪೊಲೀಸರ ದಾಗಿತ್ತು.

ಗಿರಿಜನ ಪರ ಹೋರಾಟಗಾರ ಆನಂದನನ್ನು ಯಾವುದಾದರೂ ಕೇಸ್‌ನಲ್ಲಿ ಫಿಕ್ಸ್ ಮಾಡಿ ಜೈಲಿಗಟ್ಟಲು ಪೊಲೀಸರು ಹಠ ತೊಟ್ಟಿದ್ದರು. ಅದೇ ವೇಳೆಗೆ ಕುದುರೆಮುಖ ಅಭಯಾರಣ್ಯಕ್ಕೆ ಬೆಂಕಿಬಿತ್ತು. ಈ ಪ್ರಕರಣದಲ್ಲಿ ಆತನನ್ನು ಸಿಲುಕಿಸಲು ಪೊಲೀಸರು ಮುಂದಾದರು. ಆನಂದನ ಸ್ವಸಹಾಯ ಸಂಘದಲ್ಲಿದ್ದೂ ಆತನೊಂದಿಗೆ ಭಿನ್ನಾಭಿಪ್ರಾಯವನ್ನು ಬೆಳಸಿಕೊಂಡಿದ್ದ ಒಬ್ಬನಿಂದ ಆನಂದ ಈ ಬೆಂಕಿ ಪ್ರಕರಣದಲ್ಲಿ ಭಾಗಿಯಾಗಿದ್ದನೆಂದು ಕಂಪ್ಲೇಂಟ್ ಪಡೆದರು. ಗಿರಿಜನರ ಹೋರಾಟವನ್ನು ಬಗ್ಗುಬಡಿಯಲು ಪೊಲೀಸರು ತನ್ನನ್ನು ಬೆಂಡೆತ್ತುತ್ತಾರೆಂದು ಆನಂದ ತಲೆ ತಪ್ಪಿಸಿಕೊಂಡು ಓಡಾಡತೊಡಗಿದ. ಆಗ ಪೊಲೀಸರು ಆನಂದನ ಮನೆಯವರನ್ನು ಕಾಡತೊಡಗಿದರು. ಇದರಿಂದ ಕೆರಳಿದ್ದ ಆನಂದ ಅನಿವಾರ್ಯವಾಗಿ ಕಾಡು ಸೇರಿದ. ಅದಾಗಲೇ ನಕ್ಸಲರ ನೇತ್ರಾವತಿ ವಿಂಗ್ ಆ ಭಾಗದ ಕಾಡು-ಮೇಡಲ್ಲಿ ಅಲೆಯುತ್ತಿತ್ತು. ಈ ಬಣದಲ್ಲಿ ಆನಂದ ಮಲೆಕುಡಿಯ ಸೇರಿಕೊಂಡ. ಬೆಳ್ತಂಗಡಿ-ನಾರಾವಿ-ಕಾರ್ಕಳ-ಈದು ಮುಂತಾದ ಕಾಡಿನ ಇಂಚಿಂಚು ಗೊತ್ತಿದ್ದ ಆನಂದನನ್ನು ಹಿಡಿಯಲು ಪೊಲೀಸರಿಂದಾಗಲೇ ಇಲ್ಲ.

ನಕ್ಸಲ್ ಗುಂಪಿನಲ್ಲಿ ಆನಂದ 'ವಸಂತ್' ಆಗಿದ್ದ. ನಿಸ್ಸಹಾಯಕ-ಬಡ ಬುಡಕಟ್ಟು ಜನ ಪರ ಹೋರಾಟಗಾರನೊಬ್ಬ ಪ್ರಭುತ್ವದ ಪಾತಕದಿಂದ ನಕ್ಸಲೈಟ್ ಆಗಿದ್ದು ಹೀಗೆ.

ಬಲವಂತವಾಗಿ ಕಾಡಿನ ಮಕ್ಕಳನ್ನು ಒಕ್ಕಲೆಬ್ಬಿಸಿದ ಸರ್ಕಾರ ಅವರ ಬದುಕಿಗಾಧಾರ ವಾದ ಕಾಡುತ್ಪತ್ತಿ ಸಂಗ್ರಹ-ಬಳಕೆ-ಮಾರಾಟ ನಿಷೇಧಿಸಿದೆ. ಕಾಡಿಗೆ ಹೊಂದಿಕೊಂಡಿರುವ ಹಳ್ಳಿಗಳಲ್ಲಿ ಇಂದಿಗೂ ಮೂಲಭೂತ ಸೌಕರ್ಯ ಗಳಿಲ್ಲ. ಸರ್ಕಾರ ಘೋಷಿಸಿರುವ 'ನಕ್ಸಲ್ ಎಫೆಕ್ಟೆಡ್ ಏರಿಯಾ ಪ್ಯಾಕೇಜ್' ಏನೆಂಬುದು ಅಲ್ಲಿನ ಜನರಿಗಿರಲಿ, ಆಳುವರಿಗೇ ಇನ್ನೂ ಗೊತ್ತಿಲ್ಲ.

ಆಳುವವರ ದ್ರೋಹ, ದೌರ್ಜನ್ಯ ಮತ್ತು ಪೊಲೀಸರ ಬರ್ಬರ-ಅಮಾನುಷ ಹಿಂಸಾಕಾಂಡಗಳು ಆನಂದ ಮಲೆಕುಡಿಯನಂಥ ಮುಗ್ಧ ಹುಡುಗ-ಹುಡುಗಿಯರನ್ನು ಸಶಸ್ತ್ರ ಕ್ರಾಂತಿಯ ಹೋರಾಟಕ್ಕೆ ತಳ್ಳಿದೆ. ಹೇತ್ಲಾಂಡಿ ಗೃಹ ಮಂತ್ರಿ ಡಾ. ವಿ.ಎಸ್. ಆಚಾರ್ಯ ತನ್ನ ಪೊಲೀಸರ ಕೋಂಬಿಂಗ್‌ನಿಂದ ನಕ್ಸಲ್ ಚಟುವಟಿಕೆ ನಿಂತಿದೆಯೆಂದು ಬೋಂಗು ಬಿಡುತ್ತಿದ್ದಾರೆ. ತಮ್ಮ ಜೀವ-ಜೀವನವಾಗಿದ್ದ ಕಾಡನ್ನು ಕಳೆದುಕೊಂಡು ಕಂಗೆಟ್ಟಿರುವ ಬುಡಕಟ್ಟು ಮಂದಿಯ ಕಿಚ್ಚು ನಕ್ಸಲ್ ಚಳವಳಿಯನ್ನು ಉಡುಪಿ-ದಕ್ಷಿಣ ಕನ್ನಡದಲ್ಲಿ ಜೀವಂತವಾಗಿಟ್ಟಿದೆ. ಆಚಾರ್ಯ ಅದೆಷ್ಟೇ ಕೋಂಬಿಂಗ್ ಮಾಡಲಿ, ಅಭಯಾರಣ್ಯ ಕಾಯ್ದೆಯ ಅಮಾನವೀಯ ಕ್ಲಾಜ್‌ಗಳನ್ನು ಸಡಿಲಿಸದೇ ನಕ್ಸಲಿಸಂ ತಣ್ಣಗಾಗುವುದು ಅನುಮಾನ!


ಇದು ಪ್ರಭುತ್ವಕ್ಕೆ ಅರ್ಥವಾಗುವುದ್ಯಾವಾಗ? ಅಮಾಯಕ ಹುಡುಗ-ಹುಡುಗಿಯರು ಪ್ರಭುತ್ವದ ಪಾತಕದಿಂದ ಕಾಡಿನಲ್ಲಿ ಕೋವಿ ಹಿಡಿದು ಅಲೆಯುವುದು ನಿಲ್ಲುವುದ್ಯಾವಾಗ? ಬದುಕಲು ಬೇಕಾದ ಕಾಡುತ್ಪತ್ತಿ ಮುಟ್ಟುವುದೇ ಅಪರಾಧವಾದಾಗ ಬುಡಕಟ್ಟು ಮಂದಿ ಬದುಕುವುದಾದರು ಹೇಗೆ?

• ವರದಿಗಾರ

## 'ಖಾಸಗಿ ವಿಶ್ವ'ದ ವಿದ್ಯಾಲಯಗಳು ▸▸ 2

ಶಿಕ್ಷಣ ಇಲಾಖೆಯಲ್ಲಿ ಈ ಬಾಬತ್ತಿಗೆ ಇಟ್ಟಿರುವ ಹಣವೆಲ್ಲಾ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಹರಿಯುವುದರಲ್ಲಿ ಸಂದೇಹವಿಲ್ಲ.

ಮೂರನೆಯದಾಗಿ ಶಿಕ್ಷಣಕ್ಷೇತ್ರದ ವ್ಯಾಪಾರೀಕರಣದಲ್ಲಿ ಆಸಕ್ತಿ ಇರುವ ಉದ್ಯಮವರ್ಗಕ್ಕೆ ಸರ್ಕಾರದ ಜೊತೆಗೆ ನೇರ ಸಂಬಂಧ ಇಟ್ಟುಕೊಂಡು ಇಡೀ ಶಿಕ್ಷಣ ಕ್ಷೇತ್ರವನ್ನೇ ವ್ಯಾಪಾರೀಕರಣದ ನಿರ್ವಹಣೆಗೆ ತಕ್ಕಂತೆ ಪುನರ್‌ರೂಪಿಸುವ ಮತ್ತು ಅದಕ್ಕೆ ಬೇಕಾದ ಮಾನವ ಸಂಪನ್ಮೂಲಗಳನ್ನು ಸರಬರಾಜು ಮಾಡುವ ಇಂಥಾ ವಿಶ್ವವಿದ್ಯಾಲಯದ ಅಗತ್ಯವಿದೆ. ಅಂಥವರು ಈ ವಿವಿಯ ಮೇಲೆ ಹಣ ಹೂಡಲು ಅನುವಾಗುವಂತೆ ಇತರ ಹಣಕಾಸು ಮೂಲಗಳಿಂದ ದತ್ತಿಯನ್ನು ಪಡೆದುಕೊಳ್ಳಲು ಮಸೂದೆ ಅವಕಾಶ ಮಾಡಿಕೊಡುತ್ತದೆ. ಈ ಶೈಕ್ಷಣಿಕ ಬಂಡವಾಳಶಾಹಿಗಳಿಗೆ ಇಂಥಾ ಒಂದು ವಿಶ್ವವಿದ್ಯಾಲಯದ ಮೇಲೆ ಮಾಡುವ ಹೂಡಿಕೆ ಒಂದು ಬಗೆಯ ವ್ಯೂಹಾತ್ಮಕ ಹೂಡಿಕೆಯೇ ಆಗಿರುತ್ತದೆ.



ಇದರಿಂದಾಗಿ ಹಣವಿದ್ದವರಿಗೆ ಇನ್ನಷ್ಟು ಹಣಮಾಡುವ ವಿದ್ಯೆ ಸಿಗಬಹುದು, ಇತರರಿಗೆ ಹೇಗಿದ್ದರೂ ಉಳಿದ ವಿಶ್ವವಿದ್ಯಾಲಯಗಳಿರುತ್ತವೆ ಎಂದುಕೊಳ್ಳುವುದು ಮೂರ್ಖತನ. ಏಕೆಂದರೆ ಸರ್ಕಾರ ಉನ್ನತ ಶಿಕ್ಷಣ ನಡೆಸುವುದು ಇನ್ನುಮುಂದೆ ಕಷ್ಟಸಾಧ್ಯ ಎಂದು ಈಗಾಗಲೇ ಎಲ್ಲಾ ಸರ್ಕಾರಗಳು ಹೇಳಿವೆ. ವಿರೋಧಪಕ್ಷಗಳೂ ಅದನ್ನು ಚಾಚೂತಪ್ಪದೆ ಒಪ್ಪಿಕೊಂಡಿವೆ. ಉನ್ನತ ಶಿಕ್ಷಣವಿರಲಿ, ಪ್ರಾಥಮಿಕ ಶಿಕ್ಷಣದಿಂದಲೇ ಸರ್ಕಾರ ಹಿಂದೆಗೆಯುತ್ತಿದೆ. ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಮಾಡುತ್ತಲೇ ಔಪಚಾರಿಕ ಶಿಕ್ಷಣ ಪದ್ಧತಿಯ ಬದಲಿಗೆ ಸರ್ವ ಶಿಕ್ಷಣ ಅಭಿಯಾನ ಹಾಗೂ ಇನ್ನಿತರ ಅನೌಪಚಾರಿಕ ಹಾಗೂ ಪರಿಣಾಮಕಾರಿಯಲ್ಲದ ಖರ್ಚು ಕಡಿಮೆಯಾಗುವ ಪದ್ಧತಿಯನ್ನು ಪರಿಚಯಿಸುತ್ತಿದೆ. 1991ರಿಂದ ಉನ್ನತ ಶಿಕ್ಷಣದ ಸುಧಾರಣೆಯ ಬಗ್ಗೆ ಸಲಹೆ ನೀಡಿರುವ ಪ್ರತಿಯೊಂದು ವರದಿಗಳು ಉನ್ನತ ಶಿಕ್ಷಣವನ್ನು ಖಾಸಗೀಕರಿಸಿ ಸರ್ಕಾರ ಅದರ ನಿಯಂತ್ರಕರ ಪಾತ್ರವನ್ನು ಮಾತ್ರ ವಹಿಸಬೇಕೆಂದು ಹೇಳುತ್ತಾ ಬಂದಿವೆ. ಹೀಗಾಗಿ ಹಾಲಿ ಇರುವ ಸರ್ಕಾರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳೇ ಹಾಕ್ಷಿಕವಾಗಿ ಖಾಸಗೀಕರಣಗೊಳ್ಳುತ್ತಾ ಬಂದಿವೆ. ಹೀಗಾಗಿ "ಅಜೀಂ ಪ್ರೇಮ್‌ಜಿ ವಿವಿ"ಯಂಥ ಖಾಸಗಿ ವಿವಿಗಳು ದಿಢೀರನೇ ಉದ್ಭವಿಸಿರುವುದಿಲ್ಲ. ಬದಲಿಗೆ ಈಗಾಗಲೇ ನಡೆಯುತ್ತಿದ್ದ ಉನ್ನತ ಶಿಕ್ಷಣದ ಖಾಸಗೀಕರಣದ ತಾರ್ಕಿಕ ಬೆಳವಣಿಗೆಯಾಗಿದೆಯಷ್ಟೆ. ಬರಲಿರುವ ದಿನಗಳಲ್ಲಿ ಖಾಸಗಿ ವಿವಿ ಮತ್ತು ಖಾಸಗಿ ಕಾಲೇಜುಗಳೇ ನಿಯಮವಾಗಿ ಸರ್ಕಾರಿ ಕಾಲೇಜುಗಳೇ ಅಪವಾದವಾಗುತ್ತವೆ. ಇದು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ವಿಷಯದಲ್ಲಿ ಈಗಾಗಲೇ ನೋಡುತ್ತಿದ್ದೇವೆ. ಎಷ್ಟೇ ಸೀಟ ಇತ್ಯಾದಿಗಳನ್ನು ಮಾಡಿದರೂ ಅಲ್ಲಿ ನೀಡುವ "ಫ್ರೀ" ಸೀಟುಗಳನ್ನು ಕೊಂಡುಕೊಳ್ಳುವ ಶಕ್ತಿಯೂ ಈ ದೇಶದ ಶೇ.80ರಷ್ಟು ಜನರಿಗಿರುವುದಿಲ್ಲ. ಇನ್ನು ಖಾಸಗಿ ವಿವಿಯೂ ಬಂದರೆ ಉನ್ನತ ಶಿಕ್ಷಣದ ಬಗ್ಗೆ ಸಾಮಾನ್ಯರು ಕನಸು ಕಾಣುವುದೂ ಅಪರಾಧವಾದೀತು! ಹೀಗಾಗಿ ಅಜೀಂ ಪ್ರೇಮ್‌ಜಿ ವಿವಿಯನ್ನು ಎಲ್ಲಾ ಜನಸಾಮಾನ್ಯರೂ ಒಕ್ಕೊರಲಿನಿಂದ ವಿರೋಧಿಸಬೇಕಿದೆ.

ಇದಲ್ಲದೆ ಜಾಗತೀಕರಣ-ಖಾಸಗೀಕರಣದ ಮಾರುಕಟ್ಟೆಯೇ ಎಲ್ಲವನ್ನೂ ನಿರ್ಧರಿಸುತ್ತಿರುವ ಸಂದರ್ಭದಲ್ಲಿ ಉನ್ನತ ಶಿಕ್ಷಣದ ಬಗೆಗಿನ ಸ್ವಾಯತ್ತತೆ ಮತ್ತು ಉತ್ತರದಾಯಿತ್ವದ ಪ್ರಶ್ನೆ ಇನ್ನೂ ಹೆಚ್ಚು ಸಂಕೀರ್ಣವಾಗುತ್ತಿದೆ. ಸ್ವಾಯತ್ತತೆಯ ಅತಿರೇಕದಲ್ಲಿ ಜನರಿಗೆ ಮತ್ತು ಸಮಾಜಕ್ಕೆ ಉತ್ತರದಾಯಿತ್ವವೇ ಇಲ್ಲದ ಇಂಥಾ ಖಾಸಗಿ ವಿವಿಗಳು ಹುಟ್ಟಿಕೊಳ್ಳುತ್ತವೆ. ಇನ್ನು ಉತ್ತರದಾಯಿತ್ವವೆಂದರೆ ಸರ್ಕಾರಿ ನಿಯಂತ್ರಣವೆಂದಾಗಿರುವಾಗ ಮತ್ತು ಸರ್ಕಾರವೇ ಕೋಮುವಾದಿಯಾಗಿರುವ ಸಂದರ್ಭದಲ್ಲಿ ಉತ್ತರದಾಯಿತ್ವದ ಅವಕಾಶವೇ ಹಂಪಿ ವಿವಿ ಸಂದರ್ಭದಲ್ಲಿ ಕೋಮುವಾದಿ ಅಜೆಂಡಾವನ್ನು ಅನುಷ್ಠಾನಕ್ಕೆ ತರಲು ಸಹಾಯವಾಗುತ್ತದೆ.

ಇದು ಕೇವಲ ಉನ್ನತ ಶಿಕ್ಷಣ ಎದುರಿಸುತ್ತಿರುವ ಸಮಸ್ಯೆ ಏನಲ್ಲ. ಈ ದೇಶದ ಪ್ರಜಾತಂತ್ರ ಎದುರಿಸುತ್ತಿರುವ ಸಮಸ್ಯೆ. ರೂಪದಲ್ಲಿ ಪ್ರಜಾತಂತ್ರವಿದ್ದು ಸಾರದಲ್ಲಿ ಊಳಿಗಮಾನ್ಯತೆ ಅಥವಾ ಬಂಡವಾಳಶಾಹಿ ಸರ್ವಾಧಿಕಾರ ಇರುವ ಸಂದರ್ಭದ ವೈರುಧ್ಯವಿದು. ಈ ವೈರುಧ್ಯ ಬಗೆಹರಿಯಬೇಕೆಂದರೆ ಸಾರದಲ್ಲಿ ಬದಲಾವಣೆ ಬರಬೇಕು. ರೂಪದಲ್ಲಿ ಮಾತ್ರವಲ್ಲ, ಅಲ್ಲವೇ? ●

## ತಂಗಿಯೂ ಕಾಡಲ್ಲಿ!!



ಗಿರಿಜನ ವಿರೋಧಿ ಅಭಯಾರಣ್ಯ ಕಾಯ್ದೆ ಬಂದ ಶುರುವಿನಲ್ಲಿ ಬುಡಕಟ್ಟು ಜನರ ಏರಿಯಾದಲ್ಲಿ ಪೊಲೀಸರ-ಪ್ರಭುತ್ವದ ಕ್ರೌರ್ಯದ ಕಾರ್ಯಾಚರಣೆ ಅದೆಷ್ಟು ಜೋರಿತ್ತೆಂದರೆ, ಕಿರುಕುಳದಿಂದ ಕೆರಳಿದ ಈ ಏರಿಯಾದ ಹಲವು ಹುಡುಗ-ಹುಡುಗಿಯರು ಹೆಗಲಿಗೆ ಕೋವಿ ಏರಿಸಿಕೊಂಡು ಕಾಡು ಸೇರಿ ಸರ್ಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ಮೊನ್ನೆ ಕಾರ್ಕಳದ ಮೈರೋಳಿಕಾಡಲ್ಲಿ ಪೊಲೀಸ್ ಎನ್‌ಕೌಂಟರ್‌ಗೆ ಹತನಾದ ಗಿರಿಜನರ ಯುವಕ ಆನಂದ ಕೂಡ ಅಂಥವರಲ್ಲಿ ಒಬ್ಬನಾಗಿದ್ದವನು.

ಮೊದಲು ಪೊಲೀಸರ ಕಿರುಕುಳ ತಾಳಲಾಗದೆ ಆನಂದ ನಕ್ಸಲೈಟ್ ಆದ. ಆನಂತರವೂ ಪೊಲೀಸರ [illegible] ಹಗಲು-ರಾತ್ರಿ ಎನ್ನದೆ ಪೊಲೀಸರು ಆನಂದನ ಮನೆಗೆ ಹೋಗಿ ಆತನ [illegible] ಕಾಡತೊಡಗಿದರು. ವ್ಯವಸ್ಥೆಯ ಇಂತಹ ಕ್ರೌರ್ಯದಿಂದ ಕೆರಳಿದ ಆನಂದನ ತಂಗಿ ಸುಂದರಿ ಯಾನೆ [illegible] ಕೋವಿ ಹೆಗಲಿಗೇರಿಸಿ ಕಾಡು [illegible]!!

[illegible] ತಾಲ್ಲೂಕೊಂದರಲ್ಲೇ ಎರಡೆರಡು ಎನ್‌ಕೌಂಟರ್ ಆಗಿದೆ. ಮೂವರು ನಕ್ಸಲರು ಹತರಾಗಿದ್ದಾರೆ. 2002 ರಲ್ಲಿ ಈದುವಿನಲ್ಲಿ [illegible]-ಪಾರ್ವತಿಯರನ್ನು ಮುರುಗನ್ ಎಂಬ ಎಸ್ಪಿ ಪಡೆ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿತ್ತು. ಈಗ ಆನಂದ ಯಾನೆ ವಸಂತ [illegible]ಕುಡಿಯನನ್ನು ನಕ್ಸಲ್ ನಿಗ್ರಹ ದಳದವರು ಕೊಂದು ಹಾಕಿದ್ದಾರೆ.

[illegible] ಅಜಿತ್ ಕುಸಬ ಮತ್ತು ಉಮೇಶ್‌ರನ್ನು ಪೊಲೀಸರು ಎನ್‌ಕೌಂಟರ್ [illegible] ದೇವರಬಾಳುನಲ್ಲಿ [illegible] ಜಮೀನ್ದಾರ್ ಮಡಿಯಾಳ್ ಮತ್ತು ಕಾರ್ಕಳದ [illegible] ಗುಂಪಿಗೆ ಇದೇ ದೇವರಬಾಳುವ [illegible] ಬಲಿಯಾಗಿದ್ದಾರೆ.


[illegible] ಸರ್ಕಾರ [illegible] ಇಂಥ ರಕ್ತಪಾತ ಆಗುತ್ತಿತ್ತಾ?

## ▸▸ ಕಾರ್ಟೂನ್ ಕಾರ್ನರ್

'ಪ್ರಶಸ್ತಿಪ್ರೋದ್ಯಮ !!'




# ಸದಾ ಹಸಿರಿನ ಸನ್ನಿ ಡೇಸ್




ಮೊನ್ನೆ ಪುಸ್ತಕದಂಗಡಿಯೊಂದರಲ್ಲಿ ಹಾಗೆಯೇ ಕಣ್ಣಾಡಿಸುತ್ತಿದ್ದಾಗ ಖ್ಯಾತ ಕ್ರಿಕೆಟಿಗ ಹಾಗೂ ವೀಕ್ಷಕ ವಿವರಣೆಕಾರ ಸುನಿಲ್ ಗವಾಸ್ಕರ್ ಬರೆದ ಮೂರು ಪುಸ್ತಕಗಳು ಒಂದೇ ಕಟ್ಟಿನಲ್ಲಿ (Omnibus) ದೊರಕಿದವು. ಗವಾಸ್ಕರನ ಈ ಪುಸ್ತಕಗಳಾದ 'ಸನ್ನಿ ಡೇಸ್', 'ಐಡಲ್ಸ್' ಹಾಗೂ 'ಒನ್ ಡೇ ವಂಡರ್ಸ್'ಗಳನ್ನು ನಾನು ಬಹಳ ಹಿಂದೆಯೇ ಓದಿದ್ದೆನಾದರೂ ಈಗ ಪುನಃ ಓದುವ ಸುಖ ಸಿಕ್ಕಿತು. ಅದರಲ್ಲೂ 'ಸನ್ನಿ ಡೇಸ್' ಎಂಬ ಆತ್ಮಕಥನ ಹಾಗೂ ತಾನು ಮೆಚ್ಚಿದ ಕ್ರಿಕೆಟಿಗರ ವ್ಯಕ್ತಿ ಚಿತ್ರಣ ಇರುವ 'ಐಡಲ್ಸ್'ನಲ್ಲಿಯ ಬರಹಗಳು ತಮ್ಮ ಸುಲಲಿತ ಓದಿಸುವಿಕೆಯ ಗುಣಗಳಿಂದಾಗಿ ಯಾವಾಗಲೂ ಚೇತೋಹಾರಿ ಅನುಭವವನ್ನೇ ನೀಡುತ್ತವೆ. ಒಂದರ್ಥದಲ್ಲಿ ಇವುಗಳು ತಮ್ಮ ಕಾಲಾತೀತ ಗುಣಗಳಿಂದಾಗಿ ಒಂದು ಆಚಾರ್ಯ ಕೃತಿಗಿರುವ ಗುಣಲಕ್ಷಣಗಳನ್ನೇ ಹೊಂದಿವೆ ಎಂದರೆ ಅದು ಉತ್ಪ್ರೇಕ್ಷೆಯಾಗಲಾರದು.

ಸುನಿಲ್ ಗವಾಸ್ಕರ್ ಭಾರತ ಕಂಡ ಶ್ರೇಷ್ಠ ಬ್ಯಾಟ್ಸ್‌ಮನ್‌ಗಳಲ್ಲೊಬ್ಬರು. ಇವರ ಬ್ಯಾಟಿಂಗ್ ತಾಂತ್ರಿಕತೆಯ ಕೌಶಲ್ಯವೂ ಶ್ರೇಷ್ಠ ಎಂಬುದರಲ್ಲಿ ಎರಡು ಮಾತಿಲ್ಲ. ಈತ ತನ್ನ ಕ್ರಿಕೆಟ್ ಜೀವನದ ಉತ್ತುಂಗದ ಆ ದಿನಗಳಲ್ಲಿ (1970 ಹಾಗೂ 1980ರ ದಶಕ) ಯಾವುದೇ ರೀತಿಯ ಬಿರುಗಾಳಿ ವೇಗದ ಬೌಲಿಂಗ್ ಆಗಲೀ ಅಥವಾ ತಿರುಗುವ ಚೆಂಡುಗಳನ್ನಾಗಲೀ ಬಹಳ ಆತ್ಮವಿಶ್ವಾಸದಿಂದ ಎದುರಿಸಿ ಟನ್ನುಗಟ್ಟಲೆ ರನ್ ಪೇರಿಸಿದ್ದ. ಅದರಲ್ಲೂ ವೆಸ್ಟ್ ಇಂಡೀಸ್‌ನ ಯಜಮಾನ್ಯದ ದಿನಗಳಲ್ಲಿ ಆ್ಯಂಡಿ ರಾಬರ್ಟ್ಸ್, ಮೈಕೇಲ್ ಹೋಲ್ಡಿಂಗ್, ಕಾಲಿನ್ ಕ್ರಾಫ್ಟ್, ಮಾರ್ಷಲ್‌ರ ಕ್ಷಿಪಣಿ ರೀತಿಯ ಬೌಲಿಂಗ್ ಎದುರು 13 ಸೆಂಚುರಿ ಗಳಿಸಿದ್ದು ಸಾಮಾನ್ಯ ಮಾತಲ್ಲ. ವೇಗದ ಬೌಲಿಂಗ್ ಎಂದರೆ ನಡುಗುತ್ತಿದ್ದ, ವಿದೇಶದ ವೇಗದ ಪಿಚ್‌ಗಳಿಗೆ ಹೊಂದಿಕೊಳ್ಳಲು ತಡವರಿಸುತ್ತಿದ್ದ ಭಾರತದ ಬ್ಯಾಟ್ಸ್‌ಮನ್‌ಗಳಿಗೆ ದೊಡ್ಡ ಮಟ್ಟದ ಆತ್ಮವಿಶ್ವಾಸವನ್ನು ಹಾಗೂ ಘನತೆಯನ್ನು ತಂದುಕೊಟ್ಟವನೇ ಗವಾಸ್ಕರ್. ತನ್ನ ಮೊಟ್ಟಮೊದಲ ಟೆಸ್ಟ್ ಸರಣಿಯಲ್ಲಿಯೇ (1971) ವೆಸ್ಟ್ ಇಂಡೀಸ್ ವಿರುದ್ಧ ಕೇವಲ ನಾಲ್ಕು ಟೆಸ್ಟ್‌ಗಳಲ್ಲಿ 774 ರನ್ ಗಳಿಸಿದ್ದನ್ನು ಮರೆಯುವ ಹಾಗೇ ಇಲ್ಲ. ಅಂತೆಯೇ ತನ್ನ ಅಂತಿಮ ಟೆಸ್ಟ್ ಸರಣಿಯಲ್ಲಿ ಪಾಕಿಸ್ತಾನದ ವಿರುದ್ಧ ಶತಕ ಗಳಿಸಿದ ನಂತರ ನಿವೃತ್ತಿ ಪಡೆದಿದ್ದನ್ನೂ ಮರೆಯುವಂತಿಲ್ಲ. ಈಗ ಅತ್ಯುತ್ತಮ ಹಾಗೂ ಗೌರವಾನ್ವಿತ ಟಿವಿ ವೀಕ್ಷಕ ವಿವರಣೆಕಾರರಾಗಿರುವ ಗವಾಸ್ಕರ್ ಆಗಲೂ - ಈಗಲೂ ಅನೇಕ ಕಾರಣಗಳಿಗಾಗಿ ಬಹಳ ಮುಖ್ಯ.

1970 ಹಾಗೂ 80ರ ದಶಕದಲ್ಲಿ ಬಿಸಿಸಿಐ ಈಗಿನಂತೆ ಶ್ರೀಮಂತವಾಗಿರಲಿಲ್ಲ, ಕಾರ್ಪೋರೆಟ್ ಸಂಸ್ಕೃತಿ ಕೂಡಾ ಭಾರತದ ಕ್ರಿಕೆಟ್ ವಲಯವನ್ನು ಇನ್ನೂ ಪ್ರವೇಶಿಸಿರಲಿಲ್ಲ, ಭಾರತ ರಾಷ್ಟ್ರಕ್ಕಾಗಲೀ - ತಂಡಕ್ಕಾಗಲೀ ಈಗಿನಂತೆ ಒಂದು ಸದೃಢವಾದ ಅಸ್ಮಿತೆಯೇ ಇರಲಿಲ್ಲ, ಇಂಗ್ಲೆಂಡ್, ಆಸ್ಟ್ರೇಲಿಯಾದ ಆಟಗಾರರು ಹಾಗೂ ಪತ್ರಕರ್ತರು ಭಾರತವನ್ನು ಅತ್ಯಂತ ಹಿಂದುಳಿದ, ಶಿಸ್ತಿಲ್ಲದ, ಸೌಕರ್ಯಗಳಿಲ್ಲದ, ಅನಾಗರಿಕವಾದ ಕೊಳಕಿನ ನಾಡನ್ನಾಗಿ ಪರಿಭಾವಿಸುತ್ತಿದ್ದ ಕಾಲ ಅದು. ವಿದೇಶಿ ವೀಕ್ಷಕ ವಿವರಣೆಕಾರರಂತೂ ಭಾರತ ತಂಡವನ್ನು ಒಂದು ಕ್ಲಬ್ ಮಟ್ಟದ ತಂಡ ಎಂದು ಅಪಹಾಸ್ಯ ಮಾಡುತ್ತಿದ್ದರು. ವಸಾಹತುಶಾಹಿ ಮನಸ್ಥಿತಿ ನಿರ್ಮಿಸಿಕೊಟ್ಟ ಇಂತಹ ಸಿದ್ಧಮಾದರಿಯ ಚಿತ್ರಣಗಳಿಂದಾಗಿ ವಿದೇಶಿಯರು ಭಾರತ ಪ್ರವಾಸ ಕೈಗೊಳ್ಳಲು ಅಷ್ಟೊಂದು ಉತ್ಸಾಹ ತೋರಿಸುತ್ತಿರಲಿಲ್ಲ. ಇಂಗ್ಲೆಂಡ್, ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯಾದ ಆಟಗಾರರು ಭಾರತದ ನಗರಗಳಲ್ಲಿನ ಮೂಲಭೂತ ಸೌಕರ್ಯದ ಕೊರತೆ ಹಾಗೂ ಮಾಲಿನ್ಯಗಳನ್ನು ಗೇಲಿ ಮಾಡುತ್ತಿದ್ದ ಕಾಲ ಅದಾಗಿತ್ತು. ಇಂಗ್ಲೆಂಡ್-ಆಸ್ಟ್ರೇಲಿಯಾ ಮಂಡಳಿಗಳು ಕ್ರಿಕೆಟ್ ವಿಶ್ವವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡ ಕಾಲದಲ್ಲಿ ಭಾರತದಂತಹ ದೇಶಕ್ಕೆ ತನ್ನ ದೃಷ್ಟಿಕೋನವನ್ನು ಪ್ರತಿಪಾದಿಸುವ ಒಂದು ಧ್ವನಿ ಬೇಕಾಗಿತ್ತು. ಬಿಳಿಯರ ಪೂರ್ವಾಗ್ರಹಕ್ಕೆ ಹಾಗೂ ಅಹಂಕಾರಕ್ಕೆ ಸೆಟೆದು ನಿಂತು ಧ್ವನಿ ಎತ್ತಿದವರೇ ಈ ಗವಾಸ್ಕರ್. ತನ್ನ ಅಮೋಘ ಬ್ಯಾಟಿಂಗ್‌ನಿಂದ ಮೈದಾನದಲ್ಲಿ ಗಮನ ಸೆಳೆಯುತ್ತಿದ್ದ ರೀತಿಯಲ್ಲಿ ತನ್ನ ನಿರ್ಭಿಡೆಯ ಮಾತಿನಿಂದ ಬಿಳಿಯ ಕ್ರಿಕೆಟಿಗರು-ಪತ್ರಕರ್ತರು-ಅಂಪೈರ್‌ಗಳು ತಾರತಮ್ಯ ಮಾಡಿದಾಗ ಮುಲಾಜಿಲ್ಲದೆ ಖಂಡಿಸಿ ಅವರಲ್ಲೂ ಇರುವ ಮಿತಿಯನ್ನು ಪುನಃ ಪುನಃ ನೆನಪಿಸುತ್ತಿದ್ದ. ಉದಾಹರಣೆಗಾಗಿ ವಿದೇಶಿಯರು ಇಲ್ಲಿನ ಅಂಪೈರಿಂಗ್ ತೀರಾ ಕಳಪೆ ಎಂದು ಹೀಯಾಳಿಸಿದಾಗ ಅವರ ಅಂಪೈರಿಂಗ್‌ನ ಪೂರ್ವಾಗ್ರಹಗಳ ಬಗ್ಗೆಯೂ ನಿರ್ಭಿಡೆಯಿಂದ ಮಾತನಾಡುತ್ತಿದ್ದುದು ಗವಾಸ್ಕರ್ ಒಬ್ಬರೇ. ಹಾಗೆಯೇ ನಮ್ಮ ದೇಶದ ಕ್ರಿಕೆಟ್ ವ್ಯವಸ್ಥೆ ಹಾಗೂ ಆಯ್ಕೆ ಸಮಿತಿಯ ಎಡಬಿಡಂಗಿತನವನ್ನೂ ಮುಲಾಜಿಲ್ಲದೇ ಟೀಕಿಸುತ್ತಿದ್ದುದೂ ಇವರೇ. ಇಂತಹ ವ್ಯಕ್ತಿತ್ವದಿಂದಲೇ ಕ್ರಿಕೆಟ್ ವಿಶ್ವದಲ್ಲಿ ಒಂದು ಅಧಿಕಾರದ ಸ್ಥಾನವನ್ನು ಸಂಪಾದಿಸಿಕೊಂಡು ಇವತ್ತಿಗೂ ಒಂದು ಸೀನಿಯರ್ ಧ್ವನಿಯಾಗಿ ನಮ್ಮ ನಡುವೆ ಗವಾಸ್ಕರ್ ಇದ್ದಾರೆ.



ಹೀಗೆ ಹೇಳಿದಾಕ್ಷಣ ಇವರ ವ್ಯಕ್ತಿತ್ವದಲ್ಲಿ ದೋಷವೇ ಇರಲಿಲ್ಲ ಅಥವಾ ಈತ ಕ್ರಿಕೆಟ್ ಸರ್ವಗುಣ ಸಂಪನ್ನ ಎಂದೇನೂ ಅಲ್ಲ. ಬಾಂಬೆಯ ಮೇರು ದಿನಗಳಲ್ಲಿ ಸಹಜವಾಗಿದ್ದ ಕ್ರಿಕೆಟ್ ರಾಜಕೀಯ ಇವರ ರಕ್ತದಲ್ಲೂ ಸ್ವಲ್ಪ ಜಾಸ್ತಿಯೇ ಬೆರೆತಿತ್ತು. ಹಲವು ಬಾರಿ ಸನ್ನಿಗೆ ತಂಡಕ್ಕಿಂತ ಸ್ವಾರ್ಥವೇ ಹೆಚ್ಚಾಗಿದೆ ಎಂಬ ಆಪಾದನೆಯೂ ಇತ್ತು. ಅದರಲ್ಲೂ ಕಪಿಲ್ ದೇವ್ ಉತ್ತುಂಗಕ್ಕೆ ಬರುತ್ತಿದ್ದ ದಿನಗಳಲ್ಲಿ ಆತನ ಜನಪ್ರಿಯತೆಯನ್ನು ಸನ್ನಿಗೆ ಅರಗಿಸಿಕೊಳ್ಳಲು ಆಗಿರಲಿಲ್ಲ ಎಂಬ ಪಿಸುಮಾತು ಕೂಡಾ ಕೇಳಿಬರುತ್ತಿತ್ತು. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯವೊಂದರಲ್ಲಿ ಕಪಿಲ್ ದೇವ್ ಅತ್ಯಂತ ಬೇಜವಾಬ್ದಾರಿ ಶಾಟ್ ಹೊಡೆದು ಔಟ್ ಆಗಿ ತಂಡ ಹೀನಾಯ ಸೋಲನ್ನಪ್ಪಿದಾಗ ಮುಂದಿನ ಟೆಸ್ಟ್‌ಗೆ ಕಪಿಲ್ ದೇವ್‌ನನ್ನು ಕೈಬಿಟ್ಟು ಶಿಕ್ಷಿಸಲಾಗಿತ್ತು. ಇದರ ಹಿಂದೆ ಇದ್ದಿದ್ದೇ ಆಗಿನ ಕ್ಯಾಪ್ಟನ್ ಗವಾಸ್ಕರ್ ಎಂದೂ ಟೀಕಿಸಲಾಗಿತ್ತು. ಹಾಗೆಯೇ ಅರವತ್ತು ಓವರ್‌ಗಳ ಪಂದ್ಯ ಒಂದರಲ್ಲಿ ಔಟಾಗದೇ 36ರನ್ ಗಳಿಸಿ ತಂಡವನ್ನು ನೆಲ ಕಚ್ಚಿಸಿದ್ದೂ ಈತನೇ. ಈ ಪುಸ್ತಕದಲ್ಲಿ ಗವಾಸ್ಕರ್ ಈ ಎಲ್ಲ ಆಪಾದನೆಗಳನ್ನು ಸ್ಪಷ್ಟವಾಗಿಯೇ ನಿರಾಕರಿಸುತ್ತಾನೆ. ಕಪಿಲ್‌ನ ಬಗ್ಗೆಯಂತೂ ಅತ್ಯಂತ ಮುಕ್ತ ಕಂಠದಿಂದಲೂ ಶ್ಲಾಘಿಸುತ್ತಾನೆ. ಇಷ್ಟಕ್ಕೂ ಇವೆಲ್ಲಾ ನಿಜ ಎಂದುಕೊಂಡರೂ ಅವೆಲ್ಲ ಆಯಾ ಕಾಲಘಟ್ಟದ ವ್ಯಕ್ತಿಗತ ದೌರ್ಬಲ್ಯಗಳು ಎಂದು ಪರಿಭಾವಿಸುವುದೇ ಸೂಕ್ತ. ಇವತ್ತಿಗೂ ಸನ್ನಿ ಯುವ ಆಟಗಾರರಿಗೆ ನೀಡುವ ಪ್ರೋತ್ಸಾಹ, ಹುಟ್ಟಿಸುವ ಆತ್ಮವಿಶ್ವಾಸವನ್ನು ಅಕ್ಷರಗಳಲ್ಲಿ ವರ್ಣಿಸಲಾಗದು. ತೀವ್ರ ಟೀಕೆಗೂ ಒಂಜರಿಯದ ಸನ್ನಿಯ ಕ್ರಿಕೆಟ್ ವಿಶ್ಲೇಷಣೆಗೆ ಒಂದು ಘನತೆ ಹಾಗೂ ಆಳವಿರುವುದಂತೂ ಸತ್ಯ.


ಪುಟಪುಟದಲ್ಲೂ ವಿವರಣೆ-ವಿಶ್ಲೇಷಣೆ ಇರುವ ಈ ಮೂರೂ ಪುಸ್ತಕಗಳು ತಮ್ಮ ಹೊಸ ಕಾಣ್ಕೆಯೊಂದಿಗೆ ಗಮನ ಸೆಳೆಯುತ್ತವೆ. ಒಂದರ್ಥದಲ್ಲಿ ಇವು ಗವಾಸ್ಕರ್‌ನ ಅನುಭವ-ನೆನಪುಗಳ ಕಥನ. ತನ್ನ ಆತ್ಮಕಥೆ 'ಸನ್ನಿ ಡೇಸ್'ನಲ್ಲಿ ತಾನು ಬೆಳೆದುಬಂದ ರೀತಿ, ಬಾಂಬೆಯ ಲೋಕಲ್ ಕ್ರಿಕೆಟ್, ಟೆಸ್ಟ್ ಮ್ಯಾಚ್‌ಗಳ ವಿಶ್ಲೇಷಣೆ, ಸ್ವಾರಸ್ಯಕರ ಪ್ರಸಂಗಗಳು ಇತ್ಯಾದಿಗಳನ್ನು ಸರಳವಾಗಿ ನಿರೂಪಿಸಲಾಗಿದೆ. ಎರಡನೆಯ ಪುಸ್ತಕ 'ಐಡಲ್ಸ್' ಸನ್ನಿ ಮೆಚ್ಚಿದ ಶ್ರೇಷ್ಠ ಆಟಗಾರರ ವ್ಯಕ್ತಿ ಚಿತ್ರಣಗಳ ನಿರೂಪಣೆ. ಜೆಫ್ ಥಾಮ್ಸನ್, ಆ್ಯಂಡಿ ರಾಬರ್ಟ್ಸ್, ಸೋಬರ್ಸ್, ಗ್ರೆಗ್ ಚಾಪೆಲ್‌ರಂತಹ ಅತಿರಥರ ಚಿತ್ರಣಗಳ ಜೊತೆಗೆ ರಾಜೇಂದರ್ ಗೋಯೆಲ್ ಹಾಗೂ ಪದ್ಮಾಕರ್ ಶಿವಾಲ್ಕರ್ ರೀತಿಯ ದೇಸಿ ಆಟಗಾರರ ಬಗ್ಗೆಯೂ ಗವಾಸ್ಕರ್ ಮೆಚ್ಚಿ ಬರೆದಿದ್ದಾರೆ. 'ಒನ್ ಡೇ ವಂಡರ್ಸ್' ಭಾರತ ಏಕದಿನ ಪಂದ್ಯಗಳಲ್ಲಿ ಸಾರ್ವಭೌಮತ್ವ ಸಾಧಿಸಿದ್ದನ್ನು ವಿವರಿಸಿ ವಿಶ್ಲೇಷಿಸುತ್ತದೆ. ಇದರಲ್ಲಿ ನಮ್ಮವರೇ ಆದ ಸದಾನಂದ ವಿಶ್ವನಾಥರನ್ನು (ತನ್ನ ಕೈಯಾರೆ ಕ್ರಿಕೆಟ್ ಬದುಕನ್ನು ಹಾಳು ಮಾಡಿಕೊಂಡ ದುರಂತ ನಾಯಕ) ಕುರಿತ ಆತ್ಮೀಯ ಮಾತುಗಳೂ ದಾಖಲಾಗಿವೆ.

ಈಗಾಗಲೇ ತಿಳಿಸಿದಂತೆ ಈ ಸಂಕಥನದಲ್ಲಿ ಅನೇಕ ಸ್ವಾರಸ್ಯಕರ ಪ್ರಸಂಗಗಳಿವೆ. ಅವರಲ್ಲಿ ಕೆಲವು.. ಗವಾಸ್ಕರ್ ತಾನು ಈ ರೀತಿಯ ಆಟಗಾರನಾಗುವುದಕ್ಕೆ ತನ್ನ ಚಿಕ್ಕಪ್ಪನೇ ಕಾರಣ ಎನ್ನುತ್ತಾರೆ. ಏಕೆಂದರೆ ಸನ್ನಿ ಹುಟ್ಟಿದ ದಿನ ಮಗುವನ್ನು ಆಸ್ಪತ್ರೆಯಲ್ಲಿ ಗಮನಿಸಿದ್ದ ಚಿಕ್ಕಪ್ಪ ಮಗುವಿನ ಕಿವಿಯ ಕೆಳಭಾಗದಲ್ಲಿ ಒಂದು ಚಿಕ್ಕ ಗುರುತಿದ್ದದನ್ನು ಗಮನಿಸಿದ್ದರು. ಆದರೆ ಮರುದಿನ ಅವರು ನೋಡಿದಾಗ ಮಗುವಿನ ಕಿವಿಯಲ್ಲಿ ಗುರುತೇ ಇರಲಿಲ್ಲವಂತೆ! ತಕ್ಷಣವೇ ಗಡಿಬಿಡಿಯಿಂದ ತಮ್ಮ ಮಗುವಿಗಾಗಿ ಹುಡುಕಾಟ ನಡೆಸಿದಾಗ ಒಬ್ಬ ಬೆಸ್ತ ಮಹಿಳೆಯ ಪಕ್ಕ ಮಗು ಸಿಕ್ಕಿತಂತೆ! ತನ್ನ ಚಿಕ್ಕಪ್ಪ ಈ ವ್ಯತ್ಯಾಸ ಗಮನಿಸದಿದ್ದರೆ ತಾನು ಮೀನು ಹಿಡಿಯುವವನಾಗುತ್ತಿದ್ದೆನೆಂದು ಸನ್ನಿ ಹೇಳಿದ್ದಾರೆ.

ಹಾಗೆಯೇ ಬೆಂಕಿಯುಗುಳುವ ಆಸ್ಟ್ರೇಲಿಯಾದ ಬೌಲರ್ ಜೆಫ್ ಥಾಮ್ಸನ್ ಕುರಿತಾಗಿ ಬರೆಯುತ್ತಾ ಪ್ರೇಕ್ಷಕರ ಕಣ್ಮಣಿಯಾದ ಈತ ಚಿಕ್ಕ ಹುಡುಗರು ಆಟೋಗ್ರಾಫ್ ಕೇಳಿದರೆ ಯಾವತ್ತೂ ನಿರಾಕರಿಸುತ್ತಿರಲಿಲ್ಲವಂತೆ. ಏಕೆಂದರೆ ಮೈದಾನದ ಹೊರಗೆ ಟಾಮ್ ಬಾಯ್ ರೀತಿಯ ರಂಗುರಂಗಿನ ವ್ಯಕ್ತಿತ್ವದ ಥಾಮ್ಸನ್ `never deny anybody an autograph, he might have an elder sister' ಎನ್ನುತ್ತಿದ್ದನಂತೆ!! 1984ರಲ್ಲಿ ಇಂಗ್ಲೆಂಡ್ ವಿರುದ್ಧ ಪಾದಾರ್ಪಣೆ ಮಾಡಿದ ಅಜರುದ್ದೀನ್ ಅವರ ವಿರುದ್ಧ ಸಾಲುಸಾಲಾಗಿ ಮೂರು ಶತಕ ಬಾರಿಸಿದ್ದ. ಆಸ್ಟ್ರೇಲಿಯಾದಲ್ಲಿ ನಡೆದ 1985ರ ಬೆನ್ಸನ್ ಮತ್ತು ಹೆಡ್ಜಸ್ ಕಪ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಿರಾಯಾಸವಾಗಿ ಬ್ಯಾಟ್ ಬೀಸುತ್ತಿದ್ದ ಅಜರ್‌ನನ್ನು ನೋಡಿ ಇಂಗ್ಲಿಷ್ ಆಟಗಾರ ಆ್ಯಲನ್ ಲ್ಯಾಂಬ್ ಗವಾಸ್ಕರ್ ಬಳಿ `bating is like F...ing. It is so easy' ಎಂದನಂತೆ!! (ಅಜರುದ್ದೀನ್‌ಗೆ ಬ್ಯಾಟಿಂಗ್ ಲೈಂಗಿಕ ಕ್ರಿಯೆಯಷ್ಟೆ ಸುಲಲಿತ) ಇನ್ನೊಂದು ಪಂದ್ಯದಲ್ಲಿ ಇಂಗ್ಲಿಷ್ ಆಟಗಾರರು ಗವಾಸ್ಕರ್ ವಿರುದ್ಧ ಎಲ್‌ಬಿಡಬ್ಲ್ಯೂಗೆ ಅಪೀಲ್ ಮಾಡಿದಾಗ ಅಂಪೈರ್ ಔಟ್ ಕೊಡಲಿಲ್ಲ. ಆ ಓವರ್‌ನ ನಂತರ ಟೋನಿ ಗ್ರೇಗ್ 'ಅದು ಔಟ್ ಇರಬಹುದಿತ್ತು' ಎಂದಾಗ ಗವಾಸ್ಕರ್ 'ಆ ಅಂಪೈರ್ ನನ್ನ ಚಿಕ್ಕಪ್ಪ' ಎಂದು ಹೇಳಿದನಂತೆ. ಏಕೆಂದರೆ ಆ ಅಂಪೈರ್ ಹೆಸರು ಗೋಟಾಸ್ಕರ್ ಆಗಿತ್ತು!!

ಹೀಗೆ ಪ್ರಖರ ವಿಶ್ಲೇಷಣೆಯೊಂದಿಗೆ ತಿಳಿ ಪ್ರಸಂಗಗಳು ಕೂಡಾ ಈ ಪುಸ್ತಕದಲ್ಲಿ ಮಿಳಿತವಾಗಿವೆ. ಸಾಧ್ಯವಾದರೆ ಇದನ್ನು ನೀವು ಓದಿ ಆನಂದಿಸಿ.

• ಟಿ.ಅವಿನಾಶ್



## ನಾವು ಗಣಮಕ್ಳು...

ನಿಜ, ನಾವು ಗಣಮಕ್ಳು?
ಹುಟ್ಟಿದಾಗ ಅಪ್ಪ-ಅವ್ವನ
ಮುಖದಲ್ಲಿ ನಗೆ ತೇಲಿಸಿದವರು

ಅಜ್ಜಿಯ ಬೊಚ್ಚುಬಾಯಿ
ತುಂಬ ಸಕ್ಕರೆ, ನಡೆಯಲಾಗದ
ಅಜ್ಜ ಓಣಿ ಸುತ್ತಿ ಸಿಹಿ ಹಂಚಿದ್ದು

ಗಂಡೆಂಬ ಅಹಂಕಾರಕೆ
ಅಕ್ಕ, ತಂಗಿಯರ ಚಾಕರಿ
ಅವರ ತಲೆಗೆ ವಿದ್ಯೆ ಹತ್ತಲಿಲ್ಲ
ನನ್ನ ಪದವಿ ಪತ್ರಗಳಿಗೆ
ಅವರದೆ ಬೆವರ ಹನಿ ಸಹಿ

ಉದ್ಯೋಗ ಬಂದ ಮೇಲೆ
ಮತ್ತದೆ ಅಹಂಕಾರ
ನನ್ನ ಕಾಲ ಮೇಲೆ ನಿಂತ ಖುಷಿ
ಅದೇಕೊ ಬೆನ್ನ ಹಿಂದಿನ ನೆರಳೇ
ನನ್ನ ಕಂಡು ಕೆಂಡಾಮಂಡಲ!

ಬಾಲ್ಯದಲ್ಲಿ ಅರ್ಥವಾಗದ್ದು
ಈಗೀಗ ಅರ್ಥವಾಗುತ್ತಿದೆ...
ಅಪ್ಪ-ಅವ್ವಗೆ ಬೇಕಾಗಿದ್ದ ಗಂಡು!
ಅಜ್ಜ ಅಜ್ಜಿಯರಂತೆ ತಮ್ಮನು
ಮನೆಯ ಮೂಲೆಗೆ ಸೇರಿಸಲು
ಹರಕು ಬಟ್ಟಲಲಿ ಹಳಸಲು
ಅನ್ನ ಹಾಕಲು, ಬದುಕಿ
ಸಾಯುವುದರ ಅರ್ಥ ತೋರಲು
ಬೇಕಿದ್ದನಂತೆ ಗಣಮಗ!

ನನಗೆ ಮತ್ತೆ ಮತ್ತೆ
ಅನ್ನಿಸುವುದಿಷ್ಟೆ, ಅಪ್ಪ-ಅವ್ವ ಸತ್ತರೆ
ಮಣ್ಣು ಕೊಡಲು, ಅವರ ಚಿತೆಗೆ
ಬೆಂಕಿ ಇಡಲು ನನ್ನಂಥವನೇ
ಬೇಕಂತೆ; ಬೇಡಿ ಪಡೆದರಂತೆ ನನ್ನ!

ನಿಜ, ನಾನೂ ಗಣಮಗ
ಉಳಿದ ಕೋಟ್ಯಾನುಕೋಟಿ
ಗಣಮಕ್ಳಂತೆ; ಹಡೆದವರ
ಚಟ್ಟಕ್ಕೆ ಹೆಗಲು ಕೊಡಲು ತಯಾರಿ
ನಡೆಸಿದ ಧೂರ್ತನೆಂದು!

• ಕಲಿಗಣನಾಥ ಗುಡದೂರು

## ೋಹತ್ಯಾ ನಿಷೇಧ ಕಾಯಿದೆ: 2010

# ದಯೆ ಇಲ್ಲದ ಧರ್ಮ ವಿವೇಕವಿಲ್ಲದ ಸರ್ಕಾರ

ರ್ಕಾರ, ಇತ್ತೀಚೆಗೆ ಎರಡನೆಯ ಬಾರಿ ವಿಧಾನಸಭೆ ಮುಂಡಿಸಿದ ಪರಿಷ್ಕೃತ ಗೋಹತ್ಯಾ ನಿಷೇಧ ಕಾಯಿದೆ ಸಮರ್ಥಿಸುತ್ತಾ ರಾಜ್ಯ ಗೃಹ ಸಚಿವರು ಗೋಹತ್ಯೆ ಹಿಂದೂಗಳ ಮನಸ್ಸಿಗೆ ನೋವಾಗಿದೆ ಎಂದು ದ್ದಾರೆ. ಈ ಕಾಯಿದೆಯಿಂದ ಗೋಮಾಂಸ ವ್ಯಾಪಾರಿ ಮಾತ್ರವಲ್ಲ, ಹಳ್ಳಿಗಳಲ್ಲೂ ಇರುವ ಜಾನುವಾರು ಗಳು ಮತ್ತು ಸಾಗಾಣಿಕೆದಾರರು ತಮ್ಮ ಉದ್ಯೋಗ ೊಳ್ಳುತ್ತಾರೆ. ಗೋಮಾಂಸ ವ್ಯಾಪಾರಿಗಳಲ್ಲಿ ಹೆಚ್ಚಿನವರು ಾಗಳಲ್ಲವಾದ್ದರಿಂದ ಅವರ ಹೊಟ್ಟೆಗೆ ಬೀಳುವ ಹಿಂದೂಗಳ ಮನಸ್ಸಿಗೆ ಆಗುವ ನೋವಿನಷ್ಟು ವಲ್ಲ ಎಂದು ಗೃಹ ಸಚಿವರು ಭಾವಿಸಿರಬಹುದು. ಧರ್ಮ ಅವರನ್ನು ಕಾಪಾಡಲಿ!

ದರೆ ಜಾನುವಾರು ದಲ್ಲಾಳಿ ಮತ್ತು ಸಾಗಾಣಿಕೆಯ ಎಲ್ಲಿ ದೊಡ್ಡ ಸಂಖ್ಯೆಯ ಹಿಂದೂಗಳು ಇರುವುದನ್ನು ಚಿವರು ಗಮನಿಸಬೇಕು. ಸರ್ಕಾರದ ಹೊಸ ಗೋಹತ್ಯಾ ಕಾಯ್ದೆ ಜಾನುವಾರು ವ್ಯಾಪಾರ ಮತ್ತು ದಲ್ಲಾಳಿ ನ್ನೇ ಸಂಶಯಾಸ್ಪದ ವ್ಯವಹಾರವೆಂದು ಪರಿಗಣಿಸುತ್ತದೆ. ನಿರ್ದೋಷಿಗಳು ಎಂದು ಸಾಬೀತುಪಡಿಸುವ ಯನ್ನು ಈ ಕಾಯಿದೆ ದಲ್ಲಾಳಿಗಳು ಮತ್ತು




ಕೆದಾರರ ಮೇಲೆಯೇ ಹೊರಿಸುತ್ತದೆ. ಇನ್ನು ಮುಂದೆ ಲ್ಲಿ ಜಾನುವಾರು ವ್ಯಾಪಾರ ಮತ್ತು ಸಾಗಾಣಿಕೆಗಳು ವಾಣಿಜ್ಯ ವ್ಯವಹಾರದ ಬದಲು ಪೊಲೀಸರು ರೆವಿನ್ಯೂ ಅಧಿಕಾರಿಗಳ ಅನುಮತಿ ಇದ್ದರೆ ಮಾತ್ರ ಬಹುದಾದ ಕಸುಬಾಗುತ್ತದೆ.

ನುವಾರುಗಳನ್ನು ಖರೀದಿಸುವ ಮತ್ತು ಸಾಗಿಸುವ ಅದನ್ನು ಕಸಾಯಿಖಾನೆಗೆ ಒಯ್ಯಲೆಂದೇ ಸುವುದೂ ಇಲ್ಲ; ಸಾಗಿಸುವುದೂ ಇಲ್ಲ. ದರಣೆಗೆ ಈಗಲೂ ರಾಜ್ಯದ ಮಲೆನಾಡಿನ ರೈತರು ದಕ್ಕೆಂದು ಖರೀದಿಸುವ ಜಾನುವಾರುಗಳನ್ನು ಳು ಕರಾವಳಿಯ ಹಳ್ಳಿಗಳ ರೈತರಿಂದ ಕೊಳ್ಳುತ್ತಾರೆ. ಯ ಊರುಗಳಿಗೆ ಸಾಕಣಿಕೆಗೆ ಎಂದು ಬರುವ ಹೈಬ್ರೀಡ್ ರಾಸುಗಳು ಕೋಲಾರ, ಬೆಂಗಳೂರುಗಳಿಂದ ಬರುತ್ತವೆ. ಸರ್ಕಾರದ ಹೊಸ ಕಾಯ್ದೆಯಿಂದ ಈ ಬಗೆಯ ಜಾನುವಾರು ಸಾಗಾಣಿಕೆಯನ್ನು ಮಾಡುವುದೇ ಅಸಾಧ್ಯವಾಗುತ್ತದೆ.

ಉಡುಪಿಯ ಸಮೀಪದ ಹಳ್ಳಿಯೊಂದರಲ್ಲಿ 30 ವರ್ಷ ಯಶಸ್ವಿಯಾಗಿ ಒಂದು ಡೈರಿ ನಡೆಸಿದ ಹಾಲಿನ ಉದ್ಯಮಿಯೊಬ್ಬರು ನನಗೆ ಈ ವಿಷಯ ತಿಳಿಸಿದರು. ಈ ಕಾಯಿದೆ ಸಂಪೂರ್ಣವಾಗಿ ಮತ್ತು ಕಟ್ಟುನಿಟ್ಟಾಗಿ ಜಾರಿಗೆ ಬಂದರೆ ರಾಜ್ಯದಲ್ಲಿ ಜಾನು ವಾರುಗಳನ್ನು ಸಾಕುವುದು ಒಂದು ಲಾಭದಾಯಕ ವ್ಯವಹಾರವಾಗಿ ಉಳಿಯುವುದಿಲ್ಲ ಎಂದು ಸಹ ಅವರು ಖಚಿತವಾಗಿ ಹೇಳಿದರು. "ನಾನು ನನ್ನ ಡೈರಿಗೆ ಕೋಲಾರದಿಂದ ಜಾನುವಾರುಗಳನ್ನು ಸಾಗಿಸಿ ಕೊಂಡು ಬರುವಾಗ, ದಾರಿಯಲ್ಲಿ ಸಿಗುವ ಪೊಲೀಸು ಠಾಣೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಸುಳ್ಯ ಠಾಣೆಯಲ್ಲಿ ನನಗೆ ಪೊಲೀಸರು ಕೊಟ್ಟ ಉಪದ್ರವ ಅಷ್ಟಿಷ್ಟಲ್ಲ. ನಾವು ಸಾಧಾರಣವಾಗಿ ಜಾನುವಾರು ಗಳಿಗೆ ಬಿಸಿಲು ತಾಗಬಾರದು ಎಂದು ರಾತ್ರಿಯ ಹೊತ್ತೇ ಪ್ರಯಾಣ ಮಾಡುವುದು; ನಡುರಾತ್ರಿಯಲ್ಲಿ ಈ ಪೊಲೀಸರು ನಮ್ಮನ್ನು ಗಂಟೆಗಟ್ಟಲೇ ಕೂಡಿಸಿ ತನಿಖೆ ಮಾಡುತ್ತಿದ್ದರು. ದಾರಿಯುದ್ದಕ್ಕೂ ಲಂಚಕೊಟ್ಟೆ ಇವರಿಂದ ತಪ್ಪಿಸಿಕೊಂಡು ಬರುತ್ತಿದ್ದೆ" ಎಂದು ಈ ಮಾಜಿ ಡೈರಿ ಮಾಲೀಕ ತನ್ನ ಅನುಭವ ಹೇಳಿದರು. ಅವರು ಒಬ್ಬ ಹಿಂದೂ; ಮೇಲಾಗಿ ಓರ್ವ ಬ್ರಾಹ್ಮಣ ಎಂಬುದನ್ನೂ ನಾನು ಅಗತ್ಯ ಹೇಳಬೇಕು (ಅವರ ಹೆಸರನ್ನು ಬೇಕೆಂದೇ ನಾನು ಇಲ್ಲಿ ಕಾಣಿಸುತ್ತಿಲ್ಲ)

ಅವರು ಹೇಳುವ ಪ್ರಕಾರ ಹಾಲು ಕೊಡದ ಮತ್ತು ಗೊಡ್ಡಾದ ಜಾನುವಾರುಗಳನ್ನು ಅವು ಸಾಯುವವರೆಗೂ ಸಾಕಿಕೊಂಡು ಡೈರಿ ನಡೆಸುವುದು ಅಸಾಧ್ಯದ ಮಾತು. "ಗೊಡ್ಡಾದ ಮೇಲೂ ಜಾನುವಾರುಗಳು, ಅವು ಊರಿನ ತಳಿಯವೇ ಆಗಲಿ, ಹೈಬ್ರೀಡೇ ಆಗಲಿ ಕಡಿಮೆ ಅಂದರೆ 10 ವರ್ಷವಾದರೂ ಬದುಕುತ್ತವೆ. ಈಗಿನ ಧಾರಣೆ ವಾಸಿಯಲ್ಲಿ ಒಂದು ಜೆರ್ಸಿದನದ ಹೊಟ್ಟೆಗೆ ಹಾಕಲು ಕಮ್ಮಿ ಎಂದರೆ 60ರಿಂದ 70 ರೂಪಾಯಿ ಬೇಕು. ಆಮೇಲೆ ಅವುಗಳ ಚಾಕರಿಯನ್ನು ಮಾಡಬೇಕು; ಕಾಯಿಲೆಕಸಾಲೆ ಬಂದರೆ ಅನುಪಾನ ಮಾಡಬೇಕು. ಪ್ರತಿವರ್ಷ ಇಂಜೆಕ್ಷನ್ ಕೊಡಿಸಬೇಕು. ಗೊಡ್ಡಾದ ಮೇಲೆ ಯಾಕೆ, ಅವು ಹಾಲು ಕೊಡುತ್ತಿರುವಾಗಲೇ ಕಾಯಿಲೆ ಬಿದ್ದರೆ ಅವನ್ನು ಕಸಾಯಿಯವರಿಗೆ ಮಾರದೇ ಬೇರೆ ದಾರಿಯೇ ಇಲ್ಲ" ಎಂದು ಈ ಡೈರಿ ಮಾಲೀಕರು ಹೇಳಿದರು. ಅವರ ಡೈರಿಯ ಅತ್ಯುತ್ತಮ ದಿನಗಳಲ್ಲಿ ಅವರು ಜಾನುವಾರುಗಳನ್ನು ಸಾಕಿದ್ದರು. ಕೆಲಸಗಾರರ ಸಮಸ್ಯೆ ಮತ್ತು ಹೆತ್ತವರ ಅನಾರೋಗ್ಯದ ಕಾರಣದಿಂದಾಗಿ ಈಗ ಕೆಲವು ವರ್ಷಗಳ ಹಿಂದೆ, ಡೈರಿ ಲಾಭದಲ್ಲಿ ನಡೆಯುತ್ತಿದ್ದಾಗಲೇ ಅವರು ಆ ಉದ್ಯಮವನ್ನು ನಿಲ್ಲಿಸಿದರು. "ಈ ಕಾನೂನು ಇದ್ದಿದ್ದರೆ ಡೈರಿ ನಡೆಸುವುದೇ ಸಾಧ್ಯವಾಗುತ್ತಿರಲಿಲ್ಲ" ಎಂದು ಅವರು ನನ್ನೊಡನೆ ಹೇಳಿದರು.

ರಾಜ್ಯ ಸರ್ಕಾರದ ಹೊಸ ಗೋಹತ್ಯಾ ನಿಷೇಧ ಕಾಯಿದೆಯಿಂದ ದೊಡ್ಡ ಡೈರಿ ಮಾಲೀಕರು ಮಾತ್ರವಲ್ಲ, ದೇಸಿ ತಳಿಯ ಒಂದೆರಡು ಜಾನುವಾರುಗಳನ್ನು ಸಾಕಿಕೊಂಡಿರುವ ಸಣ್ಣ ರೈತರು, ಸಣ್ಣಮಟ್ಟದ ಹಾಲಿನ ವ್ಯಾಪಾರಿಗಳು ಮತ್ತು ಗೌಳಿಗರು ಸಹ, ಜಾನುವಾರು ಸಾಕಣಿಕೆಯನ್ನು ಕ್ರಮೇಣ ಕೈಬಿಡಬೇಕಾಗಬಹುದು. ಜಾನುವಾರುಗಳನ್ನು ಉಳುಮೆ ಮತ್ತು ಗೊಬ್ಬರ ಅಥವಾ ಹಾಲಿಗಾಗಿ ಸಾಕುವ ಯಾರೂ ಅದನ್ನು ದೇವತೆ ಎಂದು ಪರಿಗಣಿಸುವುದಿಲ್ಲ. ಅವುಗಳ ಉಪಯೋಗದ ನಂತರ ಅವುಗಳನ್ನು ಸಾಕುವುದು ಹೆಚ್ಚಿನವರಿಗೆ ಸಾಧ್ಯವಿಲ್ಲ. ಇವತ್ತಿನ ದಿನ ಮಾನದಲ್ಲಿ ದೇಸಿ ತಳಿಯ ಜಾನುವಾರುಗಳನ್ನು ಸಾಕುವುದಕ್ಕೆ ದಿನವೊಂದಕ್ಕೆ ಕನಿಷ್ಠ 30 ರೂ.ಗಳಾದರೂ ಬೇಕು. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಧರ್ಮಗುರುಗಳ ಸಭೆಯೊಂದರಲ್ಲಿ ಮಾತಾಡುತ್ತ ಉಡುಪಿಯ ಪೇಜಾವರ ಮಠದ ಸ್ವಾಮೀಜಿಯವರು



"ಸಮಸ್ತ ಮನುಕುಲಕ್ಕೆ ಅಮೃತ ಸಮಾನವಾದ ಹಾಲು, ಮೊಸರು, ತುಪ್ಪ ಹಾಗೂ ವ್ಯವಸಾಯಕ್ಕೆ ಬೇಕಾದ ರಸಗೊಬ್ಬರ ಕೊಡುವಂತಹ ಗೋವು ಮಾತೆಗೆ ಸಮಾನ. ಕೃಷಿ ಚಟುವಟಿಕೆಗಳಲ್ಲಿ ನೆರವಾಗುವ ಗೋವು ಕೃಷಿಕರ ಬದುಕಿನ ಭಾಗವಾಗಿದೆ. ಇಂತಹ ಗೋಹತ್ಯೆ ಮಾಡುವುದನ್ನು ಎಲ್ಲರೂ ವಿರೋಧಿಸಬೇಕಿದೆ" ಎಂದು ಹೇಳಿದ್ದಾರೆ. ಹಾಲು ಬರುವುದು ನಂದಿನಿ ಪ್ಯಾಕೆಟ್ಟಿನಿಂದ ಎಂದು ತಿಳಿದಿರುವ ಬೆಂಗಳೂರಿಗರಿಗೆ ಅವರ ಈ ಮಾತಿನಿಂದ ಜ್ಞಾನೋದಯವಾಗಿರಬಹುದು. ಆದರೆ ಕೃಷಿಕರಿಗೆ ಜಾನುವಾರುಗಳ ಉಪಯೋಗವೇನು ಎಂಬುದು ಪೇಜಾವರ್ಶ್ರೀಗಳು ಹೇಳದೆಯೂ ಗೊತ್ತಿದೆ. ಹಾಗೆಯೇ ಜಾನುವಾರುಗಳ ಹೊಟ್ಟೆಗೆ ಹುಲ್ಲು, ಹಿಂಡಿ, ಬೂಸಾಗಳನ್ನು ಹಾಕದೆ ಇದ್ದರೆ ಅವು ಹಾಲನ್ನೂ ಇಳಿಸುವುದಿಲ್ಲ; ಸೆಗಣಿಯನ್ನೂ ಹಾಕುವುದಿಲ್ಲ ಎಂಬುದು ಸಹ ಗೊತ್ತಿದೆ. ಜಾನುವಾರು ಸಾಕಣಿಕೆಯ ಖರ್ಚುವೆಚ್ಚ ಪೇಜಾವರಶ್ರೀಗಳಿಗೆ ಗೊತ್ತಿಲ್ಲದ ವಿಷಯವೇನೂ ಅಲ್ಲ. ಅನಾದಿಕಾಲದಿಂದಲೂ ಉಡುಪಿ ಕೃಷ್ಣಮಠದ ಗೋಶಾಲೆಯಲ್ಲಿ ಗೋವುಗಳನ್ನು ಸಾಕುವ ಪರಿಪಾಠ ನಡೆದುಕೊಂಡು ಬಂದಿದೆ. ಸದ್ಯಕ್ಕೆ ಈ ಗೋಶಾಲೆಯಲ್ಲಿ ಸುಮಾರು 70 ಕಾಲ್ನಡೆಗಳಿದ್ದು, ಅವುಗಳಲ್ಲಿ ಕೇವಲ ಐದು ಮಾತ್ರ ದೇಸಿ ತಳಿಯವು. ಉಳಿದ ಅಷ್ಟೂ ಹೈಬ್ರೀಡ್ ತಳಿಯವು. ದೇಸಿ ತಳಿಯ ದನಗಳನ್ನು ಸಾಕುವುದು ಪೂರ್ತಿ ನಷ್ಟದ ವ್ಯವಹಾರ ಎಂಬ ಕಾರಣಕ್ಕೆ ಈಗ ಕೆಲವು ವರ್ಷಗಳ ಹಿಂದೆಯೇ ಗೋಶಾಲೆಯಲ್ಲಿದ್ದ ಈ ದನಗಳನ್ನೆಲ್ಲ ಮಠದವರು ಮೈಸೂರಿನ ಪಿಂಜ್ರಾಪೋಲಿಗೆ ಅಟ್ಟಿದ್ದಾರೆ. ಅಗಾಧ ಸಂಪನ್ಮೂಲಪಿರುವ ಕೃಷ್ಣಮಠಕ್ಕೇನೆ ಜಾನುವಾರು ಸಾಕಣೆ ಲಾಭನಷ್ಟಗಳ ಒಂದು ಆರ್ಥಿಕ ವ್ಯವಹಾರವಾಗಿರುವಾಗ ಅದನ್ನು ರಾಜ್ಯದ ಬಡರೈತರು ಮಾತ್ರ ಒಂದು ಧಾರ್ಮಿಕ ವ್ರತದಂತೆ ಪಾಲಿಸಬೇಕು ಎಂದು ಪೇಜಾವರ ಶ್ರೀಗಳು ಬಯಸುತ್ತಿದ್ದಾರೆ. ಬೆಂಗಳೂರಿನ ಆ ಸಭೆಯಲ್ಲಿ ಮಾತನಾಡಿದ ಇನ್ನೋರ್ವ ಮಠಾಧೀಶ ಆದಿಚುಂಚನಗಿರಿಯ ಸ್ವಾಮೀಜಿಯವರೂ, ಪೇಜಾವರಶ್ರೀಗಳ ಮಾತಿಗೆ ದನಿಗೂಡಿಸಿದ್ದಾರೆ.

ಪೇಜಾವರ ಮತ್ತು ಆದಿಚುಂಚನಗಿರಿಯ ಮಠಾಧೀಶರು ಪ್ರತಿಪಾದಿಸುವ ಧರ್ಮದಲ್ಲಿ ದಯೆಯೇ ಇಲ್ಲ. ಆಹಾರಕ್ಕಾಗಿ ಜಾನುವಾರುಗಳನ್ನು ಕತ್ತರಿಸುವುದನ್ನು ಗೋಹತ್ಯೆ ಎಂದು ಕರೆಯುವುದೇ ಇವರ ಮನೋಧರ್ಮದಲ್ಲಿ ಅಡಗಿರುವ ಕ್ರೌರ್ಯವನ್ನು ಸೂಚಿಸುತ್ತದೆ. ಆಹಾರಕ್ಕಾಗಿ ಯಾವುದೇ ಪ್ರಾಣಿಯನ್ನು ತರಕಾರಿಯಂತೆ ಕತ್ತರಿಸುವುದನ್ನು ಹತ್ಯೆ ಎಂಬ ಸಂಸ್ಕೃತ ಶಬ್ದದಲ್ಲಾಗಲಿ ಕೊಲೆ ಎಂಬ ಕನ್ನಡ ಶಬ್ದದಲ್ಲಾಗಲೀ ಹೇಳುವುದೇ ಅಸಂಗತ. ಆಡು, ಕುರಿ, ಕೋಳಿ, ಮೀನುಗಳನ್ನು ಆಹಾರವಾಗಿ ಬಳಸುವುದನ್ನು ಹತ್ಯೆ ಎಂದು ಯಾರೂ ಕರೆಯುವುದಿಲ್ಲ, ಅವುಗಳನ್ನು ಕತ್ತರಿಸುವವರು ಕಟುಕರೂ ಅಲ್ಲ, ಜಾನುವಾರು ವ್ಯಾಪಾರಿಗಳಿಗೆ ಮಾತ್ರ ಯಾಕೆ ಈ ಅವಹೇಳನದ ನಾಮಕರಣ? ಇದು ಭಾಷೆಯಲ್ಲಿಯೇ ಅಂತರ್ಗತವಾಗಿರುವ ಕ್ರೌರ್ಯ, ದಬ್ಬಾಳಿಕೆ ಮತ್ತು ಸೋಗಲಾಡಿತನಗಳಿಗೆ ಒಂದು ನಿದರ್ಶನ. ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಗೋಹತ್ಯಾ ನಿಷೇಧ ಕಾಯಿದೆ-2010 ರಾಜ್ಯದಲ್ಲಿ ಈಗ ವಿಜೃಂಭಿಸುತ್ತಿರುವ ಈ ಅಮಾನುಷತೆಯ ಮೂರ್ತರೂಪವಾಗಿದೆ.

ಈ ಕಾಯಿದೆಯಿಂದ ಒಮ್ಮಿಂದೊಮ್ಮೆಗೆ ತಮ್ಮ ಉದ್ಯೋಗ ಕಳೆದುಕೊಳ್ಳುವ ಜಾನುವಾರು ದಲ್ಲಾಳಿಗಳು, ಸಾಗಾಣಿಕೆದ್ಡಾರರು ಮತ್ತು ಗೋಮಾಂಸ ವ್ಯಾಪಾರಿಗಳಿಗೆ ಸರ್ಕಾರ ಯಾವ ಪರ್ಯಾಯ ಯೋಜನೆಯನ್ನೂ ರೂಪಿಸಿಲ್ಲ. ಇವರಲ್ಲಿ ಹೆಚ್ಚಿನವರು ಮುಸ್ಲಿಮರಾಗಿರುವುದರಿಂದ ಮತ್ತು ಮುಸ್ಲಿಮರು ಪ್ರಜೆಗಳೂ ಅಲ್ಲ; ಮನುಷ್ಯರೂ ಅಲ್ಲ ಎಂಬುದು ಆಡಳಿತ ಪಕ್ಷ ಬಿಜೆಪಿಯ ಸಿದ್ಧಾಂತವೂ ಆಗಿರುವುದರಿಂದ, ಸರ್ಕಾರ ಆ ನಿಟ್ಟಿನಲ್ಲಿ ಬಹುಶಃ ಯೋಚಿಸಿಲ್ಲ. ಆದರೆ ಈ ಕಾಯಿದೆ ಜಾರಿಗೆ ಬಂದರೆ ರಾಜ್ಯದ ಬಡರೈತರು, ತಮ್ಮ ನಿರುಪಯುಕ್ತ ಜಾನುವಾರುಗಳನ್ನು ಮಾರುವಂತಿಲ್ಲ; ಅವುಗಳನ್ನು ಮಾರದೆ, ಅವರು ಜಾನುವಾರುಗಳನ್ನು ಹೊಸದಾಗಿ ಕೊಳ್ಳುವಂತೆಯೂ ಇಲ್ಲ; ಅವರ ಕೊಟ್ಟಿಗೆಗಳಲ್ಲಿ ಅವುಗಳಿಗೆ ಜಾಗವೂ ಇರುವುದಿಲ್ಲ. ಸರ್ಕಾರ ಈ ರೈತರ ಮಟ್ಟಿಗಾದರೂ- ಇವರಲ್ಲಿ ಹೆಚ್ಚಿನವರು ಹಿಂದುಗಳು-ಒಂದು ಪರ್ಯಾಯ ಯೋಜನೆ ಅಥವಾ ಸಹಾಯಧನದ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ ಎಂದರೆ ಅದೂ ಇಲ್ಲ. ಮುಸ್ಲಿಮರ ಹಾಗೆ ಈ ಬಡರೈತರು ಸಹ ಅವರು ಹಿಂದೂಗಳೇ ಆದರೂ ಪ್ರಜೆಗಳೂ ಅಲ್ಲ; ಮನುಷ್ಯರೂ ಅಲ್ಲ ಎಂದು ಸರ್ಕಾರ ತೀರ್ಮಾನಿಸಿದ್ದರೆ. ಆಶ್ಚರ್ಯವೇನೂ ಇಲ್ಲ. ಬಿಜೆಪಿಯ ಆರ್ಥಿಕ ಸಿದ್ಧಾಂತವಂತೂ ಹಾಗೆಯೇ ಇದೆ. ಸರ್ಕಾರದ ಈ ಗೋಹತ್ಯಾ ನಿಷೇಧ ಕಾಯಿದೆಯಿಂದ ಜಾನುವಾರು ವ್ಯಾಪಾರಿಗಳು ಮತ್ತು ಬಡರೈತರ ಜೊತೆಗೆ ಜಾನುವಾರು ಸಾಕಣಿಕೆಯ ವೃತ್ತಿಯೇ ನಿರ್ನಾಮವಾಗುವ ಅಪಾಯವಿದೆ. ಈಗಾಗಲೇ ನಮ್ಮಲ್ಲಿ ಎಮ್ಮೆ, ಕೋಣ ಮತ್ತು ಎತ್ತುಗಳು ಹಳ್ಳಿಗಳಲ್ಲೂ ಕಾಣಸಿಗುವುದಿಲ್ಲ. ಸಾಕುವವರಿಲ್ಲದೆ ಅವುಗಳ ಸಂಖ್ಯೆ ಕುಸಿದಿದೆಯೇ ಹೊರತು ಗೋಹತ್ಯೆಯಿಂದಾಗಿ ಅಲ್ಲ. ನಾಳೆ ದನಕರುಗಳ ಪಾಡು ಕೂಡ ಅದೇ ಆದೀತು.

**• ಜಿ ರಾಜಶೇಖರ್**

## ಗೋಹತ್ಯೆ ನಿಷೇಧ:

# ಗೊಲ್ಲರ ಗೋಳು

ಜ್ಯ ಸರ್ಕಾರವು ಕ್ರೂರ, ಜೀವ ವಿರೋಧಿ 'ಗೋಹತ್ಯಾ ಮಸೂದೆ-2010' ಅನ್ನು ಜಾರಿಗೆ ತರಲೇಬೇಕು ರ್ಧರಿಸಿದೆ. ಸಂಘಪರಿವಾರದ ಕೊಳಕು ಅಜೆಂಡಾ ಕುಟುಂಬದಿಂದ ಬಂದ ಬಿಜೆಪಿಯ ಶಾಸಕರಿಗೆ ಗುತ್ತಿಲ್ಲವೋ ಅಥವಾ ಎಲ್ಲ ಗೊತ್ತಿದ್ದೂ ತಮಗೆ ಸಿಕ್ಕರೆ ಸಾಕು ಅಂತಾ ಸುಮ್ಮನೆ ಬಾಯ್ಮುಚ್ಚಿ ರೋ ಗೊತ್ತಿಲ್ಲ. ಕೃಷಿಕ ಮತ್ತು ಜಾನುವಾರುಗಳ ನನ್ನು ಭಾವನಾತ್ಮಕಗೊಳಿಸುವ ಮೂಲಕ ಜನೋ ಸ್ವಂಟುಮಾಡಲು ಯತ್ನಿಸುತ್ತಿರುವ ವಿ.ಎಸ್. ರಿಗಾಗಲಿ, ಪೇಜಾವರ, ಬಾಲಗಂಗಾಧರರಿಗಾಗಲಿ ದುಕಿನ ತಲ್ಲಣಗಳು ಅರ್ಥವಾಗುವುದೇ ಕಷ್ಟ

ರಾಜ್ಯಾದ್ಯಂತ ನಡೆಯುತ್ತಿರುವ ಚರ್ಚೆಗಳಲ್ಲಿ ರೈತಾಪಿ ಜಾನುವಾರು ಸಾಕಾಣಿಕೆ ಮಾಡುತ್ತಿದ್ದಾರೆ ಎಂಬ ನುತ್ತಿದೆ. ಆದರೆ ಹೈನುಗಾರಿಕೆ ಮೂಲಕ ಬದುಕು ಕಟ್ಟಿಕೊಂಡ, ಕಟ್ಟಿಕೊಳ್ಳುತ್ತಿರುವ ಲಕ್ಷಾಂತರ ಜನ ರಾಜ್ಯಾದ್ಯಂತ ಇದ್ದಾರೆ. ಅದರಲ್ಲೂ ಬೆಂಗಳೂರಿನಲ್ಲಂತೂ ಸಾವಿರಾರು ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ಇವರಲ್ಲಿ ಬಹುತೇಕರು ಗೊಲ್ಲರು, ತಿಗಳರು ಮತ್ತು ಕುರುಬರು. ಸದ್ಯಕ್ಕೆ ಇಂತಹ ಕುಟುಂಬಗಳಿಗೆ ಈ ಕೆಲಸ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಇದು ಪರಂಪರಾಗತವಾಗಿ ಬಂದ ಕೌಟುಂಬಿಕ ಕಸುಬು ಇವರಿಗೆ.

ಗೋಹತ್ಯೆ ನಿಷೇಧ ಜಾರಿಗೆ ಬಂದರೆ ಅವರ ಪಾಡೇನಾಗಬಹುದು? ನಮ್ಮ ಕಚೇರಿಯ ಸಮೀಪದಲ್ಲಿ ಆರೇಳು ಜರ್ಸಿ ಹಸುಗಳನ್ನು ಕಟ್ಟಿಕೊಂಡು ಹಾಲು ಮಾರಿ ಬದುಕು ಸವೆಸುವ ಕುಟುಂಬವೊಂದರ ಜೊತೆ ಮಾತಾಡಿದೆವು. ಆ ಕುಟುಂಬದ ಯುವ ಸದಸ್ಯ ಹೇಳಿದ: "ಇದೇನೂ ಈಗ ಭಾರೀ ಲಾಭದ ಕೆಲಸ ಆಗಿ ಉಳಿದಿಲ್ಲ, ಹೇಗೋ ಜೀವನ ಅಂತೂ ನಡೆಯುತ್ತೆ.. ಒಂದು ಹಸು ನಾಲ್ಕು ಕರು ಈಯುವವರೆಗೂ ಹಾಲು ಕೊಡುತ್ತೆ, ಮುಂದೆ ಬರುಬರುತ್ತಾ ಅದು ಅಷ್ಟೊಂದು ಹಾಲು ಕೊಡೊದಿಲ್ಲ..."


"ಅದನ್ನು ನೀವೇನು ಮಾಡುತ್ತೀರಿ?"

"ಇನ್ನೇನು ಮಾಡೋದು ಗುರು? ಮಾರ್ತೀವಿ."

"ಗಂಡು ಕರು ಹುಟ್ಟಿದಾಗ ಏನು ಮಾಡ್ತೀರಿ.."

"ನಮಗೆ - ಹಾಲುಕೊಡೋ ಹಸು ಬೇಕು ಅಷ್ಟೇ. ಗಂಡು ಕರುವನ್ನು ಮಾರಲೇಬೇಕಾಗುತ್ತದೆ..."

"ಈಗ ಸರ್ಕಾರ ಗೋಹತ್ಯಾ ನಿಷೇಧ ಅನ್ನೋ ಕಾನೂನು ಜಾರಿಗೆ ತರ್‍ತಾ ಇದೆ. ಅದರ ಪ್ರಕಾರ ನೀವು ಮುದಿ ಜರ್ಸಿ ಹಸುವನ್ನು, ಗಂಡು ಕರುವನ್ನು ಮಾರೋ ಹಾಗಿಲ್ಲ..."



"ಹೌದಾ, ಅಂತಾ ಕಾನೂನು ಮಾಡ್ತಾ ಇದ್ದಾರಾ? ನಮಗೆ ಗೊತ್ತಿಲ್ಲ ಬಿಡ್ರಿ" ಎಂದು ಆತ ಅಮಾಯಕವಾಗಿ ನುಡಿದ.

"ಅದು ಜಾರಿಗೆ ಬಂದ್ರೆ ಮುಂದೇನು ಮಾಡ್ತೀರಿ?"

"ಮಾರದೇ ಮನೆಯಲ್ಲಿ ಇಟ್ಟುಕೊಂಡು ಇರಕಾಗುತ್ತಾ ಗುರು? ಈಗ ಈ ಆರೇಳು ಹಸುಗಳಿಗೇ ಜಾಗ ಇಲ್ಲ, ಮುದಿ ಹಸು ಮಲಗಾಕ ಜಾಗ ಇರೋದಿಲ್ಲ. ಸರ್ಕಾರದ ಪ್ರಕಾರ ಹೋದರೆ, ನಮ್ಮ ಮನೆಯೊಳಗೆ ಎರಡು ವರ್ಷದೊಳಗೆ ಹತ್ತಿಪ್ಪತ್ತು ಮುದಿಹಸು, ಗಂಡು ಕರು ನಿಲ್ತಾವು. ಅವುನ್ನೆಲ್ಲ ಪೋಷಣ ಮಾಡುತ್ತ ಕುಳಿತರೆ ನಾವು ಬದುಕೋದೇ ಕಷ್ಟ ಆಗುತ್ತಲ್ಲ?"


-ಹೀಗೆ ಆ ಮುಗ್ಧ ಗೊಲ್ಲರ ಯುವಕ ಹೇಳಿದ್ದನ್ನು ಬೆಂಗಳೂರಿನ ಎಲ್ಲ ಅಂತಹ ಕುಟುಂಬಗಳಿಗೆ ವಿಸ್ತರಿಸಿದರೆ ಆ ಎಲ್ಲ ಕುಟುಂಬಗಳೂ ಬೀದಿಗೆ ಬಿದ್ದಂತೆಯೇ... ಅಥವಾ ಬರುಬರುತ್ತಾ ಈ ಕುಟುಂಬಗಳು ಹೈನುಗಾರಿಕೆ ಯನ್ನೇ ತೊರೆಯುತ್ತ ಹೋಗುವಂತಾಗಿ ಕೆಎಂಎಫ್ ಹಾಲು ಸಂಗ್ರಹಣೆಯೂ ಕುಂಠಿತಗೊಂಡು, ಬೆಂಗಳೂರಿಗರು ಹಾಲಿನ ಕೊರತೆ ಅನುಭವಿಸಬೇಕಾಬಹುದೇನೋ?

ಜನರ ಬದುಕಿನ ಬಗ್ಗೆ ಕನಿಷ್ಠ ಕಾಳಜಿಯೂ ಇಲ್ಲದ ಮೂರ್ಖ ಸರ್ಕಾರಕ್ಕೆ ಇಂತಹ ಕನಿಷ್ಠ ಪರಿಜ್ಞಾನವೂ ಇಲ್ಲವಲ್ಲ...

**• ಮಲ್ಲಿ**

# ಪ್ರಜಾಪ್ರಭುತ್ವದ ದುಷ್ಕಾಲದಲ್ಲಿ ಲಂಕೇಶರನ್ನು ನೆನೆಯುತ್ತ...

ಲಂಕೇಶ್-75ರ ಸಮಾರಂಭದಲ್ಲಿ ಲೇಖಕಿ ವೈದೇಹಿ ಅವರು ಮಾಡಿದ ಉದ್ಘಾಟನಾ ಭಾಷಣ



ಇವತ್ತು ಎಂತಹ ಪ್ರಜಾಪ್ರಭುತ್ವದ ದುಷ್ಕಾಲದಲ್ಲಿ ನಾವಿದ್ದೇವೆ ಅಂದರೆ, ನಾವೆಲ್ಲಿದ್ದೀವಿ? ಬ್ರಿಟಿಷರ ಆಡಳಿತದಲ್ಲಿದ್ದೀವಾ? ನಮ್ಮದೇ ಆಡಳಿತದಲ್ಲಿದ್ದೀವಾ? ನಾವು ನಾವಾಗಿ ಇದ್ದೀವಾ? ಇದು ನಾವೇ ಹೌದೇ?.... ನಮ್ಮನ್ನ ನಾವೇ ಮುಟ್ಟಿಕೊಳ್ಳುವಂತಹ ಸ್ಥಿತಿಯಲ್ಲಿ ಇದ್ದೇವೆ ಇವತ್ತು.

ಉಡುಪಿ ಹಾಗೂ ದ. ಕ. ಜಿಲ್ಲೆಗಳಲ್ಲಿನ ಕೋಮು ಗಲಭೆಗಳ ನೋವಿನಲ್ಲಿ ನಾವು ಇವತ್ತು ಬೇಯುತ್ತಿರುವಾಗ ಹೊಸದಾಗಿ ಪುನಃ ಪುನಃ ಶಿವಮೊಗ್ಗೆಯಲ್ಲಿ ಗಣಿಗಾರಿಕೆಯಂತೆ, ಹಂಪಿ ವಿಶ್ವವಿದ್ಯಾಲಯದ ಜಾಗವನ್ನು ಆಕ್ರಮಿಸಿಕೊಳ್ಳುವುದಂತೆ, ಶಿಕ್ಷಕರಿಗೆ ಶಿಕ್ಷೆಯಂತೆ. ಯಾರು ಗುರುಭ್ಯೋ ನಮಃ ಅಂತ ಹೇಳಿಕೊಂಡು ತಮ್ಮ ಪಕ್ಷವನ್ನು ಮೆರೆಸುತ್ತಿದ್ದಾರೋ, ಗುರುಭ್ಯೋ ನಮಃ ಅಂತ ಮಂತ್ರ ಜಪಿಸಿದ್ದಾರೋ ಅಂತಹವರೇ ಇವತ್ತು ಶಿಕ್ಷಕರಿಗೆ ಶಿಕ್ಷೆ ಕೊಡುವುದಕ್ಕೆ ಹೊರಟಿದ್ದಾರೆ. ಇಂತಹದೆಲ್ಲ ಆಗುತ್ತಿರುವಾಗ ಪುನಃ ಪುನಃ ಲಂಕೇಶ್ ನೆನಪಾಗುತ್ತಾರೆ.

–ಮೊನ್ನೆ ಯಾರೋ 'ಈಗ ಲಂಕೇಶ್ ಇದ್ದಿದ್ದರೆ ಏನು ಮಾಡ್ತಿದ್ದರು?' ಅಂದರು. ಈ ಪ್ರಶ್ನೆಯೇ ವಿಚಿತ್ರ. ಯಾರಾದರೂ ನಿರಂತರವಾಗಿ ನಮ್ಮೊಟ್ಟಿಗೆ ಇರುತ್ತಾರ? ಅದು ಒಂದು ರೀತೀಲಿ 'ನಮ್ಮೊಂದಿಗೆ ಇವತ್ತು ರಾಮ ಇದ್ದಿದ್ದರೆ ಹೇಗಿರುತ್ತಿತ್ತು?' ಮುಂತಾಗಿ ಕೇಳಿದಂತೆ. ಅದಲ್ಲ, ಲಂಕೇಶ್ ಕೊಟ್ಟಿರೋದನ್ನು ನಾವು ಎಷ್ಟರಮಟ್ಟಿಗೆ ಇಟ್ಕೊಂಡಿದೇವೆ, ಸಾಧಿಸ್ತಿದೇವೆ?

ಲಂಕೇಶ್ ಎಲ್ಲಿ ತನ್ನತನದಲ್ಲಿ ಗೆದ್ದರು? ಈ ಬಗ್ಗೆ ಯೋಚನೆ ಮಾಡಬೇಕಿದೆ ಇವತ್ತು. ಮತ್ತು ಲಂಕೇಶ್ ಹೇಗೆ ತನ್ನನ್ನು ಕೊನೆವರೆಗೂ ಇಟ್ಟುಕೊಂಡಿದ್ದರು; ಕಾಪಾಡಿಕೊಂಡಿದ್ದರು! ಎಲ್ಲೂ ಯಾರಿಗೂ ಶರಣಾಗಲಿಲ್ಲ ಅವರು, ಸರ್ಕಾರದೆದುರು ಯಾವುದಕ್ಕೂ ಬೊಗಸೆ ಒಡ್ಡಲಿಲ್ಲ, ತನ್ನ ಜನಪರ ನಿಲುವನ್ನು ಯಾವತ್ತೂ ಬಿಟ್ಟು ಕೊಡಲಿಲ್ಲ. ಜನರ, ಈ ರಾಜ್ಯದ ಪ್ರಜೆಗಳ ಸಣ್ಣ ಸಂಕಟವನ್ನೂ ಸಣ್ಣ ಕಣ್ಣೀರನ್ನೂ ಅರಿತು ಮಿಡಿದವರು ಅವರು. ಮಾತನ್ನು ಮಾತಿನ ಏರಿಳಿತವನ್ನೂ... ಏಕೆ, ಒಂದು ಗರಿಕೆ ಹುಲ್ಲಿನ ತುದಿಯ ಕಂಪನವನ್ನು ಕೂಡ ಗ್ರಹಿಸಬಲ್ಲವರಾಗಿದ್ದರು.

ಆ ಬೀಸು, ಆ ರೇಸು, ಕಾವ್ಯ, ಕಥೆ, ಜನರು, ಅವರ ವೈಯಕ್ತಿಕ ಸಾಮಾಜಿಕ ಸಮಸ್ಯೆಗಳು, ಎಲ್ಲದರೊಳಗೂ ತನ್ನನ್ನು ತೊಡಗಿಸಿಕೊಂಡು ಬಹುಬಾಹುವಾಗಿ ಬೆಳೆದರು ಲಂಕೇಶ್. ಹೇಗೆ ಅವರಿಂದ ಇದು ಸಾಧ್ಯವಾಯಿತು, ಅವರ ಅನಿಸಿಕೆಗಳಿಗಾದರೂ ಯಾಕೆ ಅಷ್ಟೊಂದು ಬೆಲೆ ಸಿಕ್ಕಿತು? ಇದನ್ನು ಚಿಂತಿಸಬೇಕು. ಮೂಲತಃ ಎದ್ದು ಕಾಣುವುದೆಂದರೆ ಅವರು ಯಾರಿಗೂ ಸಲಾಮು ಹಾಕಲಿಲ್ಲ. ಪ್ರೀತಿಯ ವ್ಯಕ್ತಿಗಳ ವರ್ತನೆಯಲ್ಲೂ ತನಗೆ ಸರಿಯೆನಿಸದ ಗುಣ ಕಂಡಿತೆಂದರೆ ತಮ್ಮ ಪ್ರೀತಿಯನ್ನು ಒಂದು ಬದಿಗೆ ಸರಿಸಿಟ್ಟು ಅವರ ಬಗ್ಗೆ ಚಿಂತಿಸಿ ಮಾತನಾಡುವ ಎದೆಗಾರಿಕೆ ಅವರಿಗಿತ್ತು.

ಎಷ್ಟು ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಅವರು, ನನಗಿನ್ನೂ ನೆನಪಿದೆ. ನನ್ನ ಅಮ್ಮ ತೀರಿಹೋದ ಸಮಯವದು. ಅದೇ ಪ್ರಥಮ ಬಾರಿ ಅವರ ಆಫೀಸಿಗೆ ಹೋಗಿದ್ದೆ. "ನಿನ್ನ ಕಂಠ ಬಿಗಿದಿದೆ, ಅಮ್ಮ ತೀರಿ ಹೋಗಿದ್ದನ್ನೆಲ್ಲ ಅಷ್ಟು ಹಚ್ಚಿಕೋ ಬೇಡ. ಅತ್ತುಬಿಡು. ನನಗೂ ನನ್ನಮ್ಮ ತೀರಿ ಹೋದಾಗ ಹೀಗೆಯೇ ಆಗಿತ್ತು" ಎಂದ ಮನುಷ್ಯ ಆತ. ನನ್ನ ಕಂಠ ಆ ಮಟ್ಟಿಗೆ ಬಿಗಿದಿದ್ದು ನನಗೇ ಗೊತ್ತಿರಲಿಲ್ಲ. ಅವರು ಅವರ ಅವ್ವನ ಬಗ್ಗೆ ಎರಡು ಕವನ ಬರೆದಿದ್ದಾರಲ್ಲ, ಕೊನೆಕೊನೆಗೆ ಅವರು ಅಂಥ ಆ ಅವ್ವನೇ ಆಗಿಬಿಟ್ಟಿದ್ದರು ಅನ್ನಿಸುತ್ತೆ, 'ಅವ್ವ' ಎಂಬ ಎರಡನೆ ಕವನದಲ್ಲಿ 'ಅವ್ವ ನನ್ನಲ್ಲಿ ಮಾತು ಮತ್ತು ಮೌನ' ಅಂತಿದೆ. ಲಂಕೇಶ್ ಒಮ್ಮೆ ಮಾತಾಡಿದರೆ ಒಮ್ಮೆ ಅಷ್ಟೇ ಮೌನವಾಗಿ ಕುಳಿತುಕೊಳ್ಳುತಿದ್ದ ಜೀವ. ಆದರೆ ಆ ಎರಡರಲ್ಲೂ ಹೀಗೇ ಅಂತ ಯಾರಿಗೂ ಬಿಟ್ಟುಕೊಡದೆ ಅವರು ಅನೂಹ್ಯರಾಗಿ ತನ್ನನ್ನು ಉಳಿಸಿಕೊಂಡರು. ಲಂಕೇಶರಿಂದ ಫೋನ್ ಬಂದರೆ ಯಾಕೆ ಫೋನು ಮಾಡಿದರು ಅಂತ ಸಣ್ಣ ನಡುಕ. ಏನಿಲ್ಲ "ಏನು ಏನಾಗ್ತಿದೆ? ಏಳುವಿಳು, ಬರಿ". ಅದೊಂದು ತರಹ ಮಂತ್ರವಾಕ್ಯ, ಅವರು ಏನು ಕೇಳಿದರೋ ಅದನ್ನು ನಾನು ಬರೆದೂ ಬಿಡುತಿದ್ದೆ. ಆ ರೀತಿ ಹುಕುಂ ಕೊಟ್ಟಂತೆ ಹೇಳಿ ತಕ್ಷಣ ಬರೆಸಿಕೊಳ್ಳುವಂತಹ ಶಕ್ತಿ ಅವರಿಗಿತ್ತು, ಇನ್ನು ಯಾರು ಕೇಳಿದರೂ "ಬರೆಯುತ್ತೇನೆ, ಆದರೆ ಸ್ವಲ್ಪ ಟೈಮ್ ಕೊಡಿ" ಅನ್ನುವುದೇ ಹೆಚ್ಚಲ್ಲವೆ? ಆದರೆ ಲಂಕೇಶರಿಗೆ ಹಾಗೆ ಉತ್ತರಿಸುವ ಹಾಗಿರಲಿಲ್ಲ, ಅವರು ಟೈಮ್ ಕೊಡುತ್ತಿರಲಿಲ್ಲ, ಶಿವರಾಮ ಕಾರಂತರು ನಿನ್ನೆ ಸತ್ತಿದ್ದಾರೆ, ಇವತ್ತು ಲಂಕೇಶ್ ಅವರ ಕುರಿತು ಲೇಖನ ಬರೆದುಕೊಡು ಅನ್ನುತ್ತಿದ್ದಾರೆ. ನಾನು "ಹೇಗೆ ಬರೆದುಕೊಡಲಿ ಅಷ್ಟು ಬೇಗ?" ಅಂದರೆ "ಅದೆಲ್ಲ ಇಲ್ಲ, ಬರೀಬೇಕಪ್ಪ." ಒಳ್ಳೆ ಮಿಲಿಟ್ರಿ!

ಒಂದು ಬಗೆಯಲ್ಲಿ ಒಬ್ಬ ದೊಡ್ಡ ಸಾಹಿತಿಯಾಗಿದ್ದು ಸಂಪಾದಕ ಕೂಡ ಆಗಿದ್ದ ಅವರು ಪತ್ರಿಕೆ ಮೂಲಕ ಮಾಡಿದ್ದೆಂದರೆ ಕರ್ನಾಟಕ ಹಿಂದೆಂದೂ ಕಾಣದ ಸದೃಢ ಜನಪರ ಆಂದೋಲನ. ಒಂದು ದೃಷ್ಟಿಕೋನದ ಅರಿವು ಮೂಡಿಸಿದ್ದು. ಕನ್ನಡದಲ್ಲಿ ಲೇಖಕಿಯರನ್ನು ಗುರುತಿಸಿ ನೆಲೆಗೊಳಿಸಿದ್ದು. ಕನ್ನಡ ಲೇಖಕಿಯರ ಸಾಹಿತ್ಯಕ್ಕೆ 'ಲಂಕೇಶ್ ಪತ್ರಿಕೆ' ವಿಶೇಷ ಮನ್ನಣೆ ನೀಡಿ ಎತ್ತಿ ಹಿಡಿಯಿತು. ಲೋಹಿಯಾ ಹೇಳಿದಂತೆ ನಮ್ಮನ್ನು 'ರಾಣಿಯರಲ್ಲ ನೀವು ದೇವತೆಯರು' ಎಂಬಂತೆ ಮಾಡಿಬಿಟ್ಟರು ಲಂಕೇಶ್.

ನನಗಂತೂ ಒಂದು ಮುಕ್ಕಾಲು ಪುಟವನ್ನೇ ಕೊಟ್ಟಿದ್ದರು. 'ಕತೆ ಬರಿ, ಕವನ ಬರಿ, ನಾಟಕ ಬರಿ, ಏನು ಬೇಕಾದರೂ ಬರಿ, ಇಗೋ, ಈ ಪುಟ ನಿನಗೆ.' ನಾನು ಬರೆದದ್ದನ್ನು ಒಂದು ಚೂರು ಕೂಡ ಎಡಿಟ್ ಮಾಡದೆ ಪ್ರಕಟಿಸಿದರು. ಹಾಗೆ ಬರೆಸುವ ಪ್ರಕಟಿಸುವ ಮೂಲಕ ನನ್ನ ಬೆಳವಣಿಗೆಗೆ ವೇಗ ಒದಗಿಸಿದರು. ಇವತ್ತು, ಅದೆಲ್ಲವೂ ಎಷ್ಟು ನೆನಪಾಗುತ್ತಿದೆ.

ಉತ್ಕಟ ಜೀವನಪ್ರೀತಿ ಅವರದು.. ರಾಮಚಂದ್ರ ಶರ್ಮರಿಗೆ ಎಪ್ಪತ್ತು ತುಂಬಿದಾಗ ಒಂದು ದಿನವಿಡೀ ಸಂಕಿರಣ ಕವಿಗೋಷ್ಠಿ ಇತ್ಯಾದಿಗಳನ್ನು ಅವರು ಇಲ್ಲೇ ಇದೇ ಸೆನೆಟ್‌ಹಾಲ್‌ನಲ್ಲಿ ಏರ್ಪಡಿಸಿದ್ದರು. ಅವತ್ತು ಲಂಕೇಶ್ ಎಷ್ಟು ಖುಷಿಖುಷಿಯಲ್ಲಿದ್ದರೆಂದರೆ ಆ ಖುಷಿಯನ್ನು ಹೇಳುತ್ತಾ "ಇವತ್ತು ಒಂದು ಹೊಸ ಶರ್ಟ್ ಹೊಲಿಯಲು ಹಾಕಿದ್ದೆ, ಆದರೆ ಟೈಲರ್ ಕೊಡಲು ತಡಮಾಡಿದ" ಅಂತ ಓಪನ್ ಆಗಿ ಚಡಪಡಿಸಿದ್ದರು. "ಒರಟಾಗಿ


## ಲಂಕೇಶ್-75

ಗಂಭೀರವಾಗಿ ಕಾಣುವ ಲಂಕೇಶ್ ಒಂದು ಹೊಸ ಶರ್ಟಿನ ಬಗ್ಗೆಯೂ ಇಷ್ಟೆಲ್ಲ ಆಸಕ್ತಿಯಿಂದ ಎಲ್ಲರಂತೆ ಯೋಚಿಸುತ್ತಾರೆಯೆ?" ಅಂತನಿಸಬೇಕು, ಹಾಗೆ! ಈ ರೀತಿಯ ಒಂದೊಂದು ಸಣ್ಣ ಸಣ್ಣ ವಿಷಯದ ಬಗ್ಗೆ ಕೂಡ ಅವರು ಪುಲಕಗೊಳ್ಳುತ್ತ, ಪ್ರತಿಕ್ರಿಯಿಸುತ್ತ, ತನ್ನ ಸುತ್ತನ್ನು ಜಡತ್ವದಿಂದ ಪಾರುಮಾಡಿದ್ದರು.

ಲಂಕೇಶ್ ಹೇಳುತ್ತಿದ್ದರು, ನಿಮ್ಮ ಯಾವ ಅನುಭವವೇ ಇರಲಿ, ನೀವು ಕಾದಾಡಿ, ಜೂಜಾಡಿ, ಏನು ಬೇಕಾದರೂ ಮಾಡಿ, ಆದರೆ ಆ ಎಲ್ಲ ಅನುಭವಗಳು ಸಾಹಿತ್ಯದಲ್ಲಿ ಬಂದಾಗ ಮಾತ್ರ ಅದಕ್ಕೆ ಒಂದು ಬೆಲೆ ಇರುತ್ತೆ ಅಂತ. ಕರ್ನಾಟಕದಲ್ಲಿ ಒಂದು ಸಾಂಸ್ಕೃತಿಕ ಮತ್ತು ಸಾಮಾಜಿಕ ಪರವಾದ ಪತ್ರಿಕೆಯನ್ನು ಗಟ್ಟಿಗೊಳಿಸಿ ಕೊಟ್ಟವರು ಅವರು. ಅಂತಹ ವ್ಯಕ್ತಿತ್ವ ಇವತ್ತು ನಮ್ಮೊಟ್ಟಿಗೆ ಇಲ್ಲ ಎಂಬುದೇ ದೊಡ್ಡಶೂನ್ಯವಾಗಿದೆ.

ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯ ಎಂಬ ಸಮಸ್ಯೆ ಎದುರಾಗಿದೆ. ಪೈರು ಬೆಳೆದುನಿಂತ ಬತ್ತದ ಗದ್ದೆಯ ಮೇಲೆಲ್ಲ ರಾತ್ರೋರಾತ್ರಿ ಮಣ್ಣು ಸುರಿದು, ಈ ಜಾಗ ನಮ್ಮದು ಏಳಿ ಅಂತ ನಡು ಇರುಳಿನಲ್ಲಿ ಬಾಗಿಲು ತಟ್ಟಿ ಜನರನ್ನು ಅವರ ಸ್ವಂತ ಜಮೀನಿನಿಂದ ಮನೆಗಳಿಂದ ಓಡಿಸುವ ಹುನ್ನಾರ ನಡೆಯುತ್ತಿದೆ. ಅದಷ್ಟೆಯೆ? ಮೊನ್ನೆ ನಮ್ಮ ಸುರತ್ಕಲ್‌ನಲ್ಲಿ ಗಲಾಟೆ ಆಯ್ತು. ಶಿವಮೊಗ್ಗೆಯಲ್ಲಿ ಗಲಾಟೆ ಆಯ್ತು, ಕರ್ಫ್ಯೂ ಆಯ್ತು. ಪುನಃ ಪುನಃ ಅದದೇ ಇಂಥದೆ ಮರುಕಳಿಸುತ್ತಿರುವಾಗ ಲಂಕೇಶ್ ಇದ್ದಿದ್ದರೆ ಕೊನೇ ಪಕ್ಷ ಒಂದು ಬಲವಾದ ದನಿಯಾದರೂ ಕೇಳಿಬರುತ್ತಿತ್ತು ಅಂತ ಗಾಢವಾಗಿ ಅನಿಸುತ್ತಿದೆ. ಇವತ್ತು ಸಾಹಿತಿಗಳಿಗೆ ಬೆಲೆ ಇಲ್ಲ, ಕಲಾವಿದರಿಗೆ ಬೆಲೆ ಇಲ್ಲ, ಹೋರಾಟಗಾರರ ದನಿ ಕೇಳಿಸದಂತೆ ಕಿವಿಗಳು ಮುಚ್ಚಿಹೋಗಿವೆ. 'ಯಾರು ಈ ಅನಂತಮೂರ್ತಿ?' ಅಂತ ಕೇಳೋವಂತಹ ದಿಗ್ಭ್ರಮೆಗೊಳಿಸುವ ಉಡಾಫೆ ಸರಕಾರಗಳಿವೆ. ಇದಕ್ಕೆಲ್ಲ ಏನು ಕಾರಣ? ದಿನಹೋದಂತೆ ಸಾಹಿತ್ಯಿಕ ಸಾಂಸ್ಕೃತಿಕ ಮೌಲ್ಯಗಳು ಅಪಮೌಲ್ಯಗೊಳ್ಳುತ್ತಿವೆ, ಯಾಕೆ? ಇವತ್ತು ಆಕಾಶ, ಭೂಮಿ, ಮಣ್ಣು ನೀರು ಎಲ್ಲವೂ ದುಡ್ಡಿನಿಂದಲೇ ಅಳೆಯಲ್ಪಡುತ್ತ ಎಲ್ಲವೂ ಲಾಭರಾಜಕಾರಣದಲ್ಲಿ ಲೀನಗೊಳ್ಳುವ ಕಾಲ ಬಂದಿದೆ.

ಈ ಭೂಮಿ ಹುಟ್ಟಿದ ಲಾಗಾಯ್ತಿನಿಂದಲೂ ಯುದ್ಧಗಳಿಲ್ಲದ ಯುಗಗಳೇ ಇರಲಿಲ್ಲ, ಶಿಲಾಯುಗದಲ್ಲೂ ಮಾತರಿಯದ ಮೌನದ ಯುಗದಲ್ಲೂ ಯುದ್ಧಗಳಾಗುತ್ತಿದ್ದವು. ಮರ್ಯಾದೆಯೇ ಮುಖ್ಯವಾದ ಯುಗದಲ್ಲೂ ಯುದ್ಧಗಳಾಗುತ್ತಿದ್ದವು. ಈಗ ಇದು ಶಬ್ದದ ಯುಗ, ಮಾತಿನ ಯುಗ. ಈಗಲೂ ಯುದ್ಧಗಳಾಗುತ್ತಿವೆ. ಆದರೆ ಆ ಮೌನ ಯುಗದಲ್ಲಿ, ಮಾನಮರ್ಯಾದೆಯ ಯುಗದಲ್ಲಿ ಯುದ್ಧಕ್ಕೆ ಒಂದು ಮಹಾಕಾವ್ಯದ ಲಕ್ಷಣವಿರುತಿತ್ತು. ಅವುಗಳನ್ನು ಆಯಾ ಕಾಲಕ್ಕೆ ಜನ ಪದ ಕಟ್ಟಿ ಹಾಡಿ ಕುಣಿದು ಕೊಂಡಾಡಿದರು.. ಆದರೆ ಇವತ್ತಿನ ಶಬ್ದಯುಗದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಮಹಾಕಾವ್ಯ ಹುಟ್ಟಿಬರಲಾರದು. ಬದಲಾಗಿ ಒಬ್ಬರಿಗೊಬ್ಬರು ಕೇಳದ, ಕಿವಿಗಡಚಿಕ್ಕುವ ಗದ್ದಲದಲ್ಲಿ ನಾವೆಲ್ಲ ಕಳೆದುಕೊಳ್ಳುತ್ತಿದ್ದೇವೆ, ನಮ್ಮ ನಮ್ಮ ಒಳದನಿಯನ್ನೇ ಮರೆಯುತಿದ್ದೇವೆ.



• ವೈದೇಹಿ

ಪತ್ರಿಕೆಯಂತಹ ಪತ್ರಿಕೆ ಎಷ್ಟು ಅವಶ್ಯ ಅಂತ ಗೊತ್ತಾಗಿದ್ದೇ ಲಂಕೇಶ್ ಪತ್ರಿಕೆ ಹುಟ್ಟಿದಾಗ. ಅದು ಹುಟ್ಟಿದಾಗಷ್ಟೆ ಅದು ಇಲ್ಲದಿದ್ದಾಗಿನ ಶೂನ್ಯದ ಅರಿವು ನಮಗಾಯಿತು. ಆ ಪತ್ರಿಕೆ ಯಾವ ನಮೂನೆಯಲ್ಲಿ ರಾಜಕಾರಣಿಗಳಿಗೆ ಬೈಯಲು ಶುರುಮಾಡಿತೆಂದರೆ ಬೈಯುವುದಕ್ಕೇ ಅದು ಹುಟ್ಟಿದಂತಿತ್ತು. ನಮಗೂ ಆಗ ಒಂದು ಪತ್ರಿಕೆಯಲ್ಲಿ ಬೈಗುಳವನ್ನು ಬರೆಯುವುದಿರಲಿ, ಓದಿ ಕೂಡ ಅಭ್ಯಾಸವಿರಲಿಲ್ಲ, ಎಂತಲೇ ಮೊದಮೊದಲು, ಇದು ಬೈಗುಳದ ಪತ್ರಿಕೆ, ಪೀತ ಪತ್ರಿಕೆ ಅಂತೆಲ್ಲ ಭಾವನೆ ಇತ್ತು, ಆದರೆ ಲಂಕೇಶ್ ಅವರು ಬೈಯುವುದು ಹೇಗೆ, ಟೀಕಿಸುವುದು ಹೇಗೆ, ಬೈಯುವ ಮೂಲಕ ರಾಜಕೀಯ ಐಲುಗಳನ್ನು ರಿಪೇರಿ ಮಾಡುವುದು ಹೇಗೆ, ಬೈಯುತ್ತಾ ಅವರನ್ನು ಎಚ್ಚರಿಸುವುದು ಹೇಗೆ ಎಂಬುದನ್ನೆಲ್ಲ ತನ್ನ ಅನವರತ ಬರಹ ಯಜ್ಞದಲ್ಲಿ ತೋರಿಸಿಕೊಟ್ಟರು...

ನಾನವರನ್ನು ಬಹಳ ಸಲವೇನು ನೋಡಿಲ್ಲ, ಪ್ರತ್ಯಕ್ಷವಾಗಿ ಅವರನ್ನು ನೋಡಿದ್ದು ಮೂರೇ ಸಲ. ಅವರ ಆಫೀಸಿಗೆ ಎರಡು ಸಲ. ಹೋಗಿದ್ದೆ ಮತ್ತು ಅವರು ನಮ್ಮ ಮನೆಗೆ ಒಂದು ಸಲ ಬಂದಿದ್ದರು. ಆದರೆ ಆ ಮನುಷ್ಯ ನಮ್ಮ ಮನಸನ್ನು ಎಷ್ಟು ಆವರಿಸಿಕೊಂಡಿದ್ದಾರೆಂದರೆ ನಾವು ಏನೇ ಮಾಡಿದರೂ, ಯೋಚಿಸಿದರೂ ಅವರಿದ್ದಿದ್ದರೆ ಏನು ಮಾಡುತ್ತಿದ್ದರು, ಏನು ಹೇಳುತ್ತಿದ್ದರು ಎಂದು ಮನದಲ್ಲೇ ಅವರೊಂದಿಗೆ ಸಮಾಲೋಚಿಸುವಷ್ಟು. ಕೆ.ವಿ.ಸುಬ್ಬಣ್ಣ ... ಲಂಕೇಶ ಜನಸಮೂಹದ ಆತ್ಮಸಾಕ್ಷಿಗಳಂತಿದ್ದರು. ಈ ... ಒಂದು ನವೀನ ಅಂತಃಶ್ಶಕ್ತಿ ನೀಡಿದವರು ಲಂಕೇಶ್...

ಲಂಕೇಶ್ ಮಾತನ್ನು ಇಷ್ಟ ಪಡುತ್ತಿರಲಿಲ್ಲ, ... ಫೋನ್ ಮಾಡಿದರೂ ಕೂಡ ಒಂದೆರಡು ವಾಕ್ಯ ... ಉದ್ದೇಶಿತ ಮಾತು ಮುಗಿದ ಮೇಲೆ, ಒಂದೆರಡು ... ಬೇಕೋ ಅಷ್ಟೇ ಮಾತನಾಡಿ ಫೋನ್ ಇಡುತ್ತಿ... ಲಂಕೇಶ್ ಬಗ್ಗೆ ಮಾತನಾಡುವಾಗ ಕೂಡ ಅವರು '... ಸಾಕು' ಅಂದಂತಾಗುತ್ತದೆ. ಅದಕ್ಕೆ ಅವರ ಬಗ್ಗೆ ... ಮಾತನಾಡುವುದೂ ಕಷ್ಟವೇ.

ನನ್ನ ಪ್ರಕಾರ ಲಂಕೇಶರು ತನ್ನನ್ನ ನಿರಾವರಣಗೊ... ತನ್ನನ್ನೇ ಪಾರದರ್ಶಕವಾಗಿಸಿಕೊಂಡ ಏಕೈಕ ಸಾ... ವೈವಿಧ್ಯಮಯ ಬದುಕಿನ ನಾಯಕ ಲೇಖಕ.

"ಸ್ಪಷ್ಟತೆ, ವೈಚಾರಿಕತೆಯೇ ಆಧುನಿಕ ಮನುಷ್...
ನಿರ್ದಿಷ್ಟ ಲಕ್ಷಣ ಎಂದು ಹೇಳುವ ನನಗೆ
ಕೊಂಚ ತಾಯ್ತನದ ವಿನಯ ಮತ್ತು ಮೌನ.
ಕಾಲು ಶತಮಾನದ ಬಳಿಕ:
ಜಗಳಗಂಟಿಯಾಗಿದ್ದ ಈ ಅವ್ವ ಈಗ ನನ್ನಲ್ಲಿ
ವಿನಯ ಮತ್ತು ಮೌನ."

ಅಂತ ಅವರೇ ಅವ್ವ-2ರಲ್ಲಿ ಹೇಳಿದ್ದಾರೆ.

ಅವರು ತೀರಿ ಹೋದಾಗ ಪತ್ರಿಕೆಗೆ ನಾ ... ಬರಹವಿದು:

### ನೆಲ ಮತ್ತು ಮೌನ

ಅವರೊಂದು ಪೇಪರು ತೆಗೆದುಕೊಂಡು ನಾಲ್ಕು ... ಮಡಚಿದರು. ಮತ್ತೆ ನಾಲ್ಕು ಮತ್ತೆ ನಾಲ್ಕು. ಆ... ಮೂಲೆ ಮಡಚಿ ಮಡಿಕೆ ಬಿಗಿಗೊಳಿಸಿದರು. ಕೇಂದ್ರ ... ಒಮ್ಮೆ ಜೋರಾಗಿ ಕುಲುಕಿದರು. ಮಡಿಕೆ ದೃಢ... ಅಂತ ಖಚಿತ ಪಡಿಸಿಕೊಂಡು ಬದಿಯಿಂದ ನಾಲ್ಕು ... ಎಬ್ಬಿಸಿದರು. ಆಗ ಅಲ್ಲೊಂದು ಮೇಜಾಯ್ತು! ಎರ... ಕ್ರಾಸ್ ಮಡಚಿ ಎಳೆದರೆ ಅದೇ ಒಂದು ಕುರ್ಚಿ ಅ... ಕಿರುಬೆರಳಿನಿಂದ ಮತ್ತೊಂದು ಮಡಿಕೆಯನ್ನು ಎಬ್ಬಿ... ಶಾಯಿದೌತಿ ಕಾಣಿಸಿಕೊಂಡಿತು. ಶಾಯಿದೌತಿಯ ಬುಡ... ಅಲ್ಲಾಡಿಸಿದ್ದೇ ಎಸಳೆಸಳಿನ ಹೂವು. ಅದನ್ನೊಂಚೂರು ... ಎಳೆಯಲು, ಮನುಷ್ಯನೊಬ್ಬ ನಿಂತಿದ್ದ. ಅಲ್ಲೇ ಮೆ... ಪದರ ಎತ್ತಿದರು ಅಷ್ಟೇ. ಗುಬ್ಬಚ್ಚಿ ಗೂಡೊ... ಪ್ರತ್ಯಕ್ಷವಾಯ್ತು."

–ಈ ಗುಬ್ಬಚ್ಚಿ ಗೂಡಿನ ಬಗ್ಗೆ ಲಂಕೇಶ್ ... ಸುಂದರವಾಗಿ ಬರೆದಿದ್ದರು! ನನಗೆ ಕತೆ ಕಟ್ಟುವಾ... ಗುಬ್ಬಚ್ಚಿ ಗೂಡೇ ನೆನಪಾಗುವಂತೆ. ಅಲ್ಲಿಂದೊಂದೆಳೆ, ... ದೊಂದೆಳೆ, ಮೇಲಿದೊಂದೆಳೆ, ಆ ಎಳೆ, ಈ ಎಳೆ ... ಒಂದು ಗುಬ್ಬಚ್ಚಿ ಹೇಗೆ ಗೂಡು ಕಟ್ಟುತ್ತೆ, ಆ ... ಗೂಡನ್ನು ನಾವು ಮಾಡಲು ಆಗಲ್ಲ, ಕತೆ ಕೂಡ ... ನಮ್ಮದೇ ಒಂದು ಯಾವುದೋ ಎಳೆಯನ್ನು ಹಿಡಿದು ... ಕಟ್ಟುತ್ತೇವೆ ಅಂತಂದ ಅವರ ಮಾತು ಮರೆಯು... ಇಲ್ಲ, ಲಂಕೇಶ್ ಅಂದರೆ ನನಗೆ ಅದುವೆ. . . ಇ...

"ಅದನ್ನೂ ಮಡಚಿ ಮಾಯ ಮಾಡಿ ಸುರುಳಿ ಸು... ಅದೊಂದು ಚಾಕ್ ಪೀಸ್ ಆಯ್ತು. ಇನ್ನೂ ಎ... ನಾಗರಬೆತ್ತವೊಂದು ಗಾಳಿಗೆ ತುಯ್ದಿತು. ಅದನ್ನೂ ಎ... ಕೈಯಿಂದ ಎಳೆದು ಹಿಡಿಯಲು ಸರಪಳಿ ಸರಪಳಿ... ಆ ಸರಪಳಿಯ ಸೋಜಿಗವನ್ನು ಎಲ್ಲರಿಗೂ ತೋರಿ... ಒಮ್ಮೆಲೇ ಅದನ್ನೂ ಕೊಡವಲು ಎಲ್ಲಾ ಮಡಿಕೆ ... ಮತ್ತದು ಪುನಃ ಕಾಗದದ ಹಾಳೆಯಾಯ್ತು. ಈಗದು ಜ... ಸಿಗಿನಿಗಿಸುತ್ತಿತ್ತು.

ನೋಡು–

ಬರೀ ಒಂದು ಕಾಗದದ ಹಾಳೆ ಸಾಕು. ಒಂದು ... ಸಾಕು. ಒಂದು ಶಬ್ದ ಸಾಕು. ಒಂದು ದೃಷ್ಟಿ. ... ಮನಸ್ಸು. ಅರೇಬಿಯನ್ ನೈಟ್ಸ್ ಶಹಜಾದೆಯ ... ಮ್ಯಾಜಿಕ್. ಒಂದು ಏಕಾಗ್ರತೆ, ಒಂದು ಸೂಕ್ಷ್ಮ...

ಹೇಳುತ್ತ ಹೇಳುತ್ತ.... ಮಾಯವಾದರು!


ನೋಡಿದರಲ್ಲಿ ನೆಲ ಮಾತ್ರವಿತ್ತು, ಮೌನ ... ನೆರಳೂ ಬಿಸಿಲೂ ಇತ್ತಲ್ಲಿ ನೆನೆಪು ನೆನಪಲ್ಲಿ ಹನಿಯು...

ಇವತ್ತು ಲಂಕೇಶ್ ಇಲ್ಲ ಸರಿಯೆ. ಆದರೆ ... ಇದ್ದೀವ? ಇದ್ದರೂ ಎಲ್ಲಿದ್ದೇವೆ? ನಮ್ಮನ್ನ ನಾವೇ ... ಕೊಳ್ಳಬೇಕು.

# ದುಗ್ಗಾಣಿ ಮಾರಮ್ಮನಿಗೆ ದುಡ್ಡಿನ ಬಂಡಾರವಂತೆ!

ಲು ಝಳದ ಒಂದು ಶೂನ್ಯ ವೇಳೆಯಲ್ಲಿ ಏನನ್ನೊ
ಬಿದಂತೆ,
ಗೆ ಮಾಯಾವತಿ ಗೊತ್ತೆ ಮಾವ?" ಎಂದ

ತ್ತು ಕಂಡ್ಯ. ಹರಿಜನ್ರ ಮನಿಂದ ಕಾನಸಿರಾಮು
ಗಿ ಸಾಕಿ, ಓದಿಸಿ, ಮುಂದಕೆ ತಂದ ಅಂತ




ಹೇಳಿದ್ರಿ" ಎಂದ ಕಾಳಮಾವ.

ತಗಂಡೋಗಿ ಸಾಕಿರಲಿಲ್ಲ. ಅವುಳು ಓದಿ ಮೇಲೆ
ಇವುನು ಇವುಳೇ ಸರಿ ಉತ್ತರ ಪ್ರದೇಶ ಆಳಕ್ಕೆ
ರ್ಮಾನ ಮಾಡಿ ಯಲಕ್ಷನ್ನಿಗೆ ನಿಲ್ಲಿಸಿ ಗೆಲ್ಲಿಸಿದ.
ಮುಖ್ಯಮಂತ್ರಿ ಆಗಿಬುಟ್ಟು."

ಖ್ಯಮಂತ್ರಿ ಎಲ್ಲಿಗಾದ್ದು?"

ತ್ತರ ಪ್ರದೇಶಕ್ಕಾದ್ದು ಕಣಮಾವ. ಇಲ್ಯಲ್ಲ ಆಗಿದ್ರೆ
ಲಿಲ್ಲ."

ದ್ಯಾಕಾಯ್ತಿರಲಿಲ್ಲ?"

ಲ್ಲಿ ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಬಂದಿದ್ದ.
ನಮ್ಮ ಮೈಸೂರು ಮಾರಾಜು ಬಂದ್ರು. ಅರಸು
ಇವುರ‍್ಯಲ್ಲ ಬಂದು ಮೇಲ ಜಾತಿ ಜನಗಳೂ
ದಲಿತ್ರ ಬಗ್ಗೆ ಮಾತಾಡಂಗೆ, ಅವುರಿಗೆ ಒಂದಿಷ್ಟನಾರ
ಅನ್ನಂಗೆ ಮಾಡಿ ಹೋಗ್ಯವುರೆ. ಅಂಗಾಗಿ ಇಲ್ಲಿ
ಪ್ರದೇಸದ ರಾಜಕಾರಣ ಮಾಡದು ಕಷ್ಟ."

ಂಗಂತಿಯಾ?"

ಊ. ಅಲ್ಲಿ ಮೇಲ್‌ಜಾತಿ ಅಂದ್ರೆ ಭಾಳ ಜನ ಇಲ್ಲ.
ಳಜಾತಿ ಅಂದ್ರೆ ಸಕಲಿಷ್ಟು ಜಾತಿ ಧ್ವತಿಗೆ ಸಾಬರೂ
ದ್ರೆ ಸರಕಾರನೆ ತರಬವುದು. ಅಂತದೊಂದು ಗ್ಯರೆ
ಕಾನಸಿರಾಮು ಸಕ್ಸಸ್ಸಾಗಿ ಮಾಯಾವತಿಯ
ಮಂತ್ರಿ ಮಾಡಿ ಹೋದ. ಈಗವುಳು ಮ್ಯರಿತ
ಳೆ."

ನು ಮ್ಯರಿತ ಇದ್ದಳ್ಳ?" ಎಂದಳು ಜುಮ್ಮಿ
ಂದ.

ಕೇಳ್ತನಿರೆ ಒಸಿಯಾ."

ನೇಳೊ ಕತೆ ನೋಡಿದ್ರೆ ಈ ಜುಮ್ಮಿ ನಿನ್ನ
ಗೇ ಕಾಣ್ತದೆ ಕಂಡ್ಯ" ಎಂದು ಸೀರ ನಕ್ಕ.

ದ ಈ ಜುಮ್ಮಿ ತಿಳಕಂಡಿಲವಲ್ಲ ಹೇಳು. ಈ
ಜುಮ್ಮಿ ಮೆಂಬರಾದಾಗ ಒಂದಿಷ್ಟು ಆಂಕಾರ
ತ್ತ ಗೊತ್ತೆ?"

ಗ್ಯಾವಾಂಕಾರ ಬಂದಿತ್ಲ? ಸುಳ್ಳು ಸುಳ್ಳನೆ ಹೇಳಬ್ಯಾಡ"
ಜುಮ್ಮಿ ರೇಗಿದಳು.

"ಅದು ನಿನಿಗೆ ಗೊತ್ತಾಗದಿಲ್ಲ ಕಣೆ. ನಮ್ಮಂಥೋರಿಗೆ ಗೊತ್ತಾಯ್ತದೆ. ಈಗ್ನೆ ನೋಡು ಯಾರಾರ ಏನಾರ ಅಂದ್ರೆ ಓ.ಕೆ. ಅಂತಿ. ಕೇಳಿಸಿಗಂಡೋರಿಗೆ ಈ ಜುಮ್ಮಿ ದವುಲತ್ತು ನೋಡಪ್ಪ ಅನ್ನಂಗಾಯ್ತದೆ. ಅದು ಬುಡು. ಯಾವುದೊ ಒಂದು ಅರ್ಥವಾಗದ ಪದ ನಿನ್ನ ಮ್ಯಾಲೆ ಪ್ರಭಾವ ಬೀರಿರಬವುದು. ಆದ್ರೆ ನಡವಳಿಕೆಲಿ ಆಂಕಾರ, ಧಿಮಾಕು ಬಂದ್ರೆ ಯಂಥಾ ಹೆಂಗಸು ಮಾಯಾವತಿ ಯಂಗಾಯ್ತರೆ. ಆಗ ಸೋನಿಯಾ ಗಾಂಧಿ ತರದೋರು ಪಾಪ ಅಂತ ಲೊಚಗರಿತರೆ, ಗೊತ್ತೆ."

"ಸೋನಿಗಾಂಧಿ ದೊಡ್ಡ ಮನ್ಸೆ ಬುಡು. ಅವುಳಮಟ್ಟಕೆ ಬರೋ ಅಂತ ಲೀಡರ್ ಯಾವನವುನ್ಲ ಇವತ್ತು" ಎಂದ ಕಾಳಮಾವ.

"ಅವುಳೆದ್ರಿಗೆ ಅದ್ವಾನಿ ಗಿದ್ವಾನಿ ಯಲ್ಲ ಹಡಿಗೋದ್ರು ಅತ್ತಗೆ" ಎಂದ ಸೀರ.

"ಅಂಥಾ ಸೋನಿಯಾಗಾಂಧಿನೆ ಅಳ್ಳಾಡಸಕ್ಕೋಯ್ತಳೆ ಮಾಯಾವತಿ ಅಂದ್ರೆ ಅವುಳಿನ್ಯಂಗಿರಬವುದು, ಲ್ಯಕ್ಕ ಹಾಕು."

"ಅಂಗರೆ ಸೋನಿಗಾಂಧಿನೂ ಹಲ್ಲಿಡುದು ನೋಡಿದ್ದಳೆ."

"ಹಲ್ಲಿಡುದು ನೋಡಕ್ಕೆ ಅವುಳು ಸಿಕ್ಕಿದ್ರುಲವೆ? ಸೋನಿಯಾಗಾಂಧಿಯಂತವಳು ಅಂದ್ರೆ, ಅವುಳ ಯಾರಾರ ಬೋದ್ರೆ ತಿರಗ ಉತ್ತರ ಕೊಡದಿಲ್ಲ, ಆಗ ಅಂದೋರು ಹಾಳಾಗೋಗದೆಯಾ."

"ಮದ್ಲೆ ಹೇಳಿಲ್ವೆ, ಬೋದುದ್ದು ಬೇವರ್ಸಿ ಬೈಸಿಕೊಂಡೋನು ಬಸವ ಅಂತವ, ಅದ ತಿಳಕಂಡವುಳೆ ಅವುಳು."

"ನಿಜ ಕಣಮಾವ. ಅಂಥ ಸೋನಿಯಾಗಾಂಧಿಯೆದ್ರಿಗೆ ರಾಜಕಾರಣ ಮಾಡಬೇಕಾದರೆ ಮಾಯಾವತಿ ಮದ್ಲು ಆಂಕಾರ ಬುಡಬೇಕು."

"ತಿರಗ ಅದ್ನೆ ಹೇಳ್ತಿಯಲ್ಲ, ಏನಾಂಕಾರ ಮಾಡಿದ್ಲು ಅವುಳು?"

"ಅವುಳಿನ್ನು ಜೀವಂತ ಇರುವಾಗ್ಲೆ ಪಾರಕು, ಗಾರಡನ್ನು, ನಾಕುರಸ್ತೆ ಕೂಡೋ ಜಾಗದಲ್ಯಲ್ಲ ಅವುಳ ಪ್ರತಿಮೆ ಮಾಡಿಸಿ ಹಾಕ್ಸಿದ್ದಳಂತೆ."

"ಓ, ಅಂಗರೆ ತಿರಕ ದವುಲತ್ತು ಬಂದದೆ ಬುಡು."

"ಅಲ್ಲಾ, ದಲಿತ ಜನಾಂಗದ ಹೆಣ್ಣುಮಗಳು, ಮುಖ್ಯಮಂತ್ರಿಯಾಗಿ ದಲಿತರ ಬದುಕು ಹಸುನು ಮಾಡದ ಬುಟ್ಟು ತನ್ನ ಕಲ್ಲನ್ನೇ ಕೆತ್ತಿಸಿಗೊಂಡು ನಿಲ್ಲಿಸಿಗತ್ತಳೆ ಅಂದ್ರೆ ಏನ್ಹೇಳನ ಮಾವ?"

"ಅಂಗರೆಲ್ಲೊ ತಿಕ್ಕಿ ಬುಡವುಳು" ಎಂದ ಕಾಳಮಾವ.

"ಅದೋಗ್ಲಿ ಅವುಳ ಹಿಂಬಾಲಕರು ಯಂಗವುರೆ ಅಂದ್ರೇ ಬಿಎಸ್ಪಿ ಹುಟ್ಟಿ ಇಪ್ಪತ್ತೈದು ವರ್ಸಾಯ್ತು ಅಂತ ಪಂಕ್ಷನ್ ಮಾಡಿ ಸಾವುರುಪಾಯಿ ನೋಟಿನಹಾರ ಹಾಕಿದ್ರಂತೆ."

"ಸಾವುರುಪಾಯಿ ನೋಟಿಂದೂ ಒಂದು ಸುದ್ಯೇನ್ಲ? ಇಲ್ಲೆ ನಾಟಕ ಮಾಡೋರಿಗೆ ನೂರು ಇನ್ನುರುಪಾಯ ಹಾರಕ್ಕೆ ಸಿಗಿಸಿ ಹಾಕ್ತರೆ. ಇವುನು ಸಾವುರುಪಾಯಿದೇಳಕ್ಕೆ ಬಂದ" ಎಂದು ಸೀರ ಆಡಿಕೊಂಡ.

"ಥೂ, ನಿನಿಗ್ಯಾರೇಳ್ತರೆ ಹೋಗೊ ಅತ್ತಗೆ. ಸಾವುರುಪಾಯಿ ಅಂದ್ರೇ ಸುಮಾರು ಇಪ್ಪತ್ತು ಕೋಟಿ ರೂಪಾಯಿ ತಗಂಡು, ಅಂದ್ರೆ ಒಂದು ಸವುರುಪಾಯಿ ನೋಟವು, ಅದರಲ್ಲೇ ಹಾರ ಮಾಡಿ ಅವುಳ ಕತ್ತಿಗಾಕ್ಯವುರೇ."

"ಇಪ್ಪತ್ತು ಕೋಟಿ ಅಂದ್ರೆ ಸದರವಾಗಿ ದುಡ್ಡೇನ್ಲ?" ಎಂದ ಕಾಳಮಾವ.

"ಆಟೊಂತರ ದುಡ್ಡ ಎಲ್ಲಿಂದ ತಂದ್ರೂ?" ಎಂದಳು ಜುಮ್ಮಿ.


"ಎಲ್ಲಿಂದ್ಲಾರ ತರಕೋದರೆ. ಮಾಯಾವತಿದೇ ಸರಕಾರ ಇರದರಿಂದ ಸರ್ಕಾರದಿಂದ್ಲೆ ಮಾಯ ಮಾಡ್ಯವುರೆ."

"ಅದ್ಯಂಗ್ಲ?"

"ಕಂತ್ರಾಟ್ ಮಾಡೋರು, ಸರಕಾರನ ತಿನ್ನೊ ಜನಗಳ್ಯಲ್ಲ ಕೊಟ್ಟಿರತರೆ. ಅಥವಾ ಇವುರೆ ವಸೂಲು ಮಾಡಿರತರೆ."

"ಅಲ್ಲಾ ಗೌರವ ತೋರಕ್ಕೆ, ಹಾರ ಇರದ್ಯಾಕೆ? ಅದುಬುಟ್ಟು ನೋಟಿನ ಹಾರ ಹಾಕ್ತಾರೆ ಅಂದ್ರೆ, ಇನ್ಯಂಥಾ ಜನಗಳ್ಳ ಇವುರು?" ಎಂದ ಕಾಳಮಾವ.

"ದುಗ್ಗಾಣಿ ಮಾರವ್ವನಿಗೆ ದುಡ್ಡಿನ ಬಂಡಾರ



ಅಂದಂಗಾಯ್ತು" ಎಂದ ಸೀರ.

"ಅಷ್ಟೊಂದು ಹಗುರವಾಗಿ ಮಾತಾಡಬ್ಯಾಡ ಚಿಗಪ್ಪ" ಎನ್ನುತ್ತಾ ವಾಟಿಸ್ಸೆ ಬಂದ.

"ಇನ್ನೇನು, ದುಗ್ಗಾಣಿ ಮುಂದಿಗೆ ದುಡ್ಡಿನ ಹಾರ ಅನ್ನನೇನ್ಲ?"

"ಅಂಗಲ್ಲ, ಅವುಳ ಅಭಿಮಾನಿಗಳು, ಪಾಲೋಯರ್‌ಗಳು ದುಡ್ಡಿನಲ್ಲೇ ಗೌರವ ತೋರಬೇಕು ಅಂತ ಡಿಸಿಷನ್ ತಗಂಡಿರತರೆ. ಅದರಂಗೆ ನೆಡಕಂಡಿರತರೆ."

"ಅಲ್ಲಾ ಕಂಡ್ಯ, ನೋಟನೇ ಹಾರ ಮಾಡದಾದ್ರೆ ಹೂ ಬೆಳೆಯೋರು ಏನಾಗಬೇಕು? ನೀನೆ ಹೇಳ್ಳ" ಎಂದಳು ಜುಮ್ಮಿ.

"ಅದು ಬ್ಯಾರೆ ಮ್ಯಾಟ್ರು ಕಣಕ್ಕ, ನಾನೇ ಒಂದು ಪಂಕ್ಷನ್ನಲ್ಲಿ ಚನ್ನಾಗಿ ಸ್ವಾಗತ ಮಾಡಿದ್ಮೆ ಜೆಡಿಎಸ್ ಕಾರ್ಯಕರ್ತರು ಆಫೀಸರ್ ಚಾಯ್ಸು ಡ್ರಿಂಕ್ಸ್ ಕೊಟ್ಟಿದ್ರು, ಅಂಗೆ, ಅವುರವುರ ಯೋಗ್ಯತೆಗೆ ಸನ್ಮಾನ ಆಯ್ತವೆ. ಪಾಪ ಬಿಎಸ್‌ಪಿ ಜನ ದುಡ್ಡನ್ನೇ ನೋಡಿರಲಿಲ್ಲ, ಅಂಥೋರಿಗೆ ಈಗ ದುಡ್ಡು ಇರಬವುದು, ಅದನ್ಯಲ್ಲ ಆಡಿಕಬಾರ್ದು."

"ನೋಟಿನ ಹಾರ ಹಾಕಿದ್ರೆ ಆಡಿಕಳದೆ ಮೆಚ್ಚಕ್ಕಾದತ್ಲ?"

"ದ್ವಡಪ್ಪ, ಬಿಎಸ್‌ಪಿ ಮಾಯಾವತಿ ಸನ್ನಾಮಾನ ಆಡಿಕಳಕ್ಕೂ ಮೊದ್ಲು ನಿಮ್ಮ ಲೀಡ್ರುಗಳು ಯಾವ ತರ ಸನ್ಮಾನ ಮಾಡಿಸಿಗಂಡ್ರು ಅಂತ ಯೋಚನೆ ಮಾಡಬೇಕು ಗೊತ್ತ?" ಎಂದ ವಾಟಿಸ್ಸೆ.

"ನೋಡೋ, ನಾವೂ ಸನುಮಾನ ನೋಡಿದ್ದೀವಿ. ಗದೆ, ಬಿಲ್ಲುಬಾಣ, ಬೆಳ್ಳಿ ಸಾಮಾನು ಕೊಡೋದ್ನು ನೋಡಿದ್ದಿವಿ. ಆದ್ರೆ ಇಪ್ಪತ್ತು ಕೋಟಿ ರೂಪಾಯಿನ ಹಾರ ಹಾಕಿದ್ದ ನೋಡಿಲ್ಲ" ಎಂದ ಉಗ್ರಿ.

"ಇಪ್ಪತ್ತು ಸವುರ ತೆಂಗಿನಕಾಯಿ ಕೊಟ್ಟಿದ್ದ ನೋಡಿದ್ರ?"

"ಅದ್ಯಾರಿಗೆ ಕೊಟ್ರಪ್ಪ?"

"ಇದೇನೊ ಉಗ್ರಿ ಹಿಂಕೇಳ್ತಿ? ದ್ಯಾವೇಗೌಡ್ರು ಹೆಗಡೆ ವಿರುದ್ಧ ಹೋರಾಡ್ತಿ ಅಂತೆ ಚಂದ್ರಾಪಟ್ಟದ ತಾಲೋಕಿನ ಜನಗಳ್ಯಲ್ಲ ಮರಕೊಂದು ಕಾಯಿ ಅಂತ ತಂದು ಹಳೆ ಬಸ್ಟಾಂಡತ್ರ ಗುಡ್ಡೆ ಹಾಕಿದ್ರು. ಅದೂ ಸೀರಿಯಲ್ ಸೆಟ್‌ಲ್ಯಟಾಕಿ. ಯಾರೊ ನಮ್ಮ ಸೀರ ಚಿಗಪ್ಪನಂಥೋರು ಒಳ್ಳಗಾಯಿನೂ ತಂದಾಕಿದ್ರು ಗೊತ್ತ?" ಎಂದ ವಾಟಿಸ್ಸೆ.


"ಅಮಿಕ್ಯಂಡು ಕುತಗಳ್ಳ, ಒಳ್ಳಗಾಯಿ ಹಾಕಕ್ಕೋಗಿದ್ನಂತೆ?" ಎಂದ ಸೀರ.

"ಪರೆಗ್‌ಜಾಂಪಲ್ ಅಷ್ಟೆ ಚಿಗಪ್ಪ, ಸಿಟ್ಟಾಗಬ್ಯಾಡ. ನಮ್ಮ ಮಣ್ಣಿನ ಮಗನ ರಾಜಕಾರಣಕ್ಕೆ ನಾವು ತೆಂಗಿನಕಾಯಿ ಕೊಡದೆ ಆದ್ರೆ ಪಾಪ ಕಾಸು ಕಾಣದೆ ಕುಂತಿದ್ದ ಬಿಎಸ್ಪಿ ಲೀಡ್ರಿಗೆ ನೋಟಿನ ಹಾರ ಹಾಕದು ತಪ್ಪಲ್ಲ. ಇದು ಸರಿಯಾಗಿದ್ರೆ ಅದೂ ಸರಿ. ಅದು ತಪ್ಪಾಗಿದ್ರೆ ಇದೂ ತಪ್ಪು. ಈತರ ನಮ್ಮನ್ನೆ ನಾವು ಬಗ್ಗಿ ನೋಡಿಕಂಡ್ರೆ ಪ್ರಾಬ್ಲಮ್ ಸಾಲು ಆಯ್ತವೆ."

"ಅಂಗಲ್ಲ ಕಣೊ, 'ದಲಿತರು ಬಂದರು ದಾರಿಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಅಂತ ಹಾಡೇಳತಿದ್ರು. ಅಂಗಂತ ಉತ್ತರ ಪ್ರದೇಶದಲ್ಲಿ ಕೊಟ್ಟು ನೋಡಿದ್ರೆ ಹಿಂಗ ಮಾಡದು?" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಅಪಾತ್ರರಿಗೆ ಸಿಕ್ಕ ವಿದ್ಯೆ, ಸಿಕ್ಕ ಐಶ್ವರ್ಯ ಅಪಾಯಕಾರಿ ಅಂತ ಲ್ಯಂಕೇಶ್ ಹೇಳಿಲ್ಲವೇನೋ. ಆ ಬಗ್ಗೆ ಥಿಂಕ್ ಮಾಡು."

" !?"




## ಗುಣಮುಖ

ನಾಟಕವನ್ನು ಬರೆಯುವಾಗ ಇರುವ ಖುಷಿ ಅಚ್ಚು ಮಾಡುವಾಗ ಇರುವುದಿಲ್ಲ; ನನಗೆ ನನ್ನ ನಾಟಕವನ್ನು ಒಂದು ಸಲ ನೋಡುವುದು ಮಾತ್ರ ಇಷ್ಟ. ಕಳೆದ ವರ್ಷ 'ಗುಣಮುಖ'ದ ವರ್ಷವಾಯಿತು; ಬೇರೇನನ್ನೂ ಬರೆಯಲಾಗಲಿಲ್ಲ. ಆಮೇಲೆ ತರುಣರು ಆಡಿದರು. ನಾನು ನನ್ನ ನಾಟಕಗಳ ಬಗ್ಗೆ ಎಷ್ಟು ನಿಷ್ಠುರ ಎಂಬುದು ಅನೇಕರಿಗೆ ಗೊತ್ತಿಲ್ಲ. ಯಾವುದೇ ಸಾಹಿತ್ಯ ಕೃತಿ **cheap** ಆಗಕೂಡದು; ಅಗ್ಗದ ಪತ್ರಿಕೋದ್ಯಮ ಆಗಕೂಡದು. ಹಾಗೆಯೇ ಅರ್ಥಪೂರ್ಣ ಸಾಹಿತ್ಯವಾಗುವ ನೆಪದಲ್ಲಿ ಪ್ರೇಕ್ಷಕರನ್ನು ಕೊರೆದು ಸಾಯಿಸಬಾರದು. ಈ ನಾಟಕ ನನಗೆ ಹೇಗೆ ಹೊಳೆಯಿತು ಎಂದು ಮಾತ್ರ ಹೇಳುತ್ತೇನೆ. ಆಗ ನಾದಿರ್ ಶಾ ಬಗ್ಗೆ ಓದುತ್ತಿದ್ದೆ. ಆಗಲೇ ನಾನು ವರ್ಷಕ್ಕೊಮ್ಮೆ ಮಾಡಿಸಿಕೊಳ್ಳುವ ವೈದ್ಯಕೀಯ ಪರೀಕ್ಷೆಗೆ ಹೋಗಬೇಕಾಯಿತು. ಈ ಸಲದ ವೈದ್ಯ ಚರ್ಮದ ಸ್ಪೆಷಲಿಸ್ಟ್. ನನಗೆ ಅವನ ಪರಿಚಯವಿರಲಿಲ್ಲ. ಬೇರೆ ಯಾರೋ ಆತನಿಂದ ನನಗಾಗಿ ಸಂದರ್ಶನ ಗೊತ್ತುಪಡಿಸಿದ್ದರು. ಆ ವೈದ್ಯನಿಗೂ ನನ್ನ ಹೆಸರು ಕೂಡ ಗೊತ್ತಿರಲಿಲ್ಲ. ನಾನು ಯಾಕೆ ಬಂದಿದ್ದೇನೆಂದು ಮಾತ್ರ ತಿಳಿದಿದ್ದ. ಆಗ ಯಾವುದೋ ಕ್ರಿಕೆಟ್ ಮ್ಯಾಚ್ ನಡೀತಿತ್ತು. ನಾವೆಲ್ಲ ಟಿವಿ ನೋಡುತ್ತಿದ್ದೆವು. ಟಿವಿ ನೋಡಿ ಸುಸ್ತಾಗಿ ಈ ವೈದ್ಯನಲ್ಲಿಗೆ ಹೋಗಿದ್ದೆ. ವೈದ್ಯ ಕ್ರಿಕೆಟ್ ಬಗ್ಗೆ ಕೊರೆಯತೊಡಗಿದ; ರವಿಶಾಸ್ತ್ರಿ ಹೇಗೆ ಆಡಬೇಕಿತ್ತು, ಓಪನರ್ ಹೀಗೆ ಆಡಿದರೆ ಗೆಲ್ಲುವುದುಂಟೆ-ಏನೇನೋ, ಆಮೇಲೆ ಆತ ಪರೀಕ್ಷೆ ಶುರುಮಾಡಿದ. ಬಾಯಿ ತೆರೆಸಿ ನೋಡಿದ, ಶರ್ಟ್ ಬಿಚ್ಚಿಸಿ ನೋಡಿದ, ಕೂರಿಸಿ ನೋಡಿದ, ನಿಲ್ಲಿಸಿ ನೋಡಿದ. ಕೊನೆಯಲ್ಲಿ ನಾನು ಹೊರಡುವ ಮುನ್ನ "ನಿಮ್ಮ ಹೆಸರೇನು? ಸಿ.ಆರ್. ಸಿಂಹ ಅಲ್ಲವೆ?" ಅಂದ. ಅಷ್ಟರಲ್ಲಿ ನಾನು ಬೆವತುಹೋಗಿದ್ದೆ. ಹೆಸರು ಹೇಳಿ ಅಲ್ಲಿಂದ ಧಾವಿಸಿದೆ.





ನಾದಿರ್‌ಗೆ ದಿಲ್ಲಿಯಲ್ಲಿ ನಿಜಕ್ಕೂ ಕಾಯಿಲೆಯಾಗಿತ್ತು; ಚಕ್ರವರ್ತಿ ನಾದಿರ್ ತನ್ನ ಕ್ರೌರ್ಯದ ತಾರಕ ತಲುಪಿದ್ದ. ಸ್ವಪ್ರತಿಷ್ಠೆಯ ಈತನ ದೇಹ, ಮನಸ್ಸು ಹೇಗೆ ಕೆಲಸ ಮಾಡುತ್ತವೆ? ಇಡೀ ವಾತಾವರಣದಿಂದ ಕ್ಷೋಭೆಗೊಂಡಿರುವ ಈತ ಇನ್ನಷ್ಟು ತಪ್ಪು ಮಾಡಬಹುದು-ಅಂದುಕೊಂಡಾಗ ಅದನ್ನು ನಾಟಕ ಮಾಡುವುದು ಹೇಗೆಂದು ಒದ್ದಾಡಿದೆ. ಕೊನೆಗೂ ಕೂತು ಬರೆದೆ. ರಂಗದ ಮೇಲೆ ನೋಡಿದ ಮೇಲೆ ಬೇಡವೆನ್ನಿಸಿದ ಪುಟಗಳನ್ನೆಲ್ಲ ಕತ್ತರಿಸಿ ಒಪ್ಪಗೊಳಿಸಿದೆ-ಆದರೆ ನಾಟಕದ ಆಳದ ತರ್ಕಾತೀತ ದಿಗ್ಭ್ರಮೆ ಹಾಗೇ ಇರುವಂತೆ ನೋಡಿಕೊಂಡೆ.

-ಜುಲೈ 21, 1993

# ಶ್ರೀಕೃಷ್ಣದೇವರಾಯನ ಕಾಟ ತಪ್ಪಲಿಲ್ಲ

ನಮ್ಮ ಜನಾರ್ದನ ರೆಡ್ಡಿ ಇದಾರಲ್ಲ.... ಅದೇ ಯಾವಾಗಲೂ ಯಾವುದೇ ಎರಿಳಿತವಿಲ್ಲದೆ ತುನಾಟನಸ್ ಅನ್ನೋ ರೀತೀಲಿ ಮಾತನಾಡ್ತರಲ್ಲ ಅವರು. ಇನ್ನೂ ತಿಳೀಲಿಲ್ಲ ಅಂದರೆ... ನಮ್ಮ ನಾಡಿನ ಹೆಮ್ಮೆಯ ಇತಿಹಾಸತಜ್ಞರು. ಅವರಿಗಿರುವಷ್ಟು ಚರಿತ್ರೆ ಜ್ಞಾನ ಯಾವುದೇ ವಿಶ್ವವಿದ್ಯಾಲಯದ ಪ್ರೊಫೆಸರುಗಳಿಗೂ ಇಲ್ಲವಂತೆ. ಅದನ್ನು ಅವರೇ ಹೇಳಿಕೊಂಡಿದ್ದಾರೆ. ಇದರಲ್ಲೇನೂ ಅಪರಾಧ ಇಲ್ಲ ಅನ್ನಿಸುತ್ತೆ. ಯಾರಾದರೂ ಇವರ ಇತಿಹಾಸ ಜ್ಞಾನವನ್ನು ಗುರುತಿಸಿದ್ದರೆ ಅದೊಂದು

ಅಣಕ



▸ ಎಚ್.ಎಲ್. ಕೇಶವಮೂರ್ತಿ

ರೀತಿ. ಯಾರೂ ಹಾಗೆ ಮಾಡದೆ ಹೋದಾಗ ನನ್ನಲ್ಲಿ ಇಷ್ಟೊಂದು ಜ್ಞಾನ ತುಂಬಿದೆ ಎಂದು ಹೇಳಿಕೊಳ್ಳಲೇಬೇಕಾಗುತ್ತದೆ. ಅದಕ್ಕೇ ಹಂಗೆ ಹೇಳಿಕೊಂಡಿದ್ದಾರೆ. ಹಂಗಾದರೆ ಯಾವುದಾದರೂ ವಿಶ್ವವಿದ್ಯಾಲಯ ಅವರ ಸೇವೆಯನ್ನು ಸಮರ್ಥವಾಗಿ ಬಳಸಿಕೊಳ್ಳಬಹುದಲ್ಲಾ ಎಂದು ಕೆಲವರು ಕುಹಕ ಆಡಬಹುದು. ಇದನ್ನೇ ಬೇಡ ಅನ್ನೋದು. ಪ್ರಾಧ್ಯಾಪಕರೋ, ಸಂದರ್ಶನ ಪ್ರಾಧ್ಯಾಪಕರೋ ಆಗಬೇಕಾದರೆ ಏನೇನೋ ಓದಿರಬೇಕು ಅಂತ ರೂಲ್ಸು ಮಾಡಿ ಕೊಂಡು ಕೂತವ್ರಲ್ಲಾ. ಇಲ್ಲದಿದ್ದರೆ ಅದರ ಕತೆಯೇ ಬೇರೆಯಾಗ್ತಿತ್ತು ಬಿಡಿ.

ಈ ಇತಿಹಾಸಕಾರರು ಪಂಡಿತರಾಗಿರೋದು ಶ್ರೀಕೃಷ್ಣದೇವರಾಯನ ಚರಿತ್ರೆಯಲ್ಲಂತೆ. ಅದನ್ನೆಲ್ಲ ಅರೆದು ಕುಡಿದಿದ್ದಾರಂತೆ. ಹಂಗೆ ಕುಡಿದ ಮೇಲೆ ಅದು ಎಲ್ಲಿಂದ ಹೊರಹೋಗಬೇಕೋ ಅಲ್ಲಿಂದ ಹೋಗಬೇಕು. ಇದು ಪ್ರಕೃತಿ ನಿಯಮ. ಆದರೆ ಅವರು ಈ ನಿಯಮಕ್ಕೆ ವಿರುದ್ಧವಾಗಿ ತಲೆಗೇರಿಸಿಕೊಂಡು ಪಟ್ಟಾಗಿ ಕುಂತವ್ರೆ! ಯಾರಿಗೆ ಗೊತ್ತು ಅವರು ತಮ್ಮ ಪೂರ್ವಜನ್ಮದಲ್ಲಿ ಶ್ರೀ ಕೃಷ್ಣದೇವರಾಯನೇ ಆಗಿದ್ದರೋ ಅಥ್ವಾ ಅವನ ಪಟ್ಟದ ಆನೆಯೋ, ಪಟ್ಟದ ಕುದುರೆಯೋ ಆಗಿ ಅವನ ಅಂಡಿನ ಸ್ಪರ್ಶದ ರಸಾನುಭವವನ್ನು ಹೊಂದಿದ್ದರೋ ಏನೋ! ಒಟ್ನಲ್ಲಿ ಅವರ ನಿಕಟ ಪರಿಚಯ ಇತ್ತು ಎನ್ನಬಹುದು.

ಇದಾಗಿ ಸುಮಾರು ಐದು ನೂರು ವರ್ಷಗಳೇ ಸಂದುಹೋದವಲ್ಲಾ, ಅಲ್ಲಿಂದೀಚೆಗೆ ಸನ್ಮಾನ್ಯರು ಎಷ್ಟು ಜನ್ಮವೆತ್ತಿದ್ದಾರೋ ಏನು ಕಥೆಯೋ. ಜನ್ಮದಿಂದ ಜನ್ಮಕ್ಕೆ ಪುಣ್ಯ ಮಾಡುತ್ತಾಹೋದರೆ ಬ್ರಾಹ್ಮಣನಾಗಿ ಹುಟ್ಟುತ್ತಾರಂತೆ; ಸಕಲ ಸೌಭಾಗ್ಯವೂ ಲಭಿಸುತ್ತದೆಯಂತೆ. ಯಾವುದೋ ಜನ್ಮದಲ್ಲಿ ಕೊಂಚ ಯಡವಟ್ಟಾಗಿರಬೇಕು. ರೆಡ್ಡಿಗಾರು ಅಂತಹ ಉನ್ನತ ಶ್ರೇಣಿಗೆ ಏರುವುದಕ್ಕೆ ಆಗಲಿಲ್ಲ. ಆದರೂ ಪೂರ್ತಿ ಕೆಟ್ಟದ್ದೇನೂ ಮಾಡಿರಲಿಲ್ಲ ಅಂತ ಕಾಣುತ್ತೆ. ಪೊಲೀಸ್ ಪೇದೆ ಹೊಟ್ಟೆಯಲ್ಲಿ ಹುಟ್ಟಿದರೂ 'ಗಣಿ' ಅವರ ಕೈ ಹಿಡಿಯಿತು! ಈಗಲೂ ಈ ಇತಿಹಾಸತಜ್ಞರು ತಮ್ಮ 'ಕುಟೀರ'ದಲ್ಲಿದ್ದಾಗ ಶ್ರೀಕೃಷ್ಣದೇವರಾಯನ ವೇಷದಲ್ಲೇ ರಾರಾಜಿಸುತ್ತಾರೆ ಅನ್ನೋ ಮಾತಿದೆ. ಇದು ಎಷ್ಟು ನಿಜವೋ ಎಷ್ಟು ಸುಳ್ಳೋ ಮೇಲೆ ಉರೀತಿರೋನೆ ಬಲ್ಲ.

ಇದು ಹೇಗಾದರೂ ಇರಲಿ. ಪೂರ್ವಜನ್ಮದ ವಾಸನೆ ಅವರಿಗಂಟಿಕೊಂಡೇ ಇದೆ ಅನ್ನಿಸುತ್ತೆ. ಶ್ರೀಕೃಷ್ಣದೇವರಾಯ ಐದನೂರನೆ ವರ್ಷದ ಪಟ್ಟಾಭಿಷೇಕ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿಕೊಂಡರು ಎಂಬುದಂತೂ ದಿಟ. ಸರ್ಕಾರ ಇದಕ್ಕೆ ಐವತ್ತೋ ಅರವತ್ತೋ ಕೋಟಿ ಕೊಟ್ಟಿರಬಹುದು. ಇದೇನು ದೊಡ್ಡ ವಿಷಯ ಅಲ್ಲ ಬಿಡಿ. ಕೇವಲ ಒದು ಸಮಾರಂಭಕ್ಕೆ ಇದು ಅಂತ್ಯ ಕಾಣಬಾರದು. ಶ್ರೀಕೃಷ್ಣದೇವರಾಯನ ರಾಜ್ಯಭಾರದಲ್ಲಿ ಈ ನಾಡು ಸುಖ, ಸಮೃದ್ಧಿಯಿಂದ ತುಂಬಿತ್ತು, ಹಾಳಾದ ಸಾಬರು ಇದನ್ನು ಹಾಳು ಮಾಡಿದರು ಅನ್ನೋದನ್ನ ಈ ನಾಡಿನ ಕಿರಿಯರಿಗೆ ಪರಿಚಯಿಸಬೇಕು ಎಂದು ಮನಸ್ಸು ಮಾಡಿದರು. ಒಂದು ಖಾಸಗಿ ಟ್ರಸ್ಟ್ ಸ್ಥಾಪಿಸಿದರು. ಸರ್ಕಾರಕ್ಕೇನು ಭೂಮಿಗೆ ಬರವಾ. ಹಂಪಿ ವಿಶ್ವವಿದ್ಯಾಲಯದ ಭೂಮಿಯಲ್ಲಿ ಎಂಭತ್ತು ಎಕರೇನ ಕೊಡ್ತು. ಯಾವುದೂ... ನಮ್ಮ ನಾಡಿನ ಜನಪರ ಸರ್ಕಾರ! ಸರ್ಕಾರದ ಘನ ಉದ್ದೇಶ ಅರೀದೋವು ಯಾವುದೋ ಖಾಸಗಿ ಟ್ರಸ್ಟಿಗೆ ಭೂಮಿ ಕೊಡ್ತಿದೆ ಸರ್ಕಾರ ಅಂತ ಅರುಚಕ್ಕೆ ಶುರು ಹಚ್ಚಿದೊ. ಮುಖ್ಯಮಂತ್ರಿ ಯಡ್ಯೂರಪ್ಪನವರ ಮಂತ್ರದಂಡದಿಂದ ರಾತ್ರೋರಾತ್ರಿ ಖಾಸಗಿ ಟ್ರಸ್ಟು ಸರ್ಕಾರಿ ಟ್ರಸ್ಟಾಗಿ ಪರಿವರ್ತನೆಗೊಂಡಿತಾದರೂ ಹಾಳಾದೋವು ನಂಬದೆ ಹೋದೊ. ಅವುಗಳ ಕಾಟ ತಡೀಲಾರದೆ 'ಒಕ್ಕಳ್ಳಿ ಸುಮ್ನಿರಪ್ಪ.. ಟ್ರಸ್ಟ್‌ಗೆ ಆ ಭೂಮಿ ಕೋಡೋದಿಲ್ಲ' ಅನ್ನಬೇಕಾಯಿತು. ಯಡ್ಯೂರಪ್ಪನವರು ಪಾಪ. ಸರ್ಕಾರಕ್ಕೆ ಗೊತ್ತಿಲ್ಲವ ಹೆಂಗೆ ಹಿತ್ತಲ ಬಾಗಿಲಿಂದ ನುಗ್ಗಬೇಕು ಅನ್ನೋದು. ಮತ್ತೆ ಯಾವುದೋ ರೂಪದಲ್ಲಿ ಅದು ತೂರುತ್ತೆ, ಇರಲಿ.

ಶ್ರೀಕೃಷ್ಣದೇವರಾಯನ ಕಾಲದ ವೈಭವವನ್ನು ಪುನರ್ ಸೃಷ್ಟಿ ಮಾಡುವ ಕಾರ್ಯವಂತೂ ಸದ್ಯಕ್ಕೆ ತಣ್ಣಗಾಯಿತು. ಇದೆಲ್ಲ ಕೆಟ್ಟ ಕನಸು ಎಂದು ಎಲ್ಲಾನು ಮರೆತು ಆರಾಮವಾಗಿದ್ದೆ. ಆಗ ಏನಾಯಿತು ಅಂತೀರಿ. ಮತ್ತೆ ಹಾಳಾದ ಕೃಷ್ಣದೇವರಾಯನ ಭೂತ ಬೇರೆ ರೀತೀಲಿ ಕಾಡೋಕೆ ಪ್ರಾರಂಭ ಮಾಡ್ತು.

ಏನಾಯಿತು ಅಂದರೆ ಮಂಡ್ಯದಲ್ಲಿ 36ನೇ ರಾಜ್ಯಮಟ್ಟದ ಜಾನಪದ ಮೇಳ ನಡೀತು. 'ಶರೀರ ಜಾನಪದ' ಅನ್ನೋದು ಪ್ರಮುಖ ವಿಷಯ ಆಗಿತ್ತು. ಒಂದು ಗೋಷ್ಠಿಯ ಅಧ್ಯಕ್ಷರಾಗಿದ್ದ ಹನೂರು ಕೃಷ್ಣಮೂರ್ತಿ ಅವರು ಕೃಷ್ಣದೇವರಾಯನ ಹುಳಾಸ ತಲೆ ಒಳಕ್ಕೆ ಬಿಟ್ಟರು. ಬರೆದ ಇತಿಹಾಸ ಸುಳ್ಳಾಗಿರಬಹುದು. ಆದರೆ ಜಾನಪದರು ಎಂದೂ ಸುಳ್ಳನ್ನು ಹೇಳುವುದಿಲ್ಲ ಅಂದರು. ಹಂಗೆ ಆಗಲಿ ಬುಡಪ್ಪ ಅಂತ ಹೇಳ್ಕೊಂಡು ಕುಂತಿದ್ದೊ. ಮುಂದುವರೆದ ಅವರು 'ಯಾವ ಜಾನಪದ ಕವಿಯೂ ಕೃಷ್ಣದೇವರಾಯನನ್ನು ನೆನಪಿಸಿಕೊಂಡಿಲ್ಲ' ಅಂದುಬುಡೋದೆ! ಇಷ್ಟಕ್ಕೇ ನಿಲ್ಲಿಸಲಿಲ್ಲ ಅವರು. 'ಮೈಸೂರಿನ ಒಡೆಯರ ವಂಶದವರನ್ನ ಯಾವ ಜಾನಪದ ಕವಿಯೂ ನೆನಪಿಸಿಕೊಂಡಿಲ್ಲ, ಅದೇ ಟಿಪ್ಪು ಸುಲ್ತಾನನ ಕುರಿತ ಲಾವಣಿಗಳಿವೆ. ಕುಮಾರರಾಮನ್ನ ನೆನಪಿಸಿಕೊಂಡಿದ್ದಾರೆ' ಅಂದ್ರು!

ಅಂದರೇನಾಯಿತು? ಶ್ರೀಕೃಷ್ಣದೇವರಾಯ, ಯಧುವಂಶದವರು ತಮ್ಮ ಪ್ರಜೆಗಳ ಹೃದಯಕ್ಕೆ ಇಳಿದೇ ಇರಲಿಲ್ಲ ಅಂದಂಗಾಯಿತು! ಹಿಂದೂ ರಾಜರನ್ನು ಹೀಗೆ ಹೀಯಾಳಿಸಿ ಸಾಬರನ್ನು ಹೊಗಳಿ ಅಟ್ಟಕ್ಕೇರಿಸಿವರಲ್ಲಾ ಈ ಜಾನಪದ ತಜ್ಞರು ತರವೇ ಅಂತ....



ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿದ್ದೋಲ್ಲ 'ನವರತ್ನಗಳು' ಹಾಡಿ ಹೋಗಳಿದ್ದಾರಲ್ಲ ಅಂದ್ರೆ, ತರಲೆ ಜನ, ಹಂಗಿನಲ್ಲಿದ್ದೋವು ಬರ್‍ದವೆ ಅಂತಾರೆ. ಹಂಪಿ ಬೀದಿಬೀದಿಗಳಲ್ಲೂ ವಜ್ರ ವೈಢೂರ್ಯ ಮಾರುತ್ತಿದ್ದರಂತೆ ಎಂತಹ ವೈಭವದ ಕಾಲ ಅದು ಅಂದರೆ ಅವೆಲ್ಲ ನಕಲಿಯವು ಅಂತಾರೆ. ನಕಲಿಯವೇ ಆಗಲಿ ಮಾರುತ್ತಿದ್ದರು ತಾನೆ ಅಂದರೆ ಕೊಂಡ್ಕೊಳ್ಳುತ್ತಿದ್ದೋರು ಯಾರು? ಜನಪೀಡಕರೇ ಅಲ್ವ ಅಂತಾರೆ.

ಆಧುನಿಕ ಶ್ರೀಕೃಷ್ಣದೇವರಾಯ ಉರುಫ್ ಜನಾರ್ದನ ರೆಡ್ಡಿ ಉರುಫ್ ಗಣಿರೆಡ್ಡಿ ಹೀಗೆ ಹಲವಾರು ನಾಮಾಂಕಿತರಾದವರ ಮಾತು ಕೃತಿಗಳನ್ನ ನಂಬೋದೊ ಅಥ್ವಾ ಜನಪದ ವಿದ್ವಾಂಸರ ಮಾತನ್ನ ನಂಬೋದೋ ಎಂಬುದು ತಲೆನೋವಾಗಿದೆ.

ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕಾಗಿಲ್ಲವೇನೋ ಅಂತಾನೂ ಅನ್ನಿಸುತ್ತೆ ಒಂದೊಂದು ಸಲ. ರೆಡ್ಡಿಯವರಿಗೇನು ಜನಪದ ಕಾವ್ಯ ಸೃಷ್ಟಿಸೋದು ಕಷ್ಟನಾ. ಸಂಘಪರಿವಾರದಲ್ಲೇ ಜನಪದ ವಿಧ್ವಾಂಸರು ಇದ್ದಾರೆ. ಐದು ನೂರು ವರ್ಷಗಳ ಹಿಂದೆಯೇ ಬರೆದಂತೆ ಕೃಷ್ಣದೇವರಾಯನ ಆಳ್ವಿಕೆಯನ್ನು ಹೊಗಳಿ ಬರೀರಿ ಅಂದ್ರೆ ಭೇಷಾಗಿ ಬರ್‍ದು ಬಿಸಾಕ್ತಾರೆ! ಜನ ಇದನ್ನೆಲ್ಲ ನಂಬ್ತಾರಾ ಅಂದ್ರೆ..... ಆಯ್ತೋ ರಾಮನೆ, ನಂಬೇ ನಂಬ್ತಾರೆ. ವೃತ್ತಿಗಾಯಕರನ್ನು ಹಿಡ್ಕೊಂಬಂದು ತಯಾರು ಮಾಡಿ 'ಪೂರ್ವೀಕರ ಕಾಲದಿಂದಲೂ ಇವ ಹಾಡ್ತ ಬಂದೀವಿ' ಅಂತ ಹೇಳಿಸಿದರಾಯಿತು!

ಹೆಂಗೋ ನಮ್ಮ ತಲೆ ಬಿಸಿ ತಪ್ಪಿದರೆ ಸಾಕು!

## ರಾಜಕೀಯ ವಿದೂಷಕ

ಹಳೆಯ ನಾಟಕಗಳಲ್ಲಿ ಒಂದು ಸೀನಿನಲ್ಲಿ ಗೋಳಾಟ ಇದ್ದರೆ ಇನ್ನೊಂದು ಸೀನಿನಲ್ಲಿ ವಿದೂಷಕ ಬಂದು ಸಭಿಕರನ್ನ ನಗಿಸಿ ಒಂದು ರೀತಿಯ ರಿಲೀಫ್ ಕೊಡ್ತಿದ್ದ. ಸಿನಿಮಾಗಳು ಬಂದಮೇಲೆ ಇದೇ ಪ್ರವೃತ್ತಿ ಅಲ್ಲಿಯೂ ದಾಳಿ ಮಾಡಿತು. ರಾಜಕೀಯ ಪಕ್ಷಗಳೂ ವಿಧಾನಮಂಡಳದಲ್ಲಿ ಬೋರ್ ಹೊಡೆಯದೆ ಇರಲಿ ಎಂದು ಒಂದಷ್ಟು ವಿದೂಷಕರನ್ನ ಸಾಕುವ ಪರಿಪಾಠಹೊಂದಿದೆ ಅನ್ನಿಸುತ್ತೆ.

ಶಾಸಕರನ್ನ ನಗೆಗಡಲಲ್ಲಿ ಮುಳುಗಿಸುವಂತಹ ಛಾತಿ ಭಾರತೀಯ ಜನತಾಪಕ್ಷದವರಲ್ಲಿ ಯಾರಿಗಿದೆ?

ಇನ್ನಾರು ಇದ್ದಾರು? ರಾಮಚಂದ್ರಗೌಡರನ್ನ ಬಿಟ್ಟು

ಈ ಹರಿಕಥೆ ದಾಸರು ಎಂತೆಂತಹ ಘನವಾದ ಉತ್ತರ ನೀಡುತ್ತಾರೆ ಅಂತ.....

ಇತ್ತೀಚೆಗೆ ವಿಧಾನ ಪರಿಷತ್ ಸದಸ್ಯ ಕೆ.ಬಿ ಶ್ರೀಕಂಠೇಗೌಡರು ಪರಿಷತ್ತಿನಲ್ಲಿ ಒಂದು ಮನವಿ ಮಾಡಿದರು. ಶಾಸಕರ ಭವನದ ಬಳಿ ಬಂದು ಹುಚ್ಚುನಾಯಿ ಇದೆ. ಹಲವರಿಗೆ ಅದು ಕಚ್ಚಿ ತೊಂದರೆ ಆಗಿದೆ. ಅದನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಿ ಎಂಬುದು ಅವರ ಮನವಿಯ ಸಾರಾಂಶ.

ಏನು ಉತ್ತರ ನೀಡಿರಬಹುದು ನಮ್ಮ ಪ್ರೀತಿಯ ಹರಿಕತೆ ದಾಸರು?

'ಇದನ್ನ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ!'

ಆಹಾ! ಏನು ಸುಂದಾದ ಉತ್ತರ!

# ತೆಗಳುವುದರಲ್ಲಿಯೂ ಒಂದು ಘನತೆಯಿರಲಿ

ವಿಜಯನಗರ ಪುನಶ್ಚೇತನಾ ಟ್ರಸ್ಟಿಗೆ ಕನ್ನಡ ವಿಶ್ವವಿದ್ಯಾಲಯದ 80 ಎಕರೆ ಭೂಮಿಯನ್ನು ಹಸ್ತಾಂತರ ಮಾಡುವ ಸರ್ಕಾರದ ನಿರ್ಣಯವು ಉಚಿತವಲ್ಲವೆಂದೂ, ಅದು ವಿವಿಯ ಶೈಕ್ಷಣಿಕ ಉದ್ದೇಶಗಳಿಗೆ ಮಾರಕವೆಂದೂ, ವಿವಿಯ ಸ್ವಾಯತ್ತತೆಗೆ ಧಕ್ಕೆ ತರುತ್ತದೆ ಎಂದೂ ನಾವು ವಿಶ್ವವಿದ್ಯಾಲಯದ ಸಮಸ್ತ ನೌಕರರು ಪ್ರತಿಭಟನೆ ಶುರುಮಾಡಿದೆವು. ಸುಮಾರು ಒಂದು ತಿಂಗಳು ಕಾಲ ನಡೆದ ಈ ಹೋರಾಟಕ್ಕೆ ನಿಜವಾದ ಶಕ್ತಿ ಬಂದಿದ್ದು ನಾಡಿನ ಪ್ರಜ್ಞಾವಂತರ ನೈತಿಕ ಬೆಂಬಲದಿಂದ. ಇದರ ಫಲವಾಗಿ ಹೋರಾಟಕ್ಕೆ ಜಯ ಸಿಕ್ಕಿದೆ. ಕನ್ನಡ ವಿವಿಯ ಭೂಮಿ ಅದಕ್ಕೆ ಮರಳಿ ದಕ್ಕಿದೆ. ಇದು ನಮಗೆಲ್ಲರಿಗೂ ಸಹಜವಾಗಿಯೇ ಸಂತೋಷ ತಂದಿದೆ. ಈ ಚಾರಿತ್ರಿಕ ಮಹತ್ವದ ಹೋರಾಟದಲ್ಲಿ ನಮ್ಮ ಬೆನ್ನಿಗೆ ನಿಂತ ತಮ್ಮನ್ನು ಕನ್ನಡ ವಿಶ್ವವಿದ್ಯಾಲಯವು ಮರೆಯುವುದಿಲ್ಲ, ತಮಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ತಿಳಿಸಲು ಈ ವೈಯಕ್ತಿಕವಾದ ಪತ್ರವನ್ನು ಬರೆದಿರುತ್ತೇನೆ.

ಕರ್ನಾಟಕದ ಚಿಂತಕರು, ಲೇಖಕರು, ಜನಪರ ಸಂಘಟನೆಗಳು ಹಾಗೂ ಸಂವೇದನಾಶೀಲ ಮಾಧ್ಯಮಗಳು, ಸಾರ್ವಜನಿಕ ಮಹತ್ವವುಳ್ಳ ಪ್ರಕರಣವೊಂದಕ್ಕೆ ಮಿಡಿದು ತಮ್ಮ ಸಂಕಲ್ಪಶಕ್ತಿಯನ್ನು ಪ್ರದರ್ಶಿಸಿದ ಅಪರೂಪದ ಸನ್ನಿವೇಶವಿದು. ಈ ವಿದ್ಯಮಾನವು ಮುಂದಿನ ದಿನಗಳಲ್ಲಿ ನಾಡಿನ ಸಮಸ್ಯೆಗಳಿಗೆ ನಾವೆಲ್ಲ ಕ್ರಿಯಾಶೀಲವಾಗಿ ಸ್ಪಂದಿಸಲು ಒಂದು ಹೊಸಹಾದಿಯನ್ನು ಸಹ ತೋರಿಸಿದೆ. ಈ ಹಾದಿಯು ನಾಡಿನ ಹಿತವನ್ನು ಕಾಪಾಡುವಲ್ಲಿ ನಮ್ಮನ್ನು ಕರೆದೊಯ್ಯಬಲ್ಲದು ಎಂದು ಅನಿಸುತ್ತಿದೆ. ನಮಗೆ ಈ ದಿಸೆಯಲ್ಲಿ ಮಾರ್ಗದರ್ಶನ ಮಾಡುತ್ತಿರಬೇಕು ಎಂದು ಕೋರುತ್ತೇನೆ.

ತಮ್ಮ ವಿಶ್ವಾಸದ,
ರಹಮತ್ ತರೀಕೆರೆ

ಹೊಗಳಿಕೆ ತೆಗಳಿಕೆ

ಹಂಪಿ ವಿವಿಯ ಭೂಮಿ ಪರಭಾರೆ ಇಲ್ಲ; ಸ್ವಾಗತಾರ್ಹ ಆದರೆ ಎಚ್ಚರ ಇರಬೇಕು.

ಇಡೀ ರಾಜ್ಯದ ಪ್ರಾಜ್ಞರನ್ನು ಮತ್ತು ಸಾಮಾನ್ಯ ಜನರನ್ನು ಕಳೆದ ಕೆಲವು ದಿನಗಳಿಂದ ಪ್ರತಿಭಟನೆಗೆ ಪ್ರಚೋದಿಸಿದ್ದ ಹಂಪಿ ವಿಶ್ವವಿದ್ಯಾಲಯದ ಭೂಮಿ ಪರಭಾರೆಯ ಪ್ರಶ್ನೆಯನ್ನು ಕೈಬಿಡಲಾಗಿದೆ ಎಂದು ಮುಖ್ಯಮಂತ್ರಿಗಳು ಘೋಷಿಸಿರುವುದು ಸಮಾಧಾನ ತಂದಿದೆ. ಆದರೆ ಇದು ಕೇವಲ ಹೇಳಿಕೆಯಾಗಿ ಉಳಿಯಬಾರದು. ಕಾರ್ಯತಃ ವಿಜಯನಗರ ಸಾಮ್ರಾಜ್ಯ ಪುನಶ್ಚೇತನ ಪ್ರತಿಷ್ಠಾನದ ಹೆಸರಿನಲ್ಲಿ ಬಳ್ಳಾರಿ ಜಿಲ್ಲೆಯ ಗಣಿ ಭೂಮಿ ಕಬಳಿಕೆದಾರರು ಸರ್ಕಾರದ ರಕ್ಷಣೆಯಲ್ಲಿ ಅಮೂಲ್ಯ ನೈಸರ್ಗಿಕ ಸಂಪತ್ತನ್ನು, ಅರಣ್ಯ ಭೂಮಿ ಮತ್ತು ಕೃಷಿ ಭೂಮಿ ಇತ್ಯಾದಿಗಳನ್ನು ಕಬಳಿಸದಂತೆ ಪಾರದರ್ಶಕ ಕ್ರಮಗಳನ್ನು ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಘೋಷಿಸಬೇಕೆಂದು ಒತ್ತಾಯಿಸುತ್ತೇನೆ. ಜನರಿಗೆ ಕನ್ನಡ ಭಾಷೆ, ಸಂಸ್ಕೃತಿ, ನಾಡುಗಳ ಅಭಿವೃದ್ಧಿ ಆಗಬೇಕೆಂಬ ಆಸಕ್ತಿ ಇದೆ. ಆ ಕಾರ್ಯವನ್ನು ಆರಂಭದಿಂದ ಈವರೆಗೆ ನಡೆಸುತ್ತಾ ಬಂದಿರುವ ಹಂಪಿ ವಿವಿಯಕ್ಕೆ ಹೆಚ್ಚಿನ ಭೂಮಿ ಅನುದಾನಗಳು ಹಾಗೂ ಅಬಿವೃದ್ಧಿ ಕಾರ್ಯಗಳಿಗೆ ನೆರವು ಮೊದಲಾದವುಗಳನ್ನು ನೀಡುವುದಲ್ಲದೆ ಆ ವಿವಿಯು ಒಂದು ಸ್ವಾಯತ್ತ ಸಂಸ್ಥೆಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಒತ್ತಾಯಿಸುತ್ತೇನೆ.

ಮುಖ್ಯ ಮಂತ್ರಿಗಳ ಹೇಳಿಕೆ ಪ್ರಾಮಾಣಿಕವಾಗಿದ್ದರೆ ಅವರು ಬಳ್ಳಾರಿಯ ಗಣಿಗಾರಿಕೆಗೆ ಸಂಬಂಧಿಸಿದ ಭೂಹಗರಣಗಳ ಬಗ್ಗೆ ಜಸ್ಟಿಸ್ ಭಟ್ ಅವರ ತನಿಖಾ ಆಯೋಗವು ನಡೆಸುತ್ತಿದ್ದ ವಿಚಾರಣೆಯನ್ನು ನಿಲ್ಲಿಸಿ ಅದನ್ನು ಮುಂದುವರಿಸುವುದಕ್ಕೆ ಕರ್ನಾಟಕ ಲೋಕಾಯುಕ್ತಕ್ಕೆ ಒಪ್ಪಿಸಲಾಗಿದೆಯಷ್ಟೆ. ಲೋಕಾಯುಕ್ತವು ಈಗಾಗಲೇ ತನಿಖೆ ಮುಗಿಸಿ ಸರಕಾರಕ್ಕೆ ನೀಡಿರಬಹುದಾದ ವರದಿಯನ್ನು ಸರಕಾರವು ತಡಮಾಡದೆ ಸ್ವೀಕರಿಸಿ ಅದರನ್ವಯ ಎಲ್ಲ ಅಪರಾಧಿಗಳ ಮೇಲೆ ಕ್ರಮ ಜರುಗಿಸಲು ಸೂಕ್ತ ನ್ಯಾಯಾಲಯಗಳಿಗೆ ಒಪ್ಪಿಸಬೇಕೆಂದು ಮುಖ್ಯ ಮಂತ್ರಿಗಳನ್ನು ನಾನು ಒತ್ತಾಯಿಸುತ್ತೇನೆ.

ಅವರ ಇತ್ತೀಚಿಗಿನ ಕಾರ್ಯಕಲಾಪಗಳನ್ನು ಮತ್ತು ನಡೆನುಡಿಗಳನ್ನು ವೀಕ್ಷಿಸಿದಾಗ ಅವರು ಬಳ್ಳಾರಿ ಮೂಲದ ಭೂಕಬಳಿಕೆದಾರರ ಮತ್ತು ಗಣಿ ಕಬಳಿಕೆದಾರರ ಅಂಕಿತ ಮೀರಿ ವರ್ತಿಸುವ ಶಕ್ತಿ ಮತ್ತು ಧೈರ್ಯವನ್ನು ಹೊಂದಿಲ್ಲ ಎಂಬುದು ಕಂಡುಬರುತ್ತದೆ. ಮುಖ್ಯಮಂತ್ರಿಗಳಾಗಿ ಅಂತಹ ದುಷ್ಟ ಶಕ್ತಿಗಳನ್ನು ಹದ್ದುಬಸ್ತಿಗೆ ತರುವ ಧೈರ್ಯವನ್ನು ತಳೆದು ತನಗಿರುವ ಅಧಿಕಾರವನ್ನು ಪ್ರಯೋಗಿಸಬೇಕೆಂದು ಸಾರ್ವಜನಿಕರು ಅಪೇಕ್ಷಿಸುತ್ತಾರೆ. ಕರ್ನಾಟಕದ ಜನ ನಾಡಿನ ನೆಲ, ಜಲ, ಅರಣ್ಯ ನೈಸರ್ಗಿಕ ಸಂಪತ್ತುಗಳನ್ನು ಕಾಪಾಡುವುದಕ್ಕೆ ಮತ್ತು ಅಭಿವೃದ್ಧಿ ಪಡಿಸುವುದಕ್ಕೆ ಸುಸಂಘಟಿತ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕನ್ನಡದ ಜನತೆಗೆ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದೊಂದೇ ಇಂದಿನ ಸಮಸ್ಯೆಗಿರುವ ಪರಿಹಾರ.

- ಬಿ.ವಿ. ಕಕ್ಕಿಲ್ಲಾಯ, ಮಂಗಳೂರು

ಈ ಹಿಂದೆ ರಾಗಸುಧಾ ಎಂಬ ಹೆಸರಲ್ಲಿ ಚಾಲ್ತಿಯಲ್ಲಿದ್ದ ರಂಜಿತಾ ತಮಿಳಿನ ಹೆಸರಾಂತ ನಟಿಯೇನಲ್ಲ, ಸಣ್ಣಪುಟ್ಟ ವ್ಯಾಂಪ್ ಶೈಲಿಯ ಪಾತ್ರಗಳಲ್ಲೋ, ಐಟಂ ಸಾಂಗ್‌ಗಳಲ್ಲಿ ನರ್ತಕಿಯಾಗೋ, ಅಪರೂಪಕ್ಕೊಮ್ಮೆ ಥರ್ಡ್‌ಗ್ರೇಡ್ ತಮಿಳು ಸಿನಿಮಾಗಳಲ್ಲಿ ಕಂಡುಬರುತ್ತಿದ್ದ "ರಂಜಿತಾಳಂಥ ನತದೃಷ್ಟೆಯರಿಗೆ ಮೈಕಾಯಕವಲ್ಲದೆ ಹೊಟ್ಟೆಪಾಡಿಗೆ ಬೇರೆ ದಾರಿಯಿಲ್ಲದೆ?"

ದಯವಿಟ್ಟು ಮೇಲಿನ ವಾಕ್ಯವನ್ನು ಗಮನಿಸಿ, ಇದು ಕಳೆದ ಬಾರಿಯ 'ಲಂಕೇಶ್' ವಿಶೇಷಾಂಕದಲ್ಲಿನ ವರದಿಯೊಂದರಿಂದ ಉದ್ಧರಿಸಿದ್ದು. ಸದಾ ಸಮಾಜದ ಒಳಿತನ್ನು ಬಯಸುವ ನಮ್ಮ ಪ್ರೀತಿಯ 'ಲಂಕೇಶ್' ಹೀಗೆ ಬರೆದಿದ್ದು! ಈ ವಾಕ್ಯ ಆಕೆಯನ್ನಷ್ಟೇ ಪ್ರತಿನಿಧಿಸುತ್ತದೆಯೇ? 'ಲಂಕೇಶ್'ನಂತಹ ಪತ್ರಿಕೆ ಎಂಥಾ ಕೀಳುಮಟ್ಟದ ವ್ಯಕ್ತಿತ್ವವನ್ನೂ ಹೀಗೆ ಲಘುವಾಗಿ ಗಣಿಸುವುದು, ಅದು ಸಾರ್ವತ್ರಿಕವಾಗಿ ಆರೋಪಗೊಳ್ಳುವುದು ಸಾಮಾನ್ಯ ಓದುಗನಾದ ನನಗೆ ಇರಿಸುಮುರಿಸಾಗುತ್ತದೆ.

ತೆಗಳುವುದರಲ್ಲಿಯೂ ಒಂದು ಘನತೆಯಿರಲಿ; ಅದು ಪತ್ರಿಕೆಯ ಘನತೆಯನ್ನು ಎತ್ತಿ ಹಿಡಿಯಲಿ.


ಪತ್ರಿಕೆಯ ಮೇಲಿನ ಎಂದಿನ ಗೌರವದಿಂದಲೆ,

- ಸಂತೋಷ ಗುಡ್ಡಿಯಂಗಡಿ

ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು

# ಭುವನ್ ಮೇಲೆ ಡ್ಯಾನ್ಸ್ ಮಾಸ್ಟರ್ಸ್ 'ಫೈಟು'


ದ ಚಿತ್ರರಂಗದ ನೃತ್ಯನಿರ್ದೇಶಕರ ಸಂಘದವರು ಅನಾಹುತಕಾರಿ ಂದನ್ನು ಮಾಡಿ ಮುಗಿಸಿದ್ದಾರೆ. ವಿಪರ್ಯಾಸವೆಂದರೆ ಈ ಒಂದಷ್ಟು ಮಂದಿ ನಡೆಸಿದ ಹಲ್ಲೆಗೆ ಎಲ್ಲ ನೃತ್ಯ ಕಲಾವಿದರು ರ್ದೇಶಕರು ತಲೆಕೊಡಬೇಕಾಗಿ ಬಂದಿರುವುದು. ಅಷ್ಟೇ ಅಲ್ಲ ದ ಕೆಲವರು ಓರ್ವ ನೃತ್ಯ ನಿರ್ದೇಶಕನನ್ನೇ ಪೀಡಿಗೆ ಗುರಿ ಆಗಿಸಿಕೊಂಡಿರುವುದೂ ಗಿದೆ.



00ರವರೆಗೂ ಕನ್ನಡದ ನೃತ್ಯ ಕಲಾವಿದರಿಗೆ ಆದ ಒಂದು ಒಕ್ಕೂಟವಿರಲಿಲ್ಲ. ಅಂಥ ದಲ್ಲಿ ತ್ರಿಭುವನ್, ಸತ್ಯನಾರಾಯಣ್ ವರು 25 ಮಂದಿಯನ್ನು ತಮ್ಮೊಂದಿಗೆ ಂಡು 'ಕರ್ನಾಟಕ ಚಲನಚಿತ್ರ ನೃತ್ಯ ರ ಮತ್ತು ನಿರ್ದೇಶಕರ ಸಂಘ'ವನ್ನು ಅಸ್ತಿತ್ವಕ್ಕೆ ು. ಈಗ ಈ ಸಂಘದ ನಿರ್ಮಾತೃಗಳಲ್ಲಿ ರ ತ್ರಿಭುವನ್ ಅವರ ಮೇಲೇ ಹಲ್ಲೆ

ಂಭದ ದಿನಗಳಲ್ಲಿ ಕನ್ನಡದಲ್ಲಿ ಅವಕಾಶಗಳ ಇದ್ದುದರಿಂದ ತ್ರಿಭುವನ್ ಮದ್ರಾಸಿಗೆ ಅಲ್ಲಿ ರಾಜು ಸುಂದರಂ ಮತ್ತು ರೇಖಾ ಶ್ ಅವರ ಬಳಿ ಸಹಾಯಕರಾಗಿ ದುಡಿಯುತ್ತಿದ್ದರು. ಆಗ ್ ಅವರಿಗೆ ಮದರಾಸಿನ ಯೂನಿಯನ್ ಮೆಂಬರ್‌ಶಿಪ್ ಕೂಡಾ , ಆದರೆ ಏಕಕಾಲದಲ್ಲಿ ಎರಡೆರಡು ರಾಜ್ಯಗಳ ಸಂಘಗಳಲ್ಲಿ ಪಡೆಯುವುದು ಸಾಧ್ಯವಿಲ್ಲದ್ದರಿಂದ ತ್ರಿಭುವನ್ ಕರ್ನಾಟಕದ ಲ್ಲಿನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಗ್ಗೆ ಏಳೆಂಟು ವರ್ಷಗಳಿಂದ ತ್ರಿಭುವನ್ ಸ್ವತಂತ್ರ ನೃತ್ಯ ನಿರ್ದೇಶಕರಾಗಿ ಚಿತ್ರಗಳಿಗೆ ನೃತ್ಯ ನಿರ್ದೇಶಕರಾಗಿ ದುಡಿಯುತ್ತಿದ್ದಾರೆ. ಹೀಗಾಗಿ ಸಿನ ಡ್ಯಾನ್ಸ್ ಯೂನಿಯನ್‌ಗೂ ತ್ರಿಭುವನ್ ರಾಜೀನಾಮೆ ಟ್ಟಿದ್ದಾರೆ. ಆದರೆ ಕರ್ನಾಟಕ ಚಲನಚಿತ್ರ ನೃತ್ಯ ನಿರ್ದೇಶಕರ ಸಂಘ ತ್ರಿಭುವನ್‌ಗೆ ಸದಸ್ಯತ್ವವನ್ನು ನೀಡದೇ ಅವರ ವಿರುದ್ಧ ಕತ್ತಿ ುತ್ತಿದೆ.



ಪೇಂದ್ರರ 'ಎ', ಕವಿತಾ ಲಂಕೇಶರ 'ದೇವೀರಿ', 'ಇಂದ್ರ', 'ಮಸ್ತ್ ಮಜಾಮಾಡಿ' ಸೇರಿದಂತೆ ಕನ್ನಡದ ವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ತ್ರಿಭುವನ್ ನೃತ್ಯ ದರಾಗಿ ಕೆಲಸ ಮಾಡಿದ್ದಾರೆ. ಆದರೂ ಅವರಿಗೆ ಚಿತ್ರರಂಗದಲ್ಲಿ ಅಧಿಕೃತವಾದ ನೆಲೆ ಸಿಗದೇ ಒದ್ದಾಡುವ ಉದ್ಭವಿಸಿದೆ. ಅತ್ತ ತಮಿಳುನಾಡಿನ ಸದಸ್ಯತ್ವವನ್ನೂ ೊಂದಿರುವ ಇತ್ತ ಕರ್ನಾಟಕದ ಸದಸ್ಯತ್ವ ಸಿಗದಂತಹ ಯನ್ನು ಅವರು ಎದುರಿಸುತ್ತಿದ್ದಾರೆ. ಇದಕ್ಕೆ ಮೂಲ ಕರ್ನಾಟಕ ನೃತ್ಯ ನಿರ್ದೇಶಕರ ಸಂಘದ ಅಧ್ಯಕ್ಷನಾಗಿರುವ ರಾಜೇಶ್ ವರ. ಇವನಿಗೆ ತ್ರಿಭುವನ್ ವಿರುದ್ಧ ಅದೇನು ವೈಯಕ್ತಿಕ ಪಿದೆಯೋ ಗೊತ್ತಿಲ್ಲ.

ದು ವರ್ಷದ ಹಿಂದೆ ಇದೇ ರಾಜೇಶ್ ಬ್ರಹ್ಮಾವರ್ 'ತ್ರಿಭುವನ್ ನ ನೃತ್ಯ ಕಲಾವಿದರನ್ನು ಕರೆತರುತ್ತಾರೆ' ಎಂದು ಆರೋಪಿಸಿ ಟನೆ ನಡೆಸಿ ದೊಡ್ಡ ಸೀನ್ ಕ್ರಿಯೇಟ್ ಮಾಡಿದ್ದ. ಕಡೆಗೆ ಅದು ನ್‌ರ ತಪ್ಪಲ್ಲ ಎಂದು ಎಲ್ಲರಿಗೂ ಗೊತ್ತಾಗಿತ್ತು.

ಕೆಲ ದಿನಗಳ ಹಿಂದೆ ನಂದಿ ಬೆಟ್ಟದಲ್ಲಿ ಥ್ರಿಲ್ಲರ್ ಮಂಜು ನಿರ್ದೇಶನದ 'ಜಯಹೇ' ಸಿನಿಮಾದ ಚಿತ್ರೀಕರಣ ಸಾಗುತ್ತಿತ್ತು. ಅಲ್ಲಿಗೆ ರಾಜೇಶ್ ಬ್ರಹ್ಮಾವರ್ ಸುಮಾರು ಮೂವತ್ತು ಮಂದಿ ನೃತ್ಯ ಕಲಾವಿದರನ್ನು ಟೆಂಪೋ ಟ್ರಾವಲರ್‌ನಲ್ಲಿ ಕಳುಹಿಸಿದ್ದ. ಮಧ್ಯಾಹ್ನ ಮೂರು ಗಂಟೆ ಹೊತ್ತಿಗೆ ಈ ಗ್ಯಾಂಗ್ ಶೂಟಿಂಗ್ ಸ್ಪಾಟ್ ಮೇಲೆ ದಾಳಿ ಇಟ್ಟಿತು. ಹಾಡಿನ ಚಿತ್ರೀಕರಣದ ತಂಡದಲ್ಲಿದ್ದ ತ್ರಿಭುವನ್‌ರ ಸಹಾಯಕರಾದ ನಂದ ಮತ್ತು ಹರ್ಷ ಎಂಬಿಬ್ಬರು ಹುಡುಗರನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ 'ತ್ರಿಭುವನ್ ಜೊತೆ ಯಾಕೆ ಕೆಲಸ ಮಾಡ್ತೀರ' ಎಂದು ಮೊದಲು ಧಮಕಿ ಹಾಕಿದ್ದಾರೆ. ಅದಕ್ಕೆ ಅವರಿಬ್ಬರು ಬಗ್ಗದಿದ್ದಾಗ ಅವರನ್ನು ಮನಬಂದಂತೆ ಥಳಿಸಿದ್ದಾರೆ.

ಆನಂತರ ಅದೂ ಸಾಲದೆಂಬಂತೆ 'ಕೂಡಲೇ ಚಿತ್ರೀಕರಣವನ್ನು ನಿಲ್ಲಿಸಬೇಕು' ಎಂದು ಥ್ರಿಲ್ಲರ್ ಮಂಜು ಮೇಲೇ ಮುರಕೊಂಡು ಬಿದ್ದಿದ್ದಾರೆ. ಇವರ ಗಲಾಟೆ ಆಕಸ್ಮಾತ್ ಹಿಂಸೆಗೆ ತಿರುಗಿ ಅನಾಹುತವಾದರೆ ಕಷ್ಟ ಎಂದು ಬೆದರಿದ ಥ್ರಿಲ್ಲರ್ ಮಂಜು ಸಂಜೆ ನಾಲ್ಕು ಗಂಟೆಗೇ 'ಪ್ಯಾಕಪ್' ಹೇಳಿದ್ದಾರೆ.

ತ್ರಿಭುವನ್ ಒಬ್ಬರನ್ನೇ ಬೆಂಗಳೂರಿಗೆ ವಾಪಸ್ ಕಳುಹಿಸಿದರೆ, ಮಾರ್ಗಮಧ್ಯೆ ಈ ಗೂಂಡಾ ಪಡೆ ಅವರಿಗೆ ಮತ್ತಿನ್ನೇನಾದರೂ ತೊಂದರೆ ಕೊಡಬಹುದು ಎಂದು ಸ್ವತಃ ತಮ್ಮ ಕಾರಿನಲ್ಲೇ ಅವರನ್ನು ಕರೆದುಕೊಂಡು ಹೋಗಲು ಮಂಜು ನಿರ್ಧರಿಸಿದ್ದಾರೆ. ಇನ್ನೇನು ಅವರಿಬ್ಬರೂ ಕಾರಿನಲ್ಲಿ ಕೂರಬೇಕು ಅನ್ನುವಷ್ಟರಲ್ಲಿ ರಾಕ್ಷಸರಂತೆ ಮೈಮೇಲೆ ಬಿದ್ದ ಈ ಪುಂಡರ ಹಿಂಡು ತ್ರಿಭುವನ್ ಮೇಲೆರಗಿ, ಕೆಟ್ಟಾ ಕೊಳಕು ಮಾತನಾಡುತ್ತಾ, ಮುಖಾ ಮೂತಿ ನೋಡದೆ ಹೊಡೆದುರುಳಿಸಿದ್ದಾರೆ.

ಒಂದು ವೇಳೆ ತ್ರಿಭುವನ್‌ರಿಂದ ನೃತ್ಯ ಕಲಾವಿದರಿಗೆ ಏನಾದರೂ ತೊಂದರೆ ಆಗಿದ್ದರೆ ಅದನ್ನು ತಮ್ಮ ಒಕ್ಕೂಟದಿಂದ ಪರಿಹರಿಸಿಕೊಳ್ಳಬಹುದಿತ್ತು ಅಥವಾ ಛೇಂಬರ್‌ಗೆ ದೂರು ನೀಡಬಹುದಿತ್ತು... ಆದರೆ ಇದನ್ನು ಮಾಡದೆ ಚಿತ್ರೀಕರಣಕ್ಕೇ ದಾಳಿಯಿಟ್ಟು ಬೀದಿ ರೌಡಿಗಳಂತೆ ಹೊಡೆದಾಟಕ್ಕೆ ಮುಂದಾಗುವುದು ನೃತ್ಯ ಕಲಾವಿದರಿಗೆ ಸೂಕ್ತವಲ್ಲ.


ಒಟ್ಟಾರೆ ಈ ಪ್ರಕರಣ ಮತ್ತಷ್ಟು ಬೆಳೆದು ನಿಲ್ಲುವುದಂತೂ ನಿಜ. ಯಾಕೆಂದರೆ ತಮ್ಮ ಮೇಲೆ ದೈಹಿಕ ಹಲ್ಲೆಯಾಗಿದ್ದಕ್ಕೆ ತ್ರಿಭುವನ್ ಮತ್ತು ನಿರ್ದೇಶಕ ಥ್ರಿಲ್ಲರ್ ಮಂಜು ಚಿಕ್ಕಬಳ್ಳಾಪುರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಜೊತೆಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೂ ಕಂಪ್ಲೇಂಟು ಕೊಟ್ಟಿದ್ದಾರೆ.

ನಿರ್ಮಾಪಕ ಸಾರಾ ಗೋವಿಂದು, ಕೊಬ್ರಿ ಮಂಜು, ಸೌಂದರ್ಯ ಜಗದೀಶ್, ರಾಕ್‌ಲೈನ್ ವೆಂಕಟೇಶ್, ನಟ ಶಿವರಾಜ್ ಕುಮಾರ್ ಸೇರಿದಂತೆ ಬಹುತೇಕರು ತ್ರಿಭುವನ್ ಬೆನ್ನಿಗೆ ನಿಂತಿದ್ದಾರೆ. ಯಾಕೆಂದರೆ ತ್ರಿಭುವನ್ ಉತ್ತಮ ನೃತ್ಯ ನಿರ್ದೇಶಕ ಮಾತ್ರವಲ್ಲ ಆತ ಸ್ನೇಹಮಯಿ ಕೂಡ. ಈಗ ಕಲಾವಿದರ ಸಂಘದ ಅಶೋಕ್ ಅವರು ತ್ರಿಭುವನ್‌ಗೆ ತಮ್ಮ ಯೂನಿಯನ್‌ನಿಂದಲೇ ಸದಸ್ಯತ್ವ ಕೊಡಲು ಮುಂದಾಗಿದ್ದಾರೆ.

ಇನ್ನಾದರೂ ಡ್ಯಾನ್ಸರ್ಸ್ ಯೂನಿಯನ್‌ನವರು ಇಂಥ ಹೀನಕೃತ್ಯಕ್ಕೆ ಇಳಿಯದಿರಲಿ...

• ಅರುಣ್

## ಬ್ರಹ್ಮಾವರನ ಕರ್ಮಕಾಂಡ!



ರ್ನಾಟಕ ಚಲನಚಿತ್ರ ನೃತ್ಯ ಕಲಾವಿದರ ಮತ್ತು ನಿರ್ದೇಶಕರ ಸಂಘದ ಅಧ್ಯಕ್ಷನಾಗಿರುವ ರಾಜೇಶ್ ಬ್ರಹ್ಮಾವರ್ ದೊಡ್ಡ ನೃತ್ಯ ನಿರ್ದೇಶಕನೇನಲ್ಲ. "ಸಿನೆಮಾದಲ್ಲಿ ಛಾನ್ಸು ಕೊಡಿಸ್ತೀನಿ," "ನಾನೇ ಸಿನಿಮಾ ಡೈರೆಕ್ಷನ್ ಮಾಡಿ ಹೀರೋಯಿನ್ ಮಾಡ್ತೀನಿ," "ಫಾರಿನ್‌ನಲ್ಲಿ ಶೂಟಿಂಗ್ ಇದೆ ಪಾಸ್‌ಪೋರ್ಟ್ ರೆಡಿ ಮಾಡ್ಕೋ..." ನ್ನಾ ನಂಬಿಸಿ ವಿಜಯನಗರದಲ್ಲಿರುವ ತನ್ನ ಮನೆಗೆ ಪಾಪದ ಹೆಣ್ಣುಮಕ್ಕಳನ್ನು ಕರೆಸಿಕೊಂಡು 'ಯಾಮಾರಿಸುವುದು' ಚಾಳಿ.

ಹೀಗೆ ಈತನಿಂದ ಅನ್ಯಾಯಕ್ಕೆ ಒಳಗಾದ ಸಹ ನಟಿಯೊಬ್ಬಳು ಒಮ್ಮೆ ಈತನ ಮನೆಗೇ ನುಗ್ಗಿ ಇವನಿಗೆ ಕೆರದಲ್ಲಿ ದ್ದಳು. ಇಂಥ ಹಲವಾರು ಇತಿಹಾಸಗಳನ್ನು ಹೊಂದಿರುವ ಈ ಬ್ರಹ್ಮಾವರ್ ನೃತ್ಯ ನಿರ್ದೇಶಕರ ಸಂಘದ ನಾಗಿದ್ದುಕೊಂಡು ಈಗ ರೌಡಿಸಂಗೂ ಇಳಿದಿದ್ದಾನೆ..


ಮೊದಲು ಈತನಿಂದ ಯೂನಿಯನ್ ಅಧ್ಯಕ್ಷಗಿರಿಯನ್ನು ಕಿತ್ತುಕೊಂಡು ಹೊರಗಟ್ಟುವುದು ಛೇಂಬರ್ ಮುಂದಿರುವ ತುರ್ತು.

# ಕಿಡಿಗೇಡಿ ನಾಣಿಯ ಫೋಟೋ 'ಫಿನಿಷ್'!

ಅದೊಂದು ದಿನ ಡಾ. ರಾಜ್‌ಕುಮಾರ್ ನಟಿಸಿದ ಕೊನೆಯ ಚಿತ್ರ 'ಶಬ್ದವೇದಿ'ಯ ಚಿತ್ರೀಕರಣ ನಡೆಯುತ್ತಿತ್ತು. ಚಿತ್ರದಲ್ಲಿ ಬರುವ ದೃಶ್ಯವೊಂದಕ್ಕೆ ಒಂದಷ್ಟು ಮಂದಿಯ ಫೋಟೋಗಳು ಬೇಕಾಗಿದ್ದವು.

ಆಗ ಆ ಚಿತ್ರದ ನಿರ್ದೇಶಕ ಎಸ್. ನಾರಾಯಣ್‌ಗೆ ಹೊಳೆದದ್ದು ವಜ್ರೇಶ್ವರಿ ಸಂಸ್ಥೆಯ ಪರ್ಮನೆಂಟ್ ಪಿಆರ್‌ಓ ಹರೀಶ್. ತಕ್ಷಣ ತಮ್ಮ ಚಿತ್ರದ ಸ್ಟಿಲ್ ಫೋಟೋಗ್ರಾಫರ್ ಅನ್ನು ಕರೆದು ಹರೀಶ್‌ರ ಫೋಟೋ ತರಲು ಆತನಿಗೆ ಹೇಳಿದ್ದಾರೆ. ಆ ಸ್ಟಿಲ್ ಫೋಟೋಗ್ರಾಫರ್ ಕೂಡಾ ಯಾಕೆ-ಏನು ಎಂದು ಹೇಳದೆ ಹರೀಶ್ ಬಳಿ ಹೋಗಿ ಫೋಟೋ ತೆಗೆದಿದ್ದಾನೆ. ಹರೀಶ್ ಕೂಡಾ 'ಎಲ್ಲೋ ಸುಮ್ನೇ ಫೋಟೋ ತೆಗೆದುಕೊಳ್ಳುತ್ತಿರಬಹುದು' ಅಂತಾ ಖುಷ್‌ಖುಷಿಯಾಗಿ ಸಖತ್‌ಆಗಿ ಲುಕ್ ಕೊಟ್ಟು ಫೋಟೋ ತೆಗೆಸಿಕೊಂಡಿದ್ದಾರೆ.

ಆಮೇಲೊಂದು ದಿನ 'ಶಬ್ದವೇದಿ' ಭಾರೀ ಪ್ರಚಾರದೊಂದಿಗೆ ಬಿಡುಗಡೆಗೊಂಡಿತು. ಮೊದಲ ಶೋಗೆ ಹೋದ ಪತ್ರಕರ್ತರು ಮತ್ತು ಸಿನೆಮಾದ ಮಂದಿಗೆಲ್ಲ ಪರಮಾಶ್ಚರ್ಯ-



ಆ ದೃಶ್ಯದಲ್ಲಿ ಪೊಲೀಸ್ ಅಧಿಕಾರಿಯಾದ ರಾಜ್ ಕಂಪ್ಯೂಟರ್‌ನಲ್ಲಿ ಗಾಂಜಾ ಮತ್ತು ಅಫೀಮು ಸಪ್ಲೈ ಮಾಡುವ ದೇಶದ್ರೋಹಿಗಳ ಪಟ್ಟಿಗಾಗಿ ಹುಡುಕುತ್ತಿರುತ್ತಾರೆ. ಆಗ ಕಂಪ್ಯೂಟರ್ ಪರದೆ ಮೇಲೆ ಮೂಡಿ ಬಂದ 'ದೇಶದ್ರೋಹಿ'ಯ ಮುಖ ಇದೇ ಪಿಆರ್‌ಓ ಹರೀಶ್‌ರದ್ದು.

ನಾಣಿಗೆ ಹರೀಶ್ ಮೇಲೆ ಅದೇನು ಸಿಟ್ಟಿತ್ತೋ, ಅದನ್ನು ಹೀಗೆ ಮಾಡುವ ಮೂಲಕ ತೀರಿಸಿಕೊಂಡುಬಿಟ್ಟಿದ್ದರು. ಆದರೆ ಹರೀಶ್ ಮಾತ್ರ ನಾಣಿಗೆ ಮೂರು ಜನ್ಮಕ್ಕಾಗುವಷ್ಟು ಹಿಡಿಶಾಪ ಹಾಕಿದ್ದರು. ಡಾ. ರಾಜ್ ಕೂಡಾ ತಮ್ಮ ಸಂಸ್ಥೆಯ ನಿಯತ್ತಿನ ಕೆಲಸಗಾರನಿಗೆ ನಾಣಿ ಹೀಗೆ ಅವಮರ್ಯಾದೆ ಮಾಡಿದ್ದಕ್ಕೆ ತುಂಬಾನೇ ಬೇಸರ ಮಾಡಿಕೊಂಡಿದ್ದರು.

ಸುಮ್ಮನೇ ತೆಗೆಸಿದ ಫೋಟೋವೊಂದು ಹೀಗೆ ರಾದ್ಧಾಂತಕ್ಕೆ ಕಾರಣವಾಗಿತ್ತು!



# ಮೊಗಲಾಂಟೆ ಮನಸು

ಇತ್ತೀಚೆಗೆ ನಮ್ಮ ಕನ್ನಡದ ಚಿತ್ರಗಳು ಪರಭಾಷೆಗಳಿಗೆ ರಿಮೇಕ್ ಆಗುವುದು ಹೆಚ್ಚುತ್ತಿದೆ.

'ಮುಂಗಾರು ಮಳೆ' ತೆಲುಗಿನಲ್ಲಿ 'ವಾನ' ಆಗಿ ನಿರ್ಮಾಣಗೊಂಡಿತ್ತು. 'ಜೋಗಿ' ಮತ್ತು 'ದುನಿಯಾ' ಕೂಡಾ ತಮಿಳಿಗೆ ಹೋಗಿದ್ದವು. ಇನ್ನು ಪವರ್ ಸ್ಟಾರ್ ಪುನೀತ್ ಚಿತ್ರಗಳು ನೇರವಾಗಿ ಮಲಯಾಳಂಗೆ ಡಬ್ ಆಗುತ್ತಿವೆ.

ಇದೇ ಸಾಲಿಗೆ ಇಗ 'ಮೊಗ್ಗಿನ ಮನಸು' ಕೂಡಾ ಸೇರಿದೆ. 2008ರಲ್ಲಿ ಬಿಡುಗಡೆಗೊಂಡು, ಹಲವಾರು ಪ್ರಶಸ್ತಿಗಳನ್ನು ತನ್ನ ಮಡಿಲಿಗೆ ಹಾಕಿಕೊಂಡಿದ್ದ 'ಮೊಗ್ಗಿನ ಮನಸು' ಈಗ 'ಮೊಗಲಾಂಟೆ ಮನಸು' ಎಂಬ ಹೆಸರಿನಲ್ಲಿ ತೆಲುಗಿನಲ್ಲಿ ನಿರ್ಮಾಣವಾಗುತ್ತಿದೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 31-03-2010 RNI No. KARKAN



## ಸುತ್ತಾಟ ನಿಲ್ಲಿಸದ 'ಚೆಲುವೆ'...!

ಕನ್ನಡ ಚಿತ್ರರಂಗದಲ್ಲಿ ಮೊಟ್ಟ ಮೊದಲ ಬಾರಿಗೆ ಅತಿ ಹೆಚ್ಚು ಬಜೆಟ್ಟಿನಲ್ಲಿ ನಿರ್ಮಾಣಗೊಳ್ಳುತ್ತಿರುವ, ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ 'ಚೆಲುವೆಯೇ ನಿನ್ನ ನೋಡಲು' ಚಿತ್ರ ಆರಂಭಗೊಂಡು ಒಂದು ವರ್ಷ ಕಳೆದರೂ ಇನ್ನೂ 'ದಾಖಲೆ'ಯ ಚಿತ್ರೀಕರಣ ನಡೆಸುತ್ತಲೇ ಇದೆ.

ತೆರೆಯ ಮೇಲೆ ಕೇವಲ ನಲವತ್ತು ಸೆಕೆಂಡ್‌ಗಳಷ್ಟು ಕಾಲ ಮಾತ್ರ ಒಂದು ಹಾಡಿನ ಒಂದು ದೃಶ್ಯಕ್ಕಾಗಿ ಈ ತಂಡ ಮೊನ್ನೆ ದುಬೈಗೂ ಹೋಗಿ ಚಿತ್ರೀಕರಣ ಮಾಡಿಕೊಂಡು ಬಂದಿದೆ. ಆ ಮೂಲಕ ಪ್ರಪಂಚದಲ್ಲೇ ಅತಿ ಎತ್ತರದ ಕಟ್ಟಡವಾದ ಬುರ್ಜ್ ಖಲೀಫಾ ಮುಂದೆ ಚಿತ್ರೀಕರಣ ನಡೆಸಿದ ಮೊದಲ ಭಾರತೀಯ ಚಿತ್ರ ಎಂಬ ಹೆಗ್ಗಳಿಕೆಯೂ 'ಚೆಲುವೆ'ಯ ಪಾಲಾಗಿದೆ.

## 'ಡವ್' ಡೈಲಾಗಿನಲ್ಲಿ ಟಿವಿ9 ಮಂಜ!

ನಿರ್ದೇಶಕ ಪ್ರೇಮ್ ಜೊತೆ ಪುನೀತ್ ಮತ್ತೊಮ್ಮೆ ನಟಿಸುವುದು ಈಗ ಹಂಡ್ರೆಡ್ ಪರ್ಸೆಂಟ್ ಗ್ಯಾರೆಂಟಿಯಾಗಿದೆ!

ಹಿಂದೆ ವಿಷ್ಣುವರ್ಧನ್ ಅವರ 'ವಿಷ್ಣು ಸೇನಾ' ಚಿತ್ರವನ್ನು ನಿರ್ಮಿಸಿ ಬರ್ಬಾದ್ ಆಗಿದ್ದ ಎಂ.ಗೋವಿಂದ್ ಈ ಚಿತ್ರವನ್ನು ನಿರ್ಮಿಸಲು ಮುಂದಾಗಿದ್ದಾರೆ.

ಈ ಚಿತ್ರಕ್ಕೆ ಸದ್ಯ 'ಡವ್' ಎಂಬ ಹೆಸರು ಇಟ್ಟಿದ್ದಾರಾದರೂ ಕೊನೇ ಗಳಿಗೆಯಲ್ಲಿ ಅದು ಬದಲಾಗುವ ಸಾಧ್ಯತೆ ಕಾಣುತ್ತಿದೆ: ಈ ಹಿಂದೆ 'ರಾಜ್' ಚಿತ್ರಕ್ಕೆ ಕೂಡಾ 'ಪೋಲಿ' ಎಂಬ ಹೆಸರನ್ನು ಪ್ರೇಮ್ ಇಟ್ಟಿದ್ದು ಆನಂತರ ಅದು ಪುನೀತ್ ಇಮೇಜ್‌ಗೆ ಧಕ್ಕೆ ತರುವಂತಿದೆ ಎಂಬ ಕಾರಣಕ್ಕೆ ಬದಲಿಸಲಾಗಿತ್ತು.

ಸ್ವತಃ ರಕ್ಷಿತಾ-ಪ್ರೇಮ್ ನಿರ್ಮಿಸುತ್ತಿರುವ ಅದ್ದೂರಿ ವೆಚ್ಚದ 'ಜೋಗಯ್ಯ'ನ ಗ್ಯಾಪ್‌ನಲ್ಲಿ ಈ ಚಿತ್ರವನ್ನು ಸಿದ್ಧಪಡಿಸುವುದು ಪ್ರೇಮ್ ಪ್ಲಾನು. ಅದಕ್ಕೇ ಟೀವಿ ಒಂಭತ್ತರ ನಿರೂಪಕ ಮಂಜುನಾಥ್ ಸಂಜೀವ್ ಈಗಾಗಲೇ 'ಡವ್'ಗೆ ಡೈಲಾಗ್ ಬರೆಯಲು ಆರಂಭಿಸಿದ್ದಾರೆ.





## 'ಡಿ ಗ್ರೇಡ್' ಸ್ನೇಹ....

ನೋಡಲು ಥೇಟು ಐಶ್ವರ್ಯಾ ರೈಳಂತೇ ಇರುವ ನಟಿ ಸ್ನೇಹಾ ಉಲ್ಲಾಳ್ ಗೊತ್ತಲ್ಲ? ಅದೇ ಕನ್ನಡದ ನಿರ್ಮಾಪಕ ಸೋಮು ತಮ್ಮ ಮಗನನ್ನೇ ಹೀರೋ ಮಾಡಿ 'ಉಲ್ಲಾಸಂಗಾ ಉತ್ಸಾಹಂಗಾ' ಅನ್ನೋ ಚಿತ್ರ ಮಾಡಿದ್ದರಲ್ಲ, ಆ ಸಿನೆಮಾದ ನಾಯಕಿಯೇ ಈ ಸ್ನೇಹಾ ಉಲ್ಲಾಳ್.

ಈಕೆಯೂ ಮೂಲತಃ ನಮ್ಮ ಮಂಗಳೂರಿನ ಕರಾವಳಿ ಕನ್ಯೆಯೇ. ನಟ ಸಲ್ಮಾನ್ ಖಾನ್ ತನ್ನ ಮಾಜಿ ಪ್ರೇಯಸಿ ಐಶ್ವರ್ಯಾಳಂತೇ ಕಾಣುವ ಸ್ನೇಹಾ ಉಲ್ಲಾಳ್‌ಗೆ ತಾನು ನಟಿಸಿದ 'ಲಕ್ಕಿ' ಚಿತ್ರದಲ್ಲಿ ನಾಯಕಿಯ ಪಟ್ಟ ಕೊಟ್ಟಿದ್ದ.

ಇಂಥ ಸ್ನೇಹಾ ಉಲ್ಲಾಳ್ ಮೊದಮೊದಲಿಗೆ ಗ್ಲಾಮರಸ್ ಆಗಿ ಕಾಣಲು ಹಿಂದೆ ಮುಂದೆ ನೋಡುತ್ತಿದ್ದಳು. ಆದರೆ ಮೊನ್ನೆ ಏಕಾಏಕಿ "ಅವಕಾಶವೊಂದು ಸಿಕ್ಕರೆ ಸಾಕು ನಾನು ಎಂಥಾ 'ಡಿ ಗ್ರೇಡ್' ಸಿನೆಮಾದಲ್ಲೂ ನಟಿಸುತ್ತೇನೆ" ಎಂಬ ಹೇಳಿಕೆ ನೀಡಿ ದೊಡ್ಡ ಸುದ್ದಿಯೆಬ್ಬಿಸಿದ್ದಾಳೆ.

ಸಿನೆಮಾ ಎಂಬ ರಂಗೀನ್ ದುನಿಯಾ ಎಂಥವರನ್ನೂ ಹೇಗೆಲ್ಲಾ ಬದಲಿಸಿಬಿಡುತ್ತದೆ ಎನ್ನುವುದಕ್ಕೆ ಸದ್ಯದ ನಿದರ್ಶನ ಈ ಕರಾವಳಿ ಪೋರಿ ಸ್ನೇಹಾ ಉಲ್ಲಾಳ್....



## 'ಸಾಯಿ ಸೂತ್ರ' ಈಡೇರಿದೆ...

ಅಂತೂ ಸಾಯಿಪ್ರಕಾಶ್ ಬಯಕೆ ಒಂದು ಮಟ್ಟಕ್ಕೆ ಈಡೇರಿದೆ....

ಹದಿನೈದಿಪ್ಪತ್ತು ದಿನಗಳ ಹಿಂದೆ ಸಾಯಿಪ್ರಕಾಶ್ 'ಸಾಯುವ ನಾಟಕ' ಆಡಿದಾಗ, ಅದರ ಹಿಂದಿದ್ದ ಅವರ ಪ್ಲಾನು ಏನು ಎಂಬುದನ್ನು 'ಲಂಕೇಶ್' ಬರೆದಿತ್ತು.

ಹೇಗಾದರೂ ಸಿಂಪಥಿ ಗಿಟ್ಟಿಸಿಕೊಂಡು, ಸಾಲದಿಂದ ದೂರಾಗುವುದು, ಸುದೀಪ್ ಮತ್ತು ಶಿವಣ್ಣರ ಕಾಲ್‌ಶೀಟ್ ಪಡೆಯುವುದು ಮತ್ತು ಹೊಸ ಪ್ರೊಡ್ಯೂಸರ್‌ಗಳನ್ನು ಹಿಡಿಯುವುದು... ಇವೇ ಸಾಯಿ ಸೂತ್ರಗಳಾಗಿದ್ದವು.

ಸಾಯಿಪ್ರಕಾಶ್ ನಿರ್ಮಾಪಕರ ಸಂಘದ ಮುಂದೆ ಸಾಲವನ್ನು ತೀರಿಸಲು ಒಂದಿಷ್ಟು ಕಾಲಾವಕಾಶ ಒದಗಿಸಿಕೊಡಬೇಕಾಗಿ ಮನವಿ ಸಲ್ಲಿಸಿದ್ದರು. ಅದೀಗ ಕೈಗೂಡಿದೆ. ಜೊತೆಗೆ ಇವರ ಚಿತ್ರವನ್ನು ನಿರ್ಮಿಸಲು ಜಯನಗರದ ವಿಜಯ್‌ಕುಮಾರ್, ಪ್ರಕಾಶ್ ಸೇರಿದಂತೆ ಮೂರ್‍ನಾಲ್ಕು ಮಂದಿ ನಿರ್ಮಾಪಕರು ಮುಂದೆ ಬಂದಿದ್ದಾರಂತೆ. ಶಿವಣ್ಣ ಮತ್ತು ಸುದೀಪ್ ಕೂಡಾ ಕಾಲ್‌ಶೀಟ್ ಕೊಡುವುದಾಗಿ ಸಾಯಿಗೆ ಭರವಸೆ ನೀಡಿದ್ದಾರಂತೆ.

ಒಟ್ಟಾರೆಯಾಗಿ ಸಾಯಿಯ ಪ್ಲಾನು ಫಲಪ್ರದವಾಗಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಜನ ನೋಡುವಂಥ ಒಳ್ಳೆ ಸಿನಿಮಾ ಕೊಡುವುದಷ್ಟೇ ಸಾಯಿಯ ಮುಂದಿರುವ ಜವಾಬ್ದಾರಿ!



ಸ್ವಯಂವರ
ಶರ್ಮಿಳಾ ಮಾಂಡ್ರೆ,
ಶ್ರೀನಗರ ಕಿಟ್ಟಿ

## ಹೊಸ್ಮನೆಯ ಹಳೇ ಮೂರ್ತಿ!

ಈ ಬಣ್ಣದ ಲೋಕವೇ ಹಾಗೆ. ಇಲ್ಲೇನಿದ್ದರೂ ತೆರೆಯ ಮೇಲಿದ್ದರೆ ಮಾತ್ರ ಪ್ರಚಾರ, ಪರಾಕುಗಳು ಗಿಟ್ಟುವುದು. ತೆರೆಯ ಹಿಂದೆ ನಿಂತು ಕ್ಯಾಮೆರಾಕಣ್ಣಿಗೆ ರಂಗುಕಟ್ಟುವ ಎಷ್ಟೋ ಕಲಾವಿದರು ಇಲ್ಲಿ ಬೆಳಕಿಗೇ ಬರುವುದಿಲ್ಲ.

ಇವರೂ ಕೂಡಾ ಅಂಥ ಕಲಾವಿದರೆ.

ಹೆಸರು, ಹೊಸ್ಮನೆ ಮೂರ್ತಿ. ಉದ್ಯೋಗ ಸಿನಿಮಾದ ಕಲಾ ನಿರ್ದೇಶನ.

ಒಂದು ಕಾಲದಲ್ಲಿ ಬಸವನಗುಡಿಯ ನೆಟ್ಟಕಲ್ಲಪ್ಪ ಸರ್ಕಲ್ ಬಳಿಯ ರಾಜು ಆರ್ಟ್ಸ್‌ನಲ್ಲಿ ಬಣ್ಣ ಅಂಟಿದ ಬ್ರಷ್‌ಗಳನ್ನು ತೊಳೆದುಕೊಂಡು, ನಂತರ ಬೋರ್ಡು ಬರೆಯುವುದನ್ನು ಕಲಿತು ಬಣ್ಣದ ನಂಟಿಗೆ ಬಂದ ಹೊಸ್ಮನೆ ಮೂರ್ತಿ ಈಗ 'ಯಕ್ಷ' ಚಿತ್ರದೊಂದಿಗೆ ಸಿನಿಮಾ ಕಲಾ ನಿರ್ದೇಶನದಲ್ಲಿ 75 ಚಿತ್ರಗಳನ್ನು ಪೂರೈಸಿದ್ದಾರೆ.

ಬೋರ್ಡು ಬರೆಯುವ ಕೆಲಸದಿಂದ ಒಂದು ಹೆಜ್ಜೆ ಮುಂದೆ ಹೋಗಿ 'ಅಭಿನಯ ತರಂಗ' ಸೇರಿ ಡಿಪ್ಲೊಮಾ ಪಡೆದ ಮೂರ್ತಿ ನಂತರ ಬಿ. ಜಯಶ್ರೀ ಅವರ 'ಸ್ಪಂದನ', ಶಂಕರ್‌ನಾಗ್ ಅವರ 'ಸಂಕೇತ್' ಮತ್ತು ಅವರದ್ದೇ ತಂಡವಾದ 'ರಂಗವಲ್ಲಿ'ಯ ಮೂಲಕ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದವರು. ಇದೇ ಸಂದರ್ಭದಲ್ಲಿ ಅವರಿಗೆ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಪರಿಚಯವಾಗಿ, ಅವರ 'ಕಾಲೇಜು ತರಂಗ', 'ಕಥೆಗಾರ', 'ಮಾಯಾಮೃಗ' ಧಾರಾವಾಹಿಗಳಿಗೆ ಕಲಾನಿರ್ದೇಶನ ಮಾಡುವ ಜವಾಬ್ದಾರಿ ವಹಿಸಿಕೊಟ್ಟಿದ್ದರು.

ನಂತರ ರಾಮ್‌ದಾಸ್ ನಾಯ್ಡು ಅವರ 'ಪ್ರೇರಣಾ' ಎಂಬ ಕಲಾತ್ಮಕ ಚಿತ್ರದ ಮೂಲಕ ಸಿನಿಮಾ ಕಲೆಯನ್ನು ಆರಂಭಿಸಿದ ಮೂರ್ತಿಗೆ ಕಮರ್ಷಿಯಲ್ ಆದ ಅವಕಾಶ ಸಿಕ್ಕಿದ್ದು ಎನ್.ಎಸ್. ಶಂಕರ್ ಅವರ 'ಉಲ್ಟಾ ಪಲ್ಟಾ'ದಿಂದ. ನಂತರ ಪೂರ್ಣಾವಧಿ ಕಲಾ ನಿರ್ದೇಶಕನಾಗಿ ಹಲವಾರು ಸಿನೆಮಾಗಳಿಗೆ ಆರ್ಟ್ ಡೈರೆಕ್ಷನ್ ಮಾಡಿರುವ ಮೂರ್ತಿ 'ನೀಲಾಂಬರಿ' ಎಂಬ ಹಾರರ್ ಸಿನಿಮಾ, 'ಕೌರವ', ಇಂದ್ರಜಿತ್ ಲಂಕೇಶ್‌ರ 'ಮೊನಾಲಿಸಾ', 'ಲಂಕೇಶ್ ಪತ್ರಿಕೆ' ಮತ್ತು 'ತುಂಟಾಟ', ತೆಲುಗಿನ ಕೆ.ಎನ್.ಟಿ. ಶಾಸ್ತ್ರಿ ಅವರ 'ಕಮಲಿ' ಮತ್ತು 'ತಿಲಗಾನು' ಎಂಬ ಕಲಾತ್ಮಕ ಚಿತ್ರಗಳು ಸೇರಿದಂತೆ ಹಲವಾರು ಚಿತ್ರಗಳಿಗೆ ಕಾರ್ಯನಿರ್ವಹಿಸಿದ್ದಾರೆ.

ಇತ್ತೀಚೆಗೆ ಬಂದ 'ತಾಜ್‌ಮಹಲ್', 'ಪ್ರೇಮ್ ಕಹಾನಿ' ಮತ್ತು ಮೊನ್ನೆಮೊನ್ನೆಯಷ್ಟೇ ತೆರೆಗೆ ಬಂದು, ವಿಮರ್ಶಕರಿಂದ ಮುಕ್ತಕಂಠದ ಹೊಗಳಿಕೆಗೆ ಪಾತ್ರವಾದ 'ಶಿಶಿರ' ಚಿತ್ರಕ್ಕೂ ಇವರದ್ದೇ ಕಲಾನಿರ್ದೇಶನ.

ಚಿತ್ರರಂಗಕ್ಕೆ ಹೊಸ್ಮನೆ ಮೂರ್ತಿ ಬಂದು ಒಂದೂವರೆ ದಶಕಗಳೇ ಆಗಿದ್ದರೂ ಇನ್ನೂ ಮೃದುಭಾಷಿಯಾಗಿಯೇ ಇರುವ ಗೌರಿಬಿದನೂರಿನ ಈ 'ಹೊಸ್ಮನೆ' ಸಂದರ್ಭದಲ್ಲಿ 'ಹಳೇ' ಮೂರ್ತಿಯಾಗಿಯೇ ಉಳಿದಿದ್ದಾರೆಂಬುದೇ ವಿಶೇಷ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44